ಚಿತ್ರದುರ್ಗ ಪರಿಸರದ ದೇವಾಲಯಗಳು

(ಎಂ.ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪ್ರೌಢಪ್ರಬಂಧ)

ಸಂಶೋಧನೆ
ನಾಗರಾಜಪ್ಪ ಎಸ್.

ಮಾರ್ಗದರ್ಶನ
ಡಾ.ಎಸ್.ವೈ. ಸೋಮಶೇಖರ್
ಅಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೦೮

ಚಿತ್ರದುರ್ಗ ಪರಿಸರದ ದೇವಾಲಯಗಳು

(ಎಂ.ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪ್ರೌಢಪ್ರಬಂಧ)

ಸಂಶೋಧನೆ
ನಾಗರಾಜಪ್ಪ ಎಸ್.

ಮಾರ್ಗದರ್ಶನ
ಡಾ.ಎಸ್.ವೈ. ಸೋಮಶೇಖರ್
ಅಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೦೮

ಸಂಶೋಧಕರ ಪ್ರಮಾಣ ಪತ್ರ

'ಚಿತ್ರದುರ್ಗ ಪರಿಸರದ ದೇವಾಲಯಗಳು' ಎಂಬ ಶೀರ್ಷಿಕೆಯ ಈ ಪ್ರೌಢಪ್ರಬಂಧವನ್ನು ಡಾ.ಎಸ್.ವೈ.ಸೋಮಶೇಖರ್‌ರವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿಲ್. ಪದವಿಯ ಅವಶ್ಯಕತೆಗಾಗಿ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಲ್ಲಿಸಿರುತ್ತೇನೆ. ಪ್ರಸ್ತುತ ಪ್ರಬಂಧವು ನಮ್ಮ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಬೇರೆ ಯಾವುದೇ ಉದ್ದೇಶಕ್ಕಾಗಿ ಅಥವಾ ಪದವಿಗಾಗಿ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ: ೭೦-೧೦-೨೦೦೮

ಸ್ಥಳ : ವಿದ್ಯಾರಣ್ಯ

(ನಾಗರಾಜಪ್ಪ.ಎಸ್)
ಸಂಶೋಧಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಾರ್ಗದರ್ಶಕರ ಪ್ರಮಾಣ ಪತ್ರ

ನಾಗರಾಜಪ್ಪ ಎಸ್. ರವರು **'ಚಿತ್ರದುರ್ಗ ಪರಿಸರದ ದೇವಾಲಯಗಳು'** ಎಂಬ ಪ್ರೌಢಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು, ಎಂ.ಫಿಲ್. ಪದವಿಯ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ಪ್ರಬಂಧವು ಅವರ ಸ್ವಂತ ಪರಿಶ್ರಮದ ಫಲವಾಗಿದ್ದು, ಈ ಮೊದಲು ಇದನ್ನು ಯಾವುದೇ ಬಗೆಯ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ : ೨೦/೧೦/೦೮

ಸ್ಥಳ : ವಿದ್ಯಾರಣ್ಯ

(ಡಾ.ಎಸ್.ವೈ.ಸೋಮಶೇಖರ್)
ಅಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪರಿವಿಡಿ

ಸಂಕ್ಷೇಪಗಳು

ಎ.ಇ.	: ಏನ್ಷಿಯಂಟ್ ಇಂಡಿಯಾ
ಎ.ಕ.	: ಎಪಿಗ್ರಫಿಯ ಕರ್ನಾಟಕ
ಇ.ಆ.	: ಇಂಡಿಯನ್ ಆರ್ಕಿಯಾಲಜಿ. ಎ ರಿವ್ಯೂ
ಎಂ.ಎ.ಆರ್.	: ಮೈಸೂರು ಆರ್ಕಿಯಾಲಾಜಿಕಲ್ ರಿಪೋರ್ಟ್ಸ್
ಎಸ್.ಐ.ಐ.	: ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್
ಕ.ಸಾ.ಪ.	: ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ
ಕ.ಚ.	: ಕರ್ನಾಟಕ ಚರಿತ್ರೆ
ಕ.ಭಾ.	: ಕರ್ನಾಟಕ ಭಾರತಿ
ಕ.ಶಾ.ಸಾ.ಅ.	: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ
ಚ.ಅ.	: ಚರಿತ್ರೆ ಅಧ್ಯಯನ
ಚಿ.ಜಿ.ಇ.ಪು.	: ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ
ಪ್ರಾ.ಕ.ಆ.ವಿ.	: ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು
ಮಾ.ಕ.	: ಮಾನವಿಕ ಕರ್ನಾಟಕ
ಮಾ.ಭಾ.	: ಮಾನವಿಕ ಭಾರತಿ
ವಿ.ಅ.	: ವಿಜಯನಗರ ಅಧ್ಯಯನ
ಸ.ಕಾ.	: ಸತ್ಯಶುದ್ಧ ಕಾಯಕ
ಸಂ.	: ಸಂಪುಟ
ಹು.ಶ್ರೀ.ಜೋ.ಐ.ಲೇ	: ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು
ಹು.ಶ್ರೀ.ಜೋ.ಸಂ.ಲೇ	: ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನಾ ಲೇಖನಗಳು

ಕರ್ನಾಟಕದ ನಕ್ಷೆ



ನಕ್ಷೆ



● ೧ ಹಿಂಡಿಂಬೇಶ್ವರ ದೇವಾಲಯ
೨ ಪಂಚಲಿಂಗೇಶ್ವರ ದೇವಾಲಯ
೩ ಬಾಳೇಕಾಯಿ ಸಿದ್ದೇಶ್ವರ ದೇವಾಲಯ
೪ ಸಂಪಿಗೆ ಸಿದ್ದೇಶ್ವರ ದೇವಾಲಯ
೫ ಫಲ್ಗುಣೇಶ್ವರ ದೇವಾಲಯ
೬ ಹಿಮವತ್ ಕೇದಾರ ಗುಹಾಲಯ
೭ ಕಲ್ಲೇಶ್ವರ ದೇವಾಲಯ
೮ ಕಲ್ಲೇಶ್ವರ ದೇವಾಲಯ
೯ ಹುಲಿಗೊಂದಿ ಸಿದ್ದೇಶ್ವರ ದೇವಾಲಯ
೧೦ ಜೋಳೇಶ್ವರ ದೇವಾಲಯ
೧೧ ಮಹೇಶ್ವರ ದೇವಾಲಯ
೧೨ ರಾಮೇಶ್ವರ ದೇವಾಲಯ
೧೩ ಕಾಶೀವಿಶ್ವನಾಥ ದೇವಾಲಯ
೧೪ ಉಮಾಮಹೇಶ್ವರ ದೇವಾಲಯ
೧೫ ಸುಬ್ರಮಣ್ಯೇಶ್ವರ ದೇವಾಲಯ
೧೬ ತುಂಗಭದ್ರೇಶ್ವರ ದೇವಾಲಯ
೧೭ ಬೀರಗಲ್ಲೇಶ್ವರ ದೇವಾಲಯ
೧೮ ಗಾರೇಬಾಗಿಲ ಈಶ್ವರ ದೇವಾಲಯ
೧೯ ಕೆಂಚೇಶ್ವರ ದೇವಾಲಯ
೨೦ ಈಶ್ವರ ದೇವಾಲಯ
೨೧ ಗಂಗಾಧರೇಶ್ವರ ದೇವಾಲಯ
೨೨ ಕರಿವರ್ತೀಶ್ವರ ದೇವಾಲಯ
೨೩ ನೆಲ್ಲಿಕಾಯಿ ಸಿದ್ದಪ್ಪನ ದೇವಾಲಯ
೨೪ ಒಂಟಿಕಾಲು ಬಸವನ ದೇವಾಲಯ
೨೫ ಜ್ಞಾನೇಶ್ವರ ದೇವಾಲಯ
೨೬ ಪರ್ಜನ್ನೇಶ್ವರ ದೇವಾಲಯ
೨೭ ಪಾತಾಳೇಶ್ವರ ದೇವಾಲಯ
೨೮ ಮಹಾಬಲೇಶ್ವರ ದೇವಾಲಯ
೨೯ ಆಡುಮಲ್ಲೇಶ್ವರ ದೇವಾಲಯ
೩೦ ಈರಪ್ಪನ ಶಿವಾಲಯ
೩೧ ಚಂದ್ರಮೌಳೇಶ್ವರ ದೇವಾಲಯ
೩೨ ಸಿದ್ದರಾಮೇಶ್ವರ ದೇವಾಲಯ
೩೩ ಕಣ್ಣೇಶ್ವರ ದೇವಾಲಯ
೩೪ ನೀಲಕಂಠೇಶ್ವರ ದೇವಾಲಯ
೩೫ ಧವಳಪ್ಪನಗುಡ್ಡ
೩೬ ಸಾನಂದ ಗಣಪತಿ ದೇವಾಲಯ

★ ೧ ಗೋಪಾಲಕೃಷ್ಣ ದೇವಾಲಯ
೨ ಪ್ರಸನ್ನ ವೆಂಕಟರಮಣ ದೇವಾಲಯ
೩ ಗರುಡಾಂಜನೇಯ ದ್ವಾರದ ಆಂಜನೇಯ ದೇವಾಲಯ
೪ ಚನ್ನಕೇಶವ ದೇವಾಲಯ
೫ ಲಕ್ಷಣರಾಯರ ಮುಖ್ಯಪ್ರಾಣ ದೇವರ ದೇವಾಲಯ
೬ ಕೋಡಿ ಹನುಮಂತರಾಯನ ಗುಡಿ
೭ ತಂಗಿ ಹೊಂಡದ ಆಂಜನೇಯ
೮ ಹಜಾರಿ ಮುಖ್ಯಪ್ರಾಣ ದೇವರ ದೇವಾಲಯ
೯ ಪೇಟೆ ಆಂಜನೇಯನ ದೇವಾಲಯ
೧೦ ತಗ್ಗಿನ ಹನುಮಂತ ದೇವಾಲಯ
೧೧ ವೇಣುಗೋಪಾಲಸ್ವಾಮಿ ದೇವಾಲಯ
೧೨ ಯೋಗಾನರಸಿಂಹಸ್ವಾಮಿ ದೇವಾಲಯ
೧೩ ಪಾಂಡುರಂಗ ವಿಠಲನ ಗುಡಿ

■ ೧ ಬನಶಂಕರಿ ದೇವಾಲಯ
೨ ಏಕನಾಥೇಶ್ವರಿ ದೇವಾಲಯ
೩ ಉಚ್ಚಂಗಿ ಎಲ್ಲಮ್ಮ ದೇವಾಲಯ
೪ ತಿಪ್ಪಿನಘಟ್ಟಮ್ಮ ದೇವಾಲಯ
೫ ಬರಗೇರಮ್ಮ ದೇವಾಲಯ
೬ ಕಾಳಿಕಾಮಠೇಶ್ವರಿ ದೇವಾಲಯ

ದರ್ಶಕ ಸೂಚಿ

	ಗಡಿ ರೇಖೆ
	ಕೋಟೆಗೋಡೆ
	ರಸ್ತೆ
	ರೈಲ್ವೆಮಾರ್ಗ
	ಕಂದಕ
	ಹೊಂಡಗಳು
○	ಬತೇರಿಗಳು
●	ಶೈವ ದೇವಾಲಯಗಳು
★	ವೈಷ್ಣವ ದೇವಾಲಯಗಳು
■	ಶಾಕ್ತ ದೇವಾಲಯಗಳು
▲	ಗ್ರಾಮಗಳು

ಅಧ್ಯಾಯ – ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಪ್ರಸ್ತಾವನೆ

ಒಂದು ಪ್ರದೇಶದ ಚರಿತ್ರೆಯ ರಚನೆಗೆ ದೇವಾಲಯಗಳು ಅತ್ಯಂತ ಪ್ರಮಾಣಬದ್ಧ ಆಕರಗಳಾಗಿದ್ದು, ಮಹತ್ವದ ವಿಶ್ಲೇಷಣೆಗಳಿಗೆ ಒಳಪಡುತ್ತವೆ. "ಆಡು ಮುಟ್ಟದ ಸೊಪ್ಪಿಲ್ಲ, ಸರ್ವಜ್ಞ ಹೇಳದ ಮಾತಿಲ್ಲ" ಎಂಬ ಪ್ರಚಲಿತ ನಾಣ್ನುಡಿಯಂತೆ 'ದೇವಾಲಯಗಳಿಲ್ಲದ ಊರಿಲ್ಲ' ಎಂದರೆ ಅತಿಶಯೋಕ್ತಿಯೆನಿಸಲಾರದು. ಮಾನವ ತನ್ನ ಬದುಕಿನ ವಿವಿಧ ಆಯಾಮಗಳಲ್ಲಿ ಪ್ರಕೃತಿಯಲ್ಲಿನ ಅಗೋಚರ ಶಕ್ತಿಗೆ ದೈವೀಸ್ವರೂಪ ನೀಡಿ ಅದು ಜೀವನದ ಒಂದು ಅವಿಭಾಜ್ಯ ಅಂಗವೆಂದು ಸ್ವೀಕರಿಸಿದ. ತರುವಾಯ ಅದರ ರಕ್ಷಣೆಗಾಗಿ ನಿರ್ಮಿಸಿದ ಕಟ್ಟಡವೇ ದೇವಾಲಯ ವಾಸ್ತುವಾಯಿತು. ಪ್ರಾರಂಭದಲ್ಲಿ ಚಿಕ್ಕ ವಾಸ್ತುವಿನ್ಯಾಸ ಪಡೆದ ದೇವಾಲಯಗಳು ಮಧ್ಯಕಾಲದವೇಳೆಗೆ ಬೃಹದಾಕಾರದ ಸ್ವರೂಪ ಪಡೆದವು. ಇವು ಪೂಜಾ ಕೇಂದ್ರಗಳಾಗಿ ಮಾತ್ರವಲ್ಲದೇ ಹಲವು ಚಟುವಟಿಕೆಗಳ ತಾಣಗಳಾಗಿ ಬೆಳೆದವು. ಇದಕ್ಕೆ ಮುಖ್ಯಕಾರಣ ಅವುಗಳಿಗೆ ದೊರೆತ ನಿರಂತರ ಆಶ್ರಯ, ಪಾಲನೆ ಮತ್ತು ಪೋಷಣೆ. ಇದು ಅರಸರು, ಮಹಾಮಂಡಲೇಶ್ವರರು, ದಂಡನಾಯಕರು, ಶ್ರೀಮಂತರು, ವ್ಯಾಪಾರಿಗಳು ಹಾಗೂ ಜನತೆಯಿಂದ ದಾನದತ್ತಿಗಳ ರೂಪದಲ್ಲಿ ಹರಿದು ಬರತೊಡಗಿತು. ಇದರ ಪ್ರತಿಫಲವಾಗಿ ದೇವಾಲಯಗಳು ಶೈಕ್ಷಣಿಕ, ವಾಣಿಜ್ಯ, ನ್ಯಾಯವಿತರಣೆ, ಮನರಂಜನಾ ಕೇಂದ್ರಗಳಲ್ಲದೆ ಮತಪಂಥಗಳ ಕೇಂದ್ರ ಬಿಂದುವಾಗಿ 'ದೇವಾಲಯ ಸಂಸ್ಕೃತಿ' ಬೆಳವಣಿಗೆ ಹೊಂದಿತು. ಸಮಾಜದ ಕೇಂದ್ರಬಿಂದುಗಳಾಗಿದ್ದ ದೇವಾಲಯಗಳ ಅಂಗಸಂಸ್ಥೆಗಳಾಗಿ ಕ್ರಿ.ಶ.೮ನೇ ಶತಮಾನದ ವೇಳೆಗಾಗಲೇ ವಿಭಿನ್ನ ಮತ ಪಂಥಗಳ ಮಠಗಳೂ ಅಸ್ತಿತ್ವಕ್ಕೆ ಬಂದವು. ಸಮಾಜದಲ್ಲಿ ಹುಟ್ಟಿಕೊಂಡ ವಿವಿಧ ಅಧಿಕಾರ ಬಿಂದುಗಳ ಮಧ್ಯೆ ಪೈಪೋಟಿ ಹಾಗೂ ಹೊಂದಾಣಿಕೆಯಲ್ಲಿ ಮತ ಪಂಥಗಳೂ ಕೂಡ ಅಧಿಕಾರ ಬಿಂದುಗಳಾದವು. ರಾಜರು ಹಾಗೂ ಆಳರಸ ವಂಶಗಳು ಎಷ್ಟೇ ಭೌತಿಕವಾದ ಅಧಿಕಾರವನ್ನು ಹೊಂದಿದ್ದರೂ ಒಂದು ದೈವೀ ಆಳ್ವಿಕೆಗೆ ಮತ್ತು ಅದನ್ನು ಪ್ರತಿನಿಧಿಸುವ ವ್ಯಕ್ತಿ, ಸಂಸ್ಥೆ, ಪ್ರತೀಕ ಮತ್ತು ಸಂಪ್ರದಾಯಗಳಿಗೆ ಈ ನಿಟ್ಟಿನಲ್ಲೂ ಶರಣಾಗಿದ್ದರು. ಇದರ ಪರಿಣಾಮವಾಗಿ ಮಧ್ಯಕಾಲದಲ್ಲಿ ರಾಜ ಪ್ರಭುತ್ವದಷ್ಟೇ ಪ್ರಮುಖ ಸ್ಥಾನವನ್ನು ದೇವಾಲಯಗಳು ಪಡೆದವು. ಇವುಗಳ ಹಿನ್ನೆಲೆಯಲ್ಲಿ ಎಂ.ಚಿದಾನಂದಮೂರ್ತಿಯವರು ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಎಂಬ ಗ್ರಂಥದಲ್ಲಿ ದೇವಾಲಯಗಳನ್ನು 'ಒಂದು ಸಾಮಾಜಿಕ ಸಂಸ್ಥೆ' ಎಂದು ಕರೆದಿದ್ದಾರೆ. ವಿಜಯನಗರದ ಪತನಾನಂತರದ ಗುಡ್ಡಗಾಡು ಕೇಂದ್ರಿತ ಪಾಳೆಯಗಾರರ ಅವಧಿಯ ವ್ಯವಸಾಯಿಕೃತ ಅರ್ಥವ್ಯವಸ್ಥೆಯಲ್ಲಿ ತಮ್ಮ ಮೂಲ ವೈಭವವನ್ನು ಕಳೆದುಕೊಂಡ ದೇವಾಲಯಗಳು ಗತ ಸಂಸ್ಕೃತಿಯ ಮೂಕ ಸಾಕ್ಷಿಗಳಾಗಿವೆ ಎನ್ನಬಹುದು.

ಅಧ್ಯಯನದ ಉದ್ದೇಶ

ಪ್ರಸ್ತುತ ದಿನಗಳಲ್ಲಿ ಸಂಶೋಧನೆಗಳು ಹೊಸ ರೂಪ ತಾಳುತ್ತಿವೆ. ಈವರೆಗೂ ಕೇವಲ ರಾಜಕೀಯವಾಗಿ ಗಣ್ಯ ಮನೆತನಗಳ ಬಗ್ಗೆ ನಡೆಯುತ್ತಿದ್ದ ಸಂಶೋಧನೆಗಳು ಕೆಲವು ದಶಕಗಳಿಂದ ಸಾಂಸ್ಕೃತಿಕ, ಪ್ರಾದೇಶಿಕ ಮತ್ತು ಸ್ಥಳೀಯ ಸಂಶೋಧನೆಯತ್ತ ಸಾಗುತ್ತಿವೆ. ದೇವಾಲಯಗಳು ನಮ್ಮ ನಾಡಿನ ಸಾಂಸ್ಕೃತಿಕ ಪರಂಪರೆಯ ಕೇಂದ್ರಗಳಾಗಿದ್ದು, ಜನಮನದಲ್ಲಿ ಅಚ್ಚಳಿಯದ ಸ್ಥಾನಮಾನ ಪಡೆದಿವೆ. ಚಿತ್ರದುರ್ಗವು ಮೌರ್ಯರಿಂದ ಹಿಡಿದು ನಾಯಕ ಅರಸರ ಅವಧಿಯವರೆಗೆ ವಿವಿಧ ಅರಸು ಮನೆತನಗಳ ಆಳ್ವಿಕೆಗೆ ಒಳಪಟ್ಟ ಪ್ರಮುಖ ಆಡಳಿತ ಕೇಂದ್ರವಾಗಿದ್ದುದು ನಿರ್ವಿವಾದದ ಸಂಗತಿ. ಈ

ಕಾಲಘಟ್ಟದಲ್ಲಿ ಚಿತ್ರದುರ್ಗದಲ್ಲಿ ಅನೇಕ ದೇವಾಲಯಗಳು ನಿರ್ಮಾಣವಾಗಿವೆ. ಇವುಗಳ ಬೆಳವಣಿಗೆ, ಧಾರ್ಮಿಕ ಪಂಥಗಳ ಪ್ರಸರಣ, ರೂಪಾಂತರ, ಸ್ಥಾನಪಲ್ಲಟಗಳನ್ನು ಕುರಿತು ವಿವರಿಸುವ ಪ್ರಯತ್ನವನ್ನು ಪ್ರಸ್ತುತ ಅಧ್ಯಯನ ಒಳಗೊಂಡಿದೆ. ಇದರೊಡನೆ ಪ್ರಸ್ತುತ ಅಧ್ಯಯನದಲ್ಲಿ ಚಿತ್ರದುರ್ಗ ಪರಿಸರದಲ್ಲಿ ಬರುವ ಎಲ್ಲ ದೇವಾಲಯಗಳ ಅಧ್ಯಯನ ನಡೆಸಲಾಗಿದೆ. ಐತಿಹ್ಯ, ಆಚರಣೆ, ಉತ್ಸವಗಳಂಥ ಜನಪದ ಆಕರಗಳನ್ನು ಬಳಸಿ, ಮಿಳಿತಗೊಳಿಸಿಕೊಂಡು ದೇವಾಲಯಗಳ ಸಮಗ್ರ ಅಧ್ಯಯನ ನಡೆಸುವ ಉದ್ದೇಶದಿಂದ ಈ ವಿಷಯವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ವ್ಯಾಪ್ತಿ

ಯಾವುದೇ ಒಂದು ಸಂಶೋಧನೆಗೆ ಒಂದು ಚೌಕಟ್ಟು ಬಹುಮುಖ್ಯ. ಇದು ಒಂದು ನಿರ್ಧಿಷ್ಟ ಹಾಗೂ ಉದ್ದೇಶಪೂರಿತ ಸಂಶೋಧನೆಯ ಯಶಸ್ಸಿಗೆ ಅತ್ಯಗತ್ಯ. ಈ ವ್ಯಾಪ್ತಿಯ ಕ್ರಮಬದ್ಧತೆಯಿಂದ ಸ್ಪಷ್ಟವಾದ ಇತಿಹಾಸವನ್ನು ರಚಿಸಲು ಸಾಧ್ಯವಾಗುತ್ತದೆ. ಪ್ರಸ್ತುತ ಅಧ್ಯಯನವು ಶೀರ್ಷಿಕೆಯನ್ವಯ ಚಿತ್ರದುರ್ಗ ಬೆಟ್ಟ ಪರಿಸರ ಮತ್ತು ನಗರಕ್ಕೆ ಸೀಮಿತವಾಗಿದೆ. ಹಾಗಿದ್ದೂ, ಚಿತ್ರದುರ್ಗದಿಂದ ೧ ಕಿ.ಮೀ. ವ್ಯಾಪ್ತಿಯ ಪ್ರದೇಶವನ್ನು ಇದು ಒಳಗೊಂಡಿದೆ. ಇದರಲ್ಲಿ ಚಿತ್ರದುರ್ಗದ ಆಸುಪಾಸಿನ ಗ್ರಾಮಗಳಾದ ಮದಕರಿಪುರ, ಮಲ್ಲಾಪುರ, ಕಾವಾಡಿಗರಹಟ್ಟಿ ಗ್ರಾಮಗಳು ಅಧ್ಯಯನದ ವ್ಯಾಪ್ತಿಗೆ ಒಳಪಟ್ಟಿವೆ. ಇವುಗಳಲ್ಲಿ ಪ್ರಾಚೀನ ಕಾಲದಿಂದ ಪಾಳೆಯಗಾರರ ಕಾಲದವರೆಗೆ ನಿರ್ಮಾಣಗೊಂಡ ದೇವಾಲಯಗಳ ಅಧ್ಯಯನವನ್ನು ನಡೆಸಲಾಗಿದೆ.

ಸ್ವರೂಪ

ಪ್ರಸ್ತುತ ಪ್ರೌಢಪ್ರಬಂಧವನ್ನು ಅಧ್ಯಯನದ ಅನುಕೂಲಕ್ಕಾಗಿ ಆರು ಅಧ್ಯಾಯಗಳಾಗಿ ವಿಭಾಗಿಸಲಾಗಿದೆ. ಅವಶ್ಯಕತೆಗೆ ಅನುಗುಣವಾಗಿ ಉಪಶೀರ್ಷಿಕೆಗಳೂ ಇವೆ. ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ವಿಧಾನ ಮತ್ತು ಈವರೆಗಿನ ಅಧ್ಯಯನಗಳ ಸಮೀಕ್ಷೆಯನ್ನು ಒಳಗೊಂಡ ಅಧ್ಯಾಯವು ಮೊದಲನೆಯದು.

ಎರಡನೇ ಅಧ್ಯಾಯದಲ್ಲಿ ಚಿತ್ರದುರ್ಗ ಪರಿಸರದ ಭೌಗೋಳಿಕತೆ, ಪ್ರಾಗಿತಿಹಾಸ ಮತ್ತು ಚಾರಿತ್ರಿಕ ಹಿನ್ನೆಲೆಗಳನ್ನು ವಿವರಿಸಲಾಗುವುದು. ಚಿತ್ರದುರ್ಗ ಪರಿಸರದ ವಾಯುಗುಣ, ಅರಣ್ಯಸಂಪತ್ತು, ಬೆಟ್ಟಗುಡ್ಡಗಳು, ಖನಿಜಸಂಪತ್ತು, ಜಲಸಂಪತ್ತು, ವಿವಿಧ ಹಂತಗಳಲ್ಲಿನ ಪ್ರಾಗಿತಿಹಾಸ ಸಂಸ್ಕೃತಿ ಮತ್ತು ವಿವಿಧ ಅರಸು ಮನೆತನಗಳ ಆಳ್ವಿಕೆಗೆ ಸೇರಿದ್ದ ಚಿತ್ರದುರ್ಗದ ಚಾರಿತ್ರಿಕ ಹಿನ್ನೆಲೆಯನ್ನು ಕುರಿತು ಸವಿವರವಾಗಿ ವಿವರಿಸಲಾಗಿದೆ.

ಮೂರನೇ ಅಧ್ಯಾಯವು ದೇವಾಲಯಗಳ ವಾಸ್ತುಶಿಲ್ಪ ವಿವರಗಳಿಂದ ಕೂಡಿದೆ. ಇದನ್ನು ಅಗತ್ಯಕ್ಕೆ ಅನುಗುಣವಾಗಿ ಶೈವ, ವೈಷ್ಣವ ಮತ್ತು ಶಾಕ್ತ ಎಂದು ವಿಂಗಡಿಸಿಕೊಂಡು ಅವುಗಳ ವಿವಿಧ ಆಯಾಮಗಳನ್ನು ಅಧ್ಯಯನ ನಡೆಸಲಾಗಿದೆ. ಪ್ರತಿ ದೇವಾಲಯದ ವಾಸ್ತುವಿವರ ವಿವರಿಸುವ ಹಂತದಲ್ಲಿ ಆಯಾ ದೇವಾಲಯಗಳ ವಿವಿಧ ಭಾಗಗಳಲ್ಲಿ ಸ್ಥಾಪಿಸಿರುವ ಮೂರ್ತಿಶಿಲ್ಪಗಳನ್ನೂ ಅದರಲ್ಲಿಯೇ ವಿವರಿಸಲಾಗಿದೆ.

ನಾಲ್ಕನೇ ಅಧ್ಯಾಯವು ಚಿತ್ರದುರ್ಗ ಪರಿಸರದ ಮೂರ್ತಿಶಿಲ್ಪಗಳಿಗೆ ಸೀಮಿತವಾದದ್ದು. ದೇವಾಲಯ ಮತ್ತು ಅದರ ಆಸುಪಾಸಿನ ಮೂರ್ತಿಶಿಲ್ಪಗಳ ಹೊರತಾಗಿ, ಬೆಟ್ಟ ಪರಿಸರದ ಹುಟ್ಟು ಬಂಡೆಗಳ ಮೇಲೆ, ಕೋಟೆ ಪ್ರಾಕಾರದ ಮೇಲೆ ಹಾಗೂ ಬೆಟ್ಟಪರಿಸರದಲ್ಲಿ ದೊರೆತಿದ್ದು, ಸ್ಥಳೀಯ ಪ್ರಾಚ್ಯವಸ್ತು ಇಲಾಖೆಯಲ್ಲಿ ಸಂರಕ್ಷಣೆಗೊಂಡಿರುವ ಮೂರ್ತಿಶಿಲ್ಪದ ವಿವಿಧ ಅಂಶಗಳನ್ನು ಒಳಗೊಂಡ ಅಧ್ಯಾಯವಿದು.

ಐದನೇ ಅಧ್ಯಾಯವು ಧಾರ್ಮಿಕ ಪಂಥಗಳಿಗೆ ಸಂಬಂಧಿಸಿದ್ದಾಗಿದೆ. ಚಿತ್ರದುರ್ಗ ಪರಿಸರವು ಪ್ರಾಚೀನ ಕಾಲದಲ್ಲಿ ಬೌದ್ಧ ಮತ್ತು ಶೈವಧರ್ಮದ ಕೇಂದ್ರವಾಗಿದ್ದರೆ, ಮಧ್ಯಕಾಲದ ವೇಳೆಗೆ ವೈಷ್ಣವ

ಪಂಥದ ಪ್ರಮುಖ ಕೇಂದ್ರವಾಗಿತ್ತು. ಪ್ರಸ್ತುತ ಮತ ಪಂಥಗಳ ಪರಂಪರೆ ಆಚರಣೆಗಳು ಮತ್ತು ಅವುಗಳ ಸ್ಥಿತ್ಯಂತರಗಳನ್ನು ಕುರಿತು ವಿವರವಾದ ಅಧ್ಯಯನ ಕೈಗೊಳ್ಳಲಾಗಿದೆ.

ಆರನೇ ಅಧ್ಯಾಯವು ಸಮಾರೋಪವಾಗಿದ್ದು, ಇದು ಇಡೀ ಅಧ್ಯಯನದ ಸಂಕ್ಷಿಪ್ತ ರೂಪವೆನ್ನಬಹುದು. ಇದರ ಕೊನೆಯಲ್ಲಿ ಪೂರಕ ಮಾಹಿತಿಗಳಾದ ಪಾರಿಭಾಷಿಕ ಪದಕೋಶ, ಗ್ರಂಥಸೂಚಿ, ತಲನಕ್ಷೆ, ಛಾಯಾಚಿತ್ರಗಳನ್ನು ನೀಡಲಾಗಿದೆ.

ವಿಧಾನ

ಸಂಶೋಧನೆಗೆ ಅಧ್ಯಯನಕ್ರಮ ಅತಿಮುಖ್ಯ. ಅಧ್ಯಯನವು ಯಾವುದೇ ಅಡೆತಡೆಗಳಿಲ್ಲದೆ ಸುಸೂತ್ರವಾಗಿ ಮುನ್ನಡೆಯಲು ಕ್ರಮಬದ್ಧವಾದ ಅಧ್ಯಯನ ವಿಧಾನ ಮುಖ್ಯ. ಪ್ರಸ್ತುತ ಅಧ್ಯಯನಕ್ಕೆ ಚಿತ್ರದುರ್ಗ ಪರಿಸರದ ದೇವಾಲಯ, ಮೂರ್ತಿಶಿಲ್ಪ, ಶಾಸನಗಳೇ ಪ್ರಧಾನ ಆಕರಗಳಾಗಿವೆ. ದೇವಾಲಯಗಳ ಕುರಿತು ಪ್ರಾಥಮಿಕ ಮಾಹಿತಿಯನ್ನು ವ್ಯಾಪಕ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಲಾಯಿತು. ಇದೇ ಅವಧಿಯಲ್ಲಿ ಪ್ರತೀ ದೇವಾಲಯ ಕುರಿತು ಜನಪದರಲ್ಲಿರುವ ನಂಬಿಕೆ, ಐತಿಹ್ಯ ಹಾಗೂ ಜಾತ್ರಾ ವಿಶೇಷತೆಗಳನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿ, ಛಾಯಾಚಿತ್ರ ಮತ್ತು ದೇವಾಲಯ ತಲನಕ್ಷೆಯನ್ನು ಸ್ಥಳದಲ್ಲಿಯೇ ತಯಾರಿಸಲಾಯಿತು. ಪ್ರತಿಯೊಂದು ದೇವಾಲಯದ ವಾಸ್ತುವಿವರ ಮತ್ತು ಮೂರ್ತಿಶಿಲ್ಪಗಳನ್ನು ಸವಿವರವಾಗಿ ಅಧ್ಯಯನ ನಡೆಸಲಾಗಿದೆ. ಅಂತಿಮವಾಗಿ ಇದಕ್ಕೆ ಪೂರಕವಾಗಿ ಆನುಷಂಗಿಕ ಆಕರಗಳನ್ನು ಬಳಸಿಕೊಳ್ಳಲಾಗಿದೆ. ದೇವಾಲಯದ ವಾಸ್ತು, ಧರ್ಮ, ಧಾರ್ಮಿಕ ಪಂಥಗಳ ಶಿಲ್ಪಗಳು ಅವುಗಳ ಸ್ಥಾನಪಲ್ಲಟಗಳನ್ನು ವಿಶ್ಲೇಷಿಸಲಾಗಿದೆ.

ಈವರೆಗಿನ ಅಧ್ಯಯನಗಳ ಸಮೀಕ್ಷೆ

ದೇವಾಲಯಗಳು ಮತ್ತು ಅವುಗಳ ವಾಸ್ತು ವಿವರಗಳ ಕುರಿತು ಈವರೆಗೆ ಸಾಕಷ್ಟು ಅಧ್ಯಯನಗಳು ಪಾಶ್ಚಾತ್ಯ ಮತ್ತು ದೇಶೀಯ ವಿದ್ವಾಂಸರಿಂದ ನಡೆದಿವೆ. ಪ್ರಸ್ತುತ **"ಚಿತ್ರದುರ್ಗ ಪರಿಸರದ ದೇವಾಲಯಗಳು"** ಎಂಬ ಶೀರ್ಷಿಕೆಯನ್ನು ಅನುಲಕ್ಷಿಸಿ ಹೇಳುವುದಾದರೆ ಈವರೆಗಿನ ಅಧ್ಯಯನಗಳು ಸಂಪಾದಿತ ಕೃತಿಗಳಲ್ಲಿ, ಬಿಡಿ ಲೇಖನಗಳ ರೂಪದಲ್ಲಿ ಹೊರಬಂದಿವೆ. ಕರ್ನಾಟಕ ರಾಜ್ಯದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ ಪ್ರಕಟಿಸಿರುವ *'ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ'* ಎಂಬ ಕೃತಿಯಲ್ಲಿ ಚಿತ್ರದುರ್ಗ ಜಿಲ್ಲೆಯ ದೇವಾಲಯಗಳ ಕೆಲ ಲೇಖನಗಳಿವೆ. ಇವು ಜಿಲ್ಲಾ ಮಟ್ಟದ ಮೇರೆ ಹೊಂದಿರುವುದರಿಂದ ಚಿತ್ರದುರ್ಗ ದೇವಾಲಯಗಳ ಅಲ್ಪ ಮಾಹಿತಿಗಳೊಡನೆ ಕೆಲವೇ ಕೆಲವು ದೇವಾಲಯಗಳನ್ನು ಮಾತ್ರ ವಿವರಿಸುತ್ತವೆ. ಎನ್.ಎಸ್. ಮಹಂತೇಶರವರ *'ಚಿತ್ರದುರ್ಗ ಕೋಟೆ ಪರಿಸರದ ದೇವಾಲಯಗಳು ಒಂದು ಸಾಂಸ್ಕೃತಿಕ ಅಧ್ಯಯನ'* ಎಂಬ ಕೃತಿಯು ದೇವಾಲಯಗಳ ಕುರಿತು ಹೊರಬಂದಿರುವ ಒಂದು ಕಿರು ಹೊತ್ತಿಗೆಯಾಗಿದೆ. ಈ ಕೃತಿಯ ಶೀರ್ಷಿಕೆಯನ್ವಯ ಇದು ಚಿತ್ರದುರ್ಗ ಕೋಟೆಯ ಪ್ರಮುಖವಾದ ದೇವಾಲಯಗಳಿಗೆ ಮಾತ್ರ ಸೀಮಿತವಾಗಿದೆ. ಅಲ್ಲದೆ ಇದರಲ್ಲಿ ತಿಳಿಸಿದ ಅನೇಕ ಅಂಶಗಳು ವಿಚಾರಣೀಯ ಹಾಗೂ ದ್ವಂದ್ವಾತ್ಮಕವೆನಿಸುತ್ತವೆ. ಈ ನಿಟ್ಟಿನಲ್ಲಿ ನಡೆದ ಮತ್ತೊಂದು ಪ್ರಮುಖ ಅಧ್ಯಯನವೆಂದರೆ ಬಿ. ರಾಜಶೇಖರಪ್ಪನವರ *'ಪ್ರಾಚೀನ ಚಿತ್ರದುರ್ಗ'* ಎಂಬ ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ. ಇದರಲ್ಲಿ ಚಿತ್ರದುರ್ಗದ ದೇವಾಲಯಗಳ ಶಾಸನೋಕ್ತ ವಿಷಯಗಳನ್ನು ಕುರಿತು ಮಾತ್ರ ಚರ್ಚಿಸಿರುವರು. ಕಲೆ, ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪದ ಕುರಿತು ಸ್ವಲ್ಪವೂ ವಿವರಿಸಿರುವುದಿಲ್ಲ. ಈ ಮೇಲಿನ ಅಧ್ಯಯನಗಳೊಡನೆ ಇಲ್ಲಿ ಹೇಳಲೇಬೇಕಾದ ಮತ್ತೊಂದು ಮಾತೂ ಇದೆ. ಈ ಮೇಲೆ ತಿಳಿಸಿರುವ ಎಲ್ಲಾ ಅಧ್ಯಯನಗಳು ಚಿತ್ರದುರ್ಗದ ಕೆಲವೇ ಕೆಲವು ದೇವಾಲಯಗಳಿಗೆ ಮಾತ್ರ ಸೀಮಿತವಾಗಿವೆ. ಚಿತ್ರದುರ್ಗ ಪರಿಸರದ ದೇವಾಲಯಗಳ ಕುರಿತು ಸಮಗ್ರವಾದ ಅಧ್ಯಯನ ಕೈಗೊಳ್ಳುವ ಅಗತ್ಯವಿರುವ ಹಿನ್ನೆಲೆಯಲ್ಲಿ ಪ್ರಸ್ತುತ ವಿಷಯವನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ನಡೆಸಲಾಗಿದೆ.

ಅಧ್ಯಾಯ – ೨

ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ

೨.೧ ಭೌಗೋಳಿಕ ಹಿನ್ನೆಲೆ

೨.೨ ಪ್ರಾಗಿತಿಹಾಸ

೨.೩ ಚಾರಿತ್ರಿಕ ಹಿನ್ನೆಲೆ

ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ

೨.೧ ಭೌಗೋಳಿಕ ಹಿನ್ನೆಲೆ

ಯಾವುದೇ ಪ್ರದೇಶದ ಅಭಿವೃದ್ಧಿ ಅಲ್ಲಿನ ಭೌಗೋಳಿಕ ಅಂಶಗಳನ್ನು ಅವಲಂಬಿಸಿರುವುದು ನೈಜನೀಯ. ಈ ನಿಟ್ಟಿನಲ್ಲಿ ಅಲ್ಲಿನ ಬೆಟ್ಟಗುಡ್ಡ, ಕಣಿವೆ, ತೊರೆ, ನದಿ, ತೀರಪ್ರದೇಶದ ಬಂದರು, ಸಸ್ಯಸಂಪತ್ತು, ಪ್ರಾಣಿಸಂಪತ್ತು, ಮಣ್ಣಿನ ಗುಣಲಕ್ಷಣ ಮತ್ತು ಖನಿಜ ಸಂಪನ್ಮೂಲಗಳು ಮಹತ್ವದ ಪಾತ್ರ ವಹಿಸುತ್ತವೆ. ಪ್ರಾಚೀನ ಕಾಲದಿಂದಲೂ ಮಾನವ ನೆಲೆಸಿರುವುದು ಉಚಿತ ಸಂಪನ್ಮೂಲಗಳು ದೊರೆಯುವ ಈ ಬಗೆಯ ಪರಿಸರವನ್ನೇ ಎಂಬುದು ಜನಜನಿತ. ಹಾಗಾಗಿ ಇತಿಹಾಸ ಮತ್ತು ಭೂಗೋಳ ಪರಸ್ಪರ ನಿಕಟವಾದ ಸಂಬಂಧ ಹೊಂದಿವೆ. 'ಕಾಲಗಣನೆ ಮತ್ತು ಭೂಗೋಳ ಇತಿಹಾಸದ ಎರಡು ಕಣ್ಣುಗಳಿದ್ದಂತೆ'[೧] ಎಂಬ ರಿಚರ್ಡ್ ಹಾಯ್ಕ್ಲುಡ್‌ರವರ ಮಾತು ನಿಜಕ್ಕೂ ಅರ್ಥಪೂರ್ಣ. ಉತ್ತಮ ಭೌಗೋಳಿಕ ವಾತಾವರಣವು ಮಾನವನಿಗೆ ನೈಸರ್ಗಿಕವಾಗಿ ರಕ್ಷಣೆ ಒದಗಿಸಿ, ಸಂಸ್ಕೃತಿಯ ಸಂವರ್ಧನೆಗೆ ನೆರವಾಗುತ್ತದೆ.

ಕರ್ನಾಟಕದ ಮಧ್ಯರಂಗದಲ್ಲಿ ನೆಲೆಗೊಂಡಿರುವ ಚಿತ್ರದುರ್ಗ ನಗರವು ಅತ್ಯಂತ ಆಯಕಟ್ಟಿನ ಸ್ಥಳವಾಗಿದ್ದು, ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕಗಳ ಸಂಸ್ಕೃತಿಯನ್ನು ಬೆಸೆಯುವ ಕೊಂಡಿಯಂತಿದೆ. ಚಾರಿತ್ರಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಮಹತ್ವ ಪಡೆದ ಇದು ಪ್ರಸ್ತುತ ಜಿಲ್ಲಾ ಮತ್ತು ತಾಲೂಕು ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿದೆ. ಚಿತ್ರದುರ್ಗ ನಗರವು ಪೂರ್ವದಲ್ಲಿ ಕುಂಚಿಗನಹಾಳು, ದೊಡ್ಡಸಿದ್ದವ್ವನಹಳ್ಳಿ, ಪಶ್ಚಿಮದಲ್ಲಿ ಮಾಳಪ್ಪನಹಟ್ಟಿ, ಉತ್ತರದಲ್ಲಿ ಮಲ್ಲಾಪುರ, ದಕ್ಷಿಣದಲ್ಲಿ ಜೋಗಿಮಟ್ಟಿ ಬೆಟ್ಟ ಪರಿಸರವನ್ನು ತನ್ನ ಮೇರೆಗಳನ್ನಾಗಿರಿಸಿಕೊಂಡಿದೆ. ಚಿತ್ರದುರ್ಗ ನಗರವು ಒಟ್ಟು ೧,೨೫,೧೭೦ ಜನಸಂಖ್ಯೆ ಹೊಂದಿದೆ.[೨]

೨.೧.೧ ಬೆಟ್ಟಗುಡ್ಡಗಳು ಮತ್ತು ಕಣಿವೆಗಳು

ನಿಸರ್ಗದ ಕೊಡುಗೆಗಳಲ್ಲಿ ಬೆಟ್ಟಗುಡ್ಡ ಮತ್ತು ಕಣಿವೆಗಳಿಗೆ ಮಹತ್ವದ ಸ್ಥಾನವಿದೆ. ಇವು ಮಾನವನ ಜೀವನದ ಮೇಲೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಪ್ರಭಾವ ಬೀರುತ್ತವೆ. ಅಂತೆಯೇ ಮಾನವ ತನ್ನ ಬುದ್ಧಿಚಾತುರ್ಯಗಳಿಂದ ನಿಸರ್ಗವನ್ನು ನಿಯಂತ್ರಿಸಲು ಪ್ರಯತ್ನಿಸಿದರೂ ಪ್ರಕೃತಿಯ ನಿಗದಿತ ಪರಿಧಿಯೊಳಗೆ ಕಾರ್ಯನಿರ್ವಹಿಸುತ್ತಿರುತ್ತಾನೆ. ನೈಸಗಿಕವಾಗಿ ರೂಪುತಳೆದ ಬೆಟ್ಟಗುಡ್ಡ ಮತ್ತು ಕಣಿವೆಗಳು ಇತಿಹಾಸದುದ್ದಕ್ಕೂ ಮಾನವನ ರಕ್ಷಣೆಗೆ ಹಾಗೂ ಸಂಸ್ಕೃತಿಯ ಅಭ್ಯುದಯಕ್ಕೆ ಬೆಂಗಾವಲಾಗಿ ನಿಂತಿವೆ.

ಚಿತ್ರದುರ್ಗವು ಮೂಲತ ಬೆಟ್ಟಗುಡ್ಡಗಳಿಂದ ಮತ್ತು ಕಡಿದಾದ ಕಣಿವೆಗಳಿಂದ ಕೂಡಿದ ದುರ್ಗಮ ಪ್ರದೇಶ. ಇದು ಪ್ರಾಕೃತಿಕವಾಗಿ ಸಂಪದ್ಭರಿತವಾಗಿದ್ದು, ಬಹುಪಾಲು ಕಣ ಶಿಲೆಯಿಂದಾವೃತವಾಗಿದೆ. ಈ ಜಿಲ್ಲೆಯಲ್ಲಿ ಐದು ಸಮಾನಾಂತರ ಸಾಲಿನ ಬೆಟ್ಟಗಳು ಹಾದು ಹೋಗುತ್ತವೆ.[೩] ದಕ್ಷಿಣ ಆಗ್ನೇಯದಿಂದ ಉತ್ತರ ವಾಯುವ್ಯದಕಡೆಗೆ ಹಬ್ಬಿರುವ ಈ ಬೆಟ್ಟದ ಸಾಲುಗಳು ಅಲ್ಲಲ್ಲಿ ಎತ್ತರದ ರೂಪದಲ್ಲಿಯೋ ಅಥವಾ ಭೂಗತವಾಗಿಯೋ ಸಾಗುತ್ತವೆ. ಪೂರ್ವಸಾಲು

ಹಿರಿಯೂರಿನ ಪಶ್ಚಿಮದಿಂದ ಕಣಕುಪ್ಪೆ ಬೆಟ್ಟದವರೆಗೆ ಮುಂದುವರೆಯುತ್ತದೆ.[೪] ಇವುಗಳು ಉತ್ತರ ಈಶಾನ್ಯಕ್ಕೆ ಇಳಿಜಾರಾಗಿದ್ದು, ಅತ್ಯಂತ ವೈವಿಧ್ಯಮಯವಾಗಿವೆ.

ಚಿತ್ರದುರ್ಗ ಸಮುದ್ರಮಟ್ಟದಿಂದ ಸುಮಾರು ೨೦೦೦ ಅಡಿಗಳಷ್ಟು ಎತ್ತರವಿದ್ದು ಅನೇಕ ಗಿರಿಶಿಖರಗಳಿಂದ ಆವೃತವಾಗಿದೆ. ಚಿತ್ರದುರ್ಗ ಪರಿಸರದಲ್ಲಿ ಭೈರನಕಲ್ಲುಗುಡ್ಡ(೩೮೬೩),[೫] ಜೋಗಿಮಟ್ಟಿ(೩೮೦೩), ಈಚಲಗುಡ್ಡ(೩೮೦೪), ಓಬಳದೇವರಗುಡ್ಡ(೩೬೬೦), ಧವಳಪ್ಪನಗುಡ್ಡ(೩೨೮೫), ಈರಣ್ಣನಕಲ್ಲುಗುಡ್ಡ, ಚೇಳಗುಡ್ಡ, ನೆಲ್ಲಿಕಾಯಿಸಿದ್ದಪ್ಪನ ಬೆಟ್ಟ, ಝುಂಡಾಬತೇರಿ ಬೆಟ್ಟ, ಚಿರತೆಕಲ್ಲು ಎಂಬಿತ್ಯಾದಿ ಬೆಟ್ಟಗುಡ್ಡಗಳಿವೆ. ಇವುಗಳ ಮಧ್ಯಭಾಗದಲ್ಲಿ ಚಂದ್ರವಳ್ಳಿ ಕಣಿವೆ, ಪಚ್ಚೆಕಣಿವೆ, ಬಾಳೇಕಾಯಿಗೊಂದಿಗಳೊಡನೆ ಜೋಗಿಮಟ್ಟಿ ಮತ್ತು ಹಿಮವತ್ ಕೇದಾರ ಪರಿಸರಗಳು, ಕಡಿದಾದ ಕಣಿವೆಗಳಿಂದ ಆವೃತವಾಗಿದ್ದು, ನೋಡುಗರ ಕಣ್ಮನ ಸೆಳೆಯುವ ರಮ್ಯತಾಣಗಳಿವು.

೨.೧.೨ ಜಲಸಂಪತ್ತು

ಚಿತ್ರದುರ್ಗವು ಹಲವರಿಗೆ ಪರಿಚಯವಾಗಿರುವುದು ಬರಪೀಡಿತ ಪ್ರದೇಶವೆಂಬ ಹಣೆಪಟ್ಟಿಯಿಂದ. ಇಲ್ಲಿ ವಾರ್ಷಿಕವಾಗಿ ಸರಾಸರಿ ೬೫೫ ಮಿ.ಮೀ. ಮಳೆ ಬೀಳುತ್ತಿದ್ದು, ರಾಜ್ಯದ ಕಡಿಮೆ ಮಳೆ ಬೀಳುವ ಪ್ರದೇಶಗಳ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ.[೬] ಚಿತ್ರದುರ್ಗ ಪರಿಸರದಲ್ಲಿ ಬೃಹದಾಕಾರದ ಬೆಟ್ಟಗುಡ್ಡ ಮತ್ತು ಕಣಿವೆಗಳಿರುವುದರಿಂದ ಕೆಲ ಚಿಕ್ಕಪುಟ್ಟ ತೊರೆಗಳು, ಅಲ್ಲಲ್ಲಿ ಪ್ರಕೃತಿ ನಿರ್ಮಿತ ನೀರಿನ ದೋಣೆಗಳು ಕಾಣಬರುತ್ತವೆ. ಅತ್ಯಂತ ಕಡಿಮೆ ಮಳೆ ಬೀಳುವ ಈ ಪರಿಸರದಲ್ಲಿ ನೀರಿನ ಶೇಖರಣೆ ಹಾಗೂ ಸದ್ಬಳಕೆಗಾಗಿ ಪ್ರಾಚೀನ ಕಾಲದಿಂದ ಚಿತ್ರದುರ್ಗ ನಾಯಕ ಅರಸರ ಅವಧಿಯವರೆಗೆ ಕೈಗೊಂಡಿರುವ ಕ್ರಮಗಳು ಮಾತ್ರ ಸ್ಮರಣಾರ್ಹವಾದವುಗಳು. ಚಂದ್ರವಳ್ಳಿ ಕಣಿವೆಯ ತೊರೆಯೊಂದಕ್ಕೆ ಇತಿಹಾಸ ಆರಂಭದ ಅವಧಿಯಲ್ಲಿಯೇ ಅಡ್ಡಗಟ್ಟೆಯೊಂದನ್ನು ನಿರ್ಮಿಸಿ, ನೀರನ್ನು ಸದ್ಬಳಕೆ ಮಾಡಿಕೊಂಡ ಸಂಗತಿಯನ್ನು ಚಂದ್ರವಳ್ಳಿ ಕೆರೆಯು ಶೃತಪಡಿಸುತ್ತದೆ.[೭] ಇದರೊಡನೆ ಇದಕ್ಕಿಂತ ಬಹುಹಿಂದೆಯೇ ಇಲ್ಲಿನ ತೊರೆಗಳಿಗೆ ಕೆಲವು ಪ್ರಾಚೀನ ಅಡ್ಡಗಟ್ಟೆಗಳನ್ನು ಕಟ್ಟಿರುವುದು ಇತ್ತೀಚೆಗೆ ಪತ್ತೆಯಾಗಿದ್ದು, ಇವು ಗುರುತಿಸಲಾಗದಷ್ಟು ಹಾಳಾಗಿವೆ.[೮] ಅನಂತರದ ವಿವಿಧ ಕಾಲಘಟ್ಟಗಳಲ್ಲಿ ಹಲವು ಕೆರೆ, ಒಡ್ಡುಗಳನ್ನು ನಿರ್ಮಿಸಿ ತೊರೆಗಳಿಂದ ಬರುವ ನೀರು ಇವುಗಳಲ್ಲಿ ಸಂಗ್ರಹವಾಗುವಂತೆ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ನೀರು ಹೋಗಿ ಮತ್ತೊಂದು ಕೆರೆ ಅಥವಾ ಕೊಳದಲ್ಲಿ ಸಂಗ್ರಹವಾಗುವಂತೆ ಇವುಗಳಿಗೆ ಪರಸ್ಪರ ಸಂಪರ್ಕ ಕಲ್ಪಿಸಿರುವುದು ಚಿತ್ರದುರ್ಗ ಪರಿಸರದ ಜಲನಿರ್ವಹಣೆಯ ಬಹುಮುಖ್ಯ ಸಂಗತಿ. ಚಿತ್ರದುರ್ಗ ಜಿಲ್ಲೆಯ ಪ್ರಾಗಿತಿಹಾಸ ಮತ್ತು ಇತಿಹಾಸ ಕಾಲದ ಅನೇಕ ನೆಲೆಗಳ ಜೀವಸೆಲೆಯಾಗಿರುವ ಜನಗಿಹಳ್ಳ ಹುಟ್ಟುವುದು ಜೋಗಿಮಟ್ಟಿಯ ದಕ್ಷಿಣಕ್ಕಿರುವ ಓಬಳದೇವರ ಗುಡ್ಡದಲ್ಲಿ. ಹುಲ್ಲೂರು ಶ್ರೀನಿವಾಸ ಜೋಯಿಸರು ಈ ಹಳ್ಳವನ್ನು 'ಪಾಪವಿನಾಶಿನಿ' ಎಂದು ಕರೆದಿದ್ದಾರೆ.[೯] ಇದು ತನ್ನ ಮೂಲ ಸ್ಥಾನದಿಂದ ಸರಿಸುಮಾರು ೧೨೮ ಕಿ.ಮೀ. ಹರಿದು ವೇದಾವತಿ ನದಿಯಲ್ಲಿ ಲೀನವಾಗಿ ಮುಂದೆ ತುಂಗಭದ್ರ ನದಿಯನ್ನು ಸೇರುತ್ತದೆ. ಪ್ರಸ್ತುತ ಮೊಳಕಾಲ್ಮೂರು ಪರಿಸರದಲ್ಲಿ ಈ ಹಳ್ಳಕ್ಕೆ 'ಚಿನ್ನಹಗರಿ' ಎಂಬ ಹೆಸರು ಪ್ರಚಲಿತದಲ್ಲಿದ್ದರೆ, ಕ್ರಿ.ಶ.೧೦ ಮತ್ತು ೧೬ನೇ ಶತಮಾನದ ಕೆಲವು ಶಾಸನಗಳಲ್ಲಿ ಇದನ್ನು 'ಹನೆಯತೊರೆ' ಎಂದು ಉಲ್ಲೆಖಿಸಲಾಗಿದೆ.[೧೦]

೨.೧.೩ ಭೂ ಇತಿಹಾಸ

ಪ್ರಪಂಚದಲ್ಲಿಯೇ ಪ್ರಸಿದ್ಧಿ ಹೊಂದಿದ ಮರಡಿಹಳ್ಳಿ ದಿಂಬುರಚನೆ ಶಿಲೆ[ಪಿಲ್ಲೋಲಾವಾಸ್] ಇರುವುದು ಚಿತ್ರದುರ್ಗ ತಾಲೂಕಿನಲ್ಲಿ. ಇದು ತೀರಾ ವಿರಳವಾಗಿದ್ದು ಒಂಭತ್ತು ಭೂವಲಯಗಳಿಗೆ ಮಾತ್ರ ಸೀಮಿತವಾಗಿರುವ್ಯದು. ಇದನ್ನು ರಾಷ್ಟ್ರೀಯ ಶಿಲೋದ್ಯಾನವನ್ನಾಗಿ ಸಂರಕ್ಷಿಸಲಾಗಿದೆ. ಚಿತ್ರದುರ್ಗ ಉಪವರ್ಗವು ಧಾರವಾಡ ಶಿಲಾಸ್ತೋಮದ ಅತ್ಯಂತ ಕಿರಿಯ ಶಿಲಾವರ್ಗವಾಗಿದ್ದು, ಇದರ ಜಲಜ ಶಿಲಾ ಸಮುದಾಯ ಅಗ್ನಿಶಿಲೆಗಳೊಡಗೂಡಿ ಚಲಿತವಲಯ[ಮೊಬೈಲ್ ಬೆಲ್ಟ್] ಆಗಿದೆ.[೧೧] ಈ ಬೆಟ್ಟದ ಬಹುಪಾಲು ಕಣಶಿಲೆಯಿಂದಾವೃತವಾಗಿದೆ. ರೇಡಿಯೋ ವಿಕಿರಣ ಧಾತುಗಳು ದೃಢಪಡಿಸಿದ ಪ್ರಕಾರ

ಈ ಶಿಲೆಗಳು ೨೭೦ ಕೋಟಿ ವರ್ಷಗಳಷ್ಟು ಹಳೆಯವು. ಮೈಸೂರು ಭೂಗರ್ಭಶಾಸ್ತ್ರ ಇಲಾಖೆಯ ಭೂಗರ್ಭಶಾಸ್ತ್ರಜ್ಞ ಸಂಪತ್ತೈಯ್ಯಂಗಾರ್‌ರವರು ಚಿತ್ರದುರ್ಗ ಶಿಲಾ ಪೇರಿಕೆಯು 'ಜಲಜಶಿಲಾಸಂಚಯನ'ದಿಂದ ಉಂಟಾಗಿದೆಯೆಂದು ದೃಢಪಡಿಸಿದ್ದಾರೆ.[೧೨] ಇವರ ಜಲಜಶಿಲೋದ್ಭವ ತತ್ವವು ಕರ್ನಾಟಕದ ಭೂ ಇತಿಹಾಸಕ್ಕೆ ಹೊಸದೊಂದು ತಿರುವು ನೀಡಿತು. ಈ ಸಿದ್ಧಾಂತದ ಪ್ರಕಾರ ಚಿತ್ರದುರ್ಗವು ೨೭೦ ಕೋಟಿ ವರ್ಷಗಳ ಹಿಂದೆ ಸಮುದ್ರದ ತಳಭಾಗವಾಗಿತ್ತು ಹಾಗೂ ಜಿಲ್ಲೆಯ ಶಿಲೆಗಳಾದ ಮರಳುಶಿಲೆ, ಪೆಂಡಿಶಿಲೆ, ಸುಣ್ಣಶಿಲೆ ಮತ್ತು ಜೇಡರಶಿಲೆಗಳು ಸಾಗರತಳದ ಮಹಾಕಂದರಗಳಲ್ಲಿ ಸಂಚಯಗೊಂಡುವೆಂದು ಮೊದಲಬಾರಿಗೆ ಬೆಳಕಿಗೆಬಂದಿತು. ಹಲವಾರು ಭೂ ವಿಜ್ಞಾನಿಗಳು ಇದನ್ನು ಶೃತಪಡಿಸಿ ಈ ಪದರು ಶಿಲೆಯನ್ನು 'ಕಿರಿಯ ಹಸಿರುಕಲ್ಲು ವಲಯ' ಎಂದು ವರ್ಗೀಕರಿಸಿದರು.[೧೩] ಅಗ್ನಿಶಿಲೆ, ರೂಪಾಂತರ ಶಿಲೆ, ಜಲಜಶಿಲೆಗಳಿಂದ ಕೂಡಿದ ಈ ವಲಯಕ್ಕೆ ಚಿತ್ರದುರ್ಗ ಪದರು ಶಿಲಾವಲಯ ಎಂದು ಕರೆಯಲಾಯಿತು. ಈ ವಲಯವು ೨೦ ರಿಂದ ೨೫ ಕಿ.ಮೀ. ಅಗಲ, ೩೦ ರಿಂದ ೪೦ ಕಿ.ಮೀ. ಆಳ ಹಾಗೂ ಸುಮಾರು ೨೫೦ ಕಿ.ಮಿ. ಉದ್ದವಿದೆ. ಅಂದರೆ ಚಿತ್ರದುರ್ಗದಿಂದ ಗದಗದವರೆಗೆ, ಹಾಗೆಯೇ ದಕ್ಷಿಣಕ್ಕೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದವರೆಗೆ ಒಂದೇ ತೆರನಾದ ಶಿಲಾವೋಟವುಳ್ಳ ಹಲವು ವಿಧದ ಪದರು ಶಿಲೆಗಳಿಂದ ಕೂಡಿದೆ. ಜಲಜಶಿಲಾವೃತವಾದ ಚಿತ್ರದುರ್ಗ ಪರಿಸರದ ಈ ವಲಯದಲ್ಲಿ ಸುಣ್ಣಶಿಲೆ ಕಬ್ಬಿಣಯುತವಾದ ಬೆಣಚುಶಿಲೆ, ಜೇಡುಶಿಲೆ, ಪೆಂಟಿಶಿಲೆ, ಮರಳುಶಿಲೆ, ಕಣಶಿಲೆ, ಡಯೋರೈಟ್, ಡಾಲೋರೈಟ್ ಮುಂತಾದ ಬಗೆಯ ಶಿಲೆಗಳಿವೆ.

೨.೧.೪ ಖನಿಜ ಸಂಪತ್ತು

ಖನಿಜಗಳ ದೃಷ್ಟಿಯಿಂದಲೂ ಚಿತ್ರದುರ್ಗ ಮತ್ತು ಅದರ ಆಸುಪಾಸಿನ ಪರಿಸರವು ಪ್ರಾಕೃತಿಕವಾಗಿ ಸಂಪದ್ಭರಿತವಾಗಿದೆ. ಈ ನಿಟ್ಟಿನಲ್ಲಿ ಇದು ತಾಮ್ರನಿಕ್ಷೇಪಗಳಿಂದಾಗಿ ಪ್ರಸಿದ್ಧಿ ಪಡೆದಿದೆ. ಕರ್ನಾಟಕದ ಅತ್ಯಂತ ಪ್ರಾಚೀನ ತಾಮ್ರಗಣಿ ಇರುವ ಇಂಗಳದಹಾಳು ಗ್ರಾಮವಿರುವುದೂ ಈ ಪರಿಸರದಲ್ಲಿಯೇ. ಇಲ್ಲಿ ಅಗ್ನಿಶಿಲೆಯಲ್ಲಿಯ ಬೆಣಚು ಸಿರಬಳ್ಳಿಗಳಲ್ಲಿ ಚಾಲ್ಕೊಪೈರೇಟ್, ಪೈರೋಟೈಟ್, ತಾಮ್ರದ ಅದಿರು ರೂಪದಲ್ಲಿ ದೊರೆಯುತಿದ್ದು ಕ್ರಿ.ಶ.೧೮೮೭ರಲ್ಲಿ ಬ್ರೂಸ್‌ಪೂಟ್‌ರವರು ಇವುಗಳನ್ನು ಪತ್ತೆಹಚ್ಚಿದರು.[೧೪] ಚಿತ್ರದುರ್ಗ ಪರಿಸರದಲ್ಲಿ ಚಿಂನ್ನದಗಣಿಯೊಂದು ಇರುವ ಬಗ್ಗೆ ಕ್ರಿ.ಶ.೧೩೩೮ರ ಶಾಸನವೊಂದು ಪ್ರಸ್ತಾಪಿಸುತ್ತದೆ. "ಈ ಶಾಸನದಲ್ಲಿ ಚಿಮ್ಮತ್ತನಕಲ್ಲ ಪಟ್ಟಣಸ್ವಾಮಿ ಸೋಮಸೆಟ್ಟಿಯನ್ನು ಉಲ್ಲೇಖಿಸುವಾಗ ಚಿಂನದಗಣಿಕದ ಚವುಡಿಸೆಟ್ಟಿಯ ಉಲ್ಲೇಖವಿದೆ. ಚಿಂನದಗಣಿ ಈ ಪ್ರಾಂತ್ಯದಲ್ಲಿದ್ದುದರಿಂದ ಅದರ ಉಸ್ತುವಾರಿಯನ್ನು ಚವುಡಸೆಟ್ಟಿ ನಡೆಸುತ್ತಿದ್ದಿರಬಹುದು."[೧೫] ಇದರೊಡನೆ ಚಿತ್ರದುರ್ಗಕ್ಕೆ ಚಿಂನದಗಿರಿದುರ್ಗ ಎಂಬ ಹೆಸರಿನೊಡನೆ 'ಚಿನ್ನಮುರಿದರೆ ಚಿನ್ನ ಚಿಗರೋದು' ಎಂಬ ನುಡಿಗಟ್ಟುಗಳು ಪ್ರಚಲಿತದಲ್ಲಿದ್ದು, ಚಿನ್ನದ ಗಣಿಗಾರಿಕೆ ನಡೆಯುತಿದ್ದಿರ ಬಹುದಾದ ಸೂಚನೆಗಳೂ ಲಭ್ಯವಾಗುತ್ತಿವೆ. ಇತ್ತೀಚೆಗೆ ಗುಡ್ಡದ ರಂಗವ್ವನಹಳ್ಳಿ ಮತ್ತು ಹೊನ್ನಮರಡಿಗಳಲ್ಲೂ ಚಿನ್ನದ ನಿಕ್ಷೇಪಗಳು ಪತ್ತೆಯಾಗಿವೆ. ಇದರೊಡನೆ ಲೋಹದಿಂದ ಕೂಡಿದ ಅದಿರುಗಳಾದ ಕಬ್ಬಿಣ, ಸೀಸ, ಮ್ಯಾಂಗನೀಸ್, ಆಂಟಿಮೋನಿ, ಕ್ರೋಮೈಟ್, ಸಿಲಿಕಾದಿಂದ ಕೂಡಿದ ಬಾಕ್ಸೈಟ್‌ಗಳು ದೊರೆಯುತ್ತವೆ. ಅಲೋಹದ ಅದಿರುಗಳಾದ ಬೈರೆಟಿಸ್, ಕಯನೈಟ್, ಸುಣ್ಣಶಿಲೆ, ಕಾವಿಮಣ್ಣನ್ನೂ ಈ ಪರಿಸರದಲ್ಲಿ ಕಾಣಬಹುದು.

೨.೧.೫ ಅರಣ್ಯ ಸಂಪತ್ತು ಮತ್ತು ಪ್ರಾಣಿ ಸಂಪತ್ತು

ಚಿತ್ರದುರ್ಗವು ಜಲಸಂಪತ್ತಿನಲ್ಲಿ ಮಾತ್ರವಲ್ಲದೆ ಅರಣ್ಯ ಸಂಪತ್ತಿನಲ್ಲೂ ಹಿಂದುಳಿದಿದೆ. ಬೃಹತ್ತಾದ ಬಂಡೆಗಳುಳ್ಳ ಬೆಟ್ಟಗುಡ್ಡ ಹಾಗೂ ಕಡಿದಾದ ಕಣಿವೆಗಳಿಂದ ಕೂಡಿದ ಈ ಪರಿಸರದಲ್ಲಿ ಇತ್ತೀಚೆಗೆ ಗಿಡಗಳನ್ನು ಬೆಳೆಸಲಾಗುತ್ತಿದೆ. ಜೋಗಿಮಟ್ಟಿ ಪರಿಸರವನ್ನು ಅರಣ್ಯ ಇಲಾಖೆಯವರು ಸಸ್ಯೋದ್ಯಾನವನ್ನಾಗಿ ಪರಿವರ್ತಿಸಿದ್ದಾರೆ. ಇಂತಹ ಪರಿಸರದಲ್ಲಿ ಜಾಲಿ, ನೀಲಗಿರಿ, ಕುರುಚಲು, ಶ್ರೀಗಂಧ, ಕಂಗ್ಲಿ, ಮಾವು, ಹುಣಸೆ, ಸೀತಾಫಲ, ನೇರಳೆ, ಮುಂತಾದ ಜಾತಿಯ ಮರಗಿಡಗಳಿವೆ.

ಇವುಗಳೊಡನೆ ಇಲ್ಲಿನ ಬೆಟ್ಟಗುಡ್ಡಗಳಲ್ಲಿ ಕರಡಿ, ಚಿರತೆ, ಕಾಡುಹಂದಿ, ಕತ್ತೆಕಿರುಬ, ಜಿಂಕೆ, ಉರುಗಾ, ನವಿಲು, ನೀರುಕೋಳಿ, ಬಾತುಕೋಳಿ, ಮೊಲ, ಹಾವು ಮುಂತಾದ ಪ್ರಾಣಿಗಳಿವೆ. ಎಮ್ಮೆ, ಹಸು, ಮೀನು, ಮತ್ತು ಕೋಳಿಗಳ ಸಾಕಾಣಿಕೆ ಈ ಪರಿಸರದಲ್ಲಿ ಮಹತ್ವದ ಉದ್ಯಮಗಳಾಗಿ ಮಾರ್ಪಟ್ಟಿವೆ.

೨.೧.೬ ವಾಯುಗುಣ ಮತ್ತು ಭೂ ಗುಣ

ಚಿತ್ರದುರ್ಗ ಪರಿಸರದಲ್ಲಿ ಶುಷ್ಕ ವಾತಾವರಣವು ವಿವಿಧ ಅವಧಿಗಳಲ್ಲಿ ಏರಿಳಿತಗಳಿಗೆ ಒಳಗಾಗುತ್ತದೆ. ಅತಿಹೆಚ್ಚು ಉಷ್ಣಾಂಶ ಏಪ್ರೆಲ್ ತಿಂಗಳಲ್ಲಿ ದಾಖಲಾಗುತ್ತದೆ. ಇಲ್ಲಿಯ ಬಿಸಿಲಿನ ತಾಪ ಹೆಚ್ಚಾಗಿದ್ದು, ಉಷ್ಣಾಂಶವು ೪೧° ಸೆಂಟಿಗ್ರೇಡ್‌ವರೆಗೆ ಇರುತ್ತದೆ. ಅಂತೆಯೇ ನವೆಂಬರ್ ಹಾಗೂ ಡಿಸೆಂಬರ್ ತಿಂಗಳುಗಳಲ್ಲಿ ತಂಪಾದ ವಾತಾವರಣವಿದ್ದು, ೨೭.೯° ಸೆಂಟಿಗ್ರೇಡ್‌ನಷ್ಟು ಕನಿಷ್ಟ ಉಷ್ಣಾಂಶವಿರುತ್ತದೆ. ವಾರ್ಷಿಕವಾಗಿ ಸರಾಸರಿ ಸುಮಾರು ೬೫೫ ಮಿ.ಮೀ. ಮಳೆಯಾಗುತ್ತಿದ್ದು, ರಾಜ್ಯದ ಅತ್ಯಂತ ಕಡಿಮೆ ಮಳೆ ಬೀಳುವ ಪ್ರದೇಶಗಳ ಪಟ್ಟಿಯಲ್ಲಿ ಎರಡನೇ ಸ್ಥಾನ ಪಡೆದಿದೆ. ಈ ಪ್ರದೇಶದಲ್ಲಿರುವ ಕಪ್ಪು ಮಣ್ಣಿನ ಭೂ ಸದೃಶ್ಯವು ಅಲ್ಲಲ್ಲಿ ಕೆಂಪು ಮಣ್ಣಿರುವ ಸ್ಥಳಗಳಿಂದ ಕೂಡಿದೆ. ಕಪ್ಪು ಮಣ್ಣು ವ್ಯವಸಾಯಕ್ಕೆ ಯೋಗ್ಯ ಮತ್ತು ಉತ್ಕೃಷ್ಟವಾಗಿದೆ. ಮುಸುಕಿನ ಜೋಳ, ರಾಗಿ, ಸಜ್ಜೆ, ಟಮಟೋ, ಹತ್ತಿ, ಈರುಳ್ಳಿ, ಶೇಂಗಾ, ತೆಂಗು, ಬಾಳೆ, ತೊಗರಿ ಮುಂತಾದ ಬೆಳೆಗಳನ್ನು ಬೆಳೆಯಲಾಗುತ್ತದೆ.

೨.೨ ಪ್ರಾಗಿತಿಹಾಸ

ಮಾನವ ಲಿಖಿತ ಆಧಾರಗಳನ್ನು ಸೃಷ್ಟಿಸುವುದಕ್ಕೂ ಪೂರ್ವ ಕಾಲವನ್ನು ಪ್ರಾಗಿತಿಹಾಸ ಎಂದು ಕರೆಯಲಾಗುತ್ತದೆ. ಈ ಹಂತವು ಮಾನವ ಇತಿಹಾಸದಲ್ಲಿ ಅತ್ಯಂತ ಸುದೀರ್ಘವಾದದ್ದು. ಇದನ್ನು ಕುರಿತು ಅರಿಯಲು ಅವನು ಬಳಸಿದ ಶಿಲೋಪಕರಣಗಳೇ ಪ್ರಮುಖ ಆಧಾರಗಳಾಗಿದ್ದು, ಅವು ಪ್ರಾಗಿತಿಹಾಸ ಸಂಸ್ಕೃತಿಯ ಹೆಗ್ಗುರುತುಗಳಾಗಿವೆ. ಗವಿ, ಕಲ್ಲಾಸರೆ, ಕಣಿವೆ, ನದಿ, ಹಳ್ಳಕೊಳ್ಳಗಳ ದಂಡೆಗಳನ್ನೊಳಗೊಂಡ ಅಲೆಮಾರಿಯಾಗಿ ಜೀವಿಸುತ್ತಿದ್ದ ಮಾನವ ವಿವಿಧ ಬಗೆಯ ಕಲ್ಲಿನ ಆಯುಧಗಳ ತಯಾರಿಕೆಗೆ ಮುಂದಾದನು. ಈ ಶಿಲಾಯುಧಗಳ ಸ್ವರೂಪ, ಗಾತ್ರ, ಉತ್ಪಾದನಾ ತಂತ್ರ, ವಿನ್ಯಾಸ ಹಾಗೂ ಉಪಯುಕ್ತತೆಯನ್ನು ಆಧರಿಸಿ ಪ್ರಾಗಿತಿಹಾಸವನ್ನು ಹಳೇ ಶಿಲಾಯುಗ, ಸೂಕ್ಷ್ಮ ಶಿಲಾಯುಗ, ನವಶಿಲಾಯುಗ ಎಂದು ವಿಂಗಡಿಸಲಾಗಿದೆ. ಶಿಲೋಪಕರಣಗಳ ಜೊತೆಜೊತೆಯಲ್ಲಿ ಮಾನವನಿಗೆ ಲೋಹ ತಂತ್ರಜ್ಞಾನದ ಪರಿಚಯವೂ ಆಯಿತು. ಇದು ಮಾನವನ ಜೀವನಕ್ಕೆ ಹೊಸ ರೂಪ ನೀಡಿತೆನ್ನಬಹುದು. ಲೋಹದ ಪರಿಚಯವಾದ ಹಂತವನ್ನು ಶಿಲಾತಾಮ್ರಯುಗ ಮತ್ತು ಕಬ್ಬಿಣಯುಗ ಎಂದು ವಿಂಗಡಿಸಿದ್ದು, ಇವುಗಳು ಮೇಲಿನ ವಿಂಗಡಣೆಯ ಮುಂದಿನ ಹಂತಾಗಳಾಗಿವೆ.

ಹಳೇ ಶಿಲಾಯುಗವು ಅತ್ಯಂತ ಸುಧೀರ್ಘ ಹಂತವಾಗಿದ್ದು, ಪುನಃ ಇದನ್ನು ಆದಿ, ಮಧ್ಯ ಮತ್ತು ಅಂತ್ಯ ಹಳೇ ಶಿಲಾಯುಗಗಳೆಂದು ಪುರಾತತ್ವಜ್ಞರು ವಿಂಗಡಿಸಿರುವರು. ಚಿತ್ರದುರ್ಗ ಜಿಲ್ಲೆಯ ಜಾನಕಲ್ಲು[೧೬] ಮತ್ತು ತಾಳ್ಯ[೧೭] ಗಳಲ್ಲಿ ಆದಿ ಹಳೇಶಿಲಾಯುಗ ಸಂಸ್ಕೃತಿಯ ಉಪಕರಣಗಳು ದೊರೆತಿವೆ. ಮಧ್ಯ ಮತ್ತು ಹಳೇ ಶಿಲಾಯುಗದ ಉಪಕರಣಗಳು ಜಿಲ್ಲೆಯ ಯಾವುದೇ ಸ್ಥಳದಲ್ಲಿ ಈವರೆಗೆ ಪತ್ತೆಯಾಗಿಲ್ಲ.

ಸೂಕ್ಷ್ಮ ಶಿಲಾಯುಗವು ಹಳೇ ಶಿಲಾಯುಗ ಮತ್ತು ನವ ಶಿಲಾಯುಗಗಳ ನಡುವಿನ ಹಂತವಾಗಿದೆ. ಹಳೇ ಶಿಲಾಯುಗಕ್ಕಿಂತ ಕಿರಿಯ ಅವಧಿಯದಾಗಿದ್ದರೂ, ಇದು ಸಾಂಸ್ಕೃತಿಕವಾಗಿ ಮುನ್ನಡೆದುದು ಗಮನಾರ್ಹ. ಮಾನವನು ಬೇಟೆಯಾಡುವ, ಮೀನು ಹಿಡಿಯುವ, ಆಹಾರ ಸಂಗ್ರಹಿಸುವ ಮತ್ತು ವ್ಯವಸಾಯದ ಕಾರ್ಯದಲ್ಲಿ ಕಾರ್ಯೋನ್ಮುಖವಾದದ್ದು ಈ ಹಂತದ ವೈಶಿಷ್ಟ್ಯತೆಯಾಗಿದೆ. ಅರೆಪ್ರಶಸ್ತ ಶಿಲೆಗಳಿಂದ ತಯಾರಿಸಿದ ಸೂಕ್ಷ್ಮವಾದ ಶಿಲಾಯುಧಗಳನ್ನು ಮಾನವ ತನ್ನ ಉಪಕರಣಗಳನ್ನಾಗಿ ಬಳಸಿದ್ದರಿಂದ ಈ ಕಾಲವನ್ನು 'ಸೂಕ್ಷ್ಮಶಿಲಾಯುಗ' ಎಂದು ಕರೆಯಲಾಗಿದೆ. ಈ ಸಂಸ್ಕೃತಿಯ ಯಾವುದೇ ಕುರುಹುಗಳು ಚಿತ್ರದುರ್ಗ ಪರಿಸರದಲ್ಲಿ ಈವರೆಗೆ ಪತ್ತೆಯಾಗಿಲ್ಲ. ಆದರೆ

ಮೊಳಕಾಲ್ಮೂರು ತಾಲೂಕಿನ ನುಂಕೆಮಲೆ,[೧೮] ಬ್ರಹ್ಮಗಿರಿ,[೧೯] ಪೂಜಾರಹಟ್ಟಿ,[೨೦] ಹಳೆಕೆರೆ,[೨೧] ಬೊಮ್ಮಕ್ಕನಹಳ್ಳಿ[೨೨] ಹಾನಗಲ್ಲು,[೨೩] ನೆಲೆಗಳಲ್ಲಿ ಈ ಸಂಸ್ಕೃತಿಯ ಹಲವು ನಮೂನೆಯ ಉಪಕರಣಗಳು ಪತ್ತೆಯಾಗಿವೆ.

ನವಶಿಲಾಯುಗದ ಸಂಸ್ಕೃತಿಯು ಮಾನವನ ಇತಿಹಾಸದಲ್ಲಿ ಅತ್ಯಂತ ಪ್ರಮುಖ ಕಾಲಘಟ್ಟವಾಗಿದೆ. ಈ ಕಾಲದಲ್ಲಿ ಮಾನವ ತನ್ನ ಅಲೆಮಾರಿ ಜೀವನ ತೊರೆದು ಒಂದೆಡೆ ನೆಲೆ ನಿಲ್ಲಲು ಪ್ರಾರಂಭಿಸಿದ. ಉಜ್ಜಿ ನಯಗೊಳಿಸಿದ ಹೊರಮೈಯ ಮೆರುಗುಳ್ಳ ಶಿಲಾ ಕೊಡಲಿಗಳನ್ನು ಬಳಸತೊಡಗಿದ. ಕೃಷಿ ಚಟುವಟಿಕೆ ಪ್ರಾರಂಭಿಸಿದ. ಹೀಗೆ ಹಲವು ಬಗೆಯ ಸುಧಾರಣೆಗಳನ್ನು ಕಂಡ ಈ ಹಂತವನ್ನು 'ನವಶಿಲಾಯುಗದ ಕ್ರಾಂತಿ' ಎಂದು ಪ್ರಾಕ್ತನಕಾರರು ಬಣ್ಣಿಸಿದ್ದಾರೆ.[೨೪]

ಚಿತ್ರದುರ್ಗ ಪರಿಸರದ ತಿಮ್ಮಣ್ಣನಾಯಕನ ಕೆರೆಯ ಬಳಿ[೨೫] ಮತ್ತು ಚಂದ್ರವಳ್ಳಿ[೨೬] ನವಶಿಲಾಯುಗದ ಮೆರುಗುಳ್ಳ ಆಯುಧಗಳು ಮತ್ತು ಬೂದುವರ್ಣದ ಮೃತ್ಪಾತ್ರೆಗಳು ದೊರೆತಿವೆ. ಚಿತ್ರದುರ್ಗ ತಾಲೂಕಿನ ಕುರುಮರಡಿಕೆರೆ,[೨೭] ಸಂಗೇನಹಳ್ಳಿ,[೨೮] ಮತ್ತು ಜೆ.ಎನ್.ಕೋಟೆ[೨೯] ಗ್ರಾಮಗಳಲ್ಲಿ ನವಶಿಲಾಯುಗ ಸಂಸ್ಕೃತಿಯ ಅವಶೇಷಗಳು ಬೆಳಕಿಗೆ ಬಂದಿವೆ. ನವಶಿಲಾಯುಗ ಸಂಸ್ಕೃತಿಯ ಅಂತ್ಯದ ವೇಳೆಗೆ ತಾಮ್ರದ ಪರಿಚಯವಾಗಿದ್ದು, ಇದು ಮಾನವ ಮೊಟ್ಟಮೊದಲು ಬಳಸಿದ ಲೋಹವಾಗಿದೆ. ಈ ಹಂತದಲ್ಲಿ ಅದಿರನ್ನು ಸಂಗ್ರಹಿಸಿ, ಅದನ್ನು ಲೋಹವಾಗಿ ಪರಿವರ್ತಿಸಿ, ಅದರಿಂದ ವಿವಿಧ ವಸ್ತುಗಳನ್ನು ಉತ್ಪಾದಿಸತೊಡಗಿದನು. ಅದರಂತೆಯೇ ಶಿಲೋಪಕರಣಗಳ ಬಳಕೆ ಕುಂಠಿತವಾಗಿ ತಾಮ್ರದ ವಸ್ತುಗಳ ಬಳಕೆ, ಸುಟ್ಟ ಚಿತ್ರಿತ ಮೃತ್ಪಾತ್ರೆ, ಸುಧಾರಿತ ಬೇಸಾಯ ಪದ್ಧತಿಯನ್ನು ಕಂಡುಕೊಂಡ ಹಂತವಿದು. ಕರ್ನಾಟಕದ ಕೆಲವೇ ಕೆಲವು ನೆಲೆಗಳಲ್ಲಿ ಈ ಹಂತದ ಕುರುಹುಗಳು ದೊರೆತಿದ್ದು, ಅವುಗಳ ಸಾಲಿಗೆ ಚಿತ್ರದುರ್ಗ ಪರಿಸರವೂ ಸೇರ್ಪಡೆಯಾಗಿದೆ. ಚಿತ್ರದುರ್ಗ,[೩೦] ಚಂದ್ರವಳ್ಳಿ[೩೧]ಯಲ್ಲಿ ಶಿಲಾ ತಾಮ್ರಯುಗ ಸಂಸ್ಕೃತಿಯ ಕುರುಹುಗಳು ಪತ್ತೆಯಾಗಿವೆ. ಚಿತ್ರದುರ್ಗದಿಂದ ೭ ಕಿ.ಮೀ. ದೂರದಲ್ಲಿರುವ ಇಂಗಳದಹಾಳು ಗ್ರಾಮವು ಕರ್ನಾಟಕದ ಅತ್ಯಂತ ಪ್ರಾಚೀನ ತಾಮ್ರದ ಗಣಿಗಳಲ್ಲೊಂದಾಗಿದೆ. ಇಲ್ಲಿನ ಗಣಿಗಳಲ್ಲಿ ದೊರೆತ ಕೆಲವು ಪ್ರಾಚೀನ ವಸ್ತುಗಳ ಪೈಕಿ ಆಯ್ದ ಮರದ ಅವಶೇಷಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಲಾಗಿದೆ. ಅದರ ಪ್ರಕಾರ ಈ ಪರಿಸರದಲ್ಲಿ ಕ್ರಿ.ಪೂ.೨೩೦೦ರಿಂದ ಕ್ರಿ.ಶ.೨೨೦ರ ಅವಧಿಯಲ್ಲಿ ಅಂದರೆ ಶಾತವಾಹನರ ಅವಧಿಯಲ್ಲಿ ತಾಮ್ರ ಗಣಿಗಾರಿಕೆ ನಡೆದಿರುವುದು ದೃಢಪಟ್ಟಿದೆ.[೩೨] ಆದರೆ ಚಿತ್ರದುರ್ಗ ಮತ್ತು ಚಂದ್ರವಳ್ಳಿ ನೆಲೆಗಳಲ್ಲಿನ ಶಿಲಾತಾಮ್ರಯುಗದ ಅವಶೇಷಗಳನ್ನು ಗಮನಿಸಿದರೆ ಶಿಲಾತಾಮ್ರಯುಗದ ಹಂತದಿಂದಲೇ ತಾಮ್ರದ ಗಣಿಗಾರಿಕೆ ನಡೆದಿರುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ.

ಶಿಲಾತಾಮ್ರಯುಗದ ಮುಂದಿನ ಹಂತವೇ ಬೃಹತ್‌ಶಿಲಾಯುಗ. ಈ ಸಂಸ್ಕೃತಿಯ ಜನರು ಕಲ್ಲನ್ನು ಬಳಸಿ ವಿವಿಧ ಮಾದರಿಯ ಬೃಹತ್‌ಗಾತ್ರದ ಗೋರಿ ನಿರ್ಮಿಸುತ್ತಿದ್ದರಿಂದ ಈ ಸಂಸ್ಕೃತಿಯನ್ನು 'ಬೃಹತ್ ಶಿಲಾಯುಗ' ಎಂದು ಕರೆಯುತ್ತಾರೆ. ಈ ಹಂತದಲ್ಲಿ ಮಾನವನಿಗೆ ಮೊದಲಬಾರಿ ಕಬ್ಬಿಣದ ಪರಿಚಯವಾಗಿ ಅವನನ್ನು ಅಭಿವೃದ್ಧಿಯ ಪಥದತ್ತ ಕೊಂಡೊಯ್ದಿತು. ಹಾಗಾಗಿ ಈ ಯುಗವನ್ನು 'ಕಬ್ಬಿಣಯುಗ' ಎಂದೂ ಕರೆಯುವ ಪದ್ಧತಿ ರೂಢಿಯಲ್ಲಿದೆ. ಚಿತ್ರದುರ್ಗ ಪರಿಸರದಲ್ಲಿನ ತಿಮ್ಮಣ್ಣನಾಯಕನ ಕೆರೆಯ ಬಳಿ ಬೃಹತ್‌ಶಿಲಾಯುಗ ಸಂಸ್ಕೃತಿಯ ಗೋರಿಗಳು ಮತ್ತು ಆ ಯುಗದ ಪ್ರಾತಿನಿಧಿಕ ಅವಶೇಷಗಳಾದ ಮೃತ್ಪಾತ್ರೆಗಳು ದೊರೆತಿವೆ.[೩೩] ಇತ್ತೀಚೆಗೆ ಈ ಪರಿಸರದಲ್ಲಿ ನಿಲುವುಗಲ್ಲುಗಳು ಬೆಳಕಿಗೆ ಬಂದಿವೆ.[೩೪] ಇವುಗಳನ್ನು ರಾಕ್ಷಸ ಕಲ್ಲುಗಳು ಎಂದು ಕರೆಯುವುದು ವಾಡಿಕೆ. ಚಂದ್ರವಳ್ಳಿಯಲ್ಲೂ ಈ ಸಂಸ್ಕೃತಿಯ ಡಾಲ್‌ಮೆನ್, ಕೈರನ್‌ವೃತ್ತ ಮತ್ತು ಶಿಲಾವೃತ್ತ ಮಾದರಿಗಳೊಡನೆ ಕಪ್ಪು ಮತ್ತು ಕೆಂಪುವರ್ಣದ ಮೃತ್ಪಾತ್ರೆಗಳು, ಕಪ್ಪುವರ್ಣ, ಕೆಂಪುವರ್ಣದ ಮೃತ್ಪಾತ್ರೆಗಳು ದೊರೆತಿವೆ.[೩೫] ಇದರೊಡನೆ ಚಿತ್ರದುರ್ಗದ ಸುತ್ತಮುತ್ತಲಿನ ಜಂಪಣ್ಣನಾಯಕನ ಕೋಟೆ,[೩೬] ಇಂಗಳದಹಾಳು,[೩೭] ಚೆಪ್ಪಿನಕೆರೆ,[೩೮] ಕೂನಬೇವು,[೩೯] ಬೆಳಗಟ್ಟ,[೪೦] ತಮಟಗಲ್ಲು,[೪೧] ಚಿಕ್ಕಕಬ್ಬಿಗೆರೆ,[೪೨] ಸೆರೆಸಹಾಳು,[೪೩]

ಗ್ರಾಮಗಳಲ್ಲಿ ವಿವಿಧ ಮಾದರಿಯ ಕಲ್ಗೋರಿಗಳು ಪತ್ತೆಯಾಗಿವೆ. ಹೀಗೆ ಪ್ರಾಗೈತಿಹಾಸ ಕಾಲದಿಂದಲೂ ಚಿತ್ರದುರ್ಗ ಪರಿಸರವು ಮಾನವನ ವಾಸದ ನೆಲೆಯಾಗಿದ್ದುದು ಈ ಮೇಲಿನ ಅಂಶಗಳಿಂದ ದೃಢಪಡುತ್ತದೆ.

೨.೧ ಚಾರಿತ್ರಿಕ ಹಿನ್ನೆಲೆ

೨.೩.೧ ಮೌರ್ಯರು

ಚಿತ್ರದುರ್ಗವು ತನ್ನ ಚಾರಿತ್ರಿಕ ಕಾಲಘಟ್ಟವನ್ನು ಗುರುತಿಸಿಕೊಳ್ಳುವುದು ಮೌರ್ಯರ ಕಾಲದಿಂದ. ಭಾರತದ ಮೊಟ್ಟಮೊದಲ ಐತಿಹಾಸಿಕ ಸಾಮ್ರಾಜ್ಯಕ್ಕೆ ಅಡಿಗಲ್ಲು ಹಾಕಿದ ಮೌರ್ಯರು ಕುಂತಲದಲ್ಲಿ ಆಳ್ವಿಕೆ ನಡೆಸಿರುವುದನ್ನು ದಾಖಲೆಗಳು ಶೃತಪಡಿಸುತ್ತವೆ. ಭೀಮಾ ಮತ್ತು ವೇದಾವತಿ ನದಿಗಳ ಮಧ್ಯ ಭಾಗವಾಗಿದ್ದ ಕುಂತಲದೇಶದಲ್ಲಿ ಚಿತ್ರದುರ್ಗವೂ ಅಂತರ್ಗತವಾಗಿತ್ತು. ಮೌರ್ಯರಿಗೂ ಪೂರ್ವದಲ್ಲಿ ಚಿತ್ರದುರ್ಗ ಪರಿಸರವನ್ನು ಒಳಗೊಂಡ ಕುಂತಲವು ನಂದರ ಆಳ್ವಿಕೆಗೆ ಸೇರಿದ್ದ ಸಂಗತಿಯನ್ನು ಶಿಕಾರಿಪುರದ ಶಾಸನಗಳು ಸೂಚಿಸುತ್ತವೆ.[೪೪] ನಂದರ ದೊರೆ ಮಹಾಪದ್ಮಾನಂದನನ್ನು ಪರಾಭವಗೊಳಿಸುವ ಮೂಲಕ ನಂದರ ಆಳ್ವಿಕೆ ಅಂತ್ಯಗೊಳಿಸಿದ ಚಂದ್ರಗುಪ್ತ ಮೌರ್ಯ ಅನುಕ್ರಮವಾಗಿ ದಕ್ಷಿಣ ಭಾರತವನ್ನು ಒಳಗೊಂಡ ಮಗಧ ಸಾಮ್ರಾಜ್ಯಕ್ಕೆ ಅಧಿಪತಿಯಾದನು. ಇವನ ತರುವಾಯ ಮೌರ್ಯ ಸಾಮ್ರಾಜ್ಯದ ಅಧಿಕಾರ ಪರಿಗ್ರಹಿಸಿದ ಬಿಂದುಸಾರನ ಚಕ್ರಾಧಿಪತ್ಯಕ್ಕೆ ಉತ್ತರ ಭಾರತದ ಬಹುಭಾಗ ಸೇರಿತ್ತಲ್ಲದೆ ಮೈಸೂರು ರಾಜ್ಯದ ಚಿತ್ರದುರ್ಗವನ್ನೊಳಗೊಂಡಂತೆ ದಖನ್ನಿನ ಸ್ವಲ್ಪ ಭಾಗವೂ ಸೇರಿದ್ದಿತು.[೪೫]

ಚಿತ್ರದುರ್ಗವು ಮೌರ್ಯರ ನೇರ ಆಳ್ವಿಕೆಗೆ ಒಳಪಟ್ಟ ಬಗ್ಗೆ ಅಧಿಕೃತವಾಗಿ ತಿಳಿಯುವುದು ಅಶೋಕನ ಕಾಲದಿಂದ. ಇವನ ಶಿಲಾಶಾಸನಗಳು ಚಿತ್ರದುರ್ಗದ ಉತ್ತರಕ್ಕಿರುವ ಬ್ರಹ್ಮಗಿರಿ, ಜಟಂಗಿ ರಾಮೇಶ್ವರ, ಮತ್ತು ಸಿದ್ದಾಪುರ ಗ್ರಾಮಗಳಲ್ಲಿ ದೊರೆತಿದ್ದು,[೪೬] ಇವು ಅಶೋಕನ ಸಾಮ್ರಾಜ್ಯದ ದಕ್ಷಿಣ ಮೇರೆಯನ್ನು ಸೂಚಿಸುವ ಬಹುಮುಖ್ಯ ಆಧಾರಗಳಾಗಿವೆ. ಜಿಲ್ಲೆಯ ಬೃಹತ್‌ಶಿಲಾಗೋರಿಗಳನ್ನು ಸ್ಥಳೀಯರು 'ಮೌರ್ಯರ ಮನೆ' ಅಥವಾ 'ಮೋರೇರ ಮನೆ' ಎಂದು ಕರೆಯುವುದು ಗಮನಾರ್ಹ. ಈ ಪ್ರಾಗ್ಚಾರಿತ್ರಿಕ ಸ್ಮಾರಕಗಳು ಅಶೋಕನ ಕಾಲಕ್ಕೆ ಸೇರಿದ್ದು, ಮೌರ್ಯರೊಡನೆ ಹೊಂದಿದ್ದ ಸಂಬಂಧವನ್ನು ಸೂಚಿಸುತ್ತವೆ ಎಂದು ಮಾರ್ಟಿಮರ್ ವ್ಹೀಲರ್ ಅಭಿಪ್ರಾಯಪಟ್ಟಿದ್ದಾರೆ.[೪೭] ಈ ಸಂಸ್ಕೃತಿಯ ಜನರು ಕಬ್ಬಿಣದ ಅದಿರು ಕರಗಿಸುವ ಮತ್ತು ಕಮ್ಮಾರಿಕೆಯ ಕೆಲಸದಲ್ಲಿ ನಿಷ್ಣಾತರಾಗಿದ್ದರು. ಕಬ್ಬಿಣದ ಅದಿರು ಹೇರಳವಾಗಿರುವ ಸಂಪದ್ಭರಿತವಾದ ಈ ಪರಿಸರವು ಸಹಜವಾಗಿಯೇ ಅಶೋಕನ ಗಮನ ಸೆಳೆಯಿತಲ್ಲದೆ ಸ್ವತಃ ಅಶೋಕನೇ ಈ ಪರಿಸರವನ್ನು ಗೆದ್ದನೆಂದು ಕಾಣುತ್ತದೆ.[೪೮] ಈ ಪರಿಸರದ ಜನತೆಗೆ ತನ್ನ ಧೋರಣೆ ತಿಳಿಸಲೋಸುಗ ಬಂಡೆ ಶಾಸನಗಳನ್ನು ಅವನು ಇಲ್ಲಿ ಹಾಕಿಸಿರಬಹುದು.

ಬ್ರಹ್ಮಗಿರಿಯ ಶಾಸನದಲ್ಲಿ ದೇವನಾಂಪ್ರಿಯನೆನಿಸಿದ ಅಶೋಕನ ಆಜ್ಞೆಯನ್ನು ಸುವರ್ಣಗಿರಿಯಲ್ಲಿದ್ದ ಆರ್ಯಪುತ್ರ ಹಾಗೂ ಮಹಾಮಾತ್ರರು ಇಸಿಲಾದ ಮಹಾಮಾತ್ರರಿಗೆ ತಿಳಿಸಿದ ಉಲ್ಲೇಖವಿದೆ.[೪೯] ಸುವರ್ಣಗಿರಿಯು ಮೌರ್ಯ ಸಾಮ್ರಾಜ್ಯದ ದಕ್ಷಿಣ ಪ್ರಾಂತ್ಯವಾಗಿದ್ದು ಆರ್ಯಪುತ್ರ (ಯುವರಾಜ)ನು ಅದರ ಆಡಳಿತಾಧಿಕಾರಿಯಾಗಿದ್ದನು. ಇದರ ಆಡಳಿತ ವಿಭಾಗದಲ್ಲೊಂದಾದ ಇಸಿಲಾ ಪ್ರದೇಶವು ಪ್ರಸ್ತುತ ಜನವಸತಿ ಇರುವ ಬ್ರಹ್ಮಗಿರಿಯೇ ಆಗಿದ್ದಿತೆಂಬುದು ಎಂ.ಎಚ್.ಕೃಷ್ಣ ಮತ್ತು ಎಂ.ಶೇಷಾದ್ರಿಯವರನ್ನೊಳಗೊಂಡಂತೆ ಬಹುಮಂದಿ ವಿದ್ವಾಂಸರ ಅಂಬೋಣ. ಈ ಮೇಲಿನ ಎಲ್ಲಾ ಅಂಶಗಳ ಅವಲೋಕನದಿಂದ ಚಿತ್ರದುರ್ಗವು ಮೌರ್ಯರ ಆಳ್ವಿಕೆಗೆ ಒಳಪಟ್ಟ ಸಂಗತಿ ವೇದ್ಯವಾಗುತ್ತದೆ.

೨.೩.೨ ಶಾತವಾಹನರು

ಮೌರ್ಯ ಸಾಮ್ರಾಜ್ಯದ ಪತನದ ತರುವಾಯ ದಕ್ಷಿಣ ಭಾರತದಲ್ಲಿ ಅವರ ಸಾಮಂತರಾಗಿದ್ದ ಶಾತವಾಹನರು ತಮ್ಮ ಅಧಿಪತ್ಯ ಸ್ಥಾಪಿಸಿದರು. ಈ ಅವಧಿಯಲ್ಲಿ ಚಿತ್ರದುರ್ಗವನ್ನು ಒಳಗೊಂಡಂತೆ ಕರ್ನಾಟಕದ ಬಹುಭಾಗವನ್ನು ಅವರ ಮಾಂಡಲಿಕರಲ್ಲಿ ಅಗ್ರಗಣ್ಯರಾಗಿದ್ದ ಚುಟುಗಳು ಮತ್ತು

ಮಹಾರಥಿಗಳು ಆಳುತ್ತಿದ್ದರು. ಮೊದಲ ಬಾರಿಗೆ ಸೀಸದ ನಾಣ್ಯಗಳನ್ನು ಮುದ್ರಿಸಿದ ಚುಟು ಅರಸರ ನಾಣ್ಯಗಳನ್ನು ಬೆಳಕಿಗೆ ತಂದ ಕೀರ್ತಿ ಮೆರ್ವಿನ್‌ಸ್ಮಿತ್ ಎಂಬ ಅಭಿಯಂತರನಿಗೆ ಸಲ್ಲುತ್ತದೆ. ಚಂದ್ರವಳ್ಳಿಯ ಉತ್ಖನನದ ಶಾತವಾಹನ ಪೂರ್ವದ ಸ್ತರಗಳಲ್ಲಿ ಚುಟು ಅರಸರ ಮತ್ತು ಮಹಾರಥಿಗಳ ನಾಣ್ಯಗಳು ದೊರೆತಿದ್ದು,[೫೦] ಇವುಗಳ ಹಿನ್ನೆಲೆಯಲ್ಲಿ ಈ ಪರಿಸರದಲ್ಲಿ ನಾಲ್ವರು ಚುಟು ಅರಸರ ಆಳ್ವಿಕೆಯನ್ನು ಗುರುತಿಸಲಾಗಿದೆ. ಇವುಗಳನ್ನಾಧರಿಸಿ ಚಂದ್ರವಳ್ಳಿಯು ಚುಟು ಅರಸರ ಪ್ರಾಂತೀಯ ರಾಜಧಾನಿಯಾಗಿತ್ತೆಂಬುದು ಇತಿಹಾಸಕಾರರ ಅಭಿಮತ. ಇತ್ತೀಚೆಗೆ ಕನ್ನಡ ವಿಶ್ವವಿದ್ಯಾಲಯದ ಅಧ್ಯಾಪಕ ಎಸ್.ವೈ.ಸೋಮಶೇಖರ್ ಅವರು ಮುದಾನಂದ ಸಡಕಣ ಕಳಲಾಯರಿಗೆ ಸಂಬಂಧಿಸಿದ ನಾಣ್ಯಗಳನ್ನು ತುರುವನೂರು ಮತ್ತು ಚಿಪ್ಪಿನಕೆರೆ ಗ್ರಾಮಗಳಲ್ಲಿ ಸಂಗ್ರಹಿಸಿ ಅವುಗಳ ಮಹತ್ವವನ್ನು ಪ್ರಕಟಿಸಿರುವರು.[೫೧]

ಚಿತ್ರದುರ್ಗವು ಶಾತವಾಹನರ ಆಳ್ವಿಕೆಗೆ ಒಳಪಟ್ಟಿದ್ದನ್ನು ಶೃತಪಡಿಸುವ ಯಾವುದೇ ಶಿಲಾಶಾಸನಗಳು ಈವರೆಗೆ ಜಿಲ್ಲೆಯಲ್ಲಿ ಲಭ್ಯವಾಗಿಲ್ಲ. ಇದಕ್ಕೆ ಹೊರತಾಗಿ ಚಂದ್ರವಳ್ಳಿ ಉತ್ಖನನದಲ್ಲಿ ಕಂಡುಬಂದ ಕಟ್ಟಡರಚನೆಗಳು, ಮೃತ್ಪಾತ್ರೆಗಳು ಹಾಗೂ ನಾಣ್ಯಗಳಂಥ ಪುರಾತತ್ವ ಅವಶೇಷಗಳು ಈ ನಿಟ್ಟಿನಲ್ಲಿ ಮಹತ್ವ ಪಡೆದಿವೆ. ಶಾತವಾಹನ ಅರಸರ ನಾಣ್ಯಗಳು ಚಿತ್ರದುರ್ಗದ ಚಂದ್ರವಳ್ಳಿ,[೫೨] ಚಿಪ್ಪಿನಕೆರೆ,[೫೩] ತೊರೆಓಬನಹಳ್ಳಿ[೫೪] ಗ್ರಾಮಗಳಲ್ಲಿ ಲಭ್ಯವಾಗಿವೆ. ಚಂದ್ರವಳ್ಳಿಯಲ್ಲಿ ೧೯x೨೪x೫.೯ ಸೆಂ.ಮೀ. ಗಾತ್ರದ ಇಟ್ಟಿಗೆಗಳಿಂದ ಕಟ್ಟಿದ ಶಾತವಾಹನಕಾಲೀನ ನಗರ ವಿನ್ಯಾಸವನ್ನು ಸಮರ್ಥಿಸುವ ಕನಿಷ್ಠ ನಾಲ್ಕು ಕೋಣೆಗಳುಳ್ಳ ಒಂದು ಕಟ್ಟಡ ಹಾಗೂ ಒಂದೇ ಸಾಲಿನಲ್ಲಿ ಒಂದರಪಕ್ಕ ಒಂದರಂತೆ ಇರುವ ಬಹು ಕೊಠಡಿಗಳುಳ್ಳ ಕಟ್ಟಡದ ರಚನೆಗಳು ದೊರೆತಿವೆ.[೫೫] ಶಾತವಾಹನಕಾಲೀನ ವಾಸ್ತುನಿರ್ಮಾಣದ ತಂತ್ರ ಮತ್ತು ಪರಂಪರೆಗೆ ಇವು ತಕ್ಕ ಉದಾಹರಣೆಗಳಂತಿವೆ. ಇವುಗಳೊಡನೆ ಕ್ರಿ.ಶ.೧ ಮತ್ತು ೨ನೇ ಶತಮಾನದ ಕಂಚಿನ ಮೂರ್ತಿಗಳು ಮತ್ತು ರಸೆಟ್ ಬಣ್ಣದ ಚಿತ್ರಿತ ಮೃತ್ಪಾತ್ರೆಗಳು ದೊರೆತಿವೆ. ಈ ಕುರುಹುಗಳ ಸೂಕ್ಷ್ಮ ಅವಲೋಕನದಿಂದ ಮೌರ್ಯರಕಾಲಕ್ಕೆ ಚಿಕ್ಕ ಪಟ್ಟಣವಾಗಿದ್ದ ಚಂದ್ರವಳ್ಳಿಯು ಶಾತವಾಹನರ ಅವಧಿಯ ವೇಳೆಗೆ ರೊಮ್ ದೇಶದ ವ್ಯಾಪಾರ ಸಂಪರ್ಕದಿಂದ ಪ್ರಮುಖ ಔದ್ಯಮಿಕ ಮತ್ತು ವಾಣಿಜ್ಯ ಕೇಂದ್ರವಾಗಿ ಮಾರ್ಪಾಡಾದದ್ದು ವೇದ್ಯವಾಗುತ್ತದೆ. ಇಲ್ಲಿನ ಉತ್ಖನನಗಳಲ್ಲಿ ದೊರೆತ ರೊಮ್ ದೇಶದ ಬೆಳ್ಳಿಯ ದಿನಾರುಗಳು ಮತ್ತು ರೌಲೆಟೆಡ್ ಚಿತ್ರಿತ ಮೃತ್ಪಾತ್ರೆಗಳು ಇದನ್ನು ಸಮರ್ಥಿಸುತ್ತವೆ. ಒಟ್ಟಿನಲ್ಲಿ ಚಿತ್ರದುರ್ಗವು ಶಾತವಾಹನರ ಆಳ್ವಿಕೆಗೆ ಒಳಪಟ್ಟಿದ್ದು ಚಂದ್ರವಳ್ಳಿಯು ಅವರ ಪ್ರಾದೇಶಿಕ ರಾಜಧಾನಿಗಳಲ್ಲಿ ಒಂದಾಗಿತ್ತೆಂದು ಹೇಳಬಹುದು.

೨.೩.೩ ಕದಂಬರು

ಕರ್ನಾಟಕದಲ್ಲಿ ಶಾತವಾಹನರ ಆಡಳಿತ ಅಂತ್ಯವಾದ ತರುವಾಯ ಪಲ್ಲವರು ಪ್ರವರ್ಧಮಾನಕ್ಕೆ ಬಂದರು. ಆದರೆ ಪಲ್ಲವರನ್ನು ಸೋಲಿಸಿದ ಕದಂಬರು ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸುವ ಮೂಲಕ ಕರ್ನಾಟಕದಲ್ಲಿ ಪ್ರಪ್ರಥಮ ಕನ್ನಡ ಅರಸು ಮನೆತನದ ಆಳ್ವಿಕೆಗೆ ಅಸ್ತಿಭಾರ ಹಾಕಿದರು. ಬನವಾಸಿಯನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡ ಇವರು ಉತ್ತರ ಕರಾವಳಿ, ದಕ್ಷಿಣ ಕರಾವಳಿ, ಧಾರವಾಡ, ಬೆಂಗಳೂರು, ಬೆಳಗಾಂ, ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ ಮತ್ತಿತರ ಭಾಗಗಳಲ್ಲಿ ಕ್ರಿ.ಶ.೩ನೇ ಶತಮಾನದಿಂದ ಕ್ರಿ.ಶ.೬ನೇ ಶತಮಾನದ ಅಂತ್ಯದವರೆಗೆ ಆಳ್ವಿಕೆ ನಡೆಸಿದರು.[೫೬] ಅನಂತರ ಬಾದಾಮಿ ಚಾಲುಕ್ಯರ ಏಳಿಗೆಯಿಂದ ಬನವಾಸಿ ಕದಂಬ ಮನೆತನವು ಅವನತಿಯಾಯಿತು. ಆದರೆ ಕದಂಬ ಮನೆತನದಲ್ಲಿ ಬಂಕಾಪುರ, ಹಾನಗಲ್ಲು, ಉಚ್ಚಂಗಿ, ಬೇಲೂರು, ಗೋವೆ ಮುಂತಾದ ಶಾಖೆಗಳಿದ್ದು, ಕ್ರಿ.ಶ. ೧೪ನೇ ಶತಮಾನದವರೆಗೂ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಆಳ್ವಿಕೆ ನಡೆಸಿದರು.

ಕದಂಬರ ಸಾಮ್ರಾಜ್ಯದ ಸಂಸ್ಥಾಪಕ ಮಯೂರಶರ್ಮನು ತನ್ನ ಆಳ್ವಿಕೆಗೆ ಅಸ್ತಿಭಾರವನ್ನು ಈಗಿನ ಚಿತ್ರದುರ್ಗ ಪರಿಸರದಲ್ಲೇ ಹಾಕಿದ್ದನೆಂದು ಹೇಳಲು ಈ ಪ್ರದೇಶದಲ್ಲಿ ದೊರೆಯುವ ಕದಂಬರ ಶಾಸನಗಳು ಮತ್ತು ಅವರ ಬಗ್ಗೆ ದಟ್ಟವಾಗಿ ಪ್ರಚಲಿತವಿರುವ ಐತಿಹ್ಯಗಳು ಅವಕಾಶ ನೀಡುತ್ತವೆ.

ಮಯೂರವರ್ಮನಿಗೆ ಸಂಬಂಧಿಸಿದ ಶಾಸನವೊಂದು ಚಂದ್ರವಳ್ಳಿಯ ಭೈರವೇಶ್ವರ ದೇವಾಲಯದ ಮುಂದಿನ ಗ್ರಾನೈಟ್ ಬಂಡೆಯ ಪಶ್ಚಿಮ ದಿಕ್ಕಿನಲ್ಲಿದೆ. ಈ ಶಿಲಾಶಾಸನವನ್ನು ೧೯೨೯ರಲ್ಲಿ ಮೊದಲ ಬಾರಿಗೆ ಎಂ.ಎಚ್.ಕೃಷ್ಣರವರು ಶೋಧಿಸಿ ಪ್ರಕಟಿಸಿದ್ದರು.[೫೭] ಆದರೆ ಕಾಲಾಂತರದಲ್ಲಿ ಈ ಶಾಸನದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳು ಮೂಡಿದ್ದವು. ಇದನ್ನರಿತ ಬಿ.ರಾಜಶೇಖರಪ್ಪನವರು ಶಾಸನವನ್ನು ಪುನರ್‌ಪರಿಶೀಲಿಸಿ ಹೊಸ ಅರ್ಥವಿವರಣೆಯನ್ನು ನೀಡಿದರಲ್ಲದೆ, ಇದರ ಹಲವು ಪ್ರಥಮಾಂಶಗಳನ್ನು ಸಾರಸ್ವತ ಲೋಕಕ್ಕೆ ಪರಿಚಯಿಸಿದರು.[೫೮] ಇದರಿಂದ ಈವರೆಗೆ ಪ್ರಚಲಿತವಿದ್ದ ಮಯೂರವರ್ಮನ ಇತಿಹಾಸದ ಚಿತ್ರಣ ಸಂಪೂರ್ಣ ಬದಲಾಯಿತು. ಮಯೂರವರ್ಮನ ಯುದ್ಧಕಾರ್ಯಗಳಿಗೆ ಸ್ಫೂರ್ತಿ ನೀಡಿ ಕನ್ನಡ ನಾಡಿಗೆ ಅಧಿರಾಜತ್ವವೊಂದು ಉದಯವಾಗಲು ಅನುವುಮಾಡಿದ ಶ್ರೀ ಪರ್ವತಾರಣ್ಯವು ಚಂದ್ರವಳ್ಳಿ ಬಳಿಯ ಧವಳಪ್ಪನಗುಡ್ಡ ಮತ್ತು ಅದರ ಸುತ್ತಮುತ್ತಲ ಪ್ರದೇಶವೆಂಬುದು ಶ್ರೀಯುತರ ಅಭಿಮತ.[೫೯] ಶಾತವಾಹನರ ಕಾಲದ ಪ್ರಮುಖ ವಾಣಿಜ್ಯ ಮತ್ತು ಔದ್ಯಮಿಕ ಕೇಂದ್ರವಾಗಿದ್ದ ಚಂದ್ರವಳ್ಳಿಯಲ್ಲಿ ಕ್ರಿ.ಶ.೩೦೦ರ ವರೆಗೆ ನಗರ ಅಸ್ತಿತ್ವದಲ್ಲಿದ್ದು ಬೆಳೆದಿದ್ದನ್ನು ಮಯೂರವರ್ಮನ ಶಾಸನ ಸಮರ್ಥಿಸುತ್ತದೆ.[೬೦] ಇವರ ತರುವಾಯ ಕ್ರಿ.ಶ.೧೦ ಮತ್ತು ೧೧ನೇ ಶತಮಾನದ ವೇಳೆಗೆ ಕದಂಬರ ಮನೆತನದ ಉಪಶಾಖೆಯೊಂದು ಉಚ್ಚಂಗಿದುರ್ಗವನ್ನು ಕೇಂದ್ರವನ್ನಾಗಿಟ್ಟುಕೊಂಡು ಆಳ್ವಿಕೆ ನಡೆಸುತಿತ್ತು.[೬೧] ಕದಂಬಳಿಗೆ ಸಾಸಿರ ನಾಡಿನ ಮೊದಲ ಉಲ್ಲೇಖ ರಾಷ್ಟ್ರಕೂಟರ ಅವಧಿಯಲ್ಲಿ ಮೊದಲಬಾರಿಗೆ ಕಂಡುಬಂದರೂ, ಕನ್ನಡದ ಮೊದಲ ಅರಸು ಮನೆತನವಾದ ಕದಂಬ ವಂಶದ ಕುರುಹು ಇದಾಗಿರಬಹುದು. ಈ ಹಿನ್ನೆಲೆಯಲ್ಲಿ ಕದಂಬರು ಪ್ರಾರಂಭದಲ್ಲಿ ತಮ್ಮ ಧೈರ್ಯ ಮತ್ತು ಸಾಹಸಗಳಿಂದ ತಮ್ಮ ನೆಲೆಯನ್ನು ಸ್ಥಾಪಿಸಿದ ಪ್ರದೇಶ ಚಿತ್ರದುರ್ಗ ಜಿಲ್ಲೆ ಮತ್ತು ಅದರ ಆಸುಪಾಸಿನ ಪ್ರದೇಶಗಳಾಗಿದ್ದು, ಅದರಲ್ಲೂ ಕದಂಬಳಿಗೆ ಪ್ರದೇಶವೇ ಅದರ ಹೃದಯ ಭಾಗವಾಗಿದ್ದಿತೆಂದು ಹೇಳಬಹುದು.[೬೨]

೨.೩.೪ ಬಾದಾಮಿಯ ಚಾಲುಕ್ಯರು

ದಕ್ಷಿಣ ಭಾರತದ ಇತಿಹಾಸದಲ್ಲಿ ಚಾಲುಕ್ಯ ಮನೆತನಗಳ ಪ್ರಭಾವ ಗಣನೀಯವಾದದ್ದು. ಇದರಲ್ಲಿ ಬಾದಾಮಿ ಚಾಲುಕ್ಯರು, ಕಲ್ಯಾಣದ ಚಾಲುಕ್ಯರು, ಮತ್ತು ವೆಂಗಿಯ ಚಾಲುಕ್ಯರು ಎಂಬ ಮೂರು ಮನೆತನಗಳಿವೆ. ಕದಂಬರ ಪತನದ ತರುವಾಯ ಏಳಿಗೆ ಹೊಂದಿದ ಬಾದಾಮಿ ಚಾಲುಕ್ಯ ಅರಸರು ಕ್ರಿ.ಶ.೬ನೇ ಶತಮಾನದಿಂದ ಕ್ರಿ.ಶ.೮ನೇ ಶತಮಾನದವರೆಗೆ ಆಳ್ವಿಕೆ ನಡೆಸಿದರು. ಈ ಮನೆತನದ ಶಾಸನಗಳು ಚಿತ್ರದುರ್ಗ ಜಿಲ್ಲೆಯಲ್ಲಿ ದೊರೆತಿದ್ದು, ಚಿತ್ರದುರ್ಗ ಪರಿಸರವು ಇವರ ಅಧಿಪತ್ಯಕ್ಕೆ ಒಳಪಟ್ಟಿದ್ದನ್ನು ಇವು ಶೃತಪಡಿಸುತ್ತವೆ. ಬಾದಾಮಿಯ ಚಾಲುಕ್ಯರಿಗೆ ಕಡು ವೈರಿಗಳಾಗಿದ್ದ ಪಲ್ಲವರೊಡನೆ ಸತತವಾಗಿ ಕದನಗಳು ಜರುಗುತಿದ್ದವು. ಇದರಿಂದ ಈ ಎರಡೂ ಸಾಮ್ರಾಜ್ಯಗಳ ಗಡಿ ಭಾಗವಾಗಿದ್ದ ಈ ಪರಿಸರದಲ್ಲಿ ಅಶಾಂತಿಯ ವಾತಾವರಣ ಮಡುಗಟ್ಟಿತ್ತೆನ್ನಬಹುದು.

೨.೩.೫ ರಾಷ್ಟ್ರಕೂಟರು

ಕ್ರಿ.ಶ.೮ನೇ ಶತಮಾನದ ಮಧ್ಯಾವಧಿಯಿಂದ ಕ್ರಿ.ಶ.೧೦ನೇ ಶತಮಾನದ ಮಧ್ಯಾವಧಿಯವರೆಗೆ ಕರ್ನಾಟಕವನ್ನಾಳಿದ ಪ್ರಮುಖರೆಂದರೆ ರಾಷ್ಟ್ರಕೂಟರು. ಮಾನ್ಯಖೇಟ ಅಥವಾ ಮಳಖೇಡ ಇವರ ರಾಜಧಾನಿಯಾಗಿದ್ದಿತು. ಕನ್ನಡ ನಾಡಿನ ಹಿರಿಮೆಯನ್ನು ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಹರಡಿದ ಕೀರ್ತಿ ಈ ಮನೆತನದ ಅರಸರಿಗೆ ಸಲ್ಲುತ್ತದೆ.

ಚಿತ್ರದುರ್ಗ ಮತ್ತು ಅದರ ಸುತ್ತಲಿನ ಪ್ರದೇಶವು ರಾಷ್ಟ್ರಕೂಟರ ಆಳ್ವಿಕೆಗೆ ಸೇರ್ಪಡೆಯಾಗಿದ್ದ ಸಂಗತಿಯನ್ನು ಜಿಲ್ಲೆಯಾದ್ಯಾಂತ ದೊರೆತಿರುವ ಅವರ ಶಾಸನಗಳು ಪ್ರಸ್ತಾಪಿಸುತ್ತವೆ. ಸೂಳ್ಗಲ್ಲು, ಸೂಳಿಂಗಲ್-೭೦, ಕದಂಬಳಿಗೆ-೧೦೦೦ ಮುಂತಾದ ಪ್ರದೇಶಗಳು ರಾಷ್ಟ್ರಕೂಟರ ಆಡಳಿತ ಘಟಕಗಳಾಗಿದ್ದು, ನೊಳಂಬವಾಡಿ-೩೨೦೦೦ದಲ್ಲಿ ಅಂತರ್ಗತವಾಗಿದ್ದವು. ಕದಂಬಳಿಗೆ ಸಾಸಿರದ ಮೊದಲ ಉಲ್ಲೇಖ ಇವರ ಶಾಸನಗಳಲ್ಲಿ ಕಂಡುಬಂದಿದ್ದು, ಇದು ಚಿತ್ರದುರ್ಗ ಹಾಗೂ ಸುತ್ತಮುತ್ತಲ

ಪ್ರದೇಶಗಳನ್ನು ಒಳಗೊಂಡಿದ್ದಿತೆಂಬುದು ಚರಿತ್ರೆಕಾರರ ಅಭಿಮತ. ಚಳ್ಳಕೆರೆ ತಾಲೂಕು ಚಿಕ್ಕಮಧುರೆಯ ಶಾಸನವೊಂದು ನೊಳಂಬರಾಜ ಚಾರುಪೊನ್ನೇರನು ಜಗತ್ತುಂಗ ಪ್ರಭೂತವರ್ಷ ಗೋವಿಂದನ ಸಾಮಂತನಾಗಿದ್ದನೆಂದು ತಿಳಿಸುತ್ತದೆ. ರಾಷ್ಟ್ರಕೂಟರ ಪ್ರಾಂತ್ಯಪಾಲಕರಲ್ಲೊಬ್ಬನಾದ ಕನ್ನರದೇವ ಅಥವಾ ಕನ್ನಯ್ಯನು ಮುಮ್ಮಡಿ ಕೃಷ್ಣನ ಪಾದಪದ್ಮೋಪಜೀವಿಯಾಗಿ ಕದಂಬಳಿಗೆ ಸಾಸಿರವನ್ನು ಆಳುತ್ತಿದ್ದನು.[೬೩] ಕನ್ನಯ್ಯನು ಇಸಾಮುದ್ರ ಗ್ರಾಮದ ಭೋಗೇಶ್ವರ ದೇವಾಲಯಕ್ಕೆ ಅಲ್ಲಿನ ಮಠ ಹಾಗೂ ವಿದ್ಯಾರ್ಥಿಗಳಿಗೆ ದತ್ತಿಬಿಟ್ಟ ಸಂಗತಿಯನ್ನು ಮುಮ್ಮಡಿ ಅಮೋಘವರ್ಷನ ಇಸಾಮುದ್ರ ಶಾಸನವು ತಿಳಿಸುತ್ತದೆ.[೬೪] ಇವನ ತರುವಾಯ ಲೋಕಯ್ಯ,[೬೫] ಖೊಟ್ಟಿಗನ ಅವಧಿಯಲ್ಲಿ ಪನ್ನಯ್ಯ,[೬೬] ಅಕಾಲವರ್ಷನ ಅವಧಿಯಲ್ಲಿ ಸೂದ್ರಕಯ್ಯ[೬೭] ರಾಷ್ಟ್ರಕೂಟರ ಪ್ರಾಂತ್ಯಾಧಿಕಾರಿಯಾಗಿ ಕದಂಬಳಿಗೆ ಸಾಸಿರವನ್ನು ಆಳುತ್ತಿದ್ದರು.

ಈ ಮೇಲ್ಕಾಣಿಸಿದ ಅಂಶಗಳ ಅವಲೋಕನದಿಂದ ಚಿತ್ರದುರ್ಗ ಪರಿಸರವನ್ನು ಒಳಗೊಂಡ ಕದಂಬಳಿಗೆ ಸಾಸಿರ ಪ್ರದೇಶವು ರಾಷ್ಟ್ರಕೂಟರ ಆಳ್ವಿಕೆಗೆ ಒಳಪಟ್ಟಿದ್ದು ಸ್ಪಷ್ಟವಾಗುತ್ತದೆ. ಈ ಮನೆತನದ ಆಳ್ವಿಕೆಯ ಕೊನೆಯಘಟ್ಟದಲ್ಲಿ ಇಮ್ಮಡಿ ಕರ್ಕ ಅಸಮರ್ಥನಾದುದ್ದರಿಂದ ಅವರ ಸಾಮಂತನಾದ ಇಮ್ಮಡಿ ತೈಲಪನು ಇಮ್ಮಡಿ ಕರ್ಕನನ್ನು ಪರಾಭವಗೊಳಿಸುವ ಮೂಲಕ ರಾಷ್ಟ್ರಕೂಟರ ಆಳ್ವಿಕೆಯನ್ನು ಅಂತ್ಯಗೊಳಿಸಿ, ಕಲ್ಯಾಣದ ಚಾಲುಕ್ಯರ ಆಳ್ವಿಕೆಗೆ ಆಸ್ತಿಭಾರ ಹಾಕಿದನು.

೨.೩.೬ ಕಲ್ಯಾಣದ ಚಾಲುಕ್ಯರು

ರಾಷ್ಟ್ರಕೂಟರ ಪತನದ ತರುವಾಯ ಚಾಲುಕ್ಯರ ಮತ್ತೊಂದು ಶಾಖೆ ಕಲ್ಯಾಣವನ್ನು ರಾಜಧಾನಿಯನ್ನಾಗಿ ಆಳ್ವಿಕೆ ಪ್ರಾರಂಭಿಸಿದ್ದರಿಂದ ಇವರನ್ನು ಕಲ್ಯಾಣದ ಚಾಲುಕ್ಯರು ಎಂದು ಕರೆಯುತ್ತಾರೆ.

ಕಲ್ಯಾಣದ ಚಾಲುಕ್ಯರ ಆಳ್ವಿಕೆ ಚಿತ್ರದುರ್ಗದಲ್ಲಿ ಆರಂಭವಾದದ್ದು ನೊಳಂಬವಾಡಿ ೩೨೦೦೦ ಪ್ರಾಂತ್ಯದಿಂದ. ಇದನ್ನು ಉಚ್ಚಂಗಿಪಾಂಡ್ಯರೂ ಚಿತ್ರದುರ್ಗವನ್ನು ಕೆಲಕಾಲ ಆಳ್ವಿಕೆ ನಡೆಸಿದ್ದು, ಇವರು ಕಲ್ಯಾಣದ ಚಾಲುಕ್ಯರ ಮಾಂಡಲಿಕರಾಗಿದ್ದರು. ಇವರಿಗೆ ಚೋಳರು ಕಡುವೈರಿಗಳಾಗಿದ್ದು, ಇವರ ಘರ್ಷಣೆಗಳಿಂದ ಚಿತ್ರದುರ್ಗ ಪರಿಸರದಲ್ಲಿ ಅಶಾಂತಿಯ ವಾತಾವರಣ ಏರ್ಪಟ್ಟಿತ್ತು. ಈ ಘರ್ಷಣೆಗಳಲ್ಲಿ ಉಚ್ಚಂಗಿಪಾಂಡ್ಯರೂ ತಮ್ಮ ಪ್ರಭುಗಳಿಗೆ ಒತ್ತಾಸೆಯಾಗಿ ನಿಲ್ಲುತ್ತಿದ್ದರು. ಕಲ್ಯಾಣದ ಚಾಲುಕ್ಯರ ಮನೆತನದ ಮೂಲ ಪುರುಷ ಇಮ್ಮಡಿ ತೈಲಪ ಮತ್ತು ಅವನ ಉತ್ತರಾಧಿಕಾರಿ ಸತ್ಯಾಶ್ರಯನ ಶಾಸನಗಳು ಚಿತ್ರದುರ್ಗ ಜಿಲ್ಲೆಯಲ್ಲಿ ಲಭ್ಯವಿಲ್ಲ. ಈ ಅವಧಿಯಲ್ಲಿ ಚೋಳದೊರೆ ರಾಜರಾಜ ಚೋಳನು ಗಂಗವಾಡಿ ಮತ್ತು ನೊಳಂಬವಾಡಿಗಳ ಮೇಲೆ ತನ್ನ ಸಾರ್ವಭೌಮತ್ವ ಹೊಂದಿದ್ದನು.[೬೮] ಚೋಳರಿಗೆ ಸಂಬಂಧಿಸಿದ ಶಾಸನಗಳು ಜಿಲ್ಲೆಯ ಹಿರಿಯೂರು, ಚಳ್ಳಕೆರೆ, ಮೊಳಕಾಲ್ಮೂರು ಪ್ರದೇಶಗಳಲ್ಲಿ ಕಂಡುಬಂದಿವೆ. ಜಗದೇಕ ಮಲ್ಲನೆಂದು ಬಿರುದಾಂಕಿತನಾದ ಜಯಸಿಂಗನು ಚೋಳರನ್ನು ಸೋಲಿಸಿ ಚಿತ್ರದುರ್ಗದ ಆಸುಪಾಸಿನ ಪ್ರದೇಶಗಳ ಮೇಲೆ ಅಧಿಪತ್ಯ ಸ್ಥಾಪಿಸಿದನು. ಈ ಹಂತದಿಂದ ಉಚ್ಚಂಗಿ ಪಾಂಡ್ಯರೂ ಇವರ ಮಾಂಡಲಿಕರಾಗಿ ಮುಂದುವರೆದರು. ಇಮ್ಮಡಿ ಸೋಮೇಶ್ವರನ ಮಹಾಸಾಮಂತ ಕೆರೆಯೂರ ಮಂಗಿಯೇಚಯ್ಯನು ಸೂಳ್ಗಲ್ಲು-೭೦ನ್ನು ಆಳುತ್ತಿರುವಾಗ ಚಿತ್ರದುರ್ಗ ಭೀಮೇಶ್ವರ ಮತ್ತು ಹಿಡಿಂಬೇಶ್ವರ ದೇವರಿಗೆ ದತ್ತಿಬಿಟ್ಟ ಸಂಗತಿಯನ್ನು ಹುಲಿಗೊಂದಿಯ ಕ್ರಿ.ಶ.೧೦೭೪ರ ಶಾಸನವೊಂದು ಪ್ರಸ್ತಾಪಿಸುತ್ತದೆ.[೬೯] ಪ್ರಾಶಯಃ ಸೂಳ್ಗಲ್ಲು-೭೦ ಎಂಬುದು ಚಿತ್ರದುರ್ಗ ಮತ್ತು ಅದರ ಸುತ್ತಮುತ್ತಲ ಪ್ರದೇಶವಿರಬಹುದು. ಆರನೇ ವಿಕ್ರಮಾದಿತ್ಯನ ಸಾಮಂತನಾಗಿ ಉದಯಾದಿತ್ಯನು ಬೆಮ್ಮತ್ತನೂರಲ್ಲಿ ಆಳ್ವಿಕೆ ನಡೆಸುತ್ತಿದ್ದು, ಚೋಳೇಶ್ವರಲಿಂಗ ಪ್ರತಿಷ್ಠಾಪನೆ ಮಾಡಿದ್ದನ್ನು ಗಾರೆಹಟ್ಟಿಯ ಶಾಸನವು ತಿಳಿಸುತ್ತದೆ.[೭೦] ಬೆಮ್ಮತ್ತನೂರು ಚಿತ್ರದುರ್ಗ ಎಂದು ಧೃಡಪಟ್ಟಿರುವುದರಿಂದ ಸೂಳ್ಗಲ್ಲು-೭೦ ಎಂಬುದರಿಂದ ಇದು ಬೆಮ್ಮತ್ತನೂರು ಎಂದು ಪರಿವರ್ತಿತವಾಗಿ ಮುಂದೆ ಹೊಯ್ಸಳರ ಅವಧಿಯಲ್ಲಿ ಬೆಮ್ಮತ್ತನೂರು ನಾಡಾಗಿ ರೂಪಾಂತರವಾಗಿರಬಹುದು. ಚಿತ್ರದುರ್ಗದ ಕ್ರಿ.ಶ.೧೧೮೪ರ ಶಾಸನವು ಜಗದೇಕಮಲ್ಲನ ಆಳ್ವಿಕೆಯ ಅವಧಿಯದಾಗಿದ್ದು, ಚಿತ್ರದುರ್ಗವನ್ನು ಇರುಗಯ್ಯ ನಾಯಕ ಮತ್ತು ಉದಯಾದಿತ್ಯ ಎಂಬುವರು

ಜಂಟಿಯಾಗಿ ಆಳ್ವಿಕೆ ನಡೆಸಿದ್ದನ್ನು ಅರಹುತ್ತದೆ.[೭೧] ಈ ಬಗೆಯ ಸಂಯುಕ್ತ ಆಡಳಿತ ಪದ್ಧತಿಯು ಚಿತ್ರದುರ್ಗದಲ್ಲಿ ಹೊಯ್ಸಳರ ಅಂತ್ಯದವರೆಗೂ ಮುಂದುವರೆಯಿತು. ಕಲ್ಯಾಣದ ಚಾಲುಕ್ಯ ಅರಸ ನಾಲ್ಕನೇ ಸೋಮೇಶ್ವರನ ಸಾಮಂತ ಕಾಮಯ್ಯ ನಾಯಕನು ಬೆಮ್ಮತ್ತನೂರನ್ನು ಆಳುವಾಗ ಲಿಂಗಪ್ರತಿಷ್ಠೆ ಮತ್ತು ದಾನ ಕಾರ್ಯಕ್ಕೆ ಸಹಕಾರ ನೀಡಿದ ಸಂಗತಿ ಚಿತ್ರದುರ್ಗದ ಮಹೇಶ್ವರ ದೇಗುಲದಲ್ಲಿನ ಶಾಸನದಲ್ಲಿ ಉಕ್ತವಾಗಿದೆ. ಚಿತ್ರದುರ್ಗದಲ್ಲಿ ಕೋಟೆ ಬಗ್ಗೆ ಉಲ್ಲೇಖಿಸುವ ಶಾಸನವು ಕ್ರಿ.ಶ.೧೦೭೪ರ ಅವಧಿಯದಾಗಿದ್ದು,[೭೨] ಕ್ರಿ.ಶ.೧೧ನೇ ಶತಮಾನದವೇಳೆಗೆ ಚಿತ್ರದುರ್ಗ ಪ್ರಮುಖ ಆಡಳಿತ ಕೇಂದ್ರವಾಗಿ ರೂಪುತಾಳಿತ್ತೆನ್ನಬಹುದು.

ಕಲ್ಯಾಣದ ಚಾಲುಕ್ಯರ ಅಂತ್ಯದವರೆಗೂ ಚಿತ್ರದುರ್ಗ ಅವರ ಆಳ್ವಿಕೆಗೆ ಸೇರ್ಪಡೆಯಾದದ್ದು ಈ ಮೇಲಿನ ಅಂಶಗಳಿಂದ ವೇದ್ಯವಾಗುತ್ತದೆ. ಚಾಲುಕ್ಯ ಸಾಮ್ರಾಜ್ಯದ ಸಾಮಂತರಾಗಿದ್ದ ಮತ್ತು ಸಮಕಾಲೀನರಾಗಿದ್ದ ಹೊಯ್ಸಳರು ಕಲ್ಯಾಣದ ಚಾಲುಕ್ಯರ ಅರಸರನ್ನು ಪರಾಭವಗೊಳಿಸಿ ಸ್ವತಂತ್ರ ಸತ್ತೆ ಸ್ಥಾಪಿಸಿದರು.

೨.೩.೨ ನೊಳಂಬರು

ಕರ್ನಾಟಕ ಚರಿತ್ರೆ ಮತ್ತು ಸಂಸ್ಕೃತಿಗೆ ಪ್ರಮುಖ ಅರಸು ಮನೆತನಗಳು ಅಪೂರ್ವ ಕೊಡುಗೆಗಳನ್ನು ಸಲ್ಲಿಸಿದಂತೆ, ಅವರ ಸಾಮಂತ ಅರಸು ಮನೆತನಗಳೂ ಅಭೂತಪೂರ್ವ ಸೇವೆಗೈದಿವೆ. ಇಂತಹ ಸಾಮಂತ ಅರಸರಲ್ಲಿ ನೊಳಂಬರು ಒಬ್ಬರು. ಪ್ರಾರಂಭದಲ್ಲಿ ಹೆಂಜೆರು, ನಂತರ ಕಂಪಿಲಿಯನ್ನು ತಮ್ಮ ರಾಜಧಾನಿ ಮಾಡಿಕೊಂಡ ನೊಳಂಬರು ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು ಮತ್ತು ಹೊಯ್ಸಳರ ಪ್ರಾಂತ್ಯಪಾಲಕರಾಗಿ ಮುಂದುವರೆದರು. ನೊಳಂಬರು ತಾವು ಪಲ್ಲವ ವಂಶದವರೆಂದೂ ಪಲ್ಲವ ಕುಲಾನ್ವಯ, ಪಲ್ಲವಾಭರಣರೆಂದು ಶಾಸನಗಳಲ್ಲಿ ಹೊಗಳಿಕೊಂಡಿದ್ದಾರೆ.[೭೩] ಹಾಗಾಗಿ ಇವರನ್ನು ನೊಳಂಬ ಪಲ್ಲವರು ಎಂದು ಸಂಬೋಧಿಸಲಾಗುತ್ತದೆ.

ನೊಳಂಬರ ಅವಧಿಯ ಸ್ಮಾರಕ ಮತ್ತು ಶಾಸನಗಳು ಜಿಲ್ಲೆಯಾದ್ಯಾಂತ ಲಭ್ಯವಿದ್ದು, ಚಿತ್ರದುರ್ಗ ನೊಳಂಬರ ಆಳ್ವಕೆಗೆ ಒಳಪಟ್ಟಿದನ್ನು ಸಮರ್ಥಿಸುತ್ತವೆ. ಇವರು ಪ್ರಾರಂಭದ ದಿಸೆಯಲ್ಲಿ ನೊಳಂಬಳಿಗೆ ಸಾಸಿರ ಎಂಬ ಚಿಕ್ಕ ಪ್ರಾಂತ್ಯದ ಒಡೆಯರಾಗಿದ್ದರು. ಇದು ಪ್ರಸ್ತುತದ ಚಿತ್ರದುರ್ಗ, ಚಳ್ಳಕೆರೆ, ಹೊಳಲ್ಕೆರೆ, ಹಿರಿಯೂರು, ಜಗಲೂರು, ಮೊಳಕಾಲ್ಮೂರು ಪ್ರದೇಶಗಳನ್ನು ಒಳಗೊಂಡಿತ್ತು.[೭೪] ಕಾಲಕ್ರಮೇಣ ತಮ್ಮ ಅಧಿಪತ್ಯ ವಿಸ್ತರಿಸಿ ನೊಳಂಬವಾಡಿ-೩೨೦೦೦ ಪ್ರಾಂತ್ಯದ ಅಧಿಪತಿಗಳಾದರು.

ಕ್ರಿ.ಶ.೮೧೦ರ ಅವಧಿಯ ಮೂರು ವೀರಗಲ್ಲುಗಳು ದೊಡ್ಡಉಳ್ಳಾರ್ಥಿಯ ಬಳಿ ದೊರೆತಿದ್ದು, ಸಿಂಹಪೋತಕಲಿ ನೊಳಂಬಾದಿರಾಜನು ನೊಳಂಬವಾಡಿಯನ್ನು ಆಳುತಿದ್ದನೆಂದು ತಿಳಿಸುತ್ತವೆ. ಇದರಲ್ಲಿ ಮೊದಲ ವೀರಗಲ್ಲು ಓರ್ವ ಮುಖಂಡನ ಮರಣವನ್ನು, ಎರಡನೇ ವೀರಗಲ್ಲು ಆಸ್ತಿ ನೀಡಿದ ಬಗ್ಗೆ, ಮೂರನೇ ವೀರಗಲ್ಲು ಸಿಂಹಪೋತನು ಗಂಗದೊರೆ ಶಿವಮಾರನ ಆಜ್ಞೆಯಂತೆ ಹೋರಾಟ ಮಾಡಿದ್ದನ್ನು ತಿಳಿಸುತ್ತವೆ.[೭೫] ಈ ಸಮಯದಲ್ಲಿ ರಾಷ್ಟ್ರಕೂಟರು ಗಂಗರನ್ನು ಮಣಿಸಿ, ನೊಳಂಬವಾಡಿಯನ್ನು ಆಕ್ರಮಿಸಿದ ತರುವಾಯ ಇವರು ರಾಷ್ಟ್ರಕೂಟರ ಪ್ರಾಂತ್ಯಪಾಲಕರಾಗಿ ಮುಂದುವರೆದರು. ಪ್ರಭಾರಾಮಮಂಗಲದ ತಾಮ್ರ ಶಾಸನವು ಪೊಳಲ್ಚೋರನು ಆದಿತ್ಯದೇವನ ಸ್ಥಾಪನೆಗಾಗಿ ನಿರ್ಗುಂದ ವಿಷಯದ ಗೊರವೂರನ್ನು ಪ್ರಭಾರಾಮಮಂಗಲ ಎಂದು ನಾಮಕರಣಮಾಡಿ ದತ್ತಿ ನೀಡಿದ ವಿಷಯವನ್ನು ಅರಹುತ್ತದೆ.[೭೬] ನೊಳಂಬದೊರೆ ಅಯ್ಯಪ್ಪಮಂಗಲನು ತನಗೆ ಅವಿಧೇಯತೆ ತೋರಿದ ಪ್ರಾಂತ್ಯಪಾಲಕರನ್ನು ಶಿಕ್ಷಿಸಲು ಮತ್ತೊರ್ವ ಪ್ರಾಂತ್ಯಪಾಲಕ ಮತ್ತು ಮಂತ್ರಿಗೆ ಆಜ್ಞೆ ನೀಡಿದ್ದುದು ಐಮಂಗಲದ ಶಾಸನದಲ್ಲಿ ಉಕ್ತವಾಗಿದೆ.[೭೭] ಚಿತ್ರದುರ್ಗ ಹುಲಿಗೊಂದಿಯಲ್ಲಿನ ಕ್ರಿ.ಶ.೧೦೭೪ರ ಶಾಸನವು ನೊಳಂಬಪಲ್ಲವ ಪೆರ್ಮಾಡಿ ಜಯಸಿಂಗನು ನೊಳಂಬವಾಡಿಯನ್ನು ಆಳುವಾಗ ಕೆರೆಯೂರ ಮಂಗಿಯೇಚಯ್ಯ ಇಲ್ಲಿನ ಹಿಡಿಂಬೇಶ್ವರ ಮತ್ತು ಭೀಮೇಶ್ವರ ದೇವರಿಗೆ ದತ್ತಿನೀಡಿದ್ದನು.[೭೮] ಕಲ್ಯಾಣದ ಚಾಲುಕ್ಯರ ಪತನದ ತರುವಾಯ ನೋಳಂಬರು ಹೊಯ್ಸಳರ ಮಾಂಡಲಿಕರಾಗಿಯೂ

ಮುಂದುವರೆದರು. ನೊಳಂಬ ಅರಸ ಮಾಚಿದೇವನ ತರುವಾಯ ಆ ಮನೆತನದ ಯಾವ ಕುರುಹುಗಳೂ ಚಿತ್ರದುರ್ಗ ಜಿಲ್ಲೆಯಲ್ಲಿ ಲಭ್ಯವಿಲ್ಲದ್ದರಿಂದ ಇವನೇ ನೊಳಂಬ ಮನೆತನದ ಕೊನೆಯ ಅರಸನೆನ್ನಬಹುದು.[೭೯]

೨.೩.೮ ಹೊಯ್ಸಳರು

ಕಲ್ಯಾಣದ ಚಾಲುಕ್ಯರ ಸಮಕಾಲೀನವಾಗಿದ್ದ ಪ್ರಬಲ ಅರಸುಮನೆತನ ಹೊಯ್ಸಳರದು. ಆರನೇ ವಿಕ್ರಮಾದಿತ್ಯನು ಹೊಯ್ಸಳರ ದೊರೆ ವಿಷ್ಣುವರ್ಧನನನ್ನು ಪರಾಭವಗೊಳಿಸಿದ ಪರಿಣಾಮ ಕೆಲಕಾಲ ಅವರ ಮಾಂಡಲಿಕರಾಗಿ ಹೊಯ್ಸಳರು ಮುಂದುವರೆದರು. ಆರನೇ ವಿಕ್ರಮಾದಿತ್ಯನ ಮರಣದ ತರುವಾಯ ಇವರು ಸ್ವತಂತ್ರರಾದರು. ಇವರು ಒಟ್ಟು ಸುಮಾರು ೩೦೦ ವರ್ಷಗಳ ಕಾಲ ಕರ್ನಾಟಕವನ್ನಾಳಿದ್ದು, ಇತಿಹಾಸದಲ್ಲಿ ಮಹತ್ವದ ಸ್ಥಾನ ಪಡೆದಿರುವರು. ಚಿತ್ರದುರ್ಗದಲ್ಲಿ ಹೊಯ್ಸಳರ ಆಳ್ವಿಕೆಯನ್ನು ಸಮರ್ಥಿಸುವ ಸುಮಾರು ೬೫ಕ್ಕೂ ಅಧಿಕ ಶಾಸನಗಳು ಜಿಲ್ಲೆಯಾದ್ಯಾಂತ ದೊರೆತಿವೆ.

ಹೊಯ್ಸಳರ ಅವಧಿಯಲ್ಲಿ ಚಿತ್ರದುರ್ಗವು ಬೆಮ್ಮತ್ತನೂರು ಎಂದು ಪ್ರಸಿದ್ಧವಾಗಿದ್ದಿತು. ಆದರೆ ಬೆಮ್ಮತ್ತನೂರು ಪ್ರಥಮಾಕ್ಷರ 'ಚಿ' ಇರಬಹುದೆಂಬ ಎಂ.ಎಂ.ಕಲಬುರ್ಗಿಯವರ ಅಭಿಪ್ರಾಯವನ್ನು ಮುಂದುವರಿಸಿರುವ ಬಿ.ರಾಜಶೇಖರಪ್ಪನವರು ಚಿತ್ರದುರ್ಗದ ಪ್ರಾಚೀನ ಪ್ರಥಮಾಕ್ಷರ 'ಬೆ' ಅಲ್ಲ 'ಚಿ' ಎಂಬುದಾಗಿ ಶಾಸನಗಳ ಮೂಲಕ ಸಮರ್ಥಿಸಿದ್ದಾರೆ.[೮೦] ಆದರೆ ಲಕ್ಷ್ಮಣ್ ತೆಲಗಾವಿಯವರು ಚಿತ್ರದುರ್ಗದ ಪ್ರಾಚೀನ ನಾಮ 'ಚಿಮ್ಮತ್ತನೂರು' ಅಲ್ಲ ಅದು 'ಬೆಮ್ಮತ್ತನೂರು' ಎಂದೇ ಅವರು ಸೋದಾಹರಣವಾಗಿ ಸಮರ್ಥಿಸಿರುವರು.[೮೧] ಅದೇನೇ ಇದ್ದರೂ ಈ ನಗರವು ಹೊಯ್ಸಳ ಅರಸರ ಕೈವಶವಾಗಿ ಅವರ ದಂಡನಾಯಕರ ನೆಲೆವೀಡಾಗಿ ಸಹ ಮುಂದುವರೆಯಿತು. ವರ್ತಕರು ಮತ್ತು ನಖರಂಗಳಿಂದ ಕೂಡಿದ್ದ ಇದು, ಬೆಮ್ಮತ್ತೂರುಪಟ್ಟಣವೆಂಬ ಅಭಿಧಾನ ಪಡೆದುಕೊಂಡು ಹೊಯ್ಸಳ ಸಾಮ್ರಾಜ್ಯದ ಮುಖ್ಯವಾದ ಮತ್ತು ಆಯಕಟ್ಟಿನ ದುರ್ಗವಾಗಿ ರೂಪುತಳೆಯಿತು. ಕ್ರಿ.ಶ. ೧೧ನೇ ಶತಮಾನದ ವೇಳೆಗೆ ಕೋಟೆ ನಿರ್ಮಾಣವಾಗಿದ್ದ ಬಗ್ಗೆ ಶಾಸನವೊಂದು ಉಲ್ಲೇಖಿಸುತ್ತಾದರೂ ಕ್ರಿ.ಶ.೧೨೩೫ರ ಶಾಸನವೊಂದು ಮೊದಲಬಾರಿಗೆ ಬೆಮ್ಮತ್ತನೂರುದುರ್ಗ ಎಂಬ ಸ್ಪಷ್ಟ ಉಲ್ಲೇಖ ನೀಡುತ್ತದೆ.[೮೨]

ಕ್ರಿ.ಶ.೧೧೭೩ರಿಂದ ೧೨೨೦ರ ವರೆಗೆ ಆಳ್ವಿಕೆ ನಡೆಸಿದ ಇಮ್ಮಡಿ ಬಲ್ಲಾಳನ ಶಾಸನವೇ ಚಿತ್ರದುರ್ಗ ಜಿಲ್ಲೆಯಲ್ಲಿ ದೊರೆತ ಹೊಯ್ಸಳ ಮನೆತನದ ·ಮೊದಲ ಶಾಸನವಾಗಿವೆ. ಆದರೆ ಇದಕ್ಕೂ ಪೂರ್ವದಲ್ಲಿ ವಿಷ್ಣುವರ್ಧನನು ನೊಳಂಬವಾಡಿಯನ್ನು ಜಯಿಸಿದ್ದನು. ತರುವಾಯ ಉಚ್ಚಂಗಿ ಪಾಂಡ್ಯರನ್ನು ಹೊಳಲ್ಕೆರೆ ತಾಲೂಕಿನ ದುಮ್ಮಿ ಎಂಬಲ್ಲಿ ಪರಾಭವಗೊಳಿಸಿ,[೮೩] ಉಚ್ಚಂಗಿಗೊಂಡ ಮತ್ತು ನೊಳಂಬವಾಡಿಗೊಂಡ ಎಂದು ಬಿರುದುಗಳನ್ನು ಸ್ವೀಕರಿಸಿದನು.[೮೪] ಇವನ ತರುವಾಯ ಚಿತ್ರದುರ್ಗವು ಇಮ್ಮಡಿ ಬಲ್ಲಾಳನ ಆಡಳಿತಕ್ಕೆ ಸೇರ್ಪಡೆಯಾಯಿತು. ಇವನ ಅವಧಿಯಲ್ಲಿ ಬೆಮ್ಮತ್ತನೂರ ಪಟ್ಟಣದಲ್ಲಿ ಸೋಮೆ ದಣ್ಣಾಯಕ ಮತ್ತು ಹಿರಿಯ ಬಲ್ಲಾಳ ದಣ್ಣಾಯಕ ಜಂಟಿಯಾಗಿ ಆಳ್ವಿಕೆ ಮಾಡುತಿದ್ದರೆಂದು ಹೊಳಲ್ಕೆರೆಯ ಶಾಸನವೊಂದು ಪ್ರಸ್ತಾಪಿಸುತ್ತದೆ.[೮೫] ಇಮ್ಮಡಿ ಬಲ್ಲಾಳ ಮರಣಿಸಿದ ತರುವಾಯ ಅಧಿಕಾರಕ್ಕೆ ಬಂದ ಇಮ್ಮಡಿ ನರಸಿಂಹನ ಆಳ್ವಿಕೆಗೆ ಚಿತ್ರದುರ್ಗವು ಒಳಪಟ್ಟಿತು. ಬಾಗೂರು ಹೋಬಳಿ ಮಳಲೆ ಗ್ರಾಮದ ಕ್ರಿ.ಶ.೧೨೨೬ರ ವೀರಗಲ್ಲೊಂದು ಇವನ ಆಳ್ವಿಕೆಯಲ್ಲಿ ನಡೆದ ತುರುಕಾಳಗದಲ್ಲಿ ಚಿಕ್ಕಬೋವನು ಮೃತನಾದನೆಂದು ಉಲೇಖಿಸುತ್ತದೆ.[೮೬] ಕ್ರಿ.ಶ.೧೨೩೦ರಲ್ಲಿ ಇಮ್ಮಡಿ ನರಸಿಂಹ ಸಾವನ್ನಪ್ಪಿದ ನಂತರ ಸೋಮೇಶ್ವರನು ಹೊಯ್ಸಳರ ಅರಸನಾದನು. ಕಲ್ಲೇದೇವರಪುರದ ಕ್ರಿ.ಶ.೧೨೩೫ರ ಶಾಸನವೊಂದು ಇವನು ಬೆಮ್ಮತ್ತನೂರ ಸ್ವಯಂಭು ಮಣಲೇಶ್ವರ ದೇವರಿಗೆ ದತ್ತಿ ನೀಡಿದ್ದನ್ನು ಪ್ರಸ್ತಾಪಿಸುತ್ತದೆ.[೮೭] ಸೋಮೇಶ್ವರನ ಚಿತ್ರದುರ್ಗದ ಪ್ರಾಂತ್ಯಾಧಿಕಾರಿಯಾಗಿದ್ದ ಸೋವಣ್ಣನು ಫಲ್ಗುಣೇಶ್ವರ ದೇಗುಲದ ಮುಂದಣ ಮಂಟಪ ನಿರ್ಮಿಸಿದನು.[೮೮]

ಸೋಮೇಶ್ವರನು ಕ್ರಿ.ಶ.೧೨೬೩ರಲ್ಲಿ ಮರಣಹೊಂದುವ ಮೊದಲೇ ಅಂದರೆ ಕ್ರಿ.ಶ.೧೨೫೪ರಲ್ಲಿಯೇ ಮುಮ್ಮಡಿ ನಾರಸಿಂಹನು ಹೊಯ್ಸಳರ ಅರಸನಾದನು. ಇವನ ಮಾಂಡಲಿಕರಲ್ಲಿ ಒಬ್ಬನಾಗಿ ಬೆಮ್ಮತ್ತನೂರು ಪ್ರಾಂತ್ಯವನ್ನು ಆಳಿದವರಲ್ಲಿ ಪೆರುಮಾಳೆದೇವ ದಣ್ಣಾಯಕ ಅತ್ಯಂತ ಪ್ರಸಿದ್ಧ ಹಾಗೂ ಪ್ರಭಾವಶಾಲಿ ವ್ಯಕ್ತಿಯಾಗಿದ್ದನು. ಜನಪರ ಕಾರ್ಯದಲ್ಲಿ ಸದಾ ಉತ್ಸುಕನಾಗಿದ್ದ ಇವನ ಸುಮಾರು ೧೫ಕ್ಕೂ ಅಧಿಕ ಶಾಸನಗಳು ಚಿತ್ರದುರ್ಗ ಪರಿಸರದಲ್ಲಿಯೇ ಲಭ್ಯವಾಗಿವೆ.[೮೯] ಚಿತ್ರದುರ್ಗ ಬೆಟ್ಟದಲ್ಲಿನ ಗೋಪಾಲಸ್ವಾಮಿ ಹೊಂಡದ ಮೇಲುಭಾಗದ ಬಂಡೆಯೊಂದರ ಮೇಲಿನ ಶಾಸನವು ಮಹಾಪ್ರಧಾನ ಪೆರುಮಾಳೆದೇವ ದಣ್ಣಾಯಕರು ಪೆರುಮಾಳೆಪುರವಾಗಿ ಮಾಡಿದ ಬ್ರಹ್ಮಪುರಿಗೆರಿ ಎಂದು ಅರಹುತ್ತದೆ.[೯೦] ಈ ಹಿಂದೆ ಚಿತ್ರದುರ್ಗದ ಅಭಿಧಾನಗಳಲ್ಲಿ ಪೆರುಮಾಳೆಪುರವೂ ಒಂದೆಂದು ಅಭಿಪ್ರಾಯ ಪಡಲಾಗಿತ್ತು.[೯೧] ಆದರೆ ಪೆರುಮಾಳೆಪುರವೆಂಬುದು ಚಿತ್ರದುರ್ಗದ ಹೆಸರಲ್ಲ ಬದಲಾಗಿ ಪೆರುಮಳೆ ದಣ್ಣಾಯಕನು ಬೆಮ್ಮತ್ತನೂರಿನಲ್ಲಿ ಬ್ರಾಹ್ಮಣರು ನೆಲೆಸಿದ್ದ ಭಾಗಕ್ಕೆ ಅಂದರೆ ಬ್ರಹ್ಮಪುರಿಗೆ ಮಾತ್ರ ಆ ಹೆಸರಿಟ್ಟನೆಂಬುದು ಬಿ. ರಾಜಶೇಖರಪ್ಪನವರ ಅಭಿಮತ.[೯೨] ಆದರೆ ಲಕ್ಷ್ಮಣ್‌ತೆಲಗಾವಿಯವರು ಬ್ರಹ್ಮಪುರಿಗೇರಿ ಬೇರೆಯಾಗಿದ್ದರೂ ಪೆರುಮಾಳೆಪುರದ ಬಗ್ಗೆ ಸಮರ್ಥಿಸಿಕೊಂಡಿದ್ದಾರೆ.[೯೩] ಈ ಅವಧಿಯಲ್ಲಿನ ಶಾಸನಗಳು ಚಿತ್ರದುರ್ಗವನ್ನು ಬೆಮ್ಮತ್ತನಕಲ್ಲುನಾಡು, ಬೆಮ್ಮತ್ತನಕಲ್ಲುಸೀಮೆ, ಬೆಮ್ಮತ್ತನೂರುಪಟ್ಟಣ ಎಂಬ ಹೆಸರಿನಿಂದ ಕರೆದಿವೆ.[೯೪] ಮುಮ್ಮಡಿ ನರಸಿಂಹನು ಸಾವನ್ನಪ್ಪಿದ ನಂತರ ಚಿತ್ರದುರ್ಗವು ಮುಮ್ಮಡಿ ವೀರ ಬಲ್ಲಾಳನ ಅಧಿಪತ್ಯಕ್ಕೆ ಒಳಗಾಯಿತು. ಕ್ರಿ.ಶ.೧೨೯೧ರಿಂದ ೧೩೪೨ರ ಅವಧಿಯಲ್ಲಿ ಆಳ್ವಿಕೆ ನಡೆಸಿದ ಹೊಯ್ಸಳರ ಕಡೆಯ ಶ್ರೇಷ್ಠ ಅರಸನೆಂಬ ಕೀರ್ತಿ ಇವನದಾಗಿದೆ. ಕುಗ್ಗಿಹೋಗಿದ್ದ ತನ್ನ ವಂಶದ ಘನತೆಯನ್ನು ಮರಳಿ ಪಡೆಯುವಲ್ಲಿ ಅವಿರತವಾಗಿ ಶ್ರಮಿಸಿದನು. ಕ್ರಿ.ಶ.೧೩೩೨ರ ಅವಧಿಯಲ್ಲಿ ಮುಮ್ಮಡಿ ಬಲ್ಲಾಳನ ಮಾಂಡಲಿಕರಾದ ಮಾರೇಯ ಸಾಹಿಣಿ ಮತ್ತು ಬೇಬೆಯ ದಣ್ಣಾಯಕ ಎಂಬುವರು ಜಂಟಿಯಾಗಿ ಚಿತ್ರದುರ್ಗವನ್ನಾಳುತ್ತಿದ್ದರು.[೯೫] ಇವರ ತರುವಾಯದ ಅವಧಿಯಲ್ಲಿ ಬಲ್ಲಪ್ಪ ದಣ್ಣಾಯಕ ಮತ್ತು ಸೀಗೇಯ ದಣ್ಣಾಯಕರು ಜಂಟಿಯಾಗಿ ಚಿತ್ರದುರ್ಗವನ್ನಾಳುತಿದ್ದು, ತಮ್ಮ ತಂದೆ ಬೇಬದಣ್ಣಾಯಕನ ಹೆಸರಿನಲ್ಲಿ ಬೇಬನಾಥ ಲಿಂಗವನ್ನು ಸ್ಥಾಪಿಸಿ ಬೆಣ್ಣೆದೊಣೆ ಗ್ರಾಮವನ್ನು ದತ್ತಿಯಾಗಿ ನೀಡಿದ್ದರು.[೯೬] ಇವರ ನಂತರದ ಅವಧಿಯಲ್ಲಿ ಹಿರಿಯ ಬಲ್ಲಪ್ಪ ದಣ್ಣಾಯಕನು ಬೆಮ್ಮತ್ತೂರನ್ನು ಆಳುತಿದ್ದು, ಗೋಪಾಲಸ್ವಾಮಿ ದೇವರಿಗೆ ದತ್ತಿ ನೀಡಿದ್ದನ್ನು ಚಿತ್ರದುರ್ಗ ಕ್ರಿ.ಶ.೧೩೩೮ರ ಶಾಸನವೊಂದು ಅರಹುತ್ತದೆ.[೯೭]

ಚಿತ್ರದುರ್ಗ ಜಿಲ್ಲೆಯಲ್ಲಿ ಗಂಗರು, ಸಿಂಧರು ಮತ್ತು ಚೋಳರು ಆಳ್ವಿಕೆ ನಡೆಸಿದ್ದರೆಂಬುದು ಶಾಸನಗಳಿಂದ ದೃಢಪಡುತ್ತದೆ. ಗಂಗರಿಗೆ ಮತ್ತು ಸಿಂಧರಿಗೆ ಸಂಬಂಧಿಸಿದ ಶಾಸನಗಳು ಹೊಳಲ್ಕೆರೆಯಲ್ಲಿ ದೊರೆತರೆ ಚೋಳರಿಗೆ ಸಂಬಂಧಿಸಿದ ಶಾಸನಗಳು ಚಳ್ಳಕೆರೆ, ಹಿರಿಯೂರು ಮತ್ತು ಮೊಳಕಾಲ್ಮೂರುಗಳಲ್ಲಿ ಲಭ್ಯವಾಗಿವೆ. ಈ ಮಧ್ಯೆ ಕರ್ನಾಟಕದಲ್ಲಿ ದೇವಗಿರಿಯ ಸೇವುಣರು ಕೆಲಕಾಲ ಸ್ವತಂತ್ರರಾಗಿ ಆಳಿದರು. ನೊಳಂಬವಾಡಿ-೩೨೦೦೦ ಪ್ರಾಂತ್ಯ ಕೆಲಕಾಲ ದೇವಗಿರಿಯ ಸೇವೂಣರ ವಾಶವಾಗಿದ್ದು ಚಿತ್ರದುರ್ಗ, ಜಗಲೂರು, ಹೊಳಲ್ಕೆರೆ, ದಾವಣಗೆರೆ ಪ್ರದೇಶಗಳಲ್ಲಿ ಇವರ ಶಾಸನಗಳು ಲಭ್ಯವಾಗಿವೆ.[೯೮] ಇವುಗಳ ಅವಲೋಕನದಿಂದ ಚಿತ್ರದುರ್ಗ ಪರಿಸರವು ಅಲ್ಪಕಾಲ ಇವರ ಆಳ್ವಿಕೆಗೆ ಒಳಪಟ್ಟಂತೆ ತೋರುತ್ತದೆ. ಇಂತಹ ಪರಿಸ್ಥಿತಿಗಳ ಮಧ್ಯೆ ಅಲ್ಲಾವುದ್ದೀನ್‌ಖಿಲ್ಜಿಯ ದಂಡನಾಯಕ ಮಲ್ಲಿಕಾಫರ್‌ನ ದಾಳಿಯಿಂದ ಹೊಯ್ಸಳ ಸಾಮ್ರಾಜ್ಯ ಅವನತಿಯ ಹಾದಿ ಹಿಡಿಯಿತು. ಇದೇ ವ್ಯಸನದಲ್ಲಿ ಕ್ರಿ.ಶ.೧೩೪೩ರಲ್ಲಿ ಮುಮ್ಮಡಿ ವೀರಬಲ್ಲಾಳ ಸಾವನ್ನಪ್ಪಿದ. ತರುವಾಯ ಹೊಯ್ಸಳ ಸಾಮ್ರಾಜ್ಯದ ಅಧಿಕಾರ ಪ್ರರಿಗ್ರಹಿಸಿದ ನಾಲ್ಕನೇ ಬಲ್ಲಾಳನು ಸಂಪೂರ್ಣ ಅಶಕ್ತನಾಗಿದ್ದು, ಹೊಯ್ಸಳ ಸಾಮ್ರಾಜ್ಯ ಪತನವಾಯಿತು.

೨.೩.೯ ವಿಜಯನಗರ ಸಾಮ್ರಾಜ್ಯ

ಕ್ರಿ.ಶ.೧೩೩೬ರಲ್ಲಿ ವಿಜಯನಗರ ಸ್ಥಾಪನೆಯಾದದ್ದು ದಕ್ಷಿಣ ಭಾರತದ ಇತಿಹಾಸದಲ್ಲಿ ಅವಿಸ್ಮರಣೀಯ ಘಟನೆ. ಉತ್ತರ ಭಾರತದ ಮುಸ್ಲಿಮರ ಕೃತ್ರಿಮದಿಂದ ಜರ್ಝರಿತವಾಗಿದ್ದ ಹಿಂದೂ

ಧರ್ಮ ಮತ್ತು ಸಂಸ್ಕೃತಿಯ ರಕ್ಷಣೆಗೆ ಹಾಗೂ ಪುನಶ್ಚೇತನಕ್ಕಾಗಿ ಅವಿರತವಾಗಿ ಶ್ರಮಿಸಿದ ಕಟ್ಟ ಕಡೆಯ ಸಾಮ್ರಾಜ್ಯವೂ ಇದೇ ಆಗಿದೆ. ಈ ಸಾಮ್ರಾಜ್ಯದ ಅರಸರು ಕ್ರಿ.ಶ.೧೪ನೇ ಶತಮಾನದ ಪೂರ್ವಾರ್ಧದಿಂದ ಕ್ರಿ.ಶ.೧೬ನೇ ಶತಮಾನದ ಉತ್ತರಾರ್ಧದವರೆಗೆ ವೈಭವಯುತವಾಗಿ ಆಡಳಿತ ನಡೆಸಿ, ದಕ್ಷಿಣ ಭಾರತದ ಬಹುತೇಕ ಪ್ರದೇಶಗಳಿಗೆ ತಮ್ಮ ಸಾಮ್ರಾಜ್ಯ ವಿಸ್ತರಿಸಿರುವುದು ಸುವಿಧಿತ.

ಹೊಯ್ಸಳರ ಅವಧಿಯಿಂದಲೂ ಪ್ರಮುಖ ನೆಲೆವಿಡಾಗಿದ್ದ ಚಿತ್ರದುರ್ಗ ಅವರ ಪತನದ ತರುವಾಯ ವಿಜಯನಗರದ ಅರಸರ ಆಳ್ವಿಕೆಗೆ ಒಳಪಟ್ಟಿತ್ತು. ವಿಜಯನಗರ ಕಾಲದ ಕೆಲ ಶಾಸನಗಳು ಚಿತ್ರದುರ್ಗವನ್ನು ಬೆಮ್ಮತ್ತನಕಲ್ಲುನಾಡು, ಬೆಮ್ಮತ್ತರಕಲ್ಲುಸೀಮೆ ಎಂಬಿತ್ಯಾದಿ ಹೆಸರುಗಳಿಂದ ಸೂಚಿಸುತ್ತವೆ.[೯೯] ಪ್ರಾಕೃತಿಕವಾಗಿಯೇ ದುರ್ಗಮವಾಗಿ ಮೈದಳೆದಿರುವ ಚಿತ್ರದುರ್ಗ ಪರಿಸರವು ವಿಜಯನಗರದ ಅರಸರ ಸೈನಿಕ ನೆಲೆವಿಡಾಗಿಯೂ ಮುಂದುವರೆಯಿತು.

ವಿಜಯನಗರ ಸಾಮ್ರಾಜ್ಯದ ಮೊದಲ ದೊರೆ ಒಂದನೇ ಹರಿಹರನ ಅವಧಿಯಲ್ಲಿ ಚಿತ್ರದುರ್ಗವನ್ನಾಳುತ್ತಿದ್ದವರ ಬಗ್ಗೆ ಮಾಹಿತಿಯಿಲ್ಲ. ಬಹುಶಃ ಹೊಯ್ಸಳರ ಪತನದ ಕಾಲದಲ್ಲಿ ಚಿತ್ರದುರ್ಗದಲ್ಲಿ ಪ್ರಾಂತ್ಯಾಧಿಕಾರಿಯಾಗಿದ್ದ ಹಿರಿಯಬಲ್ಲಪ್ಪ ದಣ್ಣಾಯಕನೇ ಈ ಅವಧಿಯಲ್ಲಿಯೂ ಮುಂದುವರೆದಿರಬಹುದು. ಸುಮಾರು ಕ್ರಿ.ಶ.೧೩೪೫ರಿಂದ ೧೩೫೬ರ ವರೆಗೆ ಚಿತ್ರದುರ್ಗದ ಪ್ರಾಂತ್ಯಪಾಲಕನಾಗಿ ಮಲ್ಲಿನಾಥ ಒಡೆಯ ಆಳ್ವಿಕೆ ನಡೆಸಿದ್ದು, ಒಂದನೇ ಬುಕ್ಕರಾಯನ ಅಧೀನನಾಗಿದ್ದನು.[೧೦೦] ಮಲ್ಲಿನಾಥ ಒಡೆಯ ಸಾಯಿನಾಯಕ (ಸೋವಂಣ್ಣ ನಾಯಕ)ನ ಮಗ. ಇವನು ಬೆಟ್ಟದ ಮೇಲಿನ ಸಂಪಿಗೆ ಸಿದ್ದೇಶ್ವರ ದೇವರಿಗೆ ಕಲ್ಲುಪ್ಪರಿಗೆ ಉಯ್ಯಾಲೆಕಂಬ, ಶಿಖರ ಪ್ರತಿಷ್ಠೆ ಮಾಡಿಸಿ ಎರಡು ಗ್ರಾಮಗಳನ್ನು ದಾನ ನೀಡಿದನು.[೧೦೧] ಇವನ ತರುವಾಯ ೧೪ನೇ ಶತಮಾನದ ಅಂತ್ಯದ ವೇಳೆಗೆ ಮಾದರಸ ದಣ್ಣಾಯಕನು ಆಳುತಿದ್ದನೆಂದು ಇತ್ತೀಚೆಗೆ ಲಭ್ಯವಾದ ತೇದಿರಹಿತ ಶಾಸನವೊಂದರಿಂದ ತಿಳಿದು ಬಂದಿದೆ.[೧೦೨] ಇವನ ನಂತರ ಇಮ್ಮಡಿ ಹರಿಹರನ ಕುಮಾರ ಕಂಪಣಒಡೆಯ ಕೆಲಕಾಲ ಚಿತ್ರದುರ್ಗವನ್ನಾಳಿದನು. ಕ್ರಿ.ಶ.೧೪೧೧ರ ವೇಳೆಗೆ ಚಿತ್ರದುರ್ಗವನ್ನಾಳುತ್ತಿದ್ದವನು[೧೦೩] ಒಂದನೇ ದೇವರಾಯನ ಮಗನಾದ ವೀರಮಲ್ಲಣ್ಣ ಒಡೆಯ. ಇವನು ಹಿಡಿಂಬೇಶ್ವರ ದೇವಾಲಯದ ದಕ್ಷಿಣ ದ್ವಾರದ ಕಲ್ಲುಗೋಪುರ ಕಟ್ಟಿಸಿ, ಗ್ರಾಮವೊಂದನ್ನು ದತ್ತಿ ನೀಡಿದನು. ತದನಂತರ ಒಂದನೇ ದೇವರಾಯನ ಮತ್ತೊಬ್ಬ ಪುತ್ರ ವಿಜಯರಾಯನು ಕೆಲಕಾಲ ದುರ್ಗವನ್ನಾಳಿದ.[೧೦೫] ಕ್ರಿ.ಶ.೧೪೨೨ರ ತರುವಾಯ ಇವನು ಚಿತ್ರದುರ್ಗ ತೊರೆದು ವಿಜಯನಗರದ ದೊರೆಯಾಗಿ ಆಳ್ವಿಕೆ ನಡೆಸಿದ್ದು ಸುಸ್ಪಷ್ಟ. ವಿಜಯರಾಯನ ತರುವಾಯ ವಿರೂಪಣ್ಣ ಎಂಬುವನು ಚಿತ್ರದುರ್ಗವನ್ನು ಕೆಲಕಾಲ ಆಳಿದಂತೆ ತೋರುತ್ತದೆ.[೧೦೬] ಇವನ ತರುವಾಯವೂ ಚಿತ್ರದುರ್ಗ ವಿಜಯನಗರದ ಆಳ್ವಿಕೆಗೆ ಒಳಪಟ್ಟಿತ್ತಾದರೂ ಸರಿಸುಮಾರು ಒಂದು ಶತಮಾನಗಳಕಾಲ ಚಿತ್ರದುರ್ಗದ ಪ್ರಾಂತ್ಯಪಾಲಕರಾಗಿ ಯಾರು ಯಾರು ಆಳಿದರು ಎಂಬ ವಿವರಗಳು ಲಭ್ಯವಿಲ್ಲ. ಈ ವೇಳೆಗೆ ಚಿತ್ರದುರ್ಗವನ್ನು ರಾಜ್ಯ ಎಂಬುದರ ಬದಲಾಗಿ ವೇಂಠೆ, ನಾಡು, ಸೀಮೆ ಎಂದು ಕರೆಯುತಿದ್ದರು. ಅದರ ಮೇಲಿನ ಅಧಿಕಾರವನ್ನು 'ನಾಯಕತನ' ಎಂದು ಕರೆದರು. ಅವರು ದೊರೆಗೆ ಅಧೀನರಾಗಿರಬೇಕೆಂಬ ಬದ್ಧತೆಯ ನಿಯಮಕ್ಕೆ ಒಳಪಡಿಸಿ ಅಮರನಾಯಕರೆಂದು ಕರೆದು, ಅದಕ್ಕೆ ಪ್ರತಿಯಾಗಿ ಅಮರಮಾಗಣಿ ನೀಡುವ ಪದ್ಧತಿ ಪ್ರಚಲಿತಕ್ಕೆ ಬಂದಿತು. ಇದಕ್ಕೆ ಬದಲಾಗಿ ಅಮರನಾಯಕರು ಅರಸನಿಗೆ ಪ್ರಾಂತ್ಯದ ಕಂದಾಯ ಸಲ್ಲಿಕೆ ಮತ್ತು ಅಗತ್ಯಬಿದ್ದಾಗ ಸೈನ್ಯ ಒದಗಿಸಬೇಕಿತ್ತು.[೧೦೭] ಸುಮಾರು ಕ್ರಿ.ಶ.೧೫೩೦ ರಿಂದ ಕ್ರಿ.ಶ.೧೫೪೦ರ ಅವಧಿಯಲ್ಲಿ ದೊರೆ ಅಚ್ಯುತರಾಯನಿಂದ ವಿಠಲಪ್ಪನಾಯಕನು ಚಿತ್ರದುರ್ಗದ ವೇಂಠೆಯನ್ನು ಅಮರಮಾಗಣಿಯಾಗಿ ತನ್ನ ನಾಯಕತನಕ್ಕೆ ಪಡೆದಿದ್ದನು.[೧೦೮] ಇವನ ತರುವಾಯ ನರಸಪ್ಪನಾಯಕ ಎಂಬುವನೂ ನಂತರ ಅವನ ಮಗನೂ ಚಿತ್ರದುರ್ಗವನ್ನಾಳುತ್ತಿದ್ದರೆಂದು ಇತ್ತೀಚಿಗೆ ದೊರೆತ ಶಾಸನಗಳು ತಿಳಿಸುತ್ತವೆ.[೧೦೯]

ಚಿತ್ರದುರ್ಗದಲ್ಲಿ ಆಳ್ವಿಕೆ ನಡೆಸಿದ ಮತ್ತಿ ತಿಮ್ಮಣ್ಣನಾಯಕ ಓರ್ವ ಅಸಾಧಾರಣ ಅಮರನಾಯಕನಾಗಿದ್ದನು. ಇವನು ತನ್ನ ಶೌರ್ಯ ಮತ್ತು ಪರಾಕ್ರಮಗಳಿಂದ ಅರಸರ ಒಲವಿಗೆ ಪಾತ್ರನಾಗಿ ಕ್ರಿ.ಶ.೧೪೫೩ರಲ್ಲಿ ಅವರಿಂದ ಹೊಳಲ್ಕೆರೆಯನ್ನು ಅಮರಮಾಗಣಿಯಾಗಿ ಪಡೆದ. ಕ್ರಿ.ಶ.೧೪೯೫ರಲ್ಲಿ ಚಿತ್ರದುರ್ಗದ ನಾಯಕನಾಗಿಯೂ ಆಳ್ವಿಕೆ ನಡೆಸತೊಡಗಿದನು. ಕ್ರಿ.ಶ.೧೫೦೨ರಲ್ಲಿ ಸಾಮ್ರಾಜ್ಯ ಸೌಧದ ಆಧಾರ ಸ್ತಂಭಗಳಲ್ಲಿ ಒಬ್ಬನೆಂದು ಅವನನ್ನು ಗೌರವಿಸಲಾಯಿತು.[೧೧೦] ಆದರೆ ತರುವಾಯ ವಿಜಯನಗರದ ಅರಸರೊಡನೆ ಉಂಟಾದ ವೈಶಮ್ಯದಿಂದಾಗಿ ಅವನನ್ನು ಸೆರೆಯಲ್ಲಿಡಲಾಯಿತು. ಇವನು ಕಾರಾಗೃಹದಲ್ಲಿಯೇ ಕೊನೆಯುಸಿರೆಳೆದ ತರುವಾಯ ಚಿತ್ರದುರ್ಗದ ನಾಯಕನಾದವನು ಒಂದನೇ ಓಬಣ್ಣನಾಯಕ. ಕ್ರಿ.ಶ.೧೫೬೫ರ ತಾಳಿಕೋಟೆ ಕದನದ ತರುವಾಯ ವಿಜಯನಗರ ಸಾಮ್ರಾಜ್ಯ ಅವನತಿಯ ಸಾಗಿತು. ಇದರ ಸದುಪಯೋಗ ಪಡೆದುಕೊಂಡ ಓಬಣ್ಣನಾಯಕ ಸ್ವಾತಂತ್ರ್ಯ ಘೋಷಿಸಿಕೊಂಡನು.

೨.೩.೧೦ ಚಿತ್ರದುರ್ಗದ ಪಾಳೆಯಗಾರರು

ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲಿ ಅಸ್ತಿತ್ವಕಂಡ ಪಾಳೆಯಪಟ್ಟುಗಳಲ್ಲಿ ಚಿತ್ರದುರ್ಗವು ಅಗ್ರಮಾನ್ಯವಾದದ್ದು. ಇದು ಕ್ರಿ.ಶ.೧೫೬೭ ರಿಂದ ೧೭೭೯ರವರೆಗೆ ಸುಮಾರು ೨೦೨ ವರ್ಷಗಳಕಾಲ ಅಸ್ತಿತ್ವದಲ್ಲಿತ್ತು. ಮೂಲತಃ ಮ್ಯಾಸಬೇಡ ಜನಾಂಗದವರಾಗಿದ್ದ ಇವರು, ವಾಲ್ಮೀಕಿ ಗೋತ್ರದ ಕಾಮಗೇತಿ ವಂಶದವರಾಗಿದ್ದು, ಚಿತ್ರದುರ್ಗದ ಪಾಳೆಯಗಾರರು ಎಂದೇ ಪ್ರಸಿದ್ಧರಾಗಿದ್ದಾರೆ.

ಮತ್ತಿ ತಿಮ್ಮಣ್ಣನಾಯಕ ಚಿತ್ರದುರ್ಗ ಪಾಳೆಯಗಾರರ ವಂಶದ ಮೊದಲ ನಾಯಕ. ಇವನು ಪ್ರಸ್ತುತ ದಾವಣಗೆರೆ ಜಿಲ್ಲೆಯಲ್ಲಿರುವ ಸೇಗಲೆ (ಇಂದಿನ ಶ್ಯಾಗಲಿ) ಮತ್ತು ಮತ್ತಿ ಎಂಬಲ್ಲಿ ವಾಸವಾಗಿದ್ದನು. ಕ್ರಿ.ಶ.೧೪೯೫ರ ವೇಳೆಗೆ ತನ್ನ ಶೌರ್ಯ ಮತ್ತು ಪರಾಕ್ರಮಗಳಿಂದ ವಿಜಯನಗರದ ಅರಸರಿಗೆ ಕಲಬುರ್ಗಿ ಕೋಟೆಯನ್ನು ಜಯಿಸಿಕೊಟ್ಟು ಅವರ ಪ್ರೀತಿಗೆ ಪಾತ್ರನಾಗಿ ಹಲವು ಉಡುಗೊರೆಗಳೊಡನೆ 'ಹಗಲುಕಗ್ಗೊಲೆಮಾನ್ಯ' ಎಂಬ ಬಿರುದನ್ನು ಸ್ವೀಕರಿಸಿದನು.[೧೧೧] ತರುವಾಯ ವಿಜಯನಗರದ ಅರಸರೊಡನೆ ವೈಶಮ್ಯ ಉಂಟಾದಾಗ ಸೆರೆಯಾಳಾಗಿ ಅಲ್ಲಿಯೇ ಕೊನೆಯುಸಿರೆಳೆದ. ತರುವಾಯ ಚಿತ್ರದುರ್ಗದ ನಾಯಕನಾದವನು ಒಂದನೇ ಓಬಣ್ಣನಾಯಕ. ಇವನು ರಸಸಿದ್ಧರಿಂದ ಮೆದಕೇರಿ ಎಂಬ ಬಿರುದು ಪಡೆದು ಮದಕರಿನಾಯಕನೆಂದೂ, ಗಡ್ಡದ ಓಬಣ್ಣನಾಯಕನೆಂದೂ ಪ್ರಸಿದ್ಧಿ ಪಡೆದನು. ಇವನೇ ಒಂದನೇ ಮದಕರಿನಾಯಕನೆಂಬುದು ಬಿ.ರಾಜಶೇಖರಪ್ಪನವರ ಅಭಿಮತ. ಕ್ರಿ.ಶ.೧೫೬೫ರ ತಾಳಿಕೋಟೆ ಕದನದಲ್ಲಿ ವಿಜಯನಗರ ಸಾಮ್ರಾಜ್ಯ ಅವನತಿಯ ಹಾದಿ ಹಿಡಿದ ತರುವಾಯ ಕ್ರಿ.ಶ.೧೫೬೭ರಲ್ಲಿ ಓಬಣ್ಣನಾಯಕ ಸ್ವತಂತ್ರತೆಯನ್ನು ಘೋಷಿಸಿಕೊಂಡನು. ಒಂದನೇ ಓಬಣ್ಣನಾಯಕ ಮರಣಹೊಂದಿದ ಮೇಲೆ ಅವನ ಪುತ್ರ ಒಂದನೇ ಕಸ್ತೂರಿ ರಂಗಪ್ಪನಾಯಕ (ಕ್ರಿ.ಶ.೧೬೦೨-೧೬೫೨) ಚಿತ್ರದುರ್ಗದ ನಾಯಕ ಅರಸನಾದ. ಕ್ರಿ.ಶ.೧೬೩೨ರಲ್ಲಿ ತರೀಕೆರೆ ಪಾಳೆಯಗಾರರು ಚಿತ್ರದುರ್ಗ ಪ್ರಾಂತ್ಯದ ಗಡಿಭಾಗಗಳಿಗೆ ಧಾಳಿಯಿತ್ತಾಗ ನಡೆದ ಕದನದಲ್ಲಿ ಕಸ್ತೂರಿ ರಂಗಪ್ಪನಾಯಕ ವಿಜಯಿಯಾದನು. ಆನಂತರ ಕ್ರಿ.ಶ.೧೬೩೭ರಲ್ಲಿ ಹರಪನಹಳ್ಳಿಯವರು ಹಾಗೂ ಕ್ರಿ.ಶ.೧೬೩೮ರಲ್ಲಿ ಶಿರಾದವರೊಡನೆ ಜರುಗಿದ ಕದನಗಳಲ್ಲಿಯೂ ಜಯಶಾಲಿಯಾದನು. ಇವನು ಕಾಲದಲ್ಲಿ ಚಿತ್ರದುರ್ಗ ರಾಜ್ಯದ ಉತ್ಪನ್ನ ೬೫,೦೦೦ ದುರ್ಗಿ ಪಗೋಡಗಳಷ್ಟಿತ್ತು.[೧೧೨] ಇವನು ಸಾವನ್ನಪ್ಪಿದ ನಂತರ ಇಮ್ಮಡಿ ಮದಕರಿನಾಯಕ ಅಧಿಕಾರ ರೂಢನಾಗಿ ತರೀಕೆರೆಯ ಚಿಕ್ಕ ಹನುಮಪ್ಪನಾಯಕ ಮತ್ತು ಪಟ್ಟಾಭಿ ರಾಮನಾಯಕರ ಧಾಳಿಯಿಂದ ದೇವಪುರವನ್ನು ರಕ್ಷಿಸಿದನು. ತರುವಾಯ ಗುಡೇಕೋಟೆ, ನನ್ನಿವಾಳ, ಐಮಂಗಲ, ಹಿರಿಯೂರು ಕೋಟೆಗಳನ್ನು ವಶಪಡಿಸಿಕೊಂಡನು. ಇವನ ಕಾಲಕ್ಕೆ ರಾಜ್ಯದ ಉತ್ಪನ್ನ ಒಂದು ಲಕ್ಷ ದುರ್ಗಿ ಪಗೋಡಗಳಿಗೇರಿತು.[೧೧೩] ಇವನ ನಂತರ ಇಮ್ಮಡಿ ಓಬಣ್ಣನಾಯಕ ಚಿತ್ರದುರ್ಗದ ದೊರೆಯಾದನು. ಇವನ ಅವಧಿಯಲ್ಲಿ ದಳವಾಯಿಗಳ ಪ್ರಾಬಲ್ಯ ಹೆಚ್ಚಾಗಿದ್ದು, ಅವನು ಅವರಿಂದಲೇ ಹತನಾದನು. ತದನಂತರ ಇವನ ಮಗ ಚಿಕ್ಕಣ್ಣನಾಯಕನಿಗೆ

ಕ್ರಿ.ಶ.೧೬೭೧ರಲ್ಲಿ ಚಿತ್ರದುರ್ಗ ನಾಯಕ ಅರಸನ ಪಟ್ಟವಾಯಿತು. ಇವನು ನಿಡುಗಲ್ಲು ಚೋಳರಿಂದ ಸಾಣೆಕೆರೆಯನ್ನು, ಹರಪನಹಳ್ಳಿ ಪಾಳೆಯಗಾರರಿಂದ ಅಣಜಿಯನ್ನು ವಶಪಡಿಸಿಕೊಂಡನು. ತರುವಾಯ ಮೊಘಲರ ಸೇನಾನಿ ಷಂಷೇರ್‌ಖಾನ್‌ನ ಸೈನ್ಯ ಹರಿಹರದಲ್ಲಿ ಬೀಡುಬಿಟ್ಟಾಗ ತನ್ನ ರಣತಂತ್ರ ನೀತಿಯಿಂದ ಅದನ್ನು ಹಿಮ್ಮೆಟ್ಟಿಸುವಲ್ಲಿ ಸಫಲವಾದನು.[೧೧೪] ಬಿಜಾಪುರದ ಸೇನಾನಿ ರಣದುಲ್ಲಾಖಾನನನ್ನು ಪರಾಭವಗೊಳಿಸಿದನು. ಚಿತ್ರದುರ್ಗ ನಾಯಕ ಅರಸರು ಈ ಅವಧಿಯಲ್ಲಿ ವೀರಶೈವ ಧರ್ಮ ಸ್ವೀಕರಿಸಿದ ಅಲ್ಪಾವಧಿಯಲ್ಲಿ ಪುನಃ ವೈಷ್ಣವಧರ್ಮಕ್ಕೆ ಸೇರ್ಪಡೆಯಾದರು. ಕ್ರಿ.ಶ.೧೬೮೯ರಲ್ಲಿ ಚಿಕ್ಕಣ್ಣನಾಯಕ ಕೊನೆಯುಸಿರಳೆದ ನಂತರ ಲಿಂಗಣ್ಣನಾಯಕನು ಚಿತ್ರದುರ್ಗದ ನಾಯಕನಾದನು.

ಲಿಂಗಣ್ಣನಾಯಕ ಮುಮ್ಮಡಿ ಮದಕರಿನಾಯಕನೆಂದು ಪ್ರಸಿದ್ಧನಾಗಿರುವನು. ಈ ಅವಧಿಯಲ್ಲಿ ಪುನಃ ದಳವಾಯಿಗಳ ಪ್ರಾಬಲ್ಯದಿಂದ ಅಲ್ಪಕಾಲ ಅರಾಜಕತೆಯ ಪರಿಸ್ಥಿತಿ ಉಂಟಾಗಿತ್ತು. ಇವನು ಮೂರು ವರ್ಷ ರಾಜ್ಯಭಾರ ನಡೆಸಿ ದಳವಾಯಿ ಪಂಚಮರ ಮುದ್ದಣ್ಣನ ಸೆರೆಯಾಳಾದನು. ಆಗ ದಳವಾಯಿಯು ದೊಣ್ಣೆ ರಂಗಪ್ಪನಾಯಕನನ್ನು ಚಿತ್ರದುರ್ಗದ ನಾಯಕನ ಪಟ್ಟಕ್ಕೇರಿಸಿದನು. ವಾಸ್ತವವಾಗಿ ಅದು ಭರಮಣ್ಣನಾಯಕನಿಗೆ ಸಂದಬೇಕಾಗಿತ್ತು. ಈ ಸಂಧಿಗ್ಧ ಪರಿಸ್ಥಿತಿಯಲ್ಲಿ ಚಿತ್ರದುರ್ಗದ ನಿಷ್ಠಾವಂತ ಸೇವಕನಾದ ದಳವಾಯಿ ಭರಮಪ್ಪನಾಯಕನ ಸಹಾಯ ಪಡೆದು, ಭರಮಣ್ಣನಾಯಕನು ಶತ್ರುಗಳನ್ನು ಸಂಹರಿಸಿ ಕ್ರಿ.ಶ.೧೬೮೯ರಲ್ಲಿ ಚಿತ್ರದುರ್ಗದ ನಾಯಕನಾಗಿ ಅಧಿಕಾರರೂಢನಾದ. ಇವನು ಕ್ರಿ.ಶ.೧೬೮೯ ರಿಂದ ೧೭೨೧ರವರೆಗೆ ಆಳ್ವಿಕೆ ನಡೆಸಿದನು. ಕ್ರಿ.ಶ.೧೬೯೬ರಲ್ಲಿ ಮರಾಠರು ಮತ್ತು ಮೊಘಲ್ ಸುಬೇದಾರರಿಗೂ ದೊಡ್ಡೇರಿಯಲ್ಲಿ ನಡೆದ ಕದನದಲ್ಲಿ ಭರಮಣ್ಣನಾಯಕ ಅವನ ಪುತ್ರ ಹಿರೇ ಮದಕರಿನಾಯಕ ಮರಾಠರ ಪರವಾಗಿದ್ದು, ಮೊಘಲ್ ಸುಬೇದಾರರನ್ನು ಸೋಲಿಸಿದರು,[೧೧೫] ತರುವಾಯ ದೊಡ್ಡೇರಿಯು ಚಿತ್ರದುರ್ಗದಲ್ಲಿಯೇ ಉಳಿಯಿತು. ಚಿತ್ರದುರ್ಗವನ್ನು ವಶಪಡಿಸಿಕೊಳ್ಳಲು ಬಂದ ಬಿಜಾಪುರದ ಸೇನಾನಿ ದಿಲ್‌ವರ್‌ಖಾನ್ ಭರಮಣ್ಣನಾಯಕನಿಂದ ಪರಾಭವ ಹೊಂದಿದನು. ಇವುಗಳೊಡನೆ ಭರಮಣ್ಣನಾಯಕ ಅನೇಕ ಜನೋಪಯೋಗಿ ಕಾರ್ಯಗಳನ್ನು ಕೈಗೊಂಡನು. ಕ್ರಿ.ಶ.೧೭೨೧ರಲ್ಲಿ ಭರಮಣ್ಣನಾಯಕ ಸಾವನ್ನಪ್ಪಿದ. ತರುವಾಯ ಅವನ ಮಗ ಹಿರೇ ಮದಕರಿನಾಯಕ ಚಿತ್ರದುರ್ಗದ ನಾಯಕ ಅರಸನಾಗಿ ವೇಣುಕಲ್ಲುಗುಡ್ಡ, ಇಕ್ಕನೂರು, ಗುಡೇಕೋಟೆ, ಅಜ್ಜಂಪುರ, ಹರ್ತಿಕೋಟೆ ದುಮ್ಮಿಕೋಟೆಗಳನ್ನು ವಶಪಡಿಸಿಕೊಂಡನು. ಸವಣೂರು, ಆನೇಗೊಂದಿ, ರಾಯದುರ್ಗ, ಹರಪನಹಳ್ಳಿ ಪಾಳೆಯಗಾರರು ಕೆಳದಿ ದೊರೆ ಬಸಪ್ಪನಾಯಕನೊಡಗೂಡಿ ರಾಮಗಿರಿ ಕೋಟೆಯನ್ನು ಮುತ್ತಿದರು. ಹಿರೇ ಮದಕರಿನಾಯಕ ವೀರಾವೇಶದಿಂದ ಹೋರಾಡಿ ಅದನ್ನು ರಕ್ಷಿಸಿದನು.[೧೧೬] ಇವನ ಮರಣಿಸಿದ ನಂತರ ಇವನ ಹಿರಿಯ ಪುತ್ರ ಇಮ್ಮಡಿ ಕಸ್ತೂರಿ ರಂಗಪ್ಪನಾಯಕ ಕ್ರಿ.ಶ.೧೭೪೮ರಲ್ಲಿ ಚಿತ್ರದುರ್ಗದ ನಾಯಕನಾದನು. ಇವನು ಹರಪನಹಳ್ಳಿ ಪಾಳೆಯಗಾರರ ವಶವಾಗಿದ್ದ ಮಾಯಕೊಂಡದ ಕೋಟೆಯನ್ನು ಮರಾಠರ ಮುರಾರಿರಾಯನ ಸಹಾಯದಿಂದ ಪುನಃ ಸಂಸ್ಥಾನಕ್ಕೆ ಸೇರಿಸಿದನು. ಇವನು ಕ್ರಿ.ಶ.೧೭೫೪ರಲ್ಲಿ ಕೊನೆಯುಸಿರೆಳೆದ. ಆದರೆ ಈತನಿಗೆ ಪುತ್ರಸಂತಾನವಿಲ್ಲದ ಕಾರಣ ಜಾನಕಲ್ಲುದುರ್ಗದ ತೊದಲು ಭರಮಣ್ಣನಾಯಕನ ಮಗ ಮದಕರಿ ನಾಯಕನಿಗೆ ಚಿತ್ರದುರ್ಗದ ನಾಯಕತನವಾಯಿತು. ಇವನೇ ಮುಂದೆ 'ರಾಜಾ ವೀರಮದಕರಿನಾಯಕ'ನೆಂದು ಪ್ರಸಿದ್ಧನಾದನು. ಇವನು ೧೨ವರ್ಷದ ಅಪ್ರಾಪ್ತ ಬಾಲಕನಾಗಿದ್ದ ಕಾರಣ, ಎರಡು ವರ್ಷಗಳ ಕಾಲ ರಾಜಮಾತೆ ಓಬವ್ವನಾಗತಿಯು ಸರ್ವಾಧಿಕಾರ ನಡೆಸಿದಳು.[೧೧೭] ಈ ಪರಿಸ್ಥಿತಿಯಲ್ಲಿ ಹರಪನಹಳ್ಳಿ, ರಾಯದುರ್ಗ, ತರೀಕೆರೆ, ಜರಿಮಲೆ ಪಾಳೆಯಗಾರರು ಚಿತ್ರದುರ್ಗ ನಾಯಕರ ಸಂಸ್ಥಾನದ ಗಡಿಗಳಿಗೆ ಧಾಳಿ ಇಟ್ಟಾಗ ಅವರನ್ನು ಸೋಲಿಸಿ ಹಿಮ್ಮೆಟ್ಟಿಸಲಾಯಿತು. ಹೈದರನು ಕ್ರಿ.ಶ.೧೭೭೬ರಲ್ಲಿ ಚಿತ್ರದುರ್ಗದ ಮೇಲೆ ಮೊದಲನೆ ಬಾರಿಗೆ ಧಾಳಿ ಮಾಡಿದಾಗ ರಾಜಾ ವೀರಮದಕರಿನಾಯಕ ಮಧ್ಯೆ ಸಂಧಾನವೇರ್ಪಟ್ಟಿತು. ಅದರ ಪ್ರಕಾರ ೩ ಲಕ್ಷ ವರಹಗಳನ್ನು ಹೈದರನು ನಾಯಕನಿಂದ ಪಡೆದನು. ತರುವಾಯ

ಮದಕರಿನಾಯಕನು ಬಿದನೂರು, ಬಂಕಾಪುರ, ನಿಡುಗಲ್ಲು ಕೋಟೆಗಳನ್ನು ಹೈದರನಿಗೆ ಜಯಿಸಿಕೊಟ್ಟು ಅವನಿಗೆ ರಾಜತ್ವದ ಹಕ್ಕಿನ ಕಲ್ಪನೆ ಮೂಡಿಸಿದನು.[೧೧೮] ಆನಂತರ ಇವನ ಪರಾಕ್ರಮದಿಂದ ಅಸೂಯೆಪಟ್ಟ ಹೈದರ್ ಕ್ರಿ.ಶ.೧೭೭೪ರಲ್ಲಿ ಎರಡನೇಬಾರಿ, ಕ್ರಿ.ಶ.೧೭೭೭ರಲ್ಲಿ ಮೂರನೇಬಾರಿ ಚಿತ್ರದುರ್ಗದ ಮೇಲೆ ದಾಳಿ ನಡೆಸಿದ. ಅಂತಿಮವಾಗಿ ಕ್ರಿ.ಶ.೧೭೭೯ರಲ್ಲಿ ಚಿತ್ರದುರ್ಗದವರ ಸಹಾಯಪಡೆದು ಚಿತ್ರದುರ್ಗವನ್ನು ವಶಪಡಿಸಿಕೊಂಡನು.[೧೧೯] ಮದಕರಿನಾಯಕ ಮತ್ತು ಅವನ ಪರಿವಾರವನ್ನು ಸೆರೆಹಿಡಿದು ಸೆರೆಯಲ್ಲಿಟ್ಟನು. ಅಂತಿಮವಾಗಿ ಹೈದರನ ವಿಷಪ್ರಾಶನದಿಂದ ರಾಜಾ ವೀರಮದಕರಿನಾಯಕ ಮರಣಹೊಂದಿದನು. ಹೀಗೆ ಹಲವಾರು ಏಳುಬೀಳುಗಳೊಡನೆ ಚಿತ್ರದುರ್ಗವು ಹೈದರನ ಕೈವಶವಾಯಿತು.

೨.೩.೧೧ ಚಿತ್ರದುರ್ಗದಲ್ಲಿ ಹೈದರ್ ಮತ್ತು ಟಿಪ್ಪುಸುಲ್ತಾನರ ಆಳ್ವಿಕೆ

ಹೈದರ್ ಅಲಿಯು ಕ್ರಿ.ಶ.೧೭೭೯ರಲ್ಲಿ ಚಿತ್ರದುರ್ಗವನ್ನು ವಶಪಡಿಸಿಕೊಂಡ ತರುವಾಯ ಆಡಳಿತ ಸುಧಾರಣೆಗಾಗಿ ಅಧಿಕಾರಿಗಳನ್ನು ನೇಮಿಸಿದನು. ಸಿವಿಲ್ ಮತ್ತು ಮಿಲಿಟರಿ ಗೌರನರ್ ಆಗಿ ಷೇಕ್ ಅಯಾಸ್ ನೇಮಕವಾದರೆ ಮಲ್ಕಿಬಾಜಿ ಮತ್ತು ಕಳ್ಳ ನರಸಪ್ಪ ಎಂಬುವರು ಕೋಟೆ ರಕ್ಷಣೆಯ ಹೊಣೆ ಹೊತ್ತರು. ಮಹಮದೀಯ ನಾಯಕನೊಬ್ಬನಿಗೆ ನೀಡಿದ ವಚನದ ಅನುಸಾರ ಹೈದರನು ಚಿತ್ರದುರ್ಗದಲ್ಲಿ ಮಕಾನ್ ಒಂದನ್ನು ನಿರ್ಮಿಸಿ, ಅದಕ್ಕೆ ಸಜ್ಜನಕೆರೆ ಗ್ರಾಮವನ್ನು ಜಹಗೀರಾಗಿ ನೀಡಿದನು. ತರುವಾಯದ ದಿನಗಳಲ್ಲಿ ಚಿತ್ರದುರ್ಗವು ಮೈಸೂರು ಸಂಸ್ಥಾನದ ಒಂದು ಭಾಗವಾಯಿತು. ಹೈದರ್ ಸಾವನ್ನಪ್ಪಿದ ನಂತರ ಚಿತ್ರದುರ್ಗ ಪ್ರದೇಶವು ಟಿಪ್ಪುಸುಲ್ತಾನನ ಅಧೀನವಾಯಿತು. ಇವನು ಪೌಜ್‌ಕಛೇರಿ, ಅರಮನೆ, ಮಸೀದಿಗಳನ್ನು ನಿರ್ಮಿಸಿ ಚಿತ್ರದುರ್ಗಕ್ಕೆ ಫರ್ರಕಾಬಾದ್ ಎಂದು ಪುನರ್‌ನಾಮಕರಣ ಮಾಡಿದನು. ಟಿಪ್ಪುವಿನ ನಾಣ್ಯ ಠಂಕಿಸುವ ಕೇಂದ್ರಗಳಲ್ಲಿ ಒಂದಾದ ಚಿತ್ರದುರ್ಗದಿಂದ ಕ್ರಿ.ಶ.೧೭೮೭ ರಿಂದ ೧೭೯೧ರ ಅವಧಿಯಲ್ಲಿ ಒಟ್ಟು ೧೩ ಬಗೆಯ ನಾಣ್ಯಗಳು ಮುದ್ರಿಸಲ್ಪಟ್ಟವು.[೧೨೦] ಚಿತ್ರದುರ್ಗದಲ್ಲಿ ಟಿಪ್ಪುವಿನ ಎರಡು ಪರ್ಷಿಯನ್ ಭಾಷೆಯ ಶಾಸನಗಳು ದೊರೆತಿವೆ. ಆದರೆ ನಾಲ್ಕನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಟಿಪ್ಪುವಿನ ಮರಣದೊಂದಿಗೆ ಕರ್ನಾಟಕದಲ್ಲಿ ವಸಾಹತುಶಾಹಿ ಆಳ್ವಿಕೆ ಪ್ರಾರಂಭವಾಯಿತು. ಆಗ ಮೈಸೂರು ದೊರೆಗಳು ನಾಮಮಾತ್ರ ಅರಸರಾದರು.

೨.೩.೧೨ ಚಿತ್ರದುರ್ಗದಲ್ಲಿ ಮೈಸೂರು ಒಡೆಯರ ಆಳ್ವಿಕೆ

ಕ್ರಿ.ಶ. ೧೭೯೯ರಲ್ಲಿ ನಾಲ್ಕನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಟಿಪ್ಪು ಮೃತನಾದಾಗ ಚಿತ್ರದುರ್ಗವನ್ನು ಜೇಮ್ಸ್ ಹಾರ್ಲಿಪಲ್ ಎಂಬ ಬ್ರಿಟೀಷ್ ದಳಪತಿ ಆಕ್ರಮಿಸಿಕೊಂಡನು. ಈ ಅವಧಿಯಲ್ಲಿ ಮೈಸೂರು ಒಡೆಯರ ಆಳ್ವಿಕೆ ಪುನರ್ ಸ್ಥಾಪನೆಯಾದಾಗ ಮುಮ್ಮಡಿ ಕೃಷ್ಣರಾಜ ಒಡೆಯರು ಮೈಸೂರು ಸಂಸ್ಥಾನದ ಅರಸರಾದರು. ಒಡೆಯರ ನೇರ ಆಳ್ವಿಕೆಗೆ ಒಳಪಡಿಸಲು ಸಂಸ್ಥಾನವನ್ನು ಆರು ಪೌಜುಗಳನ್ನಾಗಿ ವಿಂಗಡಿಸಿದ್ದು, ಅದರಲ್ಲಿ ಚಿತ್ರದುರ್ಗವೂ ಒಂದಾಗಿತ್ತು. ಈ ಫೌಜುದಾರಿಯಲ್ಲಿ ಚಿತ್ರದುರ್ಗವನ್ನು ಒಳಗೊಂಡಂತೆ ಒಟ್ಟು ೧೩ ತಾಲೂಕುಗಳು ಅಸ್ತಿತ್ವದಲ್ಲಿದ್ದವು. ಕ್ರಿ.ಶ.೧೮೩೧ರಲ್ಲಿ ಆಡಳಿತಾತ್ಮಕ ಕಾರಣಗಳಿಂದಾಗಿ ಸಂಸ್ಥಾನವು ಬ್ರಿಟೀಷರ ವಶವಾಗಿದ್ದು, ೫೦ ವರ್ಷಗಳ ಕಾಲ ಕಮಿಷನರುಗಳ ಆಳ್ವಿಕೆಗೆ ಒಳಪಟ್ಟಿತು. ಮಾರ್ಕ್‌ಕಬ್ಬನ್ ಆಡಳಿತದ ಹಿತದೃಷ್ಟಿಯಿಂದ ಸಂಸ್ಥಾನವನ್ನು ನಾಲ್ಕು ಫೌಜುಗಳಾಗಿ ವಿಂಗಡಿಸಿದ್ದು, ಚಿತ್ರದುರ್ಗವೂ ಅವುಗಳಲ್ಲಿ ಒಂದಾಗಿತ್ತು. ಎಲ್.ಬಿ. ಬೌರಿಂಗ್ ಆಡಳಿತಾವಧಿಯಲ್ಲಿ ಚಿತ್ರದುರ್ಗ ವಿಭಾಗ ರದ್ದಾಗಿ, ಇದು ನಗರ ವಿಭಾಗದಲ್ಲಿ ಮಿಳಿತಗೊಂಡು ಜಿಲ್ಲಾಕೇಂದ್ರವಾಗಿ ಹೊರಹೊಮ್ಮಿತು. ಕ್ರಿ.ಶ.೧೮೮೧ರಲ್ಲಿ ಒಡೆಯರು ಪುನಃ ಸಂಸ್ಥಾನದ ಅಧಿಕಾರ ಪಡೆದರು. ಈ ಹಂತಗಳಲ್ಲಿ ಅನೇಕ ಜನೋಪಯೋಗಿ ಕಾರ್ಯಗಳು ಚಿತ್ರದುರ್ಗದಲ್ಲಿ ಅನುಷ್ಠಾನಗೊಂಡವು. ಅಂತಿಮವಾಗಿ ಚಿತ್ರದುರ್ಗವು ಕ್ರಿ.ಶ.೧೯೪೭ ಆಗಸ್ಟ್ ೧೫ರಂದು ಭಾರತ ಸ್ವಾತಂತ್ರ್ಯದೊಡನೆ ಬ್ರಿಟೀಷರ ವಸಾಹತುಶಾಹಿ ಆಳ್ವಿಕೆಯ ಶೃಂಖಲೆಯಿಂದ ಮುಕ್ತವಾಯಿತು. ಕ್ರಿ.ಶ.೧೯೫೬ ನವಂಬರ್ ೧ ರಂದು ಚಿತ್ರದುರ್ಗವು ಜಿಲ್ಲಾ ಕೇಂದ್ರವಾಗಿ ರೂಪುತಾಳಿತು.

೨.೩.೧೨ ಚಿತ್ರದುರ್ಗದಲ್ಲಿ ಸ್ವಾತಂತ್ರ್ಯ ಹೋರಾಟ

ಚಿತ್ರದುರ್ಗವು ಬ್ರಿಟೀಷರ ವಸಾಹತುಶಾಹಿ ಆಳ್ವಿಕೆಗೆ ಸೇರ್ಪಡೆಯಾದ ನಂತರ ಅವರ ನೀತಿಗಳಿಂದ ಚಿತ್ರದುರ್ಗದಲ್ಲಿ ಸ್ವಾತಂತ್ರ್ಯ ಹೋರಾಟದ ಅಲೆ ಎದ್ದಿತು. ಕ್ರಿ.ಶ.೧೮೭೬ ರಿಂದ ೧೮೭೮ರ ಅವಧಿಯಲ್ಲಿ ಭೀಕರ ಕ್ಷಾಮ ತಲೆದೋರಿದಾಗ ಬ್ರಿಟೀಷರು ಕೈಗೊಂಡ ಕಾರ್ಯಕ್ರಮಗಳು ಅತೃಪ್ತಿಕರವಾಗಿದ್ದು, ಅಲಕ್ಷ್ಯಕ್ಕೆ ಒಳಗಾಗಿದ್ದವು. ಇದರೊಡನೆ ಬ್ರಿಟೀಷರು ಜಿಲ್ಲೆಯಲ್ಲಿ ಕ್ಷಾಮವಿಲ್ಲವೆಂದು ವರದಿ ಸಲ್ಲಿಸಿ ಕಂದಾಯ ವಸೂಲಿಗೆ ಮುಂದಾದಾಗ, ಜನತೆ ಇದರ ವಿರುದ್ಧ ಪ್ರತಿಭಟನೆಯ ಹಾದಿಹಿಡಿದರು. ಈ ಮಧ್ಯೆ ೨೦ನೇ ಶತಮಾನದ ಪೂರ್ವಾರ್ಧದಲ್ಲಿ ದೇಶಾದ್ಯಂತ ಸ್ವಾತಂತ್ರ್ಯ ಹೋರಾಟ ನಡೆಯುತ್ತಿತ್ತು. ಚಿತ್ರದುರ್ಗದಲ್ಲಿ ಅಷ್ಟುಹೊತ್ತಿಗೆ ಮಹರಾಷ್ಟ್ರದ ಬಾಲಗಂಗಾಧರ ತಿಲಕರಿಂದ ಪ್ರಭಾವಿತರಾದ ವಕೀಲ ಹರಿಹರದ ಗುಂಡೂರಾವ್ ಅವರು 'ತಿಲಕ್‌ಸಂಘ' ಹುಟ್ಟುಹಾಕಿ, ಉಪನ್ಯಾಸಗಳನ್ನು ಏರ್ಪಡಿಸಿ, ಸ್ವದೇಶಿ ಚಳವಳಿಯನ್ನು ಪ್ರಾರಂಭಿಸಿದರಲ್ಲದೆ 'ಖಾದಿಮಹಿಮೆ' ಎಂಬ ಪುಸ್ತಕವನ್ನೂ ರಚಿಸಿ ಪ್ರಕಟಿಸಿದರು.[೨೧] ಈ ಅವಧಿಯಲ್ಲಿ ಮಹಾತ್ಮ ಗಾಂಧೀಜಿ ದಾವಣಗೆರೆಗೆ ಭೇಟಿ ನೀಡಿದ್ದು ಚಿತ್ರದುರ್ಗದ ಮೇಲು ಪ್ರಭಾವ ಉಂಟಾಯಿತು. ರಾಜ್ಯ ಮಟ್ಟದ ಅನೇಕ ನಾಯಕರು ಚಿತ್ರದುರ್ಗಕ್ಕೆ ಬಂದು ಜನತೆಯನ್ನು ಸ್ವಾತಂತ್ರ್ಯ ಚಳವಳಿಯಲ್ಲಿ ಧುಮುಕುವಂತೆ ಹುರಿದುಂಬಿಸುತ್ತಿದ್ದರು. ಈ ವೇಳೆಗಾಗಲೆ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷವು ನಿಜಲಿಂಗಪ್ಪನವರ ನಾಯಕತ್ವದಲ್ಲಿ ಒಂದು ಪ್ರಬಲ ಸಂಘಟನೆಯಾಗಿ ಬೆಳೆದಿತ್ತು.

ಕ್ರಿ.ಶ. ೧೯೩೯ರಲ್ಲಿ ಅರಣ್ಯ ಸತ್ಯಾಗ್ರಹವು ಜಿಲ್ಲೆಯಲ್ಲಿ ನಡೆದು ಎಸ್.ನಿಜಲಿಂಗಪ್ಪ ಸೇರಿದಂತೆ ಅನೇಕ ನಾಯಕರು ಬಂಧಿತರಾಗಿದ್ದರು.[೨೨] ತರುವಾಯ ಕ್ರಿ.ಶ. ೧೯೪೨ರಲ್ಲಿ ಕ್ವಿಟ್ ಇಂಡಿಯಾ ಚಳವಳಿ ಪ್ರಾರಂಭವಾಯಿತು. ಚಿತ್ರದುರ್ಗದಲ್ಲಿ ಕಾಂಗ್ರೆಸ್ ಕಛೇರಿಯ ಮೇಲೆ ಸರ್ಕಾರದ ನಿಷೇಧಾಜ್ಞೆಯನ್ನು ಧಿಕ್ಕರಿಸಿ ರಾಷ್ಟ್ರಧ್ವಜ ಹಾರಿಸುವ ಮೂಲಕ ಧ್ವಜ ಸತ್ಯಾಗ್ರಹವನ್ನು ಹುಲ್ಲೂರು ಶ್ರೀನಿವಾಸ ಜೋಯಿಸರು ನಡೆಸಿದರು. ಆ ಕಾರಣಕ್ಕೆ ಅವರನ್ನು ಬಂಧಿಸಿ ಒಂದೂವರೆ ವರ್ಷಗಳ ಕಾಲ ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿ ಇರಿಸಿದರು. ಮುಂದೆ ೧೯೪೭ ಆಗಸ್ಟ್ ೧೫ಕ್ಕೆ ದೇಶಕ್ಕೆ ಸ್ವಾತಂತ್ರ್ಯ ಲಭಿಸಿತು. ಆದರೆ ಮೈಸೂರಿನ ಅರಸರು ಪ್ರಜಾಪ್ರಭುತ್ವವನ್ನು ಅಂಗೀಕರಿಸದ ಕಾರಣ ಸಂಸ್ಥಾನದಲ್ಲಿ ಮೈಸೂರು ಚಲೋ ಚಳವಳಿ ಪ್ರಾರಂಭವಾಯಿತು. ಚಳವಳಿ ತೀವ್ರ ಸ್ವರೂಪ ಪಡೆಯುವ ಪೂರ್ವದಲ್ಲಿಯೇ ಚಿತ್ರದುರ್ಗದಲ್ಲಿ ಹುಲ್ಲೂರು ಶ್ರೀನಿವಾಸ ಜೋಯಿಸರನ್ನು ಬಂಧಿಸಲಾಯಿತು. ಈ ಮಧ್ಯೆ ಚಿತ್ರದುರ್ಗದ ದೊಡ್ಡ ಗರಡಿಯ ತರುಣ ಪೈಲ್ವಾನ್ ನಂಜಪ್ಪ ಮತ್ತು ಇತರರು ಚಿತ್ರದುರ್ಗದ ತಾಲೂಕು ಕಛೇರಿಯ ಮೇಲೆ ರಾಷ್ಟ್ರಧ್ವಜ ಹಾರಿಸಿದರು.[೨೩] ಇದಕ್ಕೆ ಪ್ರತಿಯಾಗಿ ಪೊಲೀಸರು ಗೋಲಿಬಾರ್ ಮಾಡಿದರು. ಆದರೆ ನಂಜಪ್ಪನವರು ಮಿಂಚಿನ ವೇಗದಲ್ಲಿ ಇದರಿಂದ ಪಾರಾಗಿ ತಪ್ಪಿಸಿಕೊಂಡು ಹೋದರು. ಇದಾದ ಕ್ಷಿಪ್ರ ಕಾಲದಲ್ಲಿಯೇ ಮೈಸೂರಿನ ಅರಸರು ಪ್ರಜಾಪ್ರಭುತ್ವವನ್ನು ಒಪ್ಪಿ ಭಾರತದ ಒಕ್ಕೂಟದಲ್ಲಿ ಸೇರ್ಪಡೆಯಾದರು. ಆ ಮೂಲಕ ಚಳವಳಿಯು ಪರ್ಯಾವಸಾನ ಕಂಡಿತು. ಸ್ವಾತಂತ್ರ್ಯೋತ್ತರ ಕರ್ನಾಟಕದಲ್ಲಿ ನಡೆದ ಕರ್ನಾಟಕ ಏಕೀಕರಣ ಚಳವಳಿಯು ಚಿತ್ರದುರ್ಗದಲ್ಲಿ ಹುಲ್ಲೂರು ಶ್ರೀನಿವಾಸ ಜೋಯಿಸರ ನೇತೃತ್ವದಲ್ಲಿ ನಡೆಯಿತು. ಅಂತಿಮವಾಗಿ ಕನ್ನಡ ನೆಲವೆಲ್ಲ ಒಂದುಗೂಡಿ ಕ್ರಿ.ಶ.೧೯೫೬ ನವೆಂಬರ್ ೧೪ ರಂದು ವಿಶಾಲ ಮೈಸೂರು ಜನ್ಮತಾಳಿತು.

ಟಿಪ್ಪಣಿಗಳು

೧. ಶ್ರೀನಿವಾಸ ಮೂರ್ತಿ ಹೆಚ್.ವಿ., ರಾಮಕೃಷ್ಣನ್ ಆರ್., ೧೯೭೮, ಎ ಹಿಸ್ಟರಿ ಆಫ್ ಕರ್ನಾಟಕ, ಪು. ೩

೨. ಚಿತ್ರದುರ್ಗ ಜಿಲ್ಲಾ ಅಂಕಿ ಅಂಶಗಳ ನೋಟ, ೨೦೦೪-೦೫, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ಚಿತ್ರದುರ್ಗ ಈ ಮಾಹಿತಿಯು ೨೦೦೧ರ ಜನಗಣತಿಯ ವರದಿಯನ್ನು ಆಧರಿಸಿದೆ. ಈ ಮಾಹಿತಿ ಒದಗಿಸಿದ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳಿಗೆ ಧನ್ಯವಾದಗಳು.

೩. ಶಿವರುದ್ರಪ್ಪ ಟಿ.ವಿ., ೧೯೮೭, ಚಿತ್ರದುರ್ಗ ಜಿಲ್ಲೆಯ ಭೂ ಇತಿಹಾಸ, 'ಹರತಿಸಿರಿ' ಪು. ೫೬೭

೪. ಶ್ರೀ ಸತ್ಯನ್, ೧೯೬೭, ಚಿತ್ರದುರ್ಗ ಡಿಸ್ಟ್ರಿಕ್ಟ್ ಗ್ಯಾಸೆಟಿಯರ್, ಪು. ೬

೫. ಆವರಣದಲ್ಲಿ ನಮೂದಿಸಿರುವ ಅಂಕಿಗಳು ಅವುಗಳ ಎತ್ತರವನ್ನು ಅಡಿಗಳಲ್ಲಿ ಸೂಚಿಸುತ್ತವೆ.

೬. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೨, ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು, ಪು. ೧೦

೭. ಚಂದ್ರವಳ್ಳಿ ಕೆರೆಯು ಚಿತ್ರದುರ್ಗ ಮಾತ್ರವಲ್ಲದೇ ಕರ್ನಾಟಕದ ಅತ್ಯಂತ ಪ್ರಾಚೀನ ಕೆರೆಗಳಲ್ಲಿ ಒಂದೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ಕೆರೆಯ ಏರಿ ಒಡೆದಾಗ ಮಯೂರವರ್ಮನು ಅದನ್ನು ಬಲಪಡಿಸಿದ ಬಗ್ಗೆ ಅವನ ಚಂದ್ರವಳ್ಳಿ ಶಾಸನವು ತಿಳಿಸುತ್ತದೆ. ನೋಡಿ: ರಾಜಶೇಖರಪ್ಪ ಬಿ. ೨೦೦೧ (ಎ), ದುರ್ಗಶೋಧನ, ಪು. ೧-೧೦

ಕ್ರಿ.ಶ.೧೯೨೯ರಲ್ಲಿ ಎಂ.ಎಚ್.ಕೃಷ್ಣರವರು ಕೈಗೊಂಡ ಚಂದ್ರವಳ್ಳಿ ಉತ್ಖನನದಲ್ಲಿ ಸುಮಾರು ೮೦೦ ಅಡಿಗಳಷ್ಟು ಉದ್ದವಾದ ಎರಡು ಪ್ರಾಚೀನ ನೀರಿನ ನಾಲೆಗಳು ಪತ್ತೆಯಾಗಿವೆ. ಇವುಗಳು ಬಹುಶಃ ಶಾತವಾಹನ ಅವಧಿಗೆ ಸೇರಿದ್ದು, ಕ್ರಿ.ಶ. ಸುಮಾರು ೧-೨ ನೇ ಶತಮಾನದ ರಚನೆಗಳಾಗಿವೆ (ಎಂ.ಎಚ್.ಕೃಷ್ಣ, ಎಕ್ಸ್‌ಕವೇಷನ್ ಅಟ್ ಚಂದ್ರವಳ್ಳಿ, ಪು.೨೨). ಇವುಗಳ ಸಾಂಸ್ಕೃತಿಕ ಮಹತ್ವ ಅರಿಯುವ ದೃಷ್ಟಿಯಿಂದ ವ್ಹೀಲರ್‌ರವರು ೧೯೪೭ರ ಚಂದ್ರವಳ್ಳಿ ಉತ್ಖನನದಲ್ಲಿ ಮೂರು ಪರೀಕ್ಷಾಗುಂಡಿಗಳನ್ನು ತೋಡಿದರು. ಇದರಲ್ಲಿ ಸಹ ಎರಡು ನೀರಿನ ನಾಲೆಗಳು ಕಂಡು ಬಂದವು (ಎ.ಇ.,ನಂ-೪, ಪು. ೩೨೪). ಈ ಮೇಲ್ಕಾಣಿಸಿದ ಅಂಶಗಳಿಂದ ಶಾತವಾಹನರ ಅವಧಿಯಲ್ಲಿಯೇ ಕೆರೆಯ ನೀರನ್ನು ವ್ಯವಸಾಯಕ್ಕೆ ಒಳಸಿರುವುದು ದೃಢಪಡುತ್ತದೆ.

೮. ಲಕ್ಷ್ಮಣ್ ತೆಲಗಾವಿ, ೨೦೦೪, ಮೌರ್ಯ ಮತ್ತು ಶಾತವಾಹನ ಯುಗ, ಪು. ೧೪೧-೧೪೪

೯. ಶ್ರೀನಿವಾಸ್ ಎಂ.ವಿ., ಲಕ್ಷ್ಮಣ್ ತೆಲಗಾವಿ, (ಸಂ), ೧೯೭೬, ಹು.ಶ್ರೀ.ಜೋ.ಐ.ಲೇ., ಪು. ೨೭

೧೦. (ಅ) ಸೋಮಶೇಖರ್ ಎಸ್.ವೈ., ೨೦೦೪, ಜಟಂಗಿ ರಾಮೇಶ್ವರ: ಸಾಂಸ್ಕೃತಿಕ ದರ್ಶನ, ಪು. ೪೫

(ಆ) ಎ.ಕ., ಸಂ-೧೧, ಜಗಲೂರು ೧೪

೧೧. ಲಕ್ಷ್ಮಣ್ ತೆಲಗಾವಿ, ೧೯೯೭, 'ಚಿತ್ರದುರ್ಗ ಪ್ರಾಚೀನನಾಮ: ಮರುಪರಿಶೀಲನೆ', ಇ.ದ., ಸಂ-೧೨, ಪು. ೨೦೨

೧೨. ಶಿವರುದ್ರಪ್ಪ ಟಿ.ವಿ., ಪೂರ್ವೋಕ್ತ, ಪು. ೫೭೪

೧೩. ಅದೇ, ಪು. ೫೭೫

೧೪. ಚಂದ್ರಶೇಖರ್ ಎಸ್., ೨೦೦೫, 'ಚಿತ್ರದುರ್ಗ ಜಿಲ್ಲೆಯ ಪ್ರಾಚೀನ ಖನಿಜೋದ್ಯಮ', ಚಿ.ಜಿ.ಇ.ಪು., ಪು. ೨೬೮

೧೫. ದೇವರಕೊಂಡಾರೆಡ್ಡಿ, ೨೦೦೫, 'ಚಿತ್ರದುರ್ಗ ಜಿಲ್ಲೆಯ ವಾಣಿಜ್ಯ ವ್ಯಾಪಾರ, ಮತ್ತು ಗಣಿಗಾರಿಕೆ', ಚಿ.ಜಿ.ಇ.ಪು., ಪು. ೨೫೯

೧೬. ಶೇಷಾದ್ರಿ ಎಂ., ೧೯೫೬, ಸ್ಟೋನ್ ಯೂಸಿಂಗ್ ಕಲ್ಚರ್ಸ್ ಆಫ್ ಪ್ರಿ ಅಂಡ್ ಪ್ರೊಟೊ ಹಿಸ್ಟಾರಿಕ್ ಮೈಸೂರು, ಪು. ೫೫

೧೭. ಅದೇ,

೧೮. ತಿಪ್ಪೇಸ್ವಾಮಿ ಹೆಚ್., 'ಸುಂಕಮಲೆ ಪರಿಸರದಲ್ಲಿ ಪ್ರಾಗೈತಿಹಾಸಿಕ ಶೋಧನೆ', ಇ.ದ., ಸಂ-೩, ಪು. ೬ - ೯

೧೯. ಎ.ಇ., ಪೂರ್ವೋಕ್ತ, ಪು. ೩೭೫

೨೦. ಜಯಣ್ಣ ಯು., ೨೦೦೪, ಮೊಳಕಾಲ್ಮೂರು ತಾಲೂಕಿನ ಪುರಾತತ್ವೀಯ ಪರಿಸರ (ಅಪ್ರಕಟಿತ ಪಿಎಚ್.ಡಿ. ಪ್ರಬಂಧ), ಪು. ೭೩

೨೧. ಶಿವತಾರಕ್ ಕೆ.ಬಿ., ೨೦೦೧, ಕರ್ನಾಟಕದ ಪುರಾತತ್ವ ನೆಲೆಗಳು, ಪು. ೨೬೯

೨೨. ಜಯಣ್ಣ, ಪೂರ್ವೋಕ್ತ, ಪು. ೭೩

೨೩. ಅದೇ,

೨೪. ವಾಸುದೇವನ್ ಸಿ.ಎಸ್., ೨೦೦೧, ಹಂಪಿ ಪರಿಸರದ ಕೆರೆಗಳು, ಪು. ೫

೨೫. ಸುಂದರ ಅ., ೧೯೭೮, 'ಚಿತ್ರದುರ್ಗ ಪರಿಸರ: ಇತ್ತೀಚಿನ ಪುರಾತತ್ವ ಶೋಧನೆಗಳು', ಮಾ.ಭಾ., ಸಂ-೨:೧, ಪು. ३೯

೨೬. ಚಿತ್ರದುರ್ಗದ ಪಶ್ಚಿಮಕ್ಕಿರುವ ಚಂದ್ರವಳ್ಳಿಯ ಉತ್ಖನನಗಳು ನವಶಿಲಾಯುಗ ಸಂಸ್ಕೃತಿಯ ನಿಟ್ಟಿನಲ್ಲಿ ಗಮನಾರ್ಹವಾದವುಗಳು. ಚಂದ್ರವಳ್ಳಿಯಲ್ಲಿ ಎಂ.ಎಚ್. ಕೃಷ್ಣರವರು ಕೈಗೊಂಡ ಅನ್ವೇಷಣೆಯಲ್ಲಿ ಉಜ್ಜಿದ ಹೊರಮೈಯ ಮೆರುಗಳ್ಳ ಕಲ್ಲಿನ ಕೊಡಲಿಗಳು ಮತ್ತು ಬೂದುವರ್ಣದ ಮೃತ್ಪಾತ್ರೆಗಳು, ಆಯುಧ ನಯಮಾಡುವುದಕ್ಕಾಗಿ ಅಲ್ಲಿನ ಬಂಡೆಗಲ್ಲಿನ ಮೇಲೆ ಉಜ್ಜಿದ್ದರಿಂದ ಉಂಟಾದ ಉದ್ದನೆಯ ಗುಂಡಿಗಳು ಕಂಡು ಬಂದವು. ಆದರೆ ಉತ್ಖನನದ ಯಾವುದೇ ಗುಂಡಿಯ ಸ್ತರ ವಿಂಗಡಣೆಯಲ್ಲಿ ನವಶಿಲಾಯುಗ ಸಂಸ್ಕೃತಿಯ ಕುರುಹುಗಳು ದೊರೆತಿರಲಿಲ್ಲ. ೧೯೪೭ರ ಮಾರ್ಟಿಮರ್ ವ್ಹೀಲರ್‌ರವರ ಉತ್ಖನನವೂ ಇದಕ್ಕೆ ಹೊರತಾಗಿರಲಿಲ್ಲ. ಆದರೆ ೧೯೭೭-೭೮ ರಲ್ಲಿ ಎಸ್.ವಿ.ರಾವ್‌ರವರ ನೇತೃತ್ವದಲ್ಲಿ ನಡೆದ ಉತ್ಖನನದಲ್ಲಿ ಸ್ತರವಿಂಗಡಣೆಯಲ್ಲಿ ಮೊದಲೆರಡು ಹಂತಗಳೊಡನೆ ನವಶಿಲಾಯುಗ ಸಂಸ್ಕೃತಿಯ ವೃತ್ತಾಕಾರದ ವಸತಿ ನಿವೇಶನದ ಅವಶೇಷಗಳನ್ನು ಶೋಧಿಸಲಾಯಿತು. ನೋಡಿ: ಇ.ಆ., ೧೯೭೭-೭೮, ಪು. ೨೭

೨೭. ದಿನಾಂಕ ೧೯-೦೫-೨೦೦೮ರ ಪ್ರಜಾವಾಣಿ ದಿನಪತ್ರಿಕೆ

೨೮. ದಿನಾಂಕ ೦೪-೦೬-೧೯೯೬ರ ಕನ್ನಡಪ್ರಭ ದಿನಪತ್ರಿಕೆ

೨೯. ದಿನಾಂಕ ೨೭-೦೭-೨೦೦೮ರ ಸಂಯುಕ್ತ ಕರ್ನಾಟಕ ದಿನಪತ್ರಿಕೆ

೩೦. ಶಿವತಾರಕ್ ಕೆ.ಬಿ., ೨೦೦೧, ಪೂರ್ವೋಕ್ತ, ಪು. ೨೬೧

೩೧. ಕೃಷ್ಣ ಎಂ.ಎಚ್., ೧೯೫೩, ಕರ್ನಾಟಕದ ಪೂರ್ವಚರಿತ್ರೆ, ಪು. ೨೮

೩೨. ಲಕ್ಷ್ಮಣ್ ತೆಲಗಾವಿ, ೨೦೦೫, 'ಚಿತ್ರದುರ್ಗ ಜಿಲ್ಲೆಯ ಪ್ರಾಕ್ಚಾರಿತ್ರಿಕ ಕಲೆ', ಚಿ.ಜಿ.ಇ.ಪು., ಪು. ೪೦

೩೩. ಸುಂದರ ಅ., ೧೯೭೮, ಪೂರ್ವೋಕ್ತ, ಪು. ३೫-३೯

೩೪. ತಿಪ್ಪೇಸ್ವಾಮಿ ಎಸ್., ೨೦೦೪, ರಕ್ಷಣಾವಾಸ್ತು ಶಿಲ್ಪ: ಚಿತ್ರದುರ್ಗ ಜಿಲ್ಲೆ (ಅಪ್ರಕಟಿತ ಪಿಎಚ್.ಡಿ. ಪ್ರಬಂಧ), ಪು. ೮೫

೩೫. ಇ.ಆ., ೧೯೭೭-೭೮, ಪು. ೨೭

೩೬. ಅದೇ,

೩೭. ಅದೇ, ೧೯೮೬-೮೭, ಪು. ೧೧೮

೩೮. ಸೋಮಶೇಖರ್ ಎಸ್.ವೈ., ೧೯೯೬, 'ಚಿಪ್ಪಿನಕೆರೆಯಲ್ಲಿ ಕಂಡುಬಂದಿರುವ ಪ್ರಾಕ್ಚಾರಿತ್ರಿಕ ಕುರುಹುಗಳು', ಇ.ದ., ಸಂ-೧೧, ಪು. ೩೨-೩೩

೩೯. ದಿನಾಂಕ ೦೫-೧೦-೨೦೦೧ರ ಸಂಯುಕ್ತ ಕರ್ನಾಟಕ ದಿನಪತ್ರಿಕೆ

೪೦. ದಿನಾಂಕ ೦೩-೦೮-೨೦೦೩ರ ಪ್ರಜಾವಾಣಿ ದಿನಪತ್ರಿಕೆ

೪೧. ಸೋಮಶೇಖರ್ ಎಸ್.ವೈ., ೧೯೯೬, ಪೂರ್ವೋಕ್ತ, ಪು. ೩೨-೩೩

೪೨. ದಿನಾಂಕ ೧೪-೧೨-೨೦೦೫ರ ವಿಜಯಕರ್ನಾಟಕ ದಿನಪತ್ರಿಕೆ

೪೩. ದಿನಾಂಕ ೩೧-೧೦-೨೦೦೬ರ ಕನ್ನಡಪ್ರಭ ದಿನಪತ್ರಿಕೆ

೪೪. ಎ.ಕ., ಸಂ-೮, ಶಿಕಾರಿಪುರ ೨೨೫

೪೫. ಮಜುಂದಾರ್, ರಾಯಚೌಧುರಿ, ಕಾಲೀಕಿಂಕರ ದತ್ತ, ೨೦೦೩, ಭಾರತದ ಪ್ರೌಢ ಇತಿಹಾಸ, ಪು. ೮೦

೪೬. ತಿಪ್ಪೇಸ್ವಾಮಿ. ಎಸ್., ಪೂರ್ವೋಕ್ತ, ಪು. ೨೭-೨೮

೪೭. ದಿವಾಕರ್ ಆರ್., ಕರ್ನಾಟಕ ಪರಂಪರೆ, ಸಂ-೧, ಪೂರ್ವೋಕ್ತ, ಪು. ೧೧೭-೧೧೯

೪೮. ಸುಂದರ ಅ. (ಸಂ), ೧೯೯೭, ಕ.ಚ. ಸಂ-೧, ಪು. ೨೮೫

೪೯. ಅದೇ, ಪು. ೨೮೭

೫೦. ಚಂದ್ರವಳ್ಳಿ ಉತ್ಖನನದ ೪೩ನೇ ಗುಂಡಿಯ ೭, ೮, ೯ ಮತ್ತು ೧೦ನೇ ಸ್ತರಗಳಲ್ಲಿ ಶಾತವಾಹನ ಅರಸರ ನಾಣ್ಯಗಳು ಲಭ್ಯವಾದರೆ, ಇದರ ಪೂರ್ವದ ೪, ೫ ಮತ್ತು ೬ನೇ ಪದರಗಳಲ್ಲಿ ಚುಟುಗಳು ಮತ್ತು ಮಹಾರಥಿಗಳ ನಾಣ್ಯಗಳು ದೊರೆತಿವೆ. ನೋಡಿ: ಸುಂದರ ಅ., ೧೯೭೩, ಬ್ರಹ್ಮಗಿರಿ ಮತ್ತು ಚಂದ್ರವಳ್ಳಿ, ಪು.೫೯

೫೧. ತಿಪ್ಪೇಸ್ವಾಮಿ ಎಸ್., ಪೂರ್ವೋಕ್ತ, ಪು. ೨೯

೫೨. ಸುಂದರ ಅ., ೧೯೭೩, ಪೂರ್ವೋಕ್ತ, ಪು. ೫೬-೬೧

೫೩. ಸೋಮಶೇಖರ್ ಎಸ್.ವೈ., ೧೯೯೬, ಪೂರ್ವೋಕ್ತ, ಪು. ೩೨-೩೩

೫೪. ಲಕ್ಷ್ಮಣ್ ತೆಲಗಾವಿ, ೨೦೦೨, 'ವೇದಾವತಿ ನದಿದಂಡೆ ಹಾಗೂ ಚಂದ್ರವಳ್ಳಿ ನಿವೇಶನಗಳಲ್ಲಿ ದೊರೆತ ಶಾತವಾಹನಕಾಲೀನ ಹೊಸ ನಾಣ್ಯಗಳು', ಇ.ದ., ಸಂ-೧೭, ಪು. ೪೪

೫೫. ಲಕ್ಷ್ಮಣ್ ತೆಲಗಾವಿ, ೨೦೦೪, ಪೂರ್ವೋಕ್ತ, ಪು. ೧೪೪

೫೬. ತಿಪ್ಪೇಸ್ವಾಮಿ ಎಸ್., ಪೂರ್ವೋಕ್ತ, ಪು. ೩೦

೫೭. ಈ ಶಾಸನವನ್ನು ಓದಿದ ಎಂ.ಎಚ್., ಕೃಷ್ಣರವರು ಇದು ಪ್ರಾಕೃತ ಭಾಷೆಯ ಶಾಸನವೆಂದು ತಿಳಿಸಿದರಲ್ಲದೆ ಅದು ಅವನ ರಾಜಕೀಯ ಸಾಧನೆಗಳನ್ನು ಅರಹುತ್ತದೆ ಎಂದೂ ಅಲ್ಲಿ ಒಂದು ವನವಾಸ ಸ್ಥಾಪಿಸಿದ್ದನೆಂದೂ ತಿಳಿಸಿದ್ದರು. ನೋಡಿ: ಎಂ.ಎ.ಆರ್., ೧೯೨೯, ಪು. ೫೦-೬೦

೫೮. ಬಿ.ರಾಜಶೇಖರಪ್ಪನವರು ಈ ಶಾಸನವನ್ನು ಪುನರ್ ಪರಿಶೀಲಿಸಿ ಇದರ ಭಾಷೆ ಸಂಸ್ಕೃತವೆಂದೂ, ಇದು ಮಯೂರವರ್ಮನು ಕೆರೆ ಏರಿಯೊಂದನ್ನು ಬಲಪಡಿಸಿ ವಾಸದ ನೆಲೆಯೊಂದರ ಸ್ಥಾಪನೆಗೈದನೆಂದೂ ಅರ್ಥೈಸಿದರು. ನೋಡಿ: ರಾಜಶೇಖರಪ್ಪ ಬಿ., ೨೦೦೧(ಎ), ದುರ್ಗಶೋಧನ, ಪು. ೧-೧೦

೫೯. ರಾಜಶೇಖರಪ್ಪ ಬಿ., ೨೦೦೧(ಬಿ), ಇತಿಹಾಸ ಕಥನ, ಪು. ೩೨-೩೪

೬೦. ಲಕ್ಷ್ಮಣ್ ತೆಲಗಾವಿ, ೨೦೦೪, ಪೂರ್ವೋಕ್ತ, ಪು. ೧೪೬

೬೧. ತಿಪ್ಪೇಸ್ವಾಮಿ ಎಸ್., ಪೂರ್ವೋಕ್ತ, ಪು. ೩೧

೬೨. ಕೃಷ್ಣಮೂರ್ತಿ ಪಿ.ವಿ., ೧೯೯೯, 'ಕದಂಬಳಿಗೆ ಸಾಸಿರ', ಪ್ರಾ.ಕ.ಆ.ವಿ., ಪು. ೨೬

೬೩. ಎ.ಕ., ಸಂ-೧೧, ಹೊಳಲ್ಕೆರೆ ೫೯

೬೪. ಅದೇ, ಚಿತ್ರದುರ್ಗ ೭೭

೬೫. ಅದೇ, ಹೊಳಲ್ಕೆರೆ ೩೦
೬೬. ಅದೇ, ಚಿತ್ರದುರ್ಗ ೫೦
೬೭. ಅದೇ, ಹೊಳಲ್ಕೆರೆ ೨೩
೬೮. ಸುರೇಂದ್ರರಾವ್ ಬಿ., (ಸಂ), ಕ.ಚ., ಸಂ–೨, ಪು. ೨೮೭
೬೯. ಎ.ಕ., ಪೂರ್ವೋಕ್ತ, ಚಿತ್ರದುರ್ಗ. ೮೨
೭೦. ಅದೇ, ೩೮
೭೧. ಅದೇ, ೧೩
೭೨. ಅದೇ, ೮೨
೭೩. ಬಸವಲಿಂಗಪ್ಪ ಸಿ.ಎಸ್., ೧೯೭೬, 'ಚಿತ್ರದುರ್ಗ ಜಿಲ್ಲೆಯಲ್ಲಿ ನೊಳಂಬರ ಆಳ್ವಿಕೆ', ಚಂದ್ರವಳ್ಳಿ, ಪು. ೩೪
೭೪. ಜಯಮ್ಮ ಕರಿಯಣ್ಣ, ೨೦೦೫, 'ಚಿತ್ರದುರ್ಗ ಜಿಲ್ಲೆ ಮತ್ತು ನೊಳಂಬ ಪಲ್ಲವರು', ಚಿ.ಜಿ.ಇ.ಪು., ಪು. ೭೧
೭೫. ತಿಪ್ಪೇಸ್ವಾಮಿ ಎಸ್., ಪೂರ್ವೋಕ್ತ, ಪು. ೩೪
೭೬. ಶ್ರೀನಿವಾಸ್ ಎಂ.ವಿ., ಲಕ್ಷ್ಮಣ್ ತೆಲಗಾವಿ (ಸಂ), ೧೯೭೬, ಪೂರ್ವೋಕ್ತ, ಪು. ೨೧೮–೨೪೧
೭೭. ತಿಪ್ಪೇಸ್ವಾಮಿ ಎಸ್., ಪೂರ್ವೋಕ್ತ, ಪು. ೩೪
೭೮. ಎ.ಕ., ಪೂರ್ವೋಕ್ತ, ಚಿತ್ರದುರ್ಗ, ಪು. ೮೨
೭೯. ತಿಪ್ಪೇಸ್ವಾಮಿ ಎಸ್., ಪೂರ್ವೋಕ್ತ, ಪು. ೩೪–೩೫
೮೦. ರಾಜಶೇಖರಪ್ಪ ಬಿ., ೨೦೦೧(ಎ), ಪೂರ್ವೋಕ್ತ, ಪು. ೧೧–೧೯
೮೧. ಲಕ್ಷ್ಮಣ್ ತೆಲಗಾವಿ, ೧೯೯೭, ಪೂರ್ವೋಕ್ತ, ಪು. ೧೩೫–೧೪೭
೮೨. ಕೃಷ್ಣಮೂರ್ತಿ ಪಿ.ವಿ., ೧೯೯೭, 'ಬೆಮ್ಮತ್ತನೂರುನಾಡು', ಪೂರ್ವೋಕ್ತ, ಪು. ೧೩೩
೮೩. ತಿಪ್ಪೇಸ್ವಾಮಿ ಎಸ್., ಪೂರ್ವೋಕ್ತ, ಪು. ೩೮
೮೪. ಸುರೇಂದ್ರರಾವ್ ಬಿ. (ಸಂ), ಪೂರ್ವೋಕ್ತ, ಪು. ೧೧೬
೮೫. ಎ.ಕ., ಅದೇ, ಹೊಳಲ್ಕೆರೆ ೨
೮೬. ಅದೇ, ೧೩೦
೮೭. ಅದೇ, ಜಗಲೂರು ೩೩
೮೮. ಅದೇ, ಚಿತ್ರದುರ್ಗ ೧೧
೮೯. ಪೆರುಮಾಳೆದೇವ ದಣ್ಣಾಯಕನಿಗೆ ಸಂಬಂಧಿಸಿದ ಮೂರು ಶಿಲಾಶಾಸನಗಳನ್ನು ಬಿ.ಎಲ್. ರೈಸ್ ೧೯೦೬ ರಲ್ಲಿ ಪ್ರಕಟಿಸಿದ್ದರು (ಎ.ಕ., ಸಂ–೧೧, ಚಿತ್ರದುರ್ಗ ೭, ೧೨, ೩೨). ತರುವಾಯ ಎಂ.ಎಚ್. ಕೃಷ್ಣ ಒಂದು ಶಿಲಾಶಾಸನವನ್ನು ಪ್ರಕಟಿಸಿದರು (ಎಂ.ಎ.ಆರ್. ೧೯೨೯). ಲಕ್ಷ್ಮಣ್ ತೆಲಗಾವಿಯವರೂ ಇವನ ಒಂದು ಶಾಸನವನ್ನು ಶೋಧಿಸಿ ಪ್ರಕಟಿಸಿರುವರು. ಇವನಿಗೆ ಸಂಬಂಧಿಸಿದ ಸುಮಾರು ೯ ಶಿಲಾಶಾಸನಗಳನ್ನು ಬಿ.ರಾಜಶೇಖರಪ್ಪನವರು ಪತ್ತೆಹಚ್ಚಿ ೨೦ನೇ ಶತಮಾನದ ಕೊನೆಯ ದಶಕಗಳಲ್ಲಿ ಪ್ರಕಟಿಸಿರುವರು (ದುರ್ಗಶೋಧನ ಪು.೩೫). ಅವರೇ ಅಭಿಪ್ರಾಯಿಸುವಂತೆ ಚಿತ್ರದುರ್ಗ ಪರಿಸರದಲ್ಲಿ ಪರುಮಾಳೆ ದಣ್ಣಾಯಕನ ಶಾಸನಗಳು ದೊರೆತಷ್ಟು ಸಂಖ್ಯೆಯಲ್ಲಿ ಬೇರೆ ಯಾವ ಪ್ರಾಂತ್ಯಪಾಲಕನ ಶಾಸನಗಳು ದೊರೆತಿಲ್ಲವೆಂಬುದು ನಿರ್ವಿವಾದ.
೯೦. ಎ.ಕ., ಪೂರ್ವೋಕ್ತ, ಚಿತ್ರದುರ್ಗ ೭
೯೧. ಶ್ರೀನಿವಾಸ್ ಎಂ.ವಿ., ಲಕ್ಷ್ಮಣ್ ತೆಲಗಾವಿ, (ಸಂ), ಪೂರ್ವೋಕ್ತ, ಪು. ೧೧

೯೨. ರಾಜಶೇಖರಪ್ಪ ಬಿ., ೧೯೭೯, 'ಚಿತ್ರದುರ್ಗದ ಪ್ರಮುಖ ಶಾಸನಗಳು', ಐತಿಹಾಸಿಕ ಚಿತ್ರದುರ್ಗ, ಪು. ೪೬-೪೭

೯೩. ಲಕ್ಷ್ಮಣ್ ತೆಲಗಾವಿ, ೧೯೯೦, 'ಚಿತ್ರದುರ್ಗ ಬೆಟ್ಟದ ಪೆರುಮಾಳೆಪುರ ಮರುಶೋಧನೆ', ಇ.ದ., ಸಂ-೫, ಪು. ೧೧೬-೧೩೨

೯೪. ತಿಪ್ಪೇಸ್ವಾಮಿ ಎಸ್., ಪೂರ್ವೋಕ್ತ, ಪು. ೪೦

೯೫. ರಾಜಶೇಖರಪ್ಪ ಬಿ., ೨೦೦೬, 'ಚಿತ್ರದುರ್ಗದ ಒಂದು ಅಪ್ರಕಟಿತ ತಾಮ್ರ ಶಾಸನ', ಇ.ದ., ಸಂ- ೨೧, ಪು. ೪೬-೫೪

೯೬. ಎ.ಕ., ಪೂರ್ವೋಕ್ತ, ಚಿತ್ರದುರ್ಗ ೪

೯೭. ಅದೇ, ೬

೯೮. ನಾಗರಾಜರಾವ್ ಎಂ. ಹೆಚ್., ೧೯೭೬, 'ಚಿತ್ರದುರ್ಗ ಜಿಲ್ಲೆಯಲ್ಲಿ ಸೇವುಣರ ಆಳ್ವಿಕೆ', ಚಂದ್ರವಳ್ಳಿ, ಪು. ೩೬

೯೯. ಕೃಷ್ಣಮೂರ್ತಿ ಪಿ.ವಿ., ೧೯೯೯, 'ಚಿತ್ರದುರ್ಗ ಜಿಲ್ಲೆಯ ವಿಜಯನಗರ ಕಾಲದ ಆಡಳಿತ ವಿಭಾಗಗಳು', ಪೂರ್ವೋಕ್ತ, ಪು. ೨೨೩

೧೦೦. ಎ.ಕ., ಪೂರ್ವೋಕ್ತ, ೨ ಮತ್ತು ೩

೧೦೧. ಅದೇ, ಪು. ೨೩೪

೧೦೨. ರಾಜಶೇಖರಪ್ಪ ಬಿ., ೨೦೦೩(ಎ), 'ವಿಜಯನಗರ ಕಾಲದ ಚಿತ್ರದುರ್ಗ: ರಾಜಕೀಯ ಅವಲೋಕನ', ವಿ.ಅ., ಸಂ-೮, ಪು. ೨೩೩

೧೦೩. ಅದೇ, ಪು. ೨೩೪

೧೦೪. ಎ.ಕ., ಪೂರ್ವೋಕ್ತ, ೧೪

೧೦೫. ರಾಜಶೇಖರಪ್ಪ ಬಿ., ೨೦೦೩(ಎ), ಪೂರ್ವೋಕ್ತ, ಪು. ೨೩೫

೧೦೬. ಅದೇ, ಪು. ೧೩೬

೧೦೭. ಶಿವಣ್ಣ ಕೆ.ಎಸ್., (ಸಂ), ೧೯೯೭, ಕ.ಚ., ಸಂ-೩, ಪು. ೬೨-೭೩

೧೦೮. ಎ.ಕ., ಪೂರ್ವೋಕ್ತ, ೪೫

೧೦೯. ರಾಜಶೇಖರಪ್ಪ ಬಿ., ೨೦೦೩(ಎ), ಪೂರ್ವೋಕ್ತ, ಪು. ೨೩೬

೧೧೦. ಶಿವಣ್ಣ ಕೆ.ಎಸ್., ಪೂರ್ವೋಕ್ತ, ಪು. ೬೫

೧೧೧. ಪುಟ್ಟಣ್ಣ ಎಂ.ಎಸ್., ೧೯೯೭, ಚಿತ್ರದುರ್ಗದ ಪಾಳೆಯಗಾರರು, ಪು. ೨೭

೧೧೨. ಲಕ್ಷ್ಮಣ್ ತೆಲಗಾವಿ, ೧೯೭೬, 'ಚಿತ್ರದುರ್ಗ ಜಿಲ್ಲೆಯಲ್ಲಿ ಪಾಳೆಯಗಾರರ ಆಳ್ವಿಕೆ', ಚಂದ್ರವಳ್ಳಿ, ಪು. ೮೦

೧೧೩. ಅದೇ,

೧೧೪. ಪುಟ್ಟಣ್ಣ ಎಂ.ಎಸ್., ಪೂರ್ವೋಕ್ತ, ಪು. ೪೦

೧೧೫. ಲಕ್ಷ್ಮಣ್ ತೆಲಗಾವಿ, ೨೦೦೬, 'ದೊಡ್ಡೇರಿ ಕದನ: ರೋಚಕ ಅಧ್ಯಾಯ', ಚ.ಅ., ಸಂ-೧:೧, ಪು. ೧೩೦-೧೪೮

೧೧೬. ತಿಪ್ಪೇಸ್ವಾಮಿ ಎಸ್., ಪೂರ್ವೋಕ್ತ, ಪು. ೬೪

೧೧೭. ರಾಜಶೇಖರಪ್ಪ ಬಿ., ೨೦೦೫, 'ಚಿತ್ರದುರ್ಗದ ಪಾಳೆಯಗಾರರು', ಚಿ.ಜಿ.ಇ.ಪು., ಪು. ೧೨೧

೧೧೮. ಕರ್ನಾಟಕ ಹಿಸ್ಟರಿ ಅಂಡ್ ಕಲ್ಚರ್, ಸಂ-೫, ಪು. ೭೩-೭೬

೧೧೯. ತಿಪ್ಪೇಸ್ವಾಮಿ ಎಸ್., ಪೂರ್ವೋಕ್ತ, ಪು. ೬೮

೧೨೦. ಕರ್ನಾಟಕ ಹಿಸ್ಟರಿ ಅಂಡ್ ಕಲ್ಚರ್, ಸಂ-೭, ಪು. ೧೬೮

೧೨೧. ರಾಜಶೇಖರಪ್ಪ ಬಿ., ೨೦೦೮, ಇತಿಹಾಸ ಸಂಶೋಧಕ ಹುಲ್ಲೂರು ಶ್ರೀನಿವಾಸ ಜೋಯಿಸರು, ಪು. ೫–೬

೧೨೨. ತಿಪ್ಪೇಸ್ವಾಮಿ ಎಸ್., ಪೂರ್ವೋಕ್ತ, ಪು. ೮೩

೧೨೩. ರಾಜಶೇಖರಪ್ಪ ಬಿ., ೨೦೦೮, ಪೂರ್ವೋಕ್ತ, ಪು. ೮

ಅಧ್ಯಾಯ – ೩

ದೇವಾಲಯ ವಾಸ್ತುಶಿಲ್ಪ

೩.೧ ದೇವಾಲಯ ಉಗಮ ಮತ್ತು ವಿಕಾಸ
೩.೨ ಶೈವ ದೇವಾಲಯಗಳು
೩.೩ ವೈಷ್ಣವ ದೇವಾಲಯಗಳು
೩.೪ ಶಾಕ್ತ ದೇವಾಲಯಗಳು

ದೇವಾಲಯ ವಾಸ್ತುಶಿಲ್ಪ

೩.೧ ದೇವಾಲಯ ಉಗಮ ಮತ್ತು ವಿಕಾಸ

ಗತಕಾಲದ ಸಾಂಸ್ಕೃತಿಕ ಚರಿತ್ರೆಯ ಹೆಗ್ಗುರುತುಗಳಾಗಿರುವ ದೇವಾಲಯಗಳು ಮಧ್ಯಕಾಲದ ವೇಳೆಗೆ ದೇವಾಲಯಗಳಿಲ್ಲದೆ ಬದುಕೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಬೆಳೆದವು. ಇಂತಹ ದೇವಾಲಯಗಳ ಬೆಳವಣಿಗೆಯ ವಿವಿಧ ಹಂತಗಳನ್ನು ಗುರುತಿಸುವುದು ಅಲ್ಪಮಟ್ಟಿಗೆ ಸಾಧ್ಯವಾದರೂ ಉಗಮದ ಬಗ್ಗೆ ನಿಖರವಾಗಿ ವಿವರಿಸಲು ಸಾಧ್ಯವಿಲ್ಲ. ಈ ವಿಷಯದಲ್ಲಿ ಎ.ಎಸ್. ಅಲ್ಟೇಕರ್‌ರವರು "ಮೂರ್ತಿಪೂಜೆಯ ಆರಂಭ ಮತ್ತು ಬೆಳವಣಿಗೆಯ ವಿಷಯವಾಗಿ ಇನ್ನೂ ಕೆಲಸ ನಡೆಯಬೇಕಾಗಿದೆ. ಮನೆಯಲ್ಲಾಗಲೀ, ದೇವಾಲಯದಲ್ಲಾಗಲೀ ದೇವತಾಮೂರ್ತಿಯನ್ನು ಪೂಜಿಸುವ ವಿಷಯವನ್ನು ಕುರಿತು ಧರ್ಮಸೂತ್ರಕಾರರು ಸಾಮಾನ್ಯವಾಗಿ ಹೇಳಿರುವುದಿಲ್ಲ. ದೇವಸ್ಥಾನಗಳನ್ನು ಸ್ಥಾಪಿಸುವ ಸಂಪ್ರದಾಯ ಅಶೋಕನಿಗಿಂತ ಈಚಿನದೆಂದು ಕಾಣುತ್ತದೆ. ಬಹುಜನ ನೆರೆಯುತ್ತಿದ್ದ ಶೌತ್ರಯಜ್ಞಗಳ ಸ್ಥಾನದಲ್ಲಿ ಇವು ಕಾಣಿಸಿಕೊಂಡವು. ಬೌದ್ಧರ ಭವ್ಯ ದೇವಾಲಯಗಳನ್ನೂ, ವಿಹಾರಗಳನ್ನೂ ನೋಡಿದ ಹಿಂದೂಗಳ ಮನಸ್ಸಿನಲ್ಲಿ ಅಂತಹ ಸಾರ್ವಜನಿಕ ಆರಾಧನಾ ಕೇಂದ್ರಗಳನ್ನು ಸ್ಥಾಪಿಸಬೇಕೆಂಬ ಇಚ್ಛೆ ಉದಯಿಸಿದ್ದರೂ ಇರಬಹುದು. ಅಂತೂ ನಿಜವಾದ ಕಾರಣಗಳೇನೇ ಇರಲಿ, ದೇವಾಲಯಗಳು ಸಾರ್ವಜನಿಕ ಪೂಜಾ ಕೇಂದ್ರಗಳೆಂದು ತರುವಾಯ ಪರಿಗಣಿತವಾದುವು" ಎಂದು ಅಭಿಪ್ರಾಯಪಟ್ಟಿದ್ದಾರೆ.[೧]

ಪ್ರಾಚೀನ ಕಾಲದಲ್ಲಿ ಅಲೆಮಾರಿಯಾಗಿದ್ದ ಮಾನವನು ಒಂದೆಡೆ ನೆಲೆನಿಂತದ್ದು ನಾಗರೀಕತೆಯ ಮೊದಲ ಹೆಜ್ಜೆ ತುಳಿದಂತಾಯಿತು. ತನ್ನ ಜೀವನದ ಪ್ರಾರಂಭದಲ್ಲಿ ಗುಹೆಗಳಲ್ಲಿ ಮರದ ಪೊಟರೆಗಳಲ್ಲಿ ವಾಸಿಸತೊಡಗಿದ. ಈ ಗುಹೆಗಳ ಬಂಡೆಗಲ್ಲಿನ ಮೇಲೆ ವರ್ಣಚಿತ್ರದಿಂದ ತಾನು ಬೇಟೆಯಾಡುವ ಪ್ರಾಣಿ ಸತ್ತಿರುವಂತೆಯೂ, ಅದಕ್ಕೆ ಬಾಣ ತಗುಲಿರುವಂತೆಯೂ ಚಿತ್ರಿಸಿ, ಸುತ್ತಲೂ ಒಂದು ಮಂಡಲವನ್ನು ಎಳೆದು ಅದಕ್ಕೆ ಪಾವಿತ್ರ್ಯತೆಯ ಸ್ಥಾನ ನೀಡಿದ. ಇವುಗಳ ಬದಿಯಲ್ಲಿ ಓಡಾಡುವುದು ನಿಷಿದ್ಧವೆಂದು ಭಾವಿಸಿ, ಅದಕ್ಕೆ ರಕ್ಷಣೆ ಒದಗಿಸಲು ಪ್ರಯತ್ನಿಸಿದುದೇ ದೇವಾಲಯಗಳ ರಚನೆಗೆ ಮೂಲವಾಯಿತೆನ್ನಲಡ್ಡಿಯಿಲ್ಲ.

ಮಾನವ ತನ್ನ ಜೀವನದಲ್ಲಿ ಪ್ರಕೃತಿಯೊಡನೆ ನಡೆಸಿದ ನಿರಂತರ ಸೆಣಸಾಟದಲ್ಲಿ ಅಗೋಚರ ಶಕ್ತಿಯೊಂದರ ಇರುವಿಕೆಯನ್ನು ಅರಿತು, ಅದನ್ನು ದೇವರೆಂದು ಭಾವಿಸಿದ. ನಂತರ ಅದಕ್ಕೆ ಮೂರ್ತಿರೂಪ ನೀಡಿದ. ಇದು ಪವಿತ್ರ ಮತ್ತು ಪೂಜಾರ್ಹ ಎಂಬ ಭಾವನೆ ಉದಯವಾದ ತರುವಾಯ ಅದರ ಸುತ್ತಲೂ ರಕ್ಷಣೆಗಾಗಿ ಕಟ್ಟಡ ನಿರ್ಮಿಸಿದ. ಅದೇ ದೇವಾಲಯವಾಸ್ತುವಿನ ಉಗಮಕ್ಕೆ ಕಾರಣವಾಯಿತೆನ್ನಬಹುದು. ಇವುಗಳೊಡನೆ ಬೃಹತ್ ಶಿಲಾಯುಗ ಕಾಲದ ಗೋರಿಗಳೇ ದೇವಾಲಯಗಳ ನಿರ್ಮಾಣಕ್ಕೆ ಮೂಲವೆಂಬ ಅಭಿಪ್ರಾಯಗಳೂ ಇವೆ. ಕಬ್ಬಿಣಯುಗದಲ್ಲಿ ಮಾನವನು ಮರಣದ ನಂತರ ಪುನರ್ಜನ್ಮ ಪಡೆದು ಬರುವನೆಂಬ ಕಲ್ಪನೆ ಅಗಾಧವಾಗಿತ್ತು. ಅದಕ್ಕಾಗಿ ಅವನನ್ನು ಸಂಸ್ಕಾರ ಮಾಡುವಾಗ ವಿವಿಧ ಬಗೆಯ ಸಾಮಗ್ರಿಗಳನ್ನಿಟ್ಟು ಹೂಳುತ್ತಿದ್ದರು. ಇದರ ಮೇಲೆ ಹಾದಿಕೋಣೆ, ಕಿಂಡಿಕೋಣೆಗಳಲ್ಲದೆ ಹಲವು ಬಗೆಯ ಕಲ್ಮನೆಗಳನ್ನು ನಿರ್ಮಿಸುತ್ತಿದ್ದರು. ಈ ನಿರ್ಮಿತಿಯೇ ನಂತರದ ದಿನಗಳಲ್ಲಿ ದೇವಾಲಯಗಳ ವಾಸ್ತುವಿಗೆ ಮೂಲವಾಯಿತೆಂಬ ಅಭಿಪ್ರಾಯಗಳೂ ಇವೆ.

ಈ ಮೇಲಿನ ಮಾತನ್ನು ಪುಷ್ಟೀಕರಿಸುವಂತೆ ಈಗ ಪ್ರಸಿದ್ಧವಾಗಿರುವ ಹಲವು ದೇವಾಲಯಗಳು ಹಿಂದೆ ಸಮಾಧಿಗಳಾಗಿದ್ದವೆಂದರೆ ಆಶ್ಚರ್ಯವೆನಿಸಬಹುದು. ಆದರೆ ಇದು ಸತ್ಯ. ತಮಿಳುನಾಡಿನ ಶ್ರೀಮಂತ ನಾಟುಕೋಟಿ ಚೆಟ್ಟಿಯಾರರು ತಮ್ಮ ಸೀಮೆಯ ಪಾಳುಬಿದ್ದ ನೂರಾರು ಗುಡಿಗಳನ್ನು ದುರಸ್ತಿ ಮಾಡತೊಡಗಿದಾಗ ಗರ್ಭಗುಡಿಗಳ ಅಡಿಯಲ್ಲಿ ಶವಕರಂಡಗಳೂ, ಮೂಳೆಯ ರಾಶಿಗಳೂ, ಚಿತೆಯ ಬೂದಿಯೂ ಕಂಡುಬಂದವು.[೨] ತಮಿಳಿನಲ್ಲಿ ಪಳ್ಳಿಪಡೈ ಎಂದರೆ ಗುಡಿ. ಆ ಮಾತಿಗೆ ಎಂದೂ ಏಳದ ನಿದ್ದೆಯಲ್ಲಿ ತೊಡಗಿದವ, ಅಂದರೆ ಸತ್ತವನನ್ನು ಹುಗಿದಿರುವ ಜಾಗ ಎಂದರ್ಥವಿದೆ. ಮಧ್ಯಯುಗದ ಹಲವು ಶಾಸನಗಳು ಶಿವಾಲಯಗಳನ್ನು ಹೀಗೆಯೇ ಬಣ್ಣಿಸಿವೆ.[೩] ಪಳ್ಳಿಪಡೈಗಳನ್ನು ಆಧರಿಸಿ ಎನ್.ವೆಂಕಟರಮಣಯ್ಯನವರು ಸಮಾಧಿಗಳೇ ದೇವಾಲಯಗಳ ವಾಸ್ತುವಿಗೆ ಮೂಲ ಪ್ರೇರಣೆ ಎಂಬ ತೀರ್ಮಾನಕ್ಕೆ ಬಂದಿದ್ದಾರೆ.[೪]

ಮಾನವನ ಮೊದಲ ವಸತಿ ತಾಣಗಳಾಗಿದ್ದ ಗುಹೆಗಳಲ್ಲಿ ಭಾರತದ ಮೊದಲ ದೇವಾಲಯಗಳ ರಚನೆಯನ್ನು ಕಾಣಬಹುದು. ಮಾನವ ತನಗಾಗಿ ನಿರ್ಮಿಸಿಕೊಂಡ ಮನೆ 'ಗೃಹ ವಾಸ್ತುಶಿಲ್ಪ' ಎನಿಸಿದರೆ, ತನ್ನ ದೇವರಿಗಾಗಿ ನಿರ್ಮಿಸಿದ್ದು 'ಧಾರ್ಮಿಕ ವಾಸ್ತುಶಿಲ್ಪ'ವೆಂದಾಯಿತು. ಮಯಮತ ಗ್ರಂಥವು ವಾಸ್ತು ಎಂಬುದನ್ನು ಹೀಗೆ ಹೇಳಿದೆ. "ಮರ್ತರು ಮತ್ತು ಅಮರ್ತ್ಯರು ವಾಸಿಸುವ ಸ್ಥಳಕ್ಕೆ ವಸ್ತು ಎಂದು ಹೆಸರು. ಈ ವಸ್ತುವನ್ನು ಆಧರಿಸಿದ್ದು ವಾಸ್ತುಶಿಲ್ಪ ಎಂದು ಗುರುತಿಸಲ್ಪಡುತ್ತದೆ."[೫] ಕಾಲಕಳೆದಂತೆಲ್ಲಾ ಮಾನವನ ಚಿಂತನೆಗಳು ಬದಲಾದಂತೆ ದೇವಾಲಯವನ್ನು ಮನುಷ್ಯನ ದೇಹದೊಡನೆ ಸಮೀಕರಿಸುವ ಭಾವನೆ ಬೆಳೆಯಿತು. ಕಟ್ಟಡದ ಹಲವಾರು ಭಾಗಗಳಿಗೆ ದೇಹದ ವಿವಿಧ ಅಂಗಗಳಾದ ಪಾದ, ಚರಣ, ಅಂಘ್ರಿ, ಜಂಘ, ಕಟಿ, ಕುಕ್ಷಿ, ಗ್ರೀವ, ಕಂಠ, ಶಿಖರ, ಶಿರ, ಮಸ್ತಕ, ಮುಖ, ವಕ್ತ್ರ, ನಾಸಿಕ ಇತ್ಯಾದಿ ಹೆಸರುಗಳನ್ನು ಕೊಡಲಾಗಿದೆ.[೬]

"ವಾಸ್ತುಶಿಲ್ಪವು ನಾಗರೀಕತೆಯನ್ನು ರೂಪಿಸುವ ಮಾತೃಕೆ".[೭] ಇದು ವಿವಿಧ ಕಾಲಘಟ್ಟದ ಜನರ ಆಂತರಿಕ ಆಕಾಂಕ್ಷೆಗೆ ಹಿಡಿದ ಕೈಗನ್ನಡಿ. ಸಿಂಧೂ ನಾಗರಿಕತೆಯ ನೆಲೆಗಳ ಉತ್ಖನನದಲ್ಲಿ ಯಾವುದೇ ಧಾರ್ಮಿಕ ಕಟ್ಟಡಗಳು ಲಭ್ಯವಿಲ್ಲವಾದರೂ, ಈ ವಿಷಯದಲ್ಲಿ ಅಲ್ಲಿನ ಮೂರ್ತಿಗಳು, ಮುದ್ರೆಗಳು, ಸುಡಾವೆ ಮಣ್ಮೂರ್ತಿಗಳನ್ನು ಅವಲಂಬಿಸಬೇಕಾಗಿದೆ. ಇವುಗಳೊಡನೆ ಸಾರ್ವಜನಿಕರ ಬಳಕೆಗಾಗಿ ನಿರ್ಮಿಸಿದ ಬೃಹತ್ ಗಾತ್ರದ ಸಭಾಗೃಹಗಳು, ಕಣಜಗಳು, ಸ್ನಾನಗೃಹಗಳು, ದೇವಾಲಯಗಳಾಗಿರಬಹುದಾದ ಕಟ್ಟಡಗಳಾಗಿವೆ.[೮] ಇದನ್ನು ಹೊರತುಪಡಿಸಿದರೆ ದೇವಾಲಯಗಳ ಹಿನ್ನೆಲೆಯಲ್ಲಿ ಸ್ಪಷ್ಟವಾಗಿ ಉಳಿದುಬಂದ ಪ್ರಾಚೀನ ಕಟ್ಟಡಗಳೆಂದರೆ ಸ್ತೂಪಗಳೇ ಆಗಿವೆ. ಇವುಗಳು ಭಾರತೀಯ ದೇವಾಲಯಗಳ ನಿರ್ಮಾಣಕ್ಕೆ ಮಾದರಿಯಾಗಿವೆ. ವಾಸ್ತುಶಿಲ್ಪದ ದೃಷ್ಟಿಯಿಂದ ಅಶೋಕನ ಕಾಲ ಬಹು ಮಹತ್ವ ಪಡೆದಿದೆ. ಇವನು ಬೌದ್ಧ ಆಜೀವಿಕ ಪಂಥದ ಲೋಮಶಋಷಿಗಾಗಿ ಗಯಾ ಸಮೀಪದ ಬರಾಬರ್ ಬೆಟ್ಟಗಳಲ್ಲಿ ಒಂದು ಗುಹೆಯನ್ನೇ ಕೊರೆಸಿದನು. ಬೃಹತ್ ಹುಟ್ಟು ಬಂಡೆಗಲ್ಲಿನಲ್ಲಿ ಕೊರೆಯಲಾದ ಈ ಗುಹೆ ಭಾರತದಲ್ಲಿಯೇ ಅತೀ ಪ್ರಾಚೀನವಾದ ಗುಹೆಯಾಗಿದೆ.[೯] ಈಗ ಕಂಡುಬಂದಿರುವ ರಚನಾತ್ಮಕ ದೇವಾಲಯಗಳಲ್ಲಿ ಸಾಂಚಿಯ ೧೭ನೇ ಸಂಖ್ಯೆಯ ದೇವಾಲಯವು ಪ್ರಾಚೀನವಾದದ್ದು ಎಂದು ಗುರುತಿಸಲಾಗಿದೆ.

ಕರ್ನಾಟಕದಲ್ಲಿ ದೇವಾಲಯಗಳ ಪ್ರಾಚೀನತೆಯತ್ತ ಗಮನಹರಿಸಿದರೆ ಕ್ರಿಸ್ತಶಕದ ಆರಂಭದ ದಶಕಗಳಲ್ಲೇ ದೇವಾಲಯಗಳಿದ್ದುದನ್ನು ಪ್ರಾಚ್ಯಾವಶೇಷಗಳು ಶೃತಪಡಿಸುತ್ತವೆ. ಬನವಾಸಿ, ಸನ್ನತಿ, ಬ್ರಹ್ಮಗಿರಿ, ರಾಜಘಟ್ಟ, ಬೌದ್ಧರ ಬಹುಮುಖ್ಯ ನೆಲೆಗಳಾಗಿದ್ದು, ಸ್ತೂಪ ಮತ್ತು ಇಟ್ಟಿಗೆ ನಿರ್ಮಿತ ಚೈತ್ಯಗಳ ಕುರುಹುಗಳು ಲಭ್ಯವಾಗಿವೆ. ಬನವಾಸಿಯಲ್ಲಿ ದೊರೆತ ಪ್ರಾಕೃತ ಭಾಷೆಯ ಎರಡು ಶಾಸನಗಳು ಮಿಣ್ಣುಕಡ ಚುಟುಕುಲಾನಂದ ಶಾತಕರ್ಣಿಯ ಮಗಳು ಶಿವಸ್ಕಂದ ನಾಗಶ್ರೀಯು ಮುಚಲಿಂದ ನಾಗಪ್ರತಿಮೆ, ತಟಾಕ ಹಾಗೂ ಒಂದು ವಿಹಾರ ನಿರ್ಮಿಸಿದ್ದನ್ನು ಪ್ರಸ್ತಾಪಿಸುತ್ತವೆ.[೧೦] ಕದಂಬರ ಕ್ರಿ.ಶ.೧೫೦ರ ಅವಧಿಯ ಪ್ರಾಕೃತ ಶಾಸನವೊಂದು 'ಮಂಡಪಟ್ಟಿದೇವರಿಗೆ' ದತ್ತಿಬಿಟ್ಟ ವಿಷಯವನ್ನು

ಅರಹುತ್ತದೆ.[೧೧] ಅಂಕೋಲದ ಬಳಿ ಬೊಳೆಯಲ್ಲಿ ದೊರೆತ ಲಿಂಗವೊಂದು ಮೂರು (ಬ್ರಹ್ಮ, ವಿಷ್ಣು, ಶಿವ) ಭಾಗಗಳನ್ನು ಒಳಗೊಂಡಿತ್ತು ಹಾಗೂ ಇದರಬಳಿ ಇಟ್ಟಿಗೆಯ ದೇಗುಲವಿದ್ದ ಕುರುಹುಗಳು ಪತ್ತೆಯಾಗಿವೆ.[೧೨] ತಾಳಗುಂದ ಶಾಸನವು ಸುಮಾರು ಕ್ರಿ.ಶ.೪೫೦ರ ಅವಧಿಯದಾಗಿದ್ದು, ಪ್ರಣವೇಶ್ವರ ದೇವಾಲಯ ಇದ್ದ ಬಗ್ಗೆ ಉಲ್ಲೇಖಿಸುತ್ತದೆ.[೧೩] ಪಟ್ಟದಕಲ್ಲಿನ ಸುತ್ತಮುತ್ತ ಇಟ್ಟಿಗೆ ನಿರ್ಮಿತ ದೇವಾಲಯಗಳ ಕುರುಹುಗಳನ್ನು ಅ. ಸುಂದರ ಅವರು ಭೂ ಶೋಧನೆಯಿಂದ ಪತ್ತೆಹಚ್ಚಿದ್ದಾರೆ.

ಕ್ರಿ.ಶ.೬ನೇ ಶತಮಾನದ ಅವಧಿಯಲ್ಲಿ ಬಾದಾಮಿ ಚಾಲುಕ್ಯರು ಕೆಂಪು ಮರಳು ಕಲ್ಲನ್ನು ಬಳಸಿ ದೇವಾಲಯಗಳನ್ನು ನಿರ್ಮಿಸತೊಡಗಿದರು. ಇವು ಬಾದಾಮಿ, ಐಹೊಳೆ, ಪಟ್ಟದಕಲ್ಲು, ಸಂಡೂರು, ಮುಂತಾದೆಡೆಗಳಲ್ಲಿ ನಿರ್ಮಿತವಾಗಿವೆ. ಇವರ ಪ್ರಮುಖ ವಾಸ್ತುಶಿಲ್ಪ ಕೇಂದ್ರವೆನಿಸಿರುವ ಐಹೊಳೆಯು 'ಭಾರತೀಯ ವಾಸ್ತುಶಿಲ್ಪದ ತೊಟ್ಟಿಲು', 'ದೇವಾಲಯಗಳ ನಗರ' ಎಂಬ ಕೀರ್ತಿಗೆ ಪಾತ್ರವಾಗಿದೆ.[೧೪] ಇಲ್ಲಿ ಕಂಡುಬಂದಿರುವ ದೇವಾಲಯಗಳ ವಾಸ್ತುಶೈಲಿಯ ವಿವಿಧ ಪ್ರಭೇದಗಳು ಭಾರತದ ಬೇರೆ ಯಾವ ಭಾಗಗಳಲ್ಲಿಯೂ ಕಾಣುವುದಿಲ್ಲ. ಚಾಲುಕ್ಯರ ವಾಸ್ತುಶಿಲ್ಪವು ಮೊದಲ ಹಂತದಲ್ಲಿ ಗುಹಾಲಯಗಳು ನಿರ್ಮಾಣವಾಗಿದ್ದು, ಇದು ಬಾದಾಮಿ, ಐಹೊಳೆಯಲ್ಲಿ ನೆರವೇರಿತು. ಎರಡನೇ ಹಂತ ನಿರ್ಮಿತವಾಸ್ತುಕಲೆಯಾಗಿದ್ದು, ಬಾದಾಮಿ, ಐಹೊಳೆ, ಪಟ್ಟದಕಲ್ಲುಗಳಲ್ಲದೆ ಇತರೆಡೆಗಳಲ್ಲಿಯೂ ಕಂಡುಬರುತ್ತದೆ. ಇವುಗಳಲ್ಲಿ ಕಂಡುಬಂದ ರಚನೆಗಳನ್ನು ವಿಶ್ಲೇಷಿಸಿ ದೇವಾಲಯವಾಸ್ತು ಬೆಳೆದುಬಂದ ಹಾದಿಯನ್ನು ಗುರುತಿಸುವ ಹಲವು ಪ್ರಯತ್ನಗಳು ಈಗಾಗಲೇ ನಡೆದಿವೆ.

ಕರ್ನಾಟಕದ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಒಂದು ಹೊಸ ಆಯಾಮ ದೊರೆತದ್ದು ಬಾದಾಮಿ ಚಾಲುಕ್ಯರ ಅವಧಿಯಲ್ಲಿ. ಇವರ ತರುವಾಯ ರಾಷ್ಟ್ರಕೂಟರು ಕೆಲ ಮಾರ್ಪಾಡುಗಳೊಡನೆ ವಾಸ್ತುಶೈಲಿಯನ್ನು ಬೆಳಸಿದರಾದರೂ ಇದು ಅಜಂತಾ, ಎಲ್ಲೋರ, ಎಲಿಫೆಂಟಾದಂಥ ಕಲಾತ್ಮಕ ಕೇಂದ್ರಗಳಿಗೆ ಕೇಂದ್ರೀಕೃತವಾಯಿತು. ಕಲ್ಯಾಣದ ಚಾಲುಕ್ಯರ ಅವಧಿಯಲ್ಲಿ ಕ್ಲೋರೈಟಿಕ್ ಶಿಷ್ಟ್ ಶಿಲೆಯು ದೇವಾಲಯಗಳ ನಿರ್ಮಾಣದ ಮಾಧ್ಯಮವಾಯಿತು. ಈ ಅವಧಿಯಲ್ಲಿ ತಿರುಗಣೆ(ಲೇತ್) ಯಂತ್ರದಿಂದ ತಯಾರಿಸಿದ ಕಂಬಗಳು ವೃತ್ತಾಕಾರವಾಗಿಯೂ, ಹೊಳೆಯುವಂತೆಯೂ ಮಾಡುವ ತಂತ್ರವನ್ನು ಕಂಡುಹಿಡಿದರು. ಇದು ಹೊಯ್ಸಳರಿಗೆ ಮಾರ್ಗದರ್ಶಿಯಾಯಿತು. ಕುಪಟೂರು, ಬಳ್ಳಿಗಾವೆ, ಕುಕ್ಕನೂರು, ಲಕ್ಕುಂಡಿ, ಹಾವೇರಿ, ಲಕ್ಷ್ಮೀಶ್ವರ, ಕುರವತ್ತಿ, ಇಟಗಿ ಮುಂತಾದೆಡೆ ಇವರ ದೇವಾಲಯಗಳ ನಿರ್ಮಾಣ ಕಾರ್ಯ ನಡೆಯಿತು. ಹೊಯ್ಸಳರ ಅವಧಿಯಲ್ಲಿ ಮೆದುವಾದ ಬಳಪದ ಶಿಲೆಯಿಂದ ದೇವಾಲಯಗಳ ನಿರ್ಮಾಣ ಕಾರ್ಯಗಳು ಜರುಗಿದವು. ಇದು ವಾಸ್ತುಶೈಲಿಯ ಪಾರಕಾಷ್ಠೆಯ ಕಾಲವಾಗಿತ್ತು. ಇವರ ದೇವಾಲಯಗಳನ್ನು ಹಳೆಬೀಡು, ಬೇಲೂರು, ಅಮೃತಾಪುರ, ಸೋಮನಾಥಪುರಗಳಲ್ಲಿ ಕಾಣಬಹುದು.

ಕ್ರಿ.ಶ.೧೪ನೇ ಶತಮಾನದ ಪೂರ್ವಾರ್ಧದಲ್ಲಿ ಉದಯವಾದ ವಿಜಯನಗರ ಸಾಮ್ರಾಜ್ಯದ ಅರಸರು ಸ್ಥಳೀಯವಾಗಿ ಲಭ್ಯವಿರುವ ಕಣಶಿಲೆಯನ್ನು ದೇವಾಲಯಗಳ ನಿರ್ಮಾಣಕ್ಕೆ ಬಳಸಿದರು. 'ಸಾಮಾಜಿಕ ಹಾಗೂ ಧಾರ್ಮಿಕ ಉಪಯೋಗದ ಬೃಹತ್ ವಾಸ್ತು ನಿರ್ಮಿತಿಗೆ ಕಣಶಿಲೆಯನ್ನು ಬಳಸಲು ಆರಂಭಿಸಿದ್ದು ಇವರ ಇನ್ನೊಂದು ಬಹುಮುಖ್ಯ ಕೊಡುಗೆ' ಎಂಬ ಮಾಧವ ಎನ್. ಕಟ್ಟಿಯವರ ಮಾತು ಮನನೀಯವಾಗಿದೆ.

ಕಣ ಶಿಲೆಯಿಂದ ಹೊಸ ದೇವಾಲಯಗಳ ನಿರ್ಮಾಣ ಮಾಡುವುದರೊಡನೆ, ಅದನ್ನು ಹಳೇ ದೇಗುಲಗಳ ಜೀರ್ಣೋದ್ಧಾರ ಕಾರ್ಯದಲ್ಲಿ ಬಳಸತೊಡಗಿದರು. ಹಂಪಿ ಪರಿಸರದ ಸ್ಮಾರಕಗಳ ಬಾಹುಳ್ಯವೇ ಇದನ್ನು ನಿರ್ವಿವಾದವಾಗಿ ಶೃತಪಡಿಸುತ್ತದೆ. ಕ್ರಿ.ಶ.೧೪ನೇ ಶತಮಾನದಲ್ಲಿ ಪ್ರಾರಂಭವಾದ ವಿಜಯನಗರ ಶೈಲಿಯ ಅಂತ್ಯವನ್ನು ಗುರುತಿಸುವುದು ತುಸು ಕಷ್ಟದಾಯಕ. ಇವರ ತರುವಾಯ ಅಭ್ಯುದಯ ಕಂಡ ಚಿಕ್ಕ ಚಿಕ್ಕ ಪಾಳೆಯಪಟ್ಟುಗಳು ಅಲ್ಪ ಪ್ರಮಾಣದ ಬದಲಾವಣೆಗಳೊಡನೆ ಇದೇ ಶೈಲಿಯನ್ನು ಮುಂದುವರೆಸಿದ್ದುದು ಅವರ ದೇವಾಲಯಗಳ ಅಧ್ಯಯನದಿಂದ ವೇದ್ಯವಾಗುತ್ತದೆ.

ದೇವಾಲಯಗಳ ಉಗಮದ ಕುರಿತು ಅಧ್ಯಾಯದ ಆದಿಭಾಗದಲ್ಲಿ ವಿವರಿಸಲಾಗಿರುವ ವಿವಿಧ ಅಭಿಪ್ರಾಯಗಳು ಚಿತ್ರದುರ್ಗಕ್ಕೂ ಅನ್ವಯಿಸುತ್ತವೆ. ಕರ್ನಾಟಕದ ಬೌದ್ಧಧರ್ಮದ ಅತ್ಯಂತ ಪ್ರಾಚೀನ ಕುರುಹುಗಳು ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಜಟಂಗಿ ರಾಮೇಶ್ವರ ಮತ್ತು ಅಶೋಕ ಸಿದ್ಧಾಪುರ ಗ್ರಾಮಗಳಲ್ಲಿ ದೊರೆಯುತ್ತವೆಂದು ಚಿದಾನಂದಮೂರ್ತಿಯವರ ಅಭಿಪ್ರಾಯಪಡುತ್ತಾರೆ.[೧೫] ಬ್ರಹ್ಮಗಿರಿ ಬೆಟ್ಟದ ಬುಡದಲ್ಲಿ ಮೌರ್ಯರ ಅಂತ್ಯ ಮತ್ತು ಶಾತವಾಹನರ ಆದಿ ಕಾಲದಲ್ಲಿ ಇಟ್ಟಿಗೆಯಿಂದ ಕಟ್ಟಿದ ಚೈತ್ಯ ಕಟ್ಟಡದ ಅವಶೇಷಗಳು ದೊರೆತಿವೆ. ಬಹುಶಃ ಚಿತ್ರದುರ್ಗ ಜಿಲ್ಲೆಯ ದೇವಾಲಯದ ಅತ್ಯಂತ ಪ್ರಾಚೀನ ಕುರುಹು ಎಂದರೆ ಸದ್ಯಕ್ಕೆ ಇದೇ ಆಗಿದೆ. ಚಂದ್ರವಳ್ಳಿಯ ಮಯೂರಶರ್ಮನ ಶಾಸನವಿರುವ ಬಂಡೆಯಡಿಯಲ್ಲಿ ಶಿವಲಿಂಗವೊಂದು ದೊರೆತಿದ್ದು, ಅದು ಅಂಕೋಲಾದ ಬಳಿ ಬೋಳೆಯಲ್ಲಿ ದೊರೆತ ಕ್ರಿ.ಶ.೧-೨ನೇ ಶತಮಾನದ ಶಿವಲಿಂಗಕ್ಕೆ ಹೋಲುತ್ತದೆ ಎಂದು ಅ. ಸುಂದರ ಅವರು ಅಭಿಪ್ರಾಯಪಟ್ಟಿದ್ದಾರೆ.[೧೬] ಮಯೂರಶರ್ಮ ಕೆರೆ ಜೀರ್ಣೋದ್ಧಾರಗೊಳಿಸಿದ ಕಾಲದಲ್ಲಿ ಅಲ್ಲಿ ಒಂದು ಸಣ್ಣ ಇಟ್ಟಿಗೆಯ ಶಿವ ದೇವಾಲಯವನ್ನು ಕಟ್ಟಿಸಿದ್ದು, ಈ ಲಿಂಗ ಅದೇ ದೇಗುಲದ್ದಾಗಿರಬಹುದು. ಕಾಲಾಂತರದಲ್ಲಿ ನಿರ್ಜನ ವಸತಿಯಿಂದ ಅದು ಹಾಳಾಗಿ, ನಾಯಕ ಅರಸರ ಕಾಲದಲ್ಲಿ ಜೀರ್ಣೋದ್ಧಾರಗೊಂಡು ಅಲ್ಲಿ ಬೇರೆ ಮೂರ್ತಿ ಸ್ಥಾಪಿಸಿರಬಹುದು. ಚಿತ್ರದುರ್ಗ ತಾಲೂಕು ಇಸಾಮುದ್ರ ಗ್ರಾಮದ ರಾಷ್ಟ್ರಕೂಟರ ಅವಧಿಯ ಕ್ರಿ.ಶ.೯೩೯ರ ಶಾಸನವೊಂದು ಭೋಗೇಶ್ವರ ದೇವಾಲಯ ಜೀರ್ಣೋದ್ಧಾರಗೊಂಡದ್ದನ್ನು ಪ್ರಸ್ತಾಪಿಸುತ್ತದೆ.[೧೭] ಗರ್ಭಗೃಹ ಇಟ್ಟಿಗೆಯಿಂದ ನಿರ್ಮಾಣಗೊಂಡ ಈ ದೇವಾಲಯವನ್ನು ಗಮನಿಸಿದರೆ ಇದರ ಪ್ರಾಚೀನತೆಯನ್ನು ಬಹು ಹಿಂದಕ್ಕೆ ಕೊಂಡೊಯ್ಯಲು ಸಾಧ್ಯವಾಗುತ್ತದೆ.[೧೮] ಜಟಂಗಿ ರಾಮೇಶ್ವರ ಬೆಟ್ಟದಮೇಲಿನ ರಾಮೇಶ್ವರ ದೇವಾಲಯವೂ ಮೂಲತಃ ಇಟ್ಟಿಗೆಯ ನಿರ್ಮಾಣವಾಗಿದ್ದು, ಅದನ್ನು ತೆಗೆದು ಕಲ್ಲ ದೇಗುಲ ನಿರ್ಮಿಸಿದ ಸಂಗತಿಯನ್ನು ಅಲ್ಲಿನ ಕ್ರಿ.ಶ.೯೬೪ರ ಶಾಸನವೊಂದು ಅರಹುತ್ತದೆ.[೧೯] ಚಿತ್ರದುರ್ಗ ಪರಿಸರವನ್ನು ಒಳಗೊಂಡಂತೆ ಜಿಲ್ಲೆಯಾದ್ಯಾಂತ ಕಲ್ಯಾಣದ ಚಾಲುಕ್ಯರ ಶೈಲಿಯ ದೇವಾಲಯಗಳ ಹಲವು ಕುರುಹುಗಳು ಕಂಡುಬರುತ್ತವೆ. ಚಿತ್ರದುರ್ಗ ಪರಿಸದಲ್ಲಿ ಪಂಚಲಿಂಗೇಶ್ವರ ಗುಹಾಲಯ, ಧವಳಪ್ಪನಗುಡ್ಡ, ಫಲ್ಗುಣೇಶ್ವರ ದೇವಾಲಯಗಳಲ್ಲಿನ ಶಿವಲಿಂಗಗಳು ಕಲ್ಯಾಣದ ಚಾಲುಕ್ಯರ ಅವಧಿಯವಾಗಿದ್ದು, ಇದೊಂದು ಪ್ರಮುಖ ಕಾಳಾಮುಖ ಕೇಂದ್ರವಾಗಿದ್ದನ್ನು ಸಮರ್ಥಿಸುತ್ತವೆ. ಷ. ಷಟ್ಟರ್‌ರವರ "ವರದಾ ಮತ್ತು ವೇದಾವತಿ ನದಿಗಳ ನಡುವಿನ ಭಾಗ ಅಂದರೆ ಇಂದಿನ ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಗಳ ಪ್ರದೇಶಗಳನ್ನು ಗಮನಿಸಿದರೆ ನಮಗೆ ಚಾಲುಕ್ಯ ಮತ್ತು ಹೊಯ್ಸಳ ವಾಸ್ತುಶಿಲ್ಪಗಳು ಬೆಳೆದುಬಂದ ಹಂತವನ್ನು ಗುರುತಿಸಲು ಸುಳಿಹುಗಳು ದೊರೆಯುತ್ತವೆ".[೨೦] ಎಂಬ ಮಾತು ಜಿಲ್ಲೆಯ ವಾಸ್ತುಶಿಲ್ಪದ ಬೆಳವಣಿಗೆಯತ್ತ ಗಮನ ಸೆಳೆಯುತ್ತದೆ. ಹೊಯ್ಸಳರ ಅವಧಿಯಲ್ಲಿ ಚಿತ್ರದುರ್ಗದ ಫಲ್ಗುಣೇಶ್ವರ, ಸಂಪಿಗೆಸಿದ್ದೇಶ್ವರ, ಹಿಡಿಂಬೇಶ್ವರ ದೇವಾಲಯಗಳು ನಿರ್ಮಾಣವಾದವು. ಇವುಗಳಿಗೆ ಸ್ಥಳಿಯವಾಗಿ ದೊರೆಯುವ ಕಣಶಿಲೆಯನ್ನೇ ಮಾಧ್ಯಮವನ್ನಾಗಿ ಬಳಸಿದರು. ವಿಜಯನಗರದ ಅವಧಿಯಲ್ಲಿ ಜಿಲ್ಲೆಯಾದ್ಯಂತ ದ್ರಾವಿಡ ಶೈಲಿಯ ಹಲವು ದೇವಾಲಯಗಳು ನಿರ್ಮಾಣವಾಗಿವೆ. ಇವರ ಮಾಂಡಲಿಕರಾಗಿದ್ದ ಚಿತ್ರದುರ್ಗ ನಾಯಕ ಅರಸರು ವಿಜಯನಗರ ಶೈಲಿಯ ಬಹುಪಾಲನ್ನು ಅಳವಡಿಸಿಕೊಂಡರೂ ಅಲ್ಪ ಪ್ರಮಾಣದ ಬದಲಾವಣೆಗಳನ್ನು ಮಾಡಿದರಲ್ಲದೆ, ಹಿಂದೆ ನಿರ್ಮಿತವಾದ ಅನೇಕ ದೇವಾಲಯಗಳನ್ನು ಜೀರ್ಣೋದ್ಧಾರ ಗೊಳಿಸಿದರು.

೩.೨ ಶೈವ ದೇವಾಲಯಗಳು

ಶೈವಾರಾಧನೆ ಭಾರತದ ಪ್ರಾಚೀನ ಆರಾಧನೆಗಳಲ್ಲೊಂದಾಗಿದ್ದು ಸಿಂಧೂ ನಾಗರೀಕತೆ ಮತ್ತು ವೈದಿಕ ಯುಗಗಳಲ್ಲಿಯೇ ಈ ಕುರಿತು ಕುರುಹುಗಳು ಲಭ್ಯವಾಗಿವೆ. ತರುವಾಯದಲ್ಲಿ ಇದು ಹಲವು ಪಂಥಗಳಾಗಿ ಬೆಳದು ಭಾರತದಾದ್ಯಂತ ಹರಡಿತು. ಪ್ರಸ್ತುತ ಚಿತ್ರದುರ್ಗ ಪರಿಸದಲ್ಲಿ ಶೈವಧರ್ಮ ಪ್ರಬಲವಾಗಿದ್ದು, ಈ ಸಂಬಂಧಿತ ಸ್ಮಾರಕಗಳ ಬಾಹುಳ್ಯವೇ ಇದನ್ನು ಶೃತಪಡಿಸುತ್ತದೆ. ಇಲ್ಲಿ ಬೌದ್ಧ

ಧರ್ಮವು ನಶಿಸಿಹೋದ ಮೇಲೆ ಶೈವರ ಪ್ರಾಬಲ್ಯವು ಹೆಚ್ಚಾಗಿ ಅವೆಲ್ಲಾ ಶೈವ ದೇವಾಲಯಗಳಾಗಿ ಮಾರ್ಪಟ್ಟಂತೆ ತೋರುತ್ತದೆ[೨೧] ಎಂದು ಹುಲ್ಲೂರು ಶ್ರೀನಿವಾಸ ಜೋಯಿಸರು ಉಲ್ಲೇಖಿಸಿದ್ದಾರೆ. ಆದರೆ ಇವರ ಈ ಅಭಿಪ್ರಾಯ ಕೇವಲ ಊಹೆಯಾಗಿದ್ದು, ಇದನ್ನು ಸಮರ್ಥಿಸುವಲ್ಲಿ ಆಧಾರಗಳ ಅಭಾವವಿರುವುದು ಮಾತ್ರ ಸ್ಪಷ್ಟ. ಪ್ರಸ್ತುತ ಚಿತ್ರದುರ್ಗ ಪರಿಸರದ ಶೈವ ದೇವಾಲಯಗಳನ್ನು ಅಧ್ಯಯನದ ಅನುಕೂಲಕ್ಕಾಗಿ ಈ ಕೆಳಗಿನಂತೆ ವಿಂಗಡಿಸಬಹುದು.

೩.೨.೧ ಗುಹಾ ದೇವಾಲಯಗಳು

೩.೨.೨ ರಚನಾತ್ಮಕ ದೇವಾಲಯಗಳು.

೩.೨.೧ ಗುಹಾ ದೇವಾಲಯಗಳು

ಗುಹಾ ದೇವಾಲಯಗಳ ರಚನೆ ಚಿತ್ರದುರ್ಗದ ದೇವಾಲಯಗಳ ಒಂದು ಪ್ರಧಾನ ಲಕ್ಷಣವಾಗಿದೆ. ಚಿತ್ರದುರ್ಗ ಬೆಟ್ಟ ಪರಿಸರದಲ್ಲಿನ ಎಲ್ಲಾ ಶೈವ ಗುಹಾಲಯಗಳು ಪ್ರಾಚೀನವಾದವುಗಳಾಗಿವೆ. ಇವುಗಳ ಗರ್ಭಗೃಹಗಳು ಮಾತ್ರ ನಿಸರ್ಗ ನಿರ್ಮಿತ ಬಂಡೆಗಲ್ಲನ್ನು ಅವಲಂಬಿಸಿದ್ದು, ಕಾಲಾಂತರದಲ್ಲಿ ನವರಂಗ, ಸಭಾಮಂಟಪ, ಪ್ರಕಾರ ಮಂಟಪಗಳು ಸೇರ್ಪಡೆಗೊಂಡಿರುವುದು ಇವುಗಳ ವೈಶಿಷ್ಟ್ಯ.

೧) ಹಿಡಿಂಬೇಶ್ವರ ದೇವಾಲಯ

ಏಕನಾಥೇಶ್ವರಿ ದೇವಾಲಯದ ದಕ್ಷಿಣದಿಕ್ಕಿನ ಭೂತನಾಥ ಬಾಗಿಲ ಎಡಬದಿಯ ಕಡಿದಾದ ಬಂಡೆಗಲ್ಲಿನ ಮೇಲಿರುವ ಗುಹಾಲಯವಿದು. ಗರ್ಭಗೃಹ ಮಾತ್ರ ಗುಹಾಲಯವಾಗಿರುವ ಈ ದೇವಾಲಯಕ್ಕೆ ವಿವಿಧ ಕಾಲಘಟ್ಟಗಳಲ್ಲಿ ನವರಂಗ, ರಂಗಮಂಟಪ ಮತ್ತು ದ್ವಾರಗೋಪುರಗಳನ್ನು ನಿರ್ಮಿಸಿ ವಿಸ್ತರಿಸಲಾಗಿದೆ. ಶಾಸನಗಳು ಹಿಡಿಂಬೇಶ್ವರ ದೇವರನ್ನು ಯಿಡುಂಬನಾಥ,[೨೨] ಇಡುಬಯ್ಯದೇವರು,[೨೩] ಹಿಡಂಬೇಶ್ವರ,[೨೪] ಯಿಮಂಬನಾಥ,[೨೫] ಹಿಡಿಂಬನಾಥ,[೨೬] ಹಿಡಿಂಬನತ,[೨೭] ಹಿಡಿಂಬೇಶ್ವರ,[೨೮] ಎಂಬ ಹೆಸರುಗಳಿಂದ ಪ್ರಸ್ತಾಪಿಸಿವೆ. ಈ ಮೆಲಿನ ಹೆಸರುಗಳೊಡನೆ ದೇವಾಲಯದ ಸ್ಥಾನಿಕರುಗಳನ್ನು ಯಿಡುಬಜೀಯ ಎಂದು ಹೆಸರಿಸಿರುವುದನ್ನು ನೋಡಿದರೆ ಈ ದೇವರ ಹೆಸರು ಇಡುಬ ಅಥವಾ ಇಡುಬಯ್ಯ ಎಂದೇ ಮೂಲದಲ್ಲಿ ಇದ್ದಿರಬೇಕು. ದೇಸೀ ಮೂಲದ ಆ ಹೆಸರೇ ಇಡುಬನಾಥ> ಯಿಮಂಬನಾಥ> ಹಿಡುಂಬನಾಥ> ಹಿಡಿಂಬನಾಥ> ಹಿಡಿಂಬ> ಹಿಡಿಂಬೇಶ್ವರ ಮುಂತಾಗಿ ಸಂಸ್ಕೃತೀಕರಣದ ರೂಪಗಳನ್ನು ಪಡೆದಿರಬಹುದು.

ದ್ವಾಪರಯುಗದಲ್ಲಿ ಈ ಬೆಟ್ಟದ ಮೇಲಿನ ಪಟ್ಟಣದಲ್ಲಿ ಹಿಡಿಂಬಾಸುರನೆಂಬ ರಾಕ್ಷಸ ಆಳ್ವಿಕೆ ನಡೆಸುತ್ತಿದ್ದನೆಂಬ ಐತಿಹ್ಯವಿದೆ. ಕ್ರಿ.ಶ.೧೦೯೪ರ ಉಚ್ಚಂಗಿದುರ್ಗದ ಶಾಸನವೊಂದು ಉಚ್ಚಂಗಿದುರ್ಗದ ಪೂರ್ವಕ್ಕೆ ಹಿಡಿಂಬವನವಿದ್ದು, ಅಲ್ಲಿ ಹಿಡಿಂಬನು ಸ್ವಯಂಭು ಕಲಿದೇವಸ್ವಾಮಿಗೆ ಒಂದು ದೇವಾಲಯವನ್ನು ಕಟ್ಟಿಸಿದನೆಂಬ ವಿಷಯವನ್ನು ಪ್ರಸ್ತಾಪಿಸುತ್ತದೆ.[೨೯] ಆ ಹಿಡಿಂಬವನ ಚಿತ್ರದುರ್ಗ ಪರಿಸರವೇ ಇರಬೇಕು. ಅ.ಸುಂದರ ಅವರು ಅಭಿಪ್ರಾಯಪಡುವಂತೆ "ಹಿಡಿಂಬನ ಉಲ್ಲೇಖವುಳ್ಳ ಶಾಸನಗಳಲ್ಲಿ ಉಚ್ಚಂಗಿದುರ್ಗದ ಶಾಸನವೇ ಬಹುಶಃ ಅತ್ಯಂತ ಪ್ರಾಚೀನ".[೩೦] ಚಿತ್ರದುರ್ಗದ ದೇವಾಲವೊಂದರ ಮೊದಲ ಉಲ್ಲೇಖವೂ ಇದೇ ಎಂಬುದು ಗಮನಾರ್ಹ. ಇಂದ್ರಪ್ರಸ್ತದ ಅರಗಿನ ಮನೆಯಿಂದ ಪಾರಾದ ಪಾಂಡವರು ಹಿಡಿಂಬ ಪಟ್ಟಣಕ್ಕೆ ಬಂದಿಳಿದ ತರುವಾಯ ಭೀಮನಿಗೂ ಹಿಡಿಂಬನಿಗೂ ನಡೆದ ಕದನದಲ್ಲಿ ಹಿಡಿಂಬ ಹತನಾದ. ಅವನ ಕೋರಿಕೆಯಂತೆ ತಾನು ಪೂಜಿಸುತಿದ್ದ ಲಿಂಗಕ್ಕೆ ಅವನ ಹೆಸರಿನಿಂದ ಕರೆಯಲಾಯಿತು ಎಂಬ ಐತಿಹ್ಯವು ಪ್ರಚಲಿತದಲ್ಲಿದೆ.

ವಾಸ್ತುವಿನ್ಯಾಸದಲ್ಲಿ ಗರ್ಭಗೃಹ, ನವರಂಗ, ರಂಗಮಂಟಪ, ಮುಖಮಂಟಪ, ಗಾಳಿಮಂಟಪ, ದೀಪಸ್ತಂಭ ಹಾಗೂ ಉಯ್ಯಾಲೆ ಕಂಬಗಳನ್ನು ಈ ದೇವಾಲಯ ಒಳಗೊಂಡಿದೆ. ಗರ್ಭಗೃಹದಲ್ಲಿ ಸುಮಾರು ನಾಲ್ಕು ಅಡಿ ಎತ್ತರವಿರುವ ಕಪ್ಪುಶಿಲೆಯಲ್ಲಿ ಕಡೆದ ಪ್ರತಿಷ್ಠಾಪನಾ ಶಿವಲಿಂಗವಿದೆ.

ವೃತ್ತಾಕಾರದ ಪಾಣಿವಟ್ಟನ್ನು ಒಳಗೊಂಡ ಇದರ ಜಲಹರಿಯ ಲಿಂಗದ ಬಲಕ್ಕಿದೆ. ಮಯೂರವರ್ಮನ ಶಾಸನದ ಬಳಿ ದೊರೆತ ಕ್ರಿ.ಶ.೧-೨ನೇ ಶತಮಾನದ ಚಂದ್ರವಳ್ಳಿಯ ಶಿವಲಿಂಗಕ್ಕೆ ಇದು ಹೋಲುತ್ತಿದ್ದು ಇವೆರಡೂ ಒಂದೇ ಅವಧಿಯವಿರಬಹುದೆಂಬುದು ವಿದ್ವಾಂಸರ ಅಭಿಮತ.[೬೧] ಗರ್ಭಗೃಹದ ಬಾಗಿಲುವಾಡವು ಸರಳವಾಗಿದ್ದು ಅಲಂಕಾರ ರಹಿತವಾಗಿದೆ. ನವರಂಗದಲ್ಲಿನ ನಾಲ್ಕು ಕಂಬಗಳು ಚಚ್ಚೌಕಾಕಾರದ ಪೀಠದ ಮೇಲೆ ನಿಂತಿವೆ. ಇವುಗಳನ್ನು ಚೌಕಾಕಾರ, ಅಷ್ಟಕೋನ, ವೃತ್ತ, ಅಷ್ಟಕೋನ, ಚೌಕಾಕಾರದ ರಚನೆಗಳನ್ನು ಹೊಂದಿದ್ದು, ಮೇಲೆ ದಿಂಡು, ಫಲಕ ಮತ್ತು ಸರಳ ಬೋದಿಗೆಗಳನ್ನು ಹೊಂದಿವೆ. ವಿತಾನಭಾಗವು ಅಧೋಮುಕ ಪದ್ಮದ ಕೆತ್ತನೆಯನ್ನು ಒಳಗೊಂಡಿದೆ. ನವರಂಗದ ಒಳಗೋಡೆಯಲ್ಲಿ ಒಂಭತ್ತು ಕೂಡುಗಳಿದ್ದು, ಅವುಗಳಲ್ಲಿ ವಿವಿಧ ದೇವತಾಶಿಲ್ಪಗಳಿವೆ.

ದಕ್ಷಿಣಾಭಿಮುಖವಾಗಿರುವ ಕಪಾಲಶಿವನ ಬಿಕ್ಷಾಟನಾ ಮೂರ್ತಿಯು ಕಪ್ಪುಶಿಲೆಯಲ್ಲಿ ಕಡೆಯಲಾಗಿದ್ದು, ಒಂದೂವರೆ ಅಡಿ ಎತ್ತರವಿರುವುದು. ಸುಖಾಸೀನ ಭಂಗಿಯಲ್ಲಿ ಕುಳಿತಿರುವ ಕಪಾಲಶಿವನು ತನ್ನ ನಾಲ್ಕು ಕೈಗಳಲ್ಲಿ ತ್ರಿಶೂಲ, ಢಮರು, ಖಡ್ಗ ಮತ್ತು ಕಪಾಲಗಳನ್ನು ಹಿಡಿದಿದ್ದಾನೆ. ದೇಹದ ಆಭರಣಗಳ ಪೈಕಿ, ಜಟಾಮುಕುಟ, ಕರ್ಣಕುಂಡಲ, ಕೈಕಡಗ, ಕಾಲ್ಕಡಗ, ಹಾಗೂ ಉಪವೀತ ಧಾರಿಯಾಗಿದ್ದಾನೆ. ಉದರದಲ್ಲಿ ನಾಗಬಂಧವಿದೆ.

ಪಶ್ಚಿಮಾಭಿಮುಖವಾಗಿರುವ ಶನೇಶ್ವರನ ಶಿಲ್ಪವು ಕಪ್ಪುಶಿಲೆಯಲ್ಲಿ ಶಿಲ್ಪಿತವಾಗಿದೆ. ತನ್ನ ವಾಹನವಾದ ಕಾಗೆಯಮೇಲೆ ಉದರಬಂಧ ಆಸನದಲ್ಲಿ ಕುಳಿತಿದ್ದು, ತನ್ನ ಕೈಗಳಲ್ಲಿ ಬಿಲ್ಲು, ಬಾಣಗಳನ್ನು ಹಿಡಿದಿದ್ದಾನೆ. ಕಿರೀಟಮುಕುಟ ಹಾರ ಸರಗಳೊಡನೆ ಕೈಕಡಗ, ಕಾಲ್ಕಡಗ, ನೂಪುರ ಧರಿಸಿರುವುದನ್ನು ಕಾಣಬಹುದು.

ಕೋಣವಾಹಿನಿಯಾದ ಮಹಿಷಾಸುರಮರ್ಧಿನಿ ಶಿಲ್ಪವು ಆಲೀಢಭಂಗಿಯಲ್ಲಿದೆ. ಪೂರ್ವಾಭಿಮುಖವಾಗಿದ್ದು ಕಪ್ಪುಶಿಲೆಯಲ್ಲಿ ಕಂಡರಿಸಲ್ಪಟ್ಟಿದೆ. ಮಹಿಷಾಸುರಮರ್ಧಿನಿ ತನ್ನ ಎಂಟು ಕೈಗಳಲ್ಲಿ ಬಾಣ, ಶಂಖ, ಖಡ್ಗ, ಘಂಟೆ, ಬಾಣ, ತ್ರಿಶೂಲ, ಅಸುರನ ಬಲಗೈಯನ್ನು ಮೇಲೆತ್ತದಂತೆ ತಡೆ ಹಿಡಿದಿದ್ದಾಳೆ. ತ್ರಿಶೂಲದ ತುದಿಗೆ ಮಹಿಷಾಸುರನ ರುಂಡವು ತಗುಲಿರುವಂತೆಯೂ, ಕೋಣವು ಬಲಕ್ಕೆ ತಿರುಗಿ ನೋಡುತ್ತಿರುವಂತೆಯೂ ಈ ಶಿಲ್ಪವನ್ನು ಕಡೆಯಲಾಗಿದೆ.

ಪೂರ್ವಾಭಿಮುಖವಾಗಿರುವ ಕಾಲಭೈರವನ ಶಿಲ್ಪವು ಸುಮಾರು ಮೂರು ಅಡಿ ಎತ್ತರವಿದ್ದು, ಕಪ್ಪುಶಿಲೆಯಲ್ಲಿ ಕಂಡರಿಸಲ್ಪಟ್ಟಿದೆ. ಭೈರವನು ತನ್ನ ಚತುರ್ಭುಜಗಳಲ್ಲಿ ತ್ರಿಶೂಲ, ಢಮರು, ಖಡ್ಗ, ಕಪಾಲ ಮತ್ತು ರುಂಡಗಳನ್ನು ಧರಿಸಿದ್ದಾನೆ. ರುಂಡದಿಂದ ಒಸರುವ ರಕ್ತವನ್ನು ನಾಯಿಯೊಂದು ನೆಕ್ಕುತ್ತಿದ್ದು, ಸ್ತ್ರೀವಿಗ್ರಹವೊಂದು ಅದನ್ನು ಹಿಡಿದು ಅದರ ಕೆಲಸದಲ್ಲಿ ನೆರವಾಗುವಂತಿದೆ. ಜಟಾಮುಕುಟದಾರಿ ಭೈರವನು ಕರ್ಣಕುಂಡಲ, ಹಾರ, ಸರ, ಕಟಿಬಂಧ, ಕಾಲ್ಬಳೆ ಧರಿಸಿದ್ದಾನೆ. ಶಿಲ್ಪದ ಪಕ್ಕದಲ್ಲಿ ಭೃಂಗಿಯ ವಿಗ್ರಹವಿದ್ದು, ಪೀಠದ ಮೇಲೆ ವೃಶ್ಚಿಕದ ಕೆತ್ತನೆ ಇದೆ.

ದೇವಾಲಯದ ಗೂಡಿನಲ್ಲಿ ದಕ್ಷಿಣಾಭಿಮುಖವಾಗಿರುವ ವಿನಾಯಕನ ಶಿಲ್ಪವು ಎರಡು ಅಡಿ ಎತ್ತರವಿದೆ. ಹಸಿರುಮಿಶ್ರಿತ ಕಪ್ಪುಶಿಲೆಯಲ್ಲಿ ಕಡೆಯಲ್ಪಟ್ಟಿದ್ದು, ಸುಖಾಸೀನಭಂಗಿಯಲ್ಲಿ ಗಣೇಶ ಆಸೀನವಾಗಿರುವನು. ತನ್ನ ನಾಲ್ಕು ಕೈಗಳಲ್ಲಿ ಅಂಕುಶ, ಪಾಶ, ಮೋದಕ ಮತ್ತು ಲೇಖನಿಗಳನ್ನು ಹಿಡಿರುವ ಗಣೇಶನು ಜಟಾಮುಕುಟ ಧರಿಸಿರುವನು. ಕರ್ಣಕುಂಡಲ, ಹಾರ, ಸರ, ಉಪವೀತ, ಉದರಕ್ಕೆ ನಾಗಬಂಧ, ಕೈಕಂಕಣ, ಕಾಲಿಗೆ ಪಂಡುಗಗಳನ್ನು ಧರಿಸಿದ್ದು, ಪೀಠದಲ್ಲಿ ಇಲಿಯ ಉಬ್ಬುಕೆತ್ತನೆ ಇದೆ.

ನವರಂಗದಲ್ಲಿ ಉತ್ತರಾಭಿಮುಖವಾಗಿರುವ ಕಪ್ಪುಶಿಲೆಯ ಫಲಕವೊಂದರ ಮೇಲೆ ಸ್ತ್ರೀ ಪುರುಷರ ಎರಡು ಶಿಲ್ಪಗಳನ್ನು ಕಡೆಯಲಾಗಿದೆ. ಸ್ತ್ರೀ ಶಿಲ್ಪವು ಪ್ರಾಣಾಮ ಮುದ್ರೆಯಲ್ಲಿದ್ದರೆ, ಪುರುಷನು ಧ್ಯಾನ ಮುದ್ರೆಯಲ್ಲಿ ಶಿಲ್ಪಿತವಾಗಿರುವನು. ಇವುಗಳ ಮಧ್ಯಭಾಗದಲ್ಲಿ ಛತ್ರಿಯೊಂದನ್ನು ನಿಲ್ಲಿಸಲಾಗಿದೆ. ಇವರ ಪೋಷಾಕು, ಆಭರಣಗಳನ್ನು ಗಮನಿಸಿದರೆ ಹಿಡಿಂಬೇಶ್ವರ ದೇವರ ಭಕ್ತರಾಗಿದ್ದು,

ರಾಜದಂಪತಿಗಳಾಗಿರಬಹುದು. ಇವುಗಳಲ್ಲದೆ ಮೂರು ನಾಗಶಿಲ್ಪಗಳಿದ್ದು, ಅವುಗಳನ್ನು ರಾಹುಕೇತು, ಬ್ರಹ್ಮಮಾನಸಪುತ್ರಿ ಎಂದು ಸ್ಥಳೀಯರು ಕರೆಯುತ್ತಾರೆ. ಈ ಶಿಲ್ಪಗಳು ಅರ್ಧದೇಹ ಮಾನವಾಕೃತಿಯಲ್ಲಿದ್ದು ಕೈಗಳಲ್ಲಿ ಖಡ್ಗ, ಗುರಾಣಿ ಹಿಡಿದಿದ್ದರೆ, ಉಳಿದ ಅರ್ಧ ದೇಹಭಾಗವು ಹಾವಿನ ರೂಪದಲ್ಲಿದೆ. ಇದರೊಡನೆ ಲಿಂಗಕ್ಕೆ ಅಭಿಮುಖವಾಗಿ ಅಲಂಕೃತ ನಂದಿಯನ್ನು ಪ್ರತಿಷ್ಠಾಪಿಸಿಲಾಗಿದೆ. ಸರಿಸುಮಾರು ೩ ಅಡಿ ಉದ್ದ ೨ ಅಡಿ ಎತ್ತರವಿರುವ ಈ ಶಿಲ್ಪ ಕಪ್ಪುಶಿಲೆಯಲ್ಲಿ ಕಂಡರಿತವಾಗಿದೆ. ಹಣೆಪಟ್ಟಿ ಕಾಲ್ಕಡಗ, ಗಂಟೆ ಸರಗಳನ್ನು ಧರಿಸಿದೆ.

ನವರಂಗದ ಆಗ್ನೇಯ ದಿಕ್ಕಿಗೆ ಚಿಕ್ಕದಾದ ಕೊಠಡಿ ಇದ್ದು, ಇದು ನಂತರದ ಕಾಲದ ನಿರ್ಮಿತಿಯಾಗಿದೆ.[೩೨] ಈ ಕೋಣೆಯಲ್ಲಿ ಒಂದು ಅಡಿ ಎತ್ತರದ ಪೀಠದ ಮೇಲೆ ಐದು ಅಡಿ ಎತ್ತರದ ವೀರಭದ್ರನ ಶಿಲ್ಪವಿದ್ದು, ನವಿರಾದ ಕತ್ತನೆಗಳಿಂದ ಕೂಡಿದೆ. ಕಪ್ಪುಶಿಲೆಯಲ್ಲಿ ಕಡೆದ ಇದು ಪೂರ್ವಾಭಿಮುಖವಾಗಿವೆ. ತ್ರಿಭಂಗಿಯಲ್ಲಿರುವ ವೀರಭದ್ರನು ತನ್ನ ನಾಲ್ಕು ಕೈಗಳಲ್ಲಿ ಬಿಲ್ಲು, ಬಾಣ, ಖಡ್ಗ ಮತ್ತು ಖೇಟಗಳನ್ನು ಹಿಡಿದಿರುವನು. ಕಿರೀಟಮುಕುಟ, ಸರ್ಪಕುಂಡಲ, ಕಂಠಿಹಾರ, ಸರ, ಸೊಂಟಪಟ್ಟಿ, ಯಜ್ಞೋಪವೀತ, ಕೈಬಳ, ರುಂಡಮಾಲೆ, ಕಾಲ್ಕಡಗ, ನೂಪುರಗಳನ್ನು ಧರಿಸಿದೆ. ವಿಗ್ರಹದ ಮೇಲ್ಬದಿಯಲ್ಲಿ ಕೀರ್ತಿಮುಖದ ಪ್ರಭಾವಳಿ ಇದೆ. ಶೈಲಿಯ ದೃಷ್ಟಿಯಿಂದ ಹೊಯ್ಸಳರ ಅವಧಿಯದಾದ ಈ ಶಿಲ್ಪ ಜಗಲೂರು ತಾಲೂಕಿನ ಕಲ್ಲೇದೇವರಪುರ ಗ್ರಾಮದ ಕಲ್ಲೇಶ್ವರ ದೇವಾಲಯದಲ್ಲಿನ ವೀರಭದ್ರ ಶಿಲ್ಪವನ್ನು ಹೋಲುತ್ತದೆ.

ಇದೇ ಕೋಣೆಯ ದಕ್ಷಿಣ ಗೋಡೆಗೆ ಪೀಠಸ್ತವಾದ ಶೂಲಬ್ರಹ್ಮ ಶಿಲ್ಪವನ್ನು ಒರಗಿಸಲಾಗಿದೆ. ಉತ್ತರಾಭಿಮುಖವಾಗಿರುವ ಈ ಶಿಲ್ಪವನ್ನು ಕಪ್ಪು ಶಿಲೆಯಲ್ಲಿ ಕಡೆಯಲಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಈವರೆಗೆ ದೊರೆತ ಶಿಲ್ಪಗಳಲ್ಲಿಯೇ ಇದು ಅತ್ಯಂತ ಸುಂದರವಾಗಿದೆ ಎನ್ನಬಹುದು. ಎರಡು ಅಡಿ ಎತ್ತರ, ಎರಡು ಅಡಿ ಅಗಲ ಇರುವ ಈ ಶಿಲ್ಪದಲ್ಲಿ ಶೂಲಗಳು ಮಧ್ಯ ಇದ್ದು, ಅವುಗಳ ಆಚೆ ಈಚೆ ಗುಂಡಯ್ಯ ಬ್ರಹ್ಮಯ್ಯರು ನಿಂತಿದ್ದಾರೆ. ಇಬ್ಬರ ಎಡಗೈಯಲ್ಲೂ ಸುಂದರವಾದ ಪುಟ್ಟ ಇಷ್ಟಲಿಂಗಗಳಿವೆ. ಇಬ್ಬರ ತಲೆಯ ಮೇಲೂ ವಿಶಿಷ್ಟವಾದ ತಲೆದೊಡವು ಮುಂಡಾಸುಗಳೂ, ಕಿವಿಯಲ್ಲಿ ಕರ್ಣಕುಂಡಲ, ಕಂಠಿಹಾರ, ಕೈಕಡಗ, ನೂಪುರ, ಕಾಲ್ಬಳೆಗಳೊಡನೆ ವಸ್ತ್ರಾದಿಗಳೂ ಸುಂದರವಾಗಿ ಕೆತ್ತಲ್ಪಟ್ಟಿವೆ. ಇಬ್ಬರ ಮುಖಮುದ್ರೆಯೂ ಪ್ರಸನ್ನ ಕಳೆಯಿಂದ ಗಮನ ಸೆಳೆಯುತ್ತವೆ. ಈ ಶಿಲ್ಪದಲ್ಲಿನ ಒಂದು ವಿಶಿಷ್ಟ ಲಕ್ಷಣವೆಂದರೆ ಶಿಲ್ಪದ ಮೇಲ್ಬದಿಯ ಸಿಂಹಲಲಾಟ ಮತ್ತು ಶೂಲಗಳಿಗೆ ಮಧ್ಯೆ ಪದ್ಮಾಸನಸ್ಥನಾದ ಶಿವನ ಚಿಕ್ಕ ಮೂರ್ತಿಯನ್ನು ಕಂಡರಿಸಿರುವುದು. ಶಿವನು 'ತನ್ನ ಚತುರ್ಭುಜಗಳಲ್ಲಿ ತ್ರಿಶೂಲ, ಢಮರು, ಗದೆಯೊಡನೆ ಅಭಯ ಮುದ್ರೆಯಲ್ಲಿರುವನು. ಶಿವನು ಆಸೀನನಾದ ಪೀಠದಲ್ಲಿ ಚಿಕ್ಕ ನಂದಿಯ ಶಿಲ್ಪವನ್ನು ಕೆತ್ತಲಾಗಿದೆ. ಗುಂಡಯ್ಯ ಬ್ರಹ್ಮಯ್ಯ ಶೂಲಾರೋಹಣ ಮಾಡಿದ ಸಂದರ್ಭದಲ್ಲಿ ಶಿವನ ಪ್ರತ್ಯಕ್ಷನಾದನೆಂಬ ಪೌರಾಣಿಕ ಹೇಳಿಕೆಗೆ ಮೂರ್ತರೂಪಕೊಡುವ ಒಂದು ಪ್ರಯತ್ನವಿದು.[೨೨] ಇಲ್ಲಿಯವರೆಗೆ ದೊರೆತ ಶೂಲಬ್ರಹ್ಮ ಶಿಲ್ಪಗಳಲ್ಲಿ ಈ ಬಗೆಯ ಶಿವನ ಚಿತ್ರಣ ಕಂಡು ಬಂದಿರುವುದು ಇದೇ ಮೊದಲು.

ನವರಂಗದ ಬಾಗಿಲುವಾಡವು ಸರಳವಾಗಿದ್ದು, ಯಾವುದೇ ಅಲಂಕರಣಗಳಿಲ್ಲ. ಇದರ ಮುಂಬದಿಯ ರಂಗಮಂಟಪ ನಾಲ್ಕು ದಿಕ್ಕುಗಳಿಗೆ ದ್ವಾರಗಳಿವೆ. ಚಿಕ್ಕ ವೇದಿಕೆಯ ಮೇಲೆ ನಾಲ್ಕು ಕಂಬಗಳಿವೆ. ಇವುಗಳನ್ನು ಚೌಕ ಮತ್ತು ಅಷ್ಟಮುಖ, ಹದಿನಾರುಮುಖ, ಚೌಕದಲ್ಲಿ ಕಡೆಯಲಾಗಿದ್ದು, ಮೇಲೆ ದಿಂಡು, ಫಲಕ ಮತ್ತು ಸರಳಬೋದಿಗೆಗಳಿವೆ. ಸುತ್ತಲೂ ಕುಳಿತುಕೊಳ್ಳಲು ಕಕ್ಷಾಸನವಿದ್ದು, ಕಂಬಗಳನ್ನು ಒಳಗೊಂಡಿದೆ. ರಂಗಮಂಟಪದಲ್ಲಿ ಹೊಯ್ಸಳ ಕಾಲದ ಶಾಸನಗಳಿದ್ದು, ಇವುಗಳ ಮೇಲ್ಬದಿಯಲ್ಲಿ ಶಂಖ ಚಕ್ರಗಳೊಡನೆ, ಕಮಂಡಲ ಮತ್ತು ಚಾಮರಹಿಡಿದ ವ್ಯಕ್ತಿಯೊಬ್ಬ ಸಮಭಂಗಿಯಲ್ಲಿ ನಿಂತಿರುವಂತೆ ಹಾಗೂ ಮೇಲ್ಬದಿಯಲ್ಲಿ ಜಟಾಧರ ವ್ಯಕ್ತಿಯೋರ್ವ ಗಂಟೆ ಮತ್ತು ಧೂಪಾರತಿ ಬಟ್ಟಲು ಹಿಡಿದು ಲಿಂಗವನ್ನು ಪೂಜಿಸುತ್ತಿರುವಂತೆ ಶಿಲ್ಪಿತವಾಗಿವೆ. ಇವುಗಳೊಡನೆ ಸೂರ್ಯ

ಚಂದ್ರರೂ ಇದ್ದಾರೆ. ಇದು ಶೈವ ಮತ್ತು ವೈಷ್ಣವ ಧರ್ಮಕ್ಕೆ ನೀಡಿದ್ದ ಸಮಾನ ಪ್ರಾತಿನಿಧ್ಯವನ್ನು ತಿಳಿಸುತ್ತದೆ. ರಂಗಮಂಟಪದ ಬಾಗಿಲುವಾಡವು ಸರಳವಾಗಿದ್ದು, ಮುಖಮಂಟಪವು ಕಕ್ಷಾಸನ ಮತ್ತು ಅರೆಗೆಂಬಗಳಿಂದ ಕೂಡಿದೆ.

ಈ ದೇವಾಲಯದ ಮುಂಬದಿಯಲ್ಲಿ ಮೂರು ಅಂತಸ್ತುಗಳ ಕಲ್ಲಿನ ಕಟ್ಟಡಗಳನ್ನು ಗಾಳಿ ಮಂಟಪಗಳೆಂದು ಸ್ಥಳೀಯರು ಕರೆಯುತ್ತಾರೆ. ಚಿತ್ರದುರ್ಗ ಪರಿಸರದ ದೇಗುಲ ವಾಸ್ತುಶೈಲಿಯ ವಿಶಿಷ್ಟ ಲಕ್ಷಣಗಳೆನ್ನಬಹುದಾದ ಈ ಮಂಟಪಗಳು ಸಂಪಿಗೆ ಸಿದ್ದೇಶ್ವರ ದೇವಾಲಯಕ್ಕೂ ಇವೆ. ಇವು ಆಯಾ ದೇವಾಲಯಗಳಿಗೆ ಹೋಗಿಬರುವ ಇದ್ದ ಪ್ರವೇಶ ಮಂಟಪಗಳೆಂದೂ, ಇವು ತಮಿಳುನಾಡಿನ ಪ್ರಸಿದ್ಧವಾದ ಪಲ್ಲವ ವಾಸ್ತುಶೈಲಿಯ ರಥಗಳನ್ನು ನೆನಪಿಸುತ್ತವೆಂದೂ, ಎಂ.ಎಚ್.ಕೃಷ್ಣ ಹೇಳಿರುವ ಮಾತು ಮನನೀಯವಾಗಿದೆ.[೩೪] ಶಾಸನಗಳಲ್ಲಿ ಇವುಗಳನ್ನು 'ಮೂರುನೆಲೆಯ ಕಲ್ಲವುಪ್ಪರಿಗೆ' ಎಂದು ಗೋಪುರ ಎಂದೂ ಕರೆದಿರುವುದುಂಟು. ಗೋಪುರದ ರಚನೆಯನ್ನು ಶಿಲ್ಪಾಶಾಸ್ತ್ರದ ಪರಿಭಾಷೆಯಲ್ಲಿ 'ವಿಮಾನ' ಎಂದು ಕರೆಯುತ್ತಾರೆ. 'ವಿಮಾನ' ಎಂಬ ಸಂಸ್ಕೃತ ಶಬ್ದಕ್ಕೆ 'ಗಾಳಿದೇರು' ಎಂಬ ಕನ್ನಡ ಪದವಿದ್ದು, ಅದೇ ಬಹುಶಃ ರೂಪಾಂತರಗೊಂಡು ಗಾಳಿಮಂಟಪ ಎಂದಾಗಿರಬಹುದು. ಮೇಲೆ ಹೇಳಿದ ಗಾಳಿ ಮಂಟಪದಲ್ಲಿ ಹಿಡಿಂಬೇಶ್ವರ ದೇವಾಲಯದ ಮುಂದಿರುವುದು ಕ್ರಿ.ಶ.೧೪೧೧ರ ವೀರಮಲ್ಲಣ್ಣ ಒಡೆಯ ನಿರ್ಮಿಸಿದ ಮಂಟಪವೆಂದೇ ಎಂ.ಹೆಚ್. ಕೃಷ್ಣರಾದಿಯಾಗಿ ಹಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದರು. ಆದರೆ ಇತ್ತೀಚೆಗೆ ಈ ಮಂಟಪದಲ್ಲಿ ದೊರೆತ ಕ್ರಿ.ಶ. ಸುಮಾರು ೧೧ನೇ ಶತಮಾನದ ಕನ್ನಡ ಲಿಪಿಯ ಒಂದು ಚಿಕ್ಕ ಶಾಸನದಿಂದ ಅದನ್ನು ತಿಪ್ಪಯ್ಯ ಎಂಬ ವ್ಯಕ್ತಿ ನಿರ್ಮಿಸಿದನೆಂದು ತಿಳಿದುಬಂದಿದೆ.[೩೫] ಆದರೆ ಹಿಡಿಂಬೇಶ್ವರ ದೇವಾಲಯದಲ್ಲಿ ವೀರಮಲ್ಲಣ್ಣ ಒಡೆಯ ನಿರ್ಮಿಸಿದ ದಕ್ಷಿಣದಿಕ್ಕಿನ ಕಲ್ಲಗೊಪುರ ಯಾವುದು ಎಂಬ ಕುತೂಹಲ ಮೂಡುವುದು ಸಹಜ. ಇದು ಬಹುಶಃ ಹಿಂಡಿಬೇಶ್ವರ ದೇಗುಲದ ಮುಂಬದಿಯ ಬಂಡೆಯಮೇಲೆ ಒಂದೇ ಅಂತಸ್ತು ಮಾತ್ರ ಉಳಿದಿರುವ ಮಂಟಪವಿರಬಹುದು. ಪಾಳೆಯಗಾರರ ವಂಶಾವಳಿಗಳಲ್ಲಿ ಕ್ರಿ.ಶ.೧೭೪೮ರಲ್ಲಿ ಭೂಕಂಪವಾದುದರ ಒಂದು ಅಪರೂಪದ ಉಲ್ಲೇಖವಿದ್ದು, ಆಗ 'ಹಿಡಿಂಬೇಶ್ವರ ಉಪ್ಪರಿಗೆ ಮೇಲಣ ಕಲ್ಲಕಳಸ ಪಡುವ ದಿಕ್ಕಿಗೆ ತೊಲಗಿತು'[೩೬] ಎಂಬ ಉಲ್ಲೇಖ ಬರುತ್ತದೆ. ಈ ಉಲ್ಲೇಖ ಬಹುಶಃ ವೀರ ಮಲ್ಲಣಒಡೆಯ ನಿರ್ಮಿಸಿದ ಕಲ್ಲುಗೋಪುರದ್ದೇ ಆಗಿರಬಹುದು. ಈ ದೇವಾಲಯವು ಮುಂಬದಿಯಲ್ಲಿ ಉಯ್ಯಾಲೆ ಕಂಬ ಹೊಂದಿದೆ.

ಹಿಡಿಂಬೇಶ್ವರ ದೇವಾಲಯದ ಕೆಳಗಿನ ಬಂಡೆಯ ಪೂರ್ವ ಪಾರ್ಶ್ವದಲ್ಲಿ ಹಿಡಿಂಬೇಶ್ವರ ಲಿಂಗಕ್ಕೆ ಅಭಿಷೇಕ ಮಾಡಿದ ನೀರು ಹರಿದು ಬಂಡೆಯ ಮೇಲಿನಿಂದ ಕೆಳಕ್ಕೆ ಇಳಿಯುವಲ್ಲಿ ಒಂದು ಚೂಪು ಕಮಾನಿನ ಚೌಕಟ್ಟಿನೊಳಗೆ ಪುರುಷನೋರ್ವನ ಪುಟ್ಟ ಶಿಲ್ಪವಿದೆ. ಬಿ.ರಾಜಶೇಖರಪ್ಪನವರು ಈ ಶಿಲ್ಪವನ್ನು ನಿರಾಭರಣನಾಗಿ ಧ್ಯಾನಭಂಗಿಯಲ್ಲಿ ಕುಳಿತಿದ್ದಾನೆಂದು ಉಲ್ಲೇಖಿಸಿದ್ದಾರೆ.[೩೭] ಆದರೆ ಇದು ನಿರಾಭರಣ ಶಿಲ್ಪವಲ್ಲ. ತೋರಿಕೆಯಲ್ಲಿ ನಿರಾಭರಣನಂತೆ ಭಾಸವಾದರೂ ತೊಳ್ಬಂದಿ, ಕೈಕಡಗ, ಕಾಲ್ಕಡಗ ಧರಿಸಿರುವುದು ಆ ಶಿಲ್ಪದ ಸೂಕ್ಷ್ಮಾವಲೋಕನದಿಂದ ವೇದ್ಯವಾಗುತ್ತದೆ. ಬೋಳುತಲೆಯಲ್ಲಿರುವ ಈ ಶಿಲ್ಪದ ಕೆಳಗೆ 'ಕರಿಯ ಇಡುಬಜೀಯ' ಎಂಬ ಸುಮಾರು ೧೫ನೇ ಶತಮಾನದ ಕನ್ನಡ ಲಿಪಿಯ ಶಾಸನವಿದೆ. ಇದರಿಂದ ಈ ಪುರುಷನು ಪಾಶುಪತ ಕಾಳಾಮುಖ ಶೈವಕ್ಕೆ ಸೇರಿದ್ದ, ಪ್ರಾಯಶಃ ಹಿಡಿಂಬೇಶ್ವರ ದೇವರ ಸ್ಥಾನಾಚಾರ್ಯರಲ್ಲಿ ಒಬ್ಬ ವ್ಯಕ್ತಿಯದೆಂಬುದು ಸ್ಪಷ್ಟ ಈ ದೇಗುಲದ ಗರ್ಭಗೃಹ ನಿಸರ್ಗನಿರ್ಮಿತಿಯಾಗಿದೆ. ನವರಂಗ, ರಂಗಮಂಟಪ ಮತ್ತು ಮುಖಮಂಟಪಗಳು ಹೊಯ್ಸಳ ಶೈಲಿಯಲ್ಲಿ ನಿರ್ಮಾಣವಾಗಿವೆ.

ಹೀಗೆ ತನ್ನದೇ ಆದ ಪರಂಪರೆಯ ಪರಿಧಿಯಲ್ಲಿ ಇರುವ ಹಿಡಿಂಬೇಶ್ವರ ದೇಗುಲಕ್ಕೆ ಹಲವು ಸಾಮಂತರಸರು ದತ್ತಿ ನೀಡಿದ್ದು,[೩೮] ಅದನ್ನು ಈ ಕೆಳಗಿನ ಪಟ್ಟಿಯಲ್ಲಿ ನೋಡಬಹುದು.

ದಾನನೀಡಿದ ಕಾಲ	ದಾನ ನೀಡಿದವರು	ದಾನ ಪಡೆದು ಕೊಂಡವರು	ದಾನದ ವಸ್ತು	ದಾನದ ಉದ್ದೇಶ
ಕ್ರಿ.ಶ. ೧೧೦೭೩	ಕೆರೆಯೂರ ಮಂಗಿಯೇಚಯ್ಯ	ಜ್ಞಾನಶಿವದೇವರ ಮುನಿ	ಕೋಟೆಯ ಪಶ್ಚಿಮ ದಿಕ್ಕಿನ ೬೦ ಮತ್ತರು ಭೂಮಿ	-
ಕ್ರಿ.ಶ. ೧೨೮೬	ಪೆರುಮಾಳೆದೇವ ದಣ್ಣಾಯಕ	-	ಕುರುಬನಕಾಳೆಯ ಕೆರೆ ಕೆಳಗಿನ ೧೦ ಮತ್ತರು ಗದ್ದೆ	ಅಮೃತಪಡಿಗೆ
ಕ್ರಿ.ಶ. ೧೪೧೨	ವೀರಮಲ್ಲಣ್ಣ ಒಡೆಯ	-	ತಮ್ಮ ತಾಯಿ ಮಲ್ಲವ್ವನ ನೆನಪಿಗಾಗಿ ಕುಂಚಿಗನಹಳ್ಳಿಯನ್ನು ಮಲ್ಲಾಪುರ ಎಂದು ನಾಮಕರಣ ಮಾಡಿ ದಾನ ನೀಡಿದರು	ಅಂಗ ರಂಗ ವೈಭವಕ್ಕೆ
ಕ್ರಿ.ಶ. ೧೩೨೨	ಮಾರೆಯ ಸಾಹಿಣಿ ಮತ್ತು ಬೇಬೇಯ ದಣ್ಣಾಯಕ	ಯಿಡುಬಜೀಯ, ರಾಮಜೀಯ, ಕೇತಾರಜೀಯ, ಸಿದ್ದಜೀಯ ಮತ್ತು ಬೇಲಜೀಯ	ಆಯಿತೊಳಲ್ಲಿನ ಭೂಮಿ	ಅಮೃತಪಡಿಗೆ

೨. ಪಂಚಲಿಂಗೇಶ್ವರ ದೇವಾಲಯ

ಚಂದ್ರವಳ್ಳಿ ಕಣಿವೆಯಲ್ಲಿನ ಹುಲಿಗೊಂದಿ ಭೈರವೇಶ್ವರ ದೇವಾಲಯ ದಾಟಿ ಮುನ್ನಡೆದರೆ ಬಲಬದಿಯ ದಿನ್ನೆಯಲ್ಲಿ ಪಿರಮಿಡ್ಡಿನಾಕೃತಿಯ ಬಂಡೆಗಲ್ಲಿನ ಕೆಳಗಿರುವ ಗುಹಾಲಯವಿದು. ಬಂಡೆಯ ಕೆಳಗಿನ ವಿಶಾಲ ಅಂಗಳದಲ್ಲಿ ಗರ್ಭಗೃಹ, ಅಂತರಾಳ ರಚಿಸಲಾಗಿದೆ. ಇಲ್ಲಿ ದ್ವಾರಕ್ಕೆ ಅಭಿಮುಖವಾಗಿ ಮತ್ತು ಅಕ್ಕಪಕ್ಕದಲ್ಲಿ ಎತ್ತರದ ವೇದಿಕೆಗಳಿದ್ದು, ವಿವಿಧ ಗಾತ್ರದ ಹತ್ತು ಪ್ರತಿಷ್ಠಾಪನ ಲಿಂಗಗಳಿವೆ. ಅಂದರೆ ಪೂರ್ವದಿಕ್ಕಿನ ವೇದಿಕೆಯ ಮೇಲೆ ನಾಲ್ಕು, ಪಶ್ಚಿಮ ದಿಕ್ಕಿನ ವೇದಿಕೆಯ ಮೇಲೆ ನಾಲ್ಕು, ಉತ್ತರದಿಕ್ಕಿನ ವೇದಿಕೆಯ ಮೇಲೆ ಎರಡು ಹೀಗೆ ಒಟ್ಟು ಹತ್ತು ಲಿಂಗಗಳಿವೆ. ಹೀಗಿದ್ದರೂ ಇದನ್ನು ಪಂಚಲಿಂಗೇಶ್ವರ ದೇವಾಲಯ ಎಂದು ಕರೆಯುವುದು ವಾಡಿಕೆ. ಪಾಂಡವರು ಇಲ್ಲಿನ ಲಿಂಗಗಳಲ್ಲಿ ಧರ್ಮೇಶ್ವರ, ಭೀಮೇಶ್ವರ, ಅರ್ಜುನೇಶ್ವರ, ನಕುಲೇಶ್ವರ ಮತ್ತು ಸಹದೇವೇಶ್ವರ ಎಂದು ತಮ್ಮ ಹೆಸರುಗಳಲ್ಲಿಯೇ ಲಿಂಗ ಪ್ರತಿಷ್ಠಾಪಿಸಿರೆಂದು ಅದೇ ದೇವಾಲಯದ ಕ್ರಿ.ಶ.೧೨೬೮ರ ಶಾಸನವು ತಿಳಿಸುತ್ತದೆ.[೫] ಆದರೆ ೧೩ನೇ ಶತಮಾನದ ಪೂರ್ವದಲ್ಲಿ ಇಲ್ಲಿ ಪಂಚಲಿಂಗಗಳು ಇರಲಿಲ್ಲವೆಂಬುದು ಗಮನಾರ್ಹ. ಈ ದೇವಾಲಯದ ಪ್ರಥಮ ಉಲ್ಲೇಖವಿರುವ ಕ್ರಿ.ಶ.೧೧೦೭೩ರ ಶಾಸನದ ಪ್ರಕಾರ ಇಲ್ಲಿದ್ದುದು ಮೂಲತಃ ಭೀಮೇಶ್ವರ ಲಿಂಗಮಾತ್ರ. ತರುವಾಯ ಜನ ಇತರ ಲಿಂಗಗಳನ್ನು ಸೇರಿಸಿದ್ದರಿಂದ ಈ ಹೆಸರು ಬಂದಿರಬಹುದು. ಇಂತಹ ಪಂಚಲಿಂಗಗಳ ಉಲ್ಲೇಖ ನಾಡಿನ ಹಲವೆಡೆಗಳಲ್ಲಿದ್ದು, ಪಾಂಡವರು ಪ್ರತಿಷ್ಠಾಪಿಸಿದರೆಂಬ ಐತಿಹ್ಯಗಳು ಮನೆಮಾಡಿವೆ. ದೇವಾಲಯದ ಉತ್ತರ ದಿಕ್ಕಿನ ವೇದಿಕೆಯ ಮೇಲಿರುವ ಲಿಂಗಗಳು ಕಲ್ಯಾಣ ಚಾಲುಕ್ಯ ಶೈಲಿಯಲ್ಲಿವೆ. ಅಂತೆಯೇ ದೇವಾಲಯದ ಮುಂಬದಿಯಲ್ಲಿ ಪೊದೆಯೊಂದರಲ್ಲಿ ಮುಚ್ಚಿಹೋಗಿರುವ ಭಗ್ನ ನಂದಿಶಿಲ್ಪವೂ ಕಲ್ಯಾಣ ಚಾಲುಕ್ಯ ಶೈಲಿಯಲ್ಲಿದೆ. ಈ ದೇವಾಲಯದ ಎಡಬದಿಗೆ ದೇಗುಲಕ್ಕೆ ತಾಗಿಕೊಂಡಂತೆ

ಅಂಕಲಿಮಠವಿದೆ. ಇದು ಪ್ರಾಚೀನ ಕಾಲದಲ್ಲಿ ಬೌದ್ಧರ ನೆಲಗವಿಯಾಗಿತ್ತೆಂದು ಹುಲ್ಲೂರು ಶ್ರೀನಿವಾಸ ಜೋಯಿಸರು ಉಲ್ಲೇಖಿಸಿರುವರು.[೪೦] ಆದರೆ ಈ ಗುಹೆಯು ರಚನೆಯಾಗಿರುವುದು ಇತ್ತೀಚಿನ ೪೦೦ ವರ್ಷಗಳಲ್ಲಿ. ಇದನ್ನು ಗಮನಿಸಿದರೆ ಹುಲ್ಲೂರು ಶ್ರೀನಿವಾಸ ಜೋಯಿಸರ ಅಭಿಪ್ರಾಯ ಕೇವಲ ಊಹೆ ಎಂಬುದು ತಿಳಿದುಬರುತ್ತದೆ. ಇದರೊಡನೆ ಇದು ಬೌದ್ಧಗವಿಯಾಗಿತ್ತೆಂಬುದನ್ನು ಅಧಿಕೃತವಾಗಿ ಧೃಡಪಡಿಸುವ ಯಾವುದೇ ಪುರಾತತ್ವ ಅವಶೇಷಗಳು ಈ ಗವಿಯಲ್ಲಿ ದೊರೆತಿಲ್ಲವೆಂಬುದು ಗಮನಾರ್ಹ. ಪೆರೆಮಾಳೆದೇವ ದಣ್ಣಾಯಕನ ಪಂಚಲಿಂಗ ಗುಡಿಯಲ್ಲಿನ ಶಾಸನ ಪುನರ್‌ಪರಿಶೀಲನೆಯಿಂದ ಇಲ್ಲಿ ಅನ್ನಛತ್ರವಿದ್ದ ಬಗ್ಗೆ ತಿಳಿದುಬಂದಿದೆ. ಆದ್ದರಿಂದ ಈ ಮಠ ಮತ್ತು ದೇಗುಲ ಕಲ್ಯಾಣದ ಚಾಲುಕ್ಯರು ಮತ್ತು ಹೊಯ್ಸಳರ ಅವಧಿಯಲ್ಲಿ ಪ್ರಮುಖ ಶೈವ ಎಡೆಯಾಗಿತ್ತೆನ್ನಬಹುದು.

ಹೀಗೆ ಪ್ರಸಿದ್ಧಿ ಪಡೆದ ಪಂಚಲಿಂಗೇಶ್ವರ ಗುಹಾಲಯಕ್ಕೆ ಪ್ರಾಂತ್ಯಾಧಿಕಾರಿಗಳು ದತ್ತಿಗಳನ್ನು ನೀಡಿದ್ದಾರೆ.[೪೧]

ಶಾಸನದ ಕಾಲ	ದಾನ ನೀಡಿದವರು	ದಾನ ಪಡೆದವರು	ದಾನದ ವಸ್ತು	ದಾನದ ಉದ್ದೇಶ
ಕ್ರಿ.ಶ. ೧೦೭೩	ಮಂಗಯ್ಯ ಗಾವುಂಡ, ತಿಮ್ಮಗಾವುಂಡ	ಜ್ಞಾನಶಿವದೇವರ ಮುನಿ	ಕೆರೆಯೂರ ಕೆರೆಯ ಕೆಳಭಾಗದ ೧೦೦ ಕಂಬ ಗದ್ದೆ	-
ಕ್ರಿ.ಶ. ೧೨೬೮	ಪೆರುಮಾಳೆದೇವ ದಣ್ಣಾಯಕ	ಮಾಳಗುರು ಮತ್ತು ಚೋಳಗುರು	ಎಗಸೂರು ಗ್ರಾಮದ ಭೂಮಿ	ತ್ರಿಕಾಲ ಪೂಜೆ, ಅಮೃತಪಡಿ, ಅಂಗಭೋಗ, ರಂಗಭೋಗ, ಚೈತಪವಿತ್ರಗಳೊಡನೆ ವಿಶೇಷೋತ್ಸವಗಳಿಗೆ

೩. ಬಾಳೇಕಾಯಿ ಸಿದ್ದೇಶ್ವರ ದೇವಾಲಯ

ಚಿತ್ರದುರ್ಗದ ತಿಮ್ಮಣ್ಣನಾಯಕನ ಕೆರೆಯ ಎಡಬದಿಯ ಬೆಟ್ಟದ ತಪ್ಪಲಿನಲ್ಲಿರುವುದೇ ಬಾಳೇಕಾಯಿ ಸಿದ್ದೇಶ್ವರ ಗುಹಾಲಯ. ಬೃಹದಾಕಾರದ ಬಂಡೆಯ ಕೆಳಗೆ ಬಾಗಿಕೊಂಡು ನುಸುಳಬಹುದಾದ ಜಾಗದಲ್ಲಿ ಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಇದರ ಬಳಿಯ ಕಣಿವೆಯೊಂದಕ್ಕೆ ಬಾಳೆಕಾಯಿಗೊಂದಿ ಎಂಬ ಹೆಸರಿದೆ. ಜನನಿಬಿಡ ಹಾಗೂ ಪ್ರಶಾಂತವಾದ ಈ ದೇಗುಲದಲ್ಲಿ ರಸವಿದ್ಯೆಯಲ್ಲಿ ನಿಪುಣರಾದ ರಸಸಿದ್ಧರು ತಂಗಿದ್ದರು. ರಸಸಿದ್ಧರನ್ನು ಆಡು ಭಾಷೆಯಲ್ಲಿ ಸಿದ್ಧರು, ಸಿದ್ಧಿಪುರುಷರು ಎಂದು ಸಂಬೋಧಿಸಲಾಗುತ್ತದೆ. ಈ ಮೇಲಿನ ಹೆಸರುಗಳೇ ಕಾಲಾಂತರದಲ್ಲಿ ಬಾಳೇಕಾಯಿ ಸಿದ್ದೇಶ್ವರ ಎಂಬ ರೂಪ ತಾಳಿರಬಹುದು. ಪ್ರಸ್ತುತ ಸ್ಥಳೀಯ ಜನತೆ ಈ ಗುಹಾಲಯವನ್ನು ಬಾಳೇಕಾಯಿ ಸಿದ್ದಪ್ಪನ ಗುಡಿ ಎಂದೇ ಕರೆಯುತ್ತಾರೆ.

ಪೂರ್ವಾಭಿಮುಖವಾಗಿರುವ ಈ ದೇಗುಲವು ವಾಸ್ತುವಿನ್ಯಾಸದಲ್ಲಿ ಗರ್ಭಗೃಹ, ಸಭಾಮಂಟಪಗಳಿಂದ ಕೂಡಿದೆ. ವಿಶಾಲವಾದ ಗರ್ಭಗೃಹದಲ್ಲಿ ಕ್ಲೋರೈಟಿಕ್ ಸಿಷ್ಟ್ ಶಿಲೆಯಲ್ಲಿ ಕಡೆದ ಪ್ರತಿಷ್ಠಾಪನ ಲಿಂಗವಿದೆ. ಇದು ಕಲ್ಯಾಣದ ಚಾಲುಕ್ಯ, ಹೊಯ್ಸಳರ ಅವಧಿಯದ್ದಾಗಿದೆ. ದುರಾದೃಷ್ಟವಶಾತ್ ಪ್ರಸ್ತುತ ಗರ್ಭಗೃಹದಲ್ಲಿ ಲಿಂಗದ ಪೀಠಭಾಗ ಮಾತ್ರವಿದ್ದು, ರುದ್ರಭಾಗ ಲಭ್ಯವಿಲ್ಲ.

ಗರ್ಭಗೃಹದ ಬಾಗಿಲುವಾಡವು ಮೂರುವರೆ ಅಡಿ ಎತ್ತರವಿದ್ದು ಅರೆಗಂಬ, ತ್ರಿಶೂಲ, ಢಮರು, ಗದೆ ಮತ್ತು ಅಭಯಹಸ್ತದಾರಿಗಳಾದ ಶೈವ ದ್ವಾರಪಾಲಕ ಶಿಲ್ಪಗಳಿಂದ ಕೂಡಿದೆ. ಇವುಗಳ ಮೇಲೆ ಮುಂಚಾಚಿದ ತೋರಣವಿದೆ.

ಸಭಾಮಂಟಪವು ವಿಶಾಲವಾಗಿದ್ದು, ಯಾವುದೇ ಬಗೆಯ ಕಂಬಗಳಿಲ್ಲ. ಸಭಾಮಂಟಪದ ಗೋಡೆಯೊಂದರಲ್ಲಿ ನಂದಿ ಮತ್ತು ಲಿಂಗದ ರಚನೆಗಳಿದ್ದು, ಇವು ಗುರುತಿಸಲಾಗದಷ್ಟು ಹಾಳಾಗಿವೆ. ಸಭಾಮಂಟಪದ ದ್ವಾರವು ಸಹ ಸುಮಾರು ಮೂರು ಅಡಿ ಎತ್ತರವಿದ್ದು ಶೈವದ್ವಾರಪಾಲಕರು, ಅರೆಗಂಬ ಮತ್ತು ಲಲಾಟದಲ್ಲಿ ಪದ್ಮದ ಕತ್ತನೆಗಳಿಂದ ಕೂಡಿದೆ. ದೇವಾಲಯವನ್ನಾವರಿಸಿರುವ ಬೃಹದಾಕಾರದ ಬಂಡೆಯ ಮೇಲೆ ಚಿಕ್ಕಾದಾದ ಶಿಖರ ಪ್ರತಿಷ್ಠಾಪನೆಯ ಕುರುಹುಗಳಿವೆ.[೪೨] ಮುಮ್ಮಡಿ ನರಸಿಂಹನ ಪ್ರಾಂತ್ಯಪಾಲಕನಾಗಿದ್ದ ಪೆರುಮಾಳೆದೇವ ದಣ್ಣಾಯಕನ ಶಾಸನಗಳಲ್ಲಿ ಉಕ್ತವಾಗಿರುವ ಅರಕೆರೆಯ ರಾಮನಾಥದೇವರು ಬಾಳೇಕಾಯಿ ಸಿದ್ದೇಶ್ವರ ಇರಬಹುದೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ.[೪೩]

೪. ಸಂಪಿಗೆ ಸಿದ್ದೇಶ್ವರ ದೇವಾಲಯ

ಚಿತ್ರದುರ್ಗ ಬೆಟ್ಟದ ತುಪ್ಪದಕೊಳ ಗಿರಿಯ ತಪ್ಪಲಿನ ಬೃಹತ್ತಾದ ಬಂಡೆಯ ಅಡಿಯಲ್ಲಿ ನೆಲೆಗೊಂಡ ದೇಗುಲವಿದು. ಶಾಸನಗಳಲ್ಲಿ ಈ ದೇವರನ್ನು ಸಿದ್ಧನಾಥ, ಚಂಪಕಸಿದ್ಧ ಎಂಬ ಹೆಸರುಗಳಿಂದ ಉಲ್ಲೇಖಿಸಲಾಗಿದೆ. ಪ್ರಸ್ತುತ ಈ ದೇವಾಲಯವು ಸಂಪಿಗೆ ಮರದ ಕೆಳಗೆ ಇರುವುದರಿಂದ ಸಂಪಿಗೆ ಸಿದ್ದೇಶ್ವರ ಎಂದು ಕರೆಯುತ್ತಾರೆ. ಈ ಪರಿಸರದ ಗುಹೆಗಳಲ್ಲಿ ರಸವಿದ್ಯೆಯಲ್ಲಿ ನಿಪುಣರಾದ ರಸಸಿದ್ಧರು ಪಾಳೆಯಗಾರರ ಅವಧಿಯವರೆಗೂ ವಾಸವಾಗಿದ್ದರು.[೪೪] ಬೃಹದಾಕಾರದ ಬಂಡೆಯಡಿಯ ಈ ದೇವಾಲಯ ಹೊಯ್ಸಳ ಮತ್ತು ವಿಜಯನಗರ ಅವಧಿಯಲ್ಲಿ ಅಭಿವೃದ್ಧಿ ಹೊಂದಿ ಮಹತ್ತರ ಸ್ಥಾನ ಪಡೆಯಿತು.

ಉತ್ತರಾಭಿಮುಖವಾಗಿರುವ ಈ ದೇವಾಲಯವು ವಾಸ್ತುವಿವರದಲ್ಲಿ ಗರ್ಭಗೃಹ, ಅಂತರಾಳ, ನವರಂಗ, ಮುಖಮಂಟಪ, ಗಾಳಿಮಂಟಪ, ಉಯ್ಯಾಲೆ ಕಂಬ ಮತ್ತು ದೀಪಸ್ತಂಭಗಳಿಂದ ಕೂಡಿದೆ. ಗರ್ಭಗೃಹದಲ್ಲಿ ಸುಮಾರು ಎರಡು ಅಡಿ ಎತ್ತರದ ಪ್ರತಿಷ್ಠಾಪನ ಲಿಂಗವಿದೆ. ಚೌಕಾಕಾರದ ಪಾಣಿವಟ್ಟದಿಂದ ಕೂಡಿದ ಇದರ ಜಲಹರಿಯು ಲಿಂಗದ ಎಡಕ್ಕಿರುವುದು. ಶಾಸನಗಳು ತಿಳಿಸುವಂತೆ ಹೊಯ್ಸಳರ ದೊರೆ ಮುಮ್ಮಡಿ ಬಲ್ಲಾಳನ (ಕ್ರಿ.ಶ.೧೨೯೧-೧೩೪೨) ಅವಧಿಯಲ್ಲಿ ಚಿತ್ರದುರ್ಗದ ಪ್ರಾಂತ್ಯಪಾಲಕರಾಗಿದ್ದವರು ಹಿರಿಯ ಬಲ್ಲಪ್ಪದಣ್ಣಾಯಕ ಮತ್ತು ಅವನ ಮಗ ಸೀಗೇಯ ದಣ್ಣಾಯಕ. ಇವರು ತಮ್ಮ ತಂದೆ ಬೇಬಯನಾಯಕನ ಹೆಸರಲ್ಲಿ ಅಂದರೆ ಪರೋಕ್ಷ ವಿನಯವಾಗಿ ಬೇಬನಾಥ ಲಿಂಗವನ್ನು ಪ್ರತಿಷ್ಠಾಪಿಸಿದರೆಂದು ಕ್ರಿ.ಶ.೧೩೩೦ರ ಶಾಸನವೊಂದು ತಿಳಿಸುತ್ತದೆ.[೪೫] ಆದರೆ ಅದಕ್ಕೂ ಪೂರ್ವದಲ್ಲಿಯೇ ಅಂದರೆ ಸುಮಾರು ಕ್ರಿ.ಶ.೧೨೮೬ರಲ್ಲಿ ಪೆರುಮಾಳೆದೇವ ದಣ್ಣಾಯಕನು ಸಂಪಿಗೆ ಸಿದ್ದೇಶ್ವರ ದೇವರಿಗೆ ಸೀಮೆಯೊಂದನ್ನು ಧಾರಾಪೂರ್ವಕವಾಗಿ ಕೊಟ್ಟ ಸಂಗತಿಯೊಂದು ಈಚೆಗೆ ಬೆಟ್ಟದಲ್ಲಿ ದೊರೆತ ಶಾಸನವೊಂದರಿಂದ ತಿಳಿದುಬಂದಿದೆ.[೪೬] ಇದರಿಂದ ಈ ದೇವಾಲಯ ಕ್ರಿ.ಶ.೧೨೮೬ ಕ್ಕೂ ಪೂರ್ವದಲ್ಲೆ ಈ ಪರಿಸರದಲ್ಲಿದ್ದುದು ಸ್ಪಷ್ಟ.

ಗರ್ಭಗೃಹದಲ್ಲಿನ ಮುಖ್ಯಲಿಂಗದ ಎಡಬದಿಯಲ್ಲಿ ಪೀಠಸಹಿತವಾಗಿ ರಾಜಪುರುಷನ ವಿಗ್ರಹವನ್ನು ಉತ್ತರಾಭಿಮುಖನಾಗಿರುವಂತೆ ಸ್ಥಾಪಿಸಲಾಗಿದೆ. ಕಪ್ಪುಶಿಲೆಯಲ್ಲಿ ಕಡೆಯಲ್ಪಟ್ಟ ಈ ಪುರುಷ ವಿಗ್ರಹ ತನ್ನ ಮುಂದಿರುವ ಉಬ್ಬುಗೆತ್ತನೆಯ ಜೋಡಿಪಾದಗಳನ್ನು ಧ್ಯಾನಿಸುವಂತಿರುವುದು. ಪೋಷಾಕುಗಳಲ್ಲಿ ರಾಜಪುರುಷನಂತೆ ಶಿಲ್ಪಿತನಾದ ಈ ವ್ಯಕ್ತಿ ಧ್ಯಾನಮುದ್ರೆಯಲ್ಲಿ ಆಸೀನನಾಗಿದ್ದಾನೆ. ದೇಹದ ಆಭರಣಗಳ ಪೈಕಿ ಕಿರೀಟಮುಕುಟ, ಸರ್ಪಕುಂಡಲ, ಕಂಠಿಹಾರ, ಸರ, ಕೈಕಡಗ, ಕೇಯೂರ, ಕಾಲ್ಕಡಗ, ನೂಪುರ, ಧರಿಸಿದ್ದಾನೆ. ಶಿಲ್ಪದ ಮೇಲ್ಬದಿಯಲ್ಲಿ ಕೀರ್ತಿಮುಖವಿದ್ದು, ಅದರ ಬಾಯಿಂದ ಮಣಿಸರವು ಹೊರಬರುವಂತೆ ಕಂಡರಿಸಲಾಗಿದೆ. ವಿಜಯನಗರ ಶೈಲಿಯಲ್ಲಿರುವ ಈ ಶಿಲ್ಪವನ್ನು ಸ್ಥಳೀಯರು ಅಲ್ಲಮಪ್ರಭುವಿನದೆಂದು ಕರೆಯುತ್ತಾರೆ. ಆದರೆ ಇದು ವಿಜಯನಗರದ ದೊರೆ ಒಂದನೇ

ಬುಕ್ಕರಾಯನದಾಗಿದ್ದು, ಅದರ ಮುಂಬದಿಯ ಪಾದಗಳು ಅವನಗುರು ವಿದ್ಯಾತೀರ್ಥರದೆಂದೂ, ಜೊತೆಗೆ ಈ ಶಿಲ್ಪವನ್ನು ಕೆತ್ತಿಸಿದವನು ಸಿದ್ದಾಪುರದ ಗೌಡ ಸಿದ್ದಯ್ಯನೆಂಬುದು ವಿದ್ವಾಂಸರ ಅಭಿಮತ.[೪೭] ಅರೆಗಂಬಗಳಿಂದ ಕೂಡಿದ ಗರ್ಭಗೃಹದ ಬಾಗಿಲವಾಡದ ಮೇಲ್ಬದಿಯಲ್ಲಿ ಮುಂಚಾಚಿದ ತೋರಣವಿದೆ.

ಅಂತರಾಳದಲ್ಲಿ ಶಿವಲಿಂಗಕ್ಕೆ ಅಭಿಮುಖವಾಗಿ ಕಪ್ಪುಶಿಲೆಯಲ್ಲಿ ಕಡೆಯಲ್ಪಟ್ಟ ನಂದಿ ಶಿಲ್ಪವಿದೆ. ಇದು ಎರಡು ಅಡಿ ಉದ್ದ, ಒಂದುವರೆ ಅಡಿ ಎತ್ತರವಿದೆ. ತಲೆಪಟ್ಟಿ, ಕರ್ಣಾಭರಣ, ಲೊಡಗ, ಜೋಡುಹಗ್ಗಗಳನ್ನು ಒಳಗೊಂಡ ಇದರ ಬೆನ್ನಮೇಲಿನ ಪಟ್ಟಿಯಲ್ಲಿ ಕೀರ್ತಿಮುಖದ ಕೆತ್ತನೆಯಿದೆ. ವೀರಗಲ್ಲೊಂದರ ಹಿಂಬದಿಯಲ್ಲಿ ಕೆತ್ತಲ್ಪಟ್ಟ ಪಾರ್ವತಿಯ ಶಿಲಾಮೂರ್ತಿಯು ಅಂತರಾಳದಲ್ಲಿದೆ. ಅರ್ಧ ಅಡಿ ಎತ್ತರದ ಪದ್ಮ ಪೀಠದ ಮೇಲಿನ ಈ ಶಿಲ್ಪ ನಾಲ್ಕು ಅಡಿ ಎತ್ತರವಿದ್ದು, ಹೊಯ್ಸಳರ ಅವಧಿಯದ್ದಾಗಿದೆ. ಪಾರ್ವತಿಯು ತನ್ನ ನಾಲ್ಕು ಕೈಗಳಲ್ಲಿ ತ್ರಿಶೂಲ, ಢಮರು, ಫಲಗಳೊಡನೆ ಅಭಯಮುದ್ರೆಸಹಿತ ಅಕ್ಷಮಾಲೆ ಹಿಡಿದಿದ್ದಾಳೆ. ದೇಹವು ಕರಂಡಮುಕುಟ, ಕರ್ಣಕುಂಡಲ, ಕಂಠಿಹಾರ, ಸರ, ಉಂಗುರ, ಕೈಬಳೆ, ತೋಳ್ಬಂದಿ, ಸೊಂಟಪಟ್ಟಿ ಕಾಲ್ಕಡಗ, ನೂಪುರಗಳಿಂದ ಅಲಂಕೃತಗೊಂಡಿದ್ದು, ಶಿಲ್ಪದ ಸೌಂದರ್ಯವನ್ನು ಇಮ್ಮಡಿಗೊಳಿಸಿವೆ. ಸೊಂಟಪಟ್ಟಿಯಲ್ಲಿ ಕೀರ್ತಿಮುಖವಿದ್ದು, ಅದರ ಬಾಯಿಂದ ಹೊರಬಂದಂತೆ ಶಿಲ್ಪಿತವಾದ ಉಡುಗೆಯು ನರಿಗೆಯಿಂದ ಕೂಡಿದೆ. ಈ ಶಿಲ್ಪದ ಮೇಲ್ಬದಿಯಲ್ಲೂ ಕೀರ್ತಿಮುಖವಿದ್ದು, ಬದಿಯಲ್ಲಿ ಸೂರ್ಯ ಚಂದ್ರರ ಕೆತ್ತನೆಗಳಿವೆ. ಅಂತರಾಳದ ಬಾಗಿಲುವಾಡವು ಗರ್ಭಗೃಹದ ಬಾಗಿಲುವಾಡದ ಪ್ರತಿರೂಪದಂತಿರುವುದು.

ನವರಂಗದಲ್ಲಿ ಕಣಶಿಲೆಯಿಂದ ಕಡೆಯಲಾದ ನಾಲ್ಕು ಕಂಬಗಳಿವೆ. ಚಚ್ಚೌಕ ಪೀಠದ ಮೇಲಿನ ಈ ಸ್ತಂಭಗಳು ಚೌಕಾಕಾರ, ಅಷ್ಟಮುಖ ಮತ್ತು ಬಹುಮುಖ ಕೆತ್ತನೆಗಳಿಂದ ಕೂಡಿವೆ. ಇವುಗಳ ಮೇಲೆ ವೃತ್ತಾಕಾರದ ದಿಂಡು, ಚಪ್ಪಡಿ, ಸರಳ ಬೋದಿಗೆಗಳಿದ್ದು, ಬೃಹತ್ ಬಂಡೆಯನ್ನೇ ಹೊತ್ತು ನಿಂತಂತೆ ಭಾಸವಾಗುತ್ತದೆ. ಬೃಹತ್ ಬಂಡೆಯನ್ನೇ ಗೋಡೆಗಳನ್ನಾಗಿ ಮಾಡಿಕೊಂಡು ಅಲ್ಲಲ್ಲಿ ಚಿಕ್ಕ ಕೂಡುಗಳನ್ನು ನಿರ್ಮಿಸಲಾಗಿದೆ. ಇವುಗಳಲ್ಲಿ ವೀರಭದ್ರ, ಶೂಲಬ್ರಹ್ಮ ಶಿಲ್ಪಗಳೊಡನೆ ಇತರ ಶಿಲ್ಪಗಳಿವೆ.

ನವರಂಗದಲ್ಲಿನ ಬಹುಮುಖ್ಯ ಆಕರ್ಷಕ ಶಿಲ್ಪಗಳಲ್ಲಿ ಬಹುಮುಖ್ಯವಾದದ್ದು ಶೂಲಬ್ರಹ್ಮ ಶಿಲ್ಪ. ನವರಂಗದ ದಕ್ಷಿಣ ದಿಕ್ಕಿನ ಗೂಡಿನಲ್ಲಿರುವ ಈ ಶಿಲ್ಪವನ್ನು ಉತ್ತರಾಭಿಮುಖವಾಗಿ ನಿಲ್ಲಿಸಲಾಗಿದೆ. ಈ ಶಿಲ್ಪದಲ್ಲಿನ ಗುಂಡಯ್ಯ ಬ್ರಹ್ಮಯ್ಯಗಳ ಮಧ್ಯೆ ಎರಡು ಅಡಿಎತ್ತರದ ಎರಡು ಶೂಲಗಳಿದ್ದು, ಶೂಲದ ಬಲದ ವ್ಯಕ್ತಿ ಎಡಗೈಯಲ್ಲೂ, ಶೂಲದ ಎಡದ ವ್ಯಕ್ತಿ ಬಲಗೈಯಲ್ಲಿ ಶೂಲವನ್ನು ಹಿಡಿದಿರುವರು. ಮತ್ತೊಬ್ಬ ಬಲಗೈಯಲ್ಲಿ ಮತ್ತೊಬ್ಬ ಎಡಗೈಯಲ್ಲೂಇಷ್ಟ ಲಿಂಗ ಹಿಡಿದಿದ್ದಾರೆ. ಹಣೆಗೆ ಮುಂಡಾಸನ್ನು ಎಡಕ್ಕೆ ಮುಡಿಯನ್ನು ಕಟ್ಟಿದ್ದಾರೆ. ಉಳಿದಂತೆ ಕೈಬಳೆ, ತೋಳ್ಬಂದಿ, ಕಂಠಿಹಾರ, ಕಾಲುಕಡಗ, ನೂಪುರಗಳನ್ನು ಧರಿಸಿರುವರು. ಬೇಡನಾಯಕರ ಕೇಂದ್ರವಾದ ಚಿತ್ರದುರ್ಗದಲ್ಲಿ ಮಾತ್ರವಲ್ಲದೆ, ಜಿಲ್ಲೆಯಾದ್ಯಾಂತ ದೊರೆತಿರುವ ಶೂಲಬ್ರಹ್ಮ ಶಿಲ್ಪಗಳು ಜಿಲ್ಲೆಯ ಹೊರಭಾಗದ ಶಿಲ್ಪಗಳಿಗಿಂತ ಪ್ರತ್ಯೇಕ ವರ್ಗಕ್ಕೆ ಸೇರುತ್ತವೆಂದು ಎಂ.ಎಂ.ಕಲಬುರ್ಗಿ ಅಭಿಪ್ರಾಯಪಟ್ಟಿದ್ದಾರೆ.[೪೮]

ನವರಂಗದ ನೈರುತ್ಯದಿಕ್ಕಿನ ಮೂಲೆಯಲ್ಲಿರುವ ಸುಮಾರು ೬ ಅಡಿ ಎತ್ತರದ ವೀರಭದ್ರನ ಮೂರ್ತಿಯು ಪೂರ್ವಾಭಿಮುಖವಾಗಿದೆ. ಕಪ್ಪುಶಿಲೆಯಲ್ಲಿ ಕಡೆದ ವೀರಭದ್ರನು ತ್ರಿಭಂಗಿಯಲ್ಲಿ ನಿಂತಿದ್ದಾನೆ. ತನ್ನ ನಾಲ್ಕು ಕೈಗಳಲ್ಲಿ ಖಟ್ವಂಗ, ಬಾಣ, ಖಡ್ಗ ಮತ್ತು ಖೇಟಗಳನ್ನು ಹಿಡಿದಿರುವನು. ಉಳಿದಂತೆ ಕಿರೀಟಮುಕುಟ ಸರ್ಪಕುಂಡಲ, ತೋಳ್ಬಂದಿ, ಕೈಕಂಕಣ, ಕಾಲುಕಡಗ, ರುಂಡಮಾಲೆ, ಉಂಗುರ, ನೂಪುರ ಧರಿಸಿದ್ದಾನೆ. ಕೆಳಬದಿಯಲ್ಲಿ ವ್ಯಕ್ತಿಯೋರ್ವನ ರುಂಡವನ್ನು ಕಾಲಲ್ಲಿ ತುಳಿಯುತ್ತಿರುವ ನಂದಿ, ಮತ್ತು ದಕ್ಷಬ್ರಹ್ಮನ ಶಿಲ್ಪಗಳಿವೆ. ನಂದಿ ತನ್ನ ಕಾಲಿನಿಂದ ವ್ಯಕ್ತಿಯೋರ್ವನ ರುಂಡವನ್ನು ತುಳಿಯುತ್ತಿರುವ ಎರಡು ಶಿಲ್ಪಗಳನ್ನು ಜಗಲೂರು ತಾಲೂಕಿನ ಕಲ್ಲೇದೇವರಪುರ ಗ್ರಾಮದಲ್ಲಿ ಕಾಣಬಹುದು. ಶೈಲಿಯ ದೃಷ್ಟಿಯಿಂದ ವೀರಭದ್ರನ ಶಿಲ್ಪವು ಹೊಯ್ಸಳರ ಕಾಲದ್ದಾಗಿದೆ.

ನವರಂಗದ ಪಶ್ಚಿಮದಿಕ್ಕಿನ ಗೋಡೆಯಲ್ಲಿ ಪೂರ್ವಾಭಿಮುಖವಾಗಿ ಪ್ರಣಾಮ ಮುದ್ರೆಯಲ್ಲಿ ಕುಳಿತಿರುವ ಶಿಲ್ಪವೊಂದಿದ್ದು, ಪ್ರಾರಂಭದಲ್ಲಿ ಎಂ.ಎಚ್. ಕೃಷ್ಣ ಮತ್ತು ಹುಲ್ಲೂರು ಶ್ರೀನಿವಾಸ ಜೋಯಿಸರು ಇದನ್ನು ಜಕ್ಕಣಾಚಾರಿ ಶಿಲ್ಪವೆಂದು ಕರೆದಿದ್ದರು. ಇದರ ಮೇಲಿನ ಶಾಸನ ಪರಿಶೀಲಿಸಿದ ತರುವಾಯ ಬಹುಮಂದಿ ವಿದ್ವಾಂಸರು ಇದನ್ನು ಸ್ಥಾನಿಕ ಸೋವಣ್ಣನ ಶಿಲ್ಪವೆಂದೇ ಪ್ರಸ್ತಾಪಿಸಿದ್ದಾರೆ. ಆದರೆ ಇತ್ತೀಚೆಗೆ ಈ ಶಾಸನದ ಪುನರ್ ಪರಿಶೀಲನೆಯಿಂದ ಈ ಶಿಲ್ಪ ಸಿದ್ಧನಾಥದೇವರ ಸ್ಥಾನಿಕ ಹಿರಿಯ ಸಿದ್ದಂಣ್ಣನ ಮಗನಾದ ಹರಿಯಣ್ಣನದು ಎಂದು ದೃಢಪಟ್ಟಿದ್ದು, ತನ್ನ ಅಣ್ಣನ ಮೇಲಿನ ಗೌರವಕ್ಕಾಗಿ ಸೋವಣ್ಣನೇ ಈ ಶಿಲ್ಪವನ್ನು ಕೆತ್ತಿಸಿ ಶಾಸನ ಹಾಕಿಸಿರಬಹುದು.[೪೯] ಪ್ರಣಾಮ ಮುದ್ರೆಯಲ್ಲಿರುವ ಹರಿಯಣ್ಣನು ಹಣೆಗೆ ಮುಂಡಾಸು ಧರಿಸಿದ್ದು ಕರ್ಣಕುಂಡಲ, ಕೈಕಡಗ, ಸೊಂಟಪಟ್ಟಿ, ಕಾಲುಕಡಗಗಳನ್ನು ಧರಿಸಿದಂತೆ ಶಿಲ್ಪಿತನಾಗಿದ್ದಾನೆ.

ಈ ಮೇಲ್ಕಾಣಿಸಿದ ಶಿಲ್ಪಗಳೊಡನೆ ಕಟ್ಟೆಯಮೇಲೆ ಆಲೀಡಭಂಗಿಯಲ್ಲಿರುವ ಮಹಿಷಾಸುರಮರ್ಧಿನಿ ಶಿಲ್ಪವನ್ನು ಸ್ಥಾಪಿಸಿದ್ದಾರೆ. ಮಹಿಷಾಸುರಮರ್ಧಿನಿಯು ತನ್ನ ನಾಲ್ಕು ಕೈಗಳಲ್ಲಿ ತ್ರಿಶೂಲ, ಖಡ್ಗ, ಶಂಖ, ಮಹಿಷಾಸುರನ ರುಂಡ ಹಿಡಿದಿದ್ದು, ಕರ್ಣಕುಂಡಲ, ಕಿರೀಟಮುಕುಟ, ಕಡಗ, ಕಂಠಿಹಾರ, ಧರಿಸಿರುವಂತೆ ಕಡೆಯಲಾಗಿದೆ. ಇಲ್ಲಿನ ಶಿಲ್ಪಗಳಲ್ಲಿ ಪೂರ್ವಾಭಿಮುಖವಾಗಿರುವ ಒಂದೂವರೆ ಅಡಿ ಎತ್ತರದ ನಗ್ನ ಭೈರವನ ಪುಟ್ಟ ವಿಗ್ರಹವಿದ್ದು, ಕಪ್ಪು ಶಿಲೆಯಲ್ಲಿ ಕಂಡರಿಸಲಾಗಿದೆ. ತನ್ನ ನಾಲ್ಕು ಕೈಗಳಲ್ಲಿ ಭೈರವನು ತ್ರಿಶೂಲ, ಢಮರು, ಖಡ್ಗ, ಕಪಾಲ, ಹಿಡಿದಿರುವನು. ಉಳಿದಂತೆ ಜಟಾಧರನಾಗಿದ್ದು ಹಾರ, ನಡುಪಟ್ಟಿ, ರುಂಡಮಾಲೆ, ಕಾಲ್ಕಡಗ, ಕೈಬಳೆ ಧರಿಸಿದಂತೆ ಶಿಲ್ಪಿತನಾಗಿದ್ದಾನೆ. ನವರಂಗದಲ್ಲಿ ಉತ್ತರಾಭಿಮುಖವಾಗಿ ಚಿಕ್ಕ ಗಣೇಶನ ಶಿಲ್ಪವಿದ್ದು, ತನ್ನ ನಾಲ್ಕು ಕೈಗಳಲ್ಲಿ ಅಂಕುಶ, ಪಾಶ, ಮೋದಕ ಮತ್ತು ಲೇಖನಿಯಿಂದ ಅಲಂಕೃತನಾಗಿದ್ದಾನೆ. ಇವುಗಳೊಡನೆ ಜೋಡಿಪಾದಗಳಿದ್ದು ಅದನ್ನು ಸರ್ಪವೊಂದು ಸುತ್ತುವರೆದಿದೆ. ನವರಂಗದ ಬಾಗಿಲುವಾಡವು ಸರಳವಾಗಿದೆ. ಅದರ ಹೊಸ್ತಿಲಲ್ಲಿ ನಮಸ್ಕಾರ ಹಾಕುತ್ತಿರುವ ಭಕ್ತನೋರ್ವನ ಆಕೃತಿಯಿದ್ದು, ಆತನು 'ಚಿಂತಲಕದುರ್ಗದ ಶ್ರೀ ಕಾಟನಾಯಕನ ಮಗ ಕಂಪಳಯ್ಯ'ನೆಂಬುದು ಅಲ್ಲಿಯೇ ಮೂಡಿಸಲಾದ ಏಕಸಾಲಿನ ಕನ್ನಡ ಬರಹದಿಂದ ವೇದ್ಯವಾಗುತ್ತದೆ. ಮುಖಮಂಟಪವು ಕಕ್ಷಾಸನ ಮತ್ತು ಹದಿನಾರು ಕೋನದಲ್ಲಿ ಕಡೆದ ಕಂಬಗಳನ್ನು ಒಳಗೊಂಡಿರುವುದು. ಕಕ್ಷಾಸನದ ಹೊರಬದಿಯಲ್ಲಿ ಪದ್ಮದ ಅಲಂಕರಣವಿದ್ದು, ಇದರ ಮೇಲ್ಬದಿಯಲ್ಲಿ ಇಳಿಜಾರಾದ ಕಪೋತವಿದೆ. ದ್ವಾರಮಂಟಪದ ಸುತ್ತಲಿನ ಪೌಳಿಗೋಡೆಯು ಭರಮಣ್ಣನಾಯಕನ ಕಾಲದಲ್ಲಿ ನಿರ್ಮಾಣಗೊಂಡಿದ್ದು, ಅದರ ಹೊರಬದಿಯಲ್ಲಿ ಪತ್ನಿ ಸಮೇತನಾಗಿ ನಂದಿಮೇಲೆ ಆಸೀನನಾದ ಉಮಾಮಹೇಶ್ವರನ ಚಿಕ್ಕಶಿಲ್ಪ ಕಡೆಯಲಾಗಿದೆ. ಸಿದ್ದಾಪುರದ ಗೌಡ ಸಿದ್ದಯ್ಯನು ಪ್ರಾಕಾರದಲ್ಲಿನ ಪೂರ್ವಾಭಿಮುಖವಾಗಿರುವ ಬಸವಣ್ಣನ ದೇಗುಲ ಕಟ್ಟಿಸಿದನು.[೫೦] ಇದರಲ್ಲಿ ಸುಮಾರು ಮೂರು ಅಡಿ ಎತ್ತರದ ಕಣಶಿಲೆಯ ನಂದಿವಿಗ್ರಹವಿದ್ದು ಭಗ್ನಗೊಂಡಿದೆ. ಪಶ್ಚಿಮಾಭಿಮುಖವಾಗಿರುವ ಎರಡು ಜೋಡಿ ದೇವಾಲಯಗಳು ಪ್ರಾಕಾರದಲ್ಲಿದ್ದು, ಈಗ ಹಾಳುಬಿದ್ದಿವೆ. ಪಾಳೆಯಗಾರರ ದಾಖಲೆಗಳಲ್ಲಿ ಪ್ರಸ್ತಾಪಗೊಂಡಿರುವ ಸಣ್ಣ ಮಣ(ಳ)ಲೇಶ್ವರ ಮತ್ತು ದೊಡ್ಡ ಮಣಲೇಶ್ವರ ದೇವಾಲಯಗಳು ಇವೇ ಇರಬಹುದೆಂಬುದು ವಿದ್ವಾಂಸರ ಅಭಿಮತ.[೫೧] ದೇವಾಲಯದ ಬಂಡೆಗಲ್ಲಿನ ಚಾಚಿನಲ್ಲಿ ಮುಗುಚಿದ ಪದ್ಮದ ರಚನೆ ಇದ್ದು, ಇದರ ಕೆಳಗೆ ನೆಲದಲ್ಲಿ ಅಗ್ನಿಕುಂಡ ಮತ್ತು ನಾಲ್ಕು ಅಡಿ ಎತ್ತರದ ಚೌಕಾಕಾರದ ವೇದಿಕೆ ಇದೆ. ಚಿತ್ರದುರ್ಗ ನಾಯಕ ಅರಸರ ಪಟ್ಟಾಭಿಷೇಕ ಮಹೋತ್ಸವ ಇಲ್ಲಿಯೇ ಜರುಗುತಿತ್ತು.

ಸಂಪಿಗೆ ಸಿದ್ದೇಶ್ವರ ದೇವಾಲಯವೂ ಹಿಡಿಂಬೇಶ್ವರ ದೇವಾಲಯದಂತೆ ಕಲ್ಲುಪ್ಪರಿಗೆ ಅಥವಾ ಗಾಳಿಮಂಟಪಗಳನ್ನು ಒಳಗೊಂಡಿದೆ. ನವರಂಗದ ಗೋಡೆಯಲ್ಲಿನ ಶಾಸನವೊಂದರಿಂದ ಸಿದ್ಧನಾಥ ದೇವಾಲಯದ ಸ್ಥಾನಿಕನಾದ ಸೋವಣ್ಣನು ಈ ದೇವಾಲಯದ ಅಧಿಷ್ಠಾನ ಮೂರು ನೆಲೆಯ ಕಲ್ಲು ಉಪ್ಪರಿಗೆ, ನವಿಲುಯ್ಯಾಲೆ ಕಂಬ, ಮೇಲಿನ ಶಿಖರಗಳನ್ನು ನಿರ್ಮಿಸಿದ್ದನೆಂದು ತಿಳಿದುಬರುತ್ತದೆ.[೫೨] ಆ

ಕಲ್ಲು ಉಪ್ಪರಿಗೆಯು ಸಿದ್ದೇಶ್ವರ ದೇವಾಲಯಕ್ಕೆ ಪ್ರವೇಶ ಕಲ್ಪಿಸುವ ದ್ವಾರಮಂಟಪವಾಗಿದೆ. ಉಪಪೀಠ, ಕಂಠ, ಉಪಾನಗಳಿಂದ ಕೂಡಿದ ಅಧಿಷ್ಠಾನದ ಮೇಲೆ ಕಟ್ಟಿದ ಈ ಗಾಳಿಗೋಪುರಗಳು ಮೂರು ಹಂತಗಳನ್ನು ಹೊಂದಿವೆ. ಬಾಗಿಲುವಾಡಗಳು, ಅರೆಗಂಬಗಳಿಂದ ಕೂಡಿದ್ದು, ಸರಳವಾಗಿವೆ. ಚೌಕ ಮತ್ತು ಅಷ್ಟಮುಖ ಮಾತ್ರವಲ್ಲದೆ ವೃತ್ತಾಕಾರವಾಗಿ ಕಡೆದ ಕಣಶಿಲೆಯ ಕಂಬಗಳನ್ನು ಇದರಲ್ಲಿ ಕಾಣಬಹುದು. ದೇವಾಲಯದ ಮುಂದಿನ ದ್ವಾರಮಂಟಪವು ವಿವಿಧ ಅವಧಿಯಲ್ಲಿ ಮೂಡಿಸಿದ ಗಾರೆಯ ಲೇಪನ ಮತ್ತು ರಚನೆಗಳನ್ನು ಒಳಗೊಂಡಿದೆ. ಅಂದರೆ ಒಂದರ ಮೇಲೆ ಒಂದರಂತೆ ಎರಡುಬಾರಿ ಗಾರೆಯ ಲೇಪನ ಮಾಡಿರುವುದನ್ನು ಕಾಣಬಹುದು. ಪ್ರಾರಂಭದಲ್ಲಿ ವಿಜಯನಗರ ಅರಸರ ಅವಧಿಯಲ್ಲೇ ಇದಕ್ಕೆ ಗಾರೆ ಲೇಪನ ನಡೆದಿತ್ತು. ಗಮನಾರ್ಹ ಅಂಶವೆಂದರೆ ಬಹುಶಃ ನಾಯಕರ ಅವಧಿಯಲ್ಲಿ ನಡೆದ ಗಾರೆಯ ಕೆಲಸದ ಕಾರಣವಾಗಿ ಈ ಉಪ್ಪರಿಗೆಯ ಎದುರುಪಾರ್ಶ್ವದ ಗೂಡಿನಲ್ಲಿ ಅಂದರೆ ಗ್ರೀವದ ಗೂಡಿನಲ್ಲಿ ಮೂಡಿಸಿದ ವೇಣುಗೋಪಾಲನ ಮೂರ್ತಿಯು ಮುಚ್ಚಿಹೋಗಿದ್ದು ಇತ್ತೀಚೆಗೆ ಬೆಳಕಿಗೆ ಬಂದಿದೆ. ಅಂದರೆ ಇದರ ಮೇಲ್ಬದಿಯಲ್ಲಿ ಮೊದಲಿಗೆ ಎದೆಯವರೆಗೆ ನಿರ್ಮಿಸಲಾದ ದೇವಿಯ ವಿಗ್ರಹವೊಂದು ಆ ಸ್ಥಳವನ್ನು ಆವರಿಸಿತ್ತು.[೫೩] ಹಾಗೆಯೇ ಶಿಖರದ ಮೇಲೆ ಗಾರೆ ಮತ್ತು ಇಟ್ಟಿಗೆಗಳ ಮಧ್ಯೆ ಅಳವಡಿಸಲಾಗಿರುವ ಹಸಿರುಶಿಲೆಯ ಲಿಂಗದ ಮೇಲೆ ತ್ರಿಶೂಲದ ಚಿತ್ರವನ್ನು ಮೂಡಿಸಲಾಗಿದೆ. ಮಂಟಪದ ಮೇಲೆ ಗಾರೆ ಮತ್ತು ಗಚ್ಚಿನಿಂದ ನಿರ್ಮಿಸಿದ ಗಾರೆಯ ರಚನೆಯಿದ್ದು, ಇದು ಕೀರ್ತಿಮುಖ, ವಜ್ರ, ಹೂಬಳ್ಳಿ, ಗಿಳಿ, ಹಂಸ ಮುಂತಾದವುಗಳಿಂದ ಕೂಡಿದೆ. ಈ ದ್ವಾರ ಮಂಟಪದ ಹೊರಬದಿಯ ಕಂಬದ ಮೇಲೆ 'ಸಿದ್ಧರಂಗಯ್ಯನ ಸೇವೆ ಗಂಗಾಧರವಧಾನಿಗಳು' ಎಂಬ ಬರಹವಿದೆ.

ಕ್ರಿ.ಶ.೧೨೫೫ ಮತ್ತು ೧೨೫೬ರ ಎರಡು ಶಾಸನಗಳು ಪ್ರಸ್ತಾಪಿಸುವಂತೆ ಮಲ್ಲಿನಾಥ ಒಡೆಯನು ಚಿಮ್ಮತ್ತನಕಲ್ಲು ಸಿದ್ದನಾಥ ದೇವರ ಕಲ್ಲುಪ್ಪರಿಗೆ ಎತ್ತಿಸಿ ಕಲ್ಲ ನವಿಲುಯ್ಯಾಲೆ, ಶಿಖರ ಪ್ರತಿಷ್ಠೆಯನ್ನು ಮಾಡಿಸಿದನು.[೫೪] ಮಲ್ಲಿನಾಥ ಒಡೆಯನು ಕಟ್ಟಿಸಿದ ಕಲ್ಲುಪ್ಪರಿಗೆ ಹಿಡಿಂಬೇಶ್ವರ ದೇಗುಲದ ಮುಂಬದಿಯ ಕಲ್ಲುಪ್ಪರಿಗೆಯಾಗಿದೆ. ಸಂಪಿಗೆ ಸಿದ್ದೇಶ್ವರ ದೇಗುಲವನ್ನು ಆವರಿಸಿರುವ ತುಪ್ಪದಕೊಳ ಬತೇರಿಯ ಬಂಡೆಯ ಮೇಲೆ ಕೊರೆದು ಮೂಡಿಸಿದ 'ಸಿದ್ದನಾಥ ದೇವರ ಶಿಖರ' ಎಂಬ ಎರಡು ಸಾಲಿನ ಬರಹ ಈಚೆಗೆ ಬೆಳಕಿಗೆ ಬಂದಿದ್ದು, ಮಲ್ಲಿನಾಥನ ಶಾಸನಗಳಲ್ಲಿ ಪ್ರಸ್ತಾಪಿಸಿರುವ ಮೇಲಣ ಶಿಖರವು ತುಪ್ಪದ ಕೊಳ ಬತೇರಿಯೇ ಆಗಿದೆಯೆಂಬುದು ಇದರಿಂದ ದೃಢವಾಗಿದೆ.[೫೫] ಚಿತ್ರದುರ್ಗ ನಾಯಕ ಅರಸರ ದಾಖಲೆಗಳು ಹೇಳುವಂತೆ ಬುಕ್ಕರಾಯನು ಈ ಶಿಖರದಲ್ಲಿ ಮೂಕಶಿಲೆ ಶಿಖರ ಅಥವಾ ಮುಕ್ತಶಿವಾಲಯ ಮಂಟಪವನ್ನು ನಿರ್ಮಿಸಿ ಬಂಡೆಯ ಮೇಲೆ ಬುಕ್ಕರಾಯನ ಸೇವೆ ಎಂಬುದಾಗಿ ಕೊರೆಯಿಸಿದನೆಂದು ಪರೋಕ್ಷವಾಗಿ ಸೂಚಿತವಾದ ಅಂಶವು ಈಗ ಧೃಡಪಟ್ಟಂತಾಗಿದೆ.[೫೬] ಮುಕ್ತ ಶಿವಾಲಯವೆಂದರೆ ತೆರೆದ ಮಂಟಪವಾಗಿದ್ದು, ಅಲ್ಲಿಯೇ ಒಂದು ಶಿವಲಿಂಗವನ್ನು ಪ್ರತಿಷ್ಠಾಪಿಸಿದ್ದಿರಬಹುದು.

ಬೃಹನ್ಮಠದ ಹಿಂಬದಿಯಲ್ಲಿ ತುಪ್ಪದ ಕೊಳದ ಬತೇರಿಯನ್ನೇರಲು ಮೂಡಿಸಲಾದ ಚಿಕ್ಕ ಕುಳಿಗಳಿವೆ. ಇವು ಸಿದ್ದನಾಥ ದೇವರ ಶಿಖರಕ್ಕೆ ಕರೆದೊಯ್ಯುತ್ತವೆ. ಇವುಗಳ ಪ್ರಾರಂಭದ ಎಡಬದಿಯಲ್ಲಿ ಸಾಷ್ಟಾಂಗ ನಮಸ್ಕಾರ ಮಾಡುತ್ತಿದ್ದು ದಂಪತಿಗಳಂತೆ ತೋರುವ ಶಿಲ್ಪಗಳನ್ನು ಕಡೆಯಲಾಗಿದೆ. ಇವುಗಳ ಮೇಲಿನ ನಾಲ್ಕು ಸಾಲಿನ ಕನ್ನಡ ಬರಹದಿಂದ ಈ ದೇಗುಲಕ್ಕೆ ಚಂಪಕ ಸಿದ್ದೇಶ್ವರ ದೇಗುಲವೆಂಬ ಹೆಸರಿತ್ತೆಂದು ತಿಳಿದುಬಂದಿದೆ.[೫೭] ಪಾಳೆಯಗಾರರು ತಮ್ಮ ಆಳ್ವಿಕೆ ಕಾಲದಲ್ಲಿ ಸಿದ್ದನಾಥ ದೇವಾಲಯದ ಶಿಖರವನ್ನು ಮಾರ್ಪಡಿಸಿ ತಮ್ಮ ಕೋಟೆ ರಕ್ಷಣೆ ಎಡೆಯಾಗಿ ಮಾರ್ಪಡಿಸಿಕೊಂಡು, ಮೊದಲಿದ್ದ ತುಪ್ಪದ ಕೊಳದಲ್ಲಿ ಮದ್ದುಗುಂಡುಗಳನ್ನು ಸಂಗ್ರಹಿಸತೊಡಗಿದರು. ಆದರೂ ಇಂದು ಇದಕ್ಕೆ ತುಪ್ಪದ ಕೊಳ ಎಂಬ ಹೆಸರೇ ಉಳಿದು ಬಂದಿದೆ. ಸಂಪಿಗೆ ಸಿದ್ದೇಶ್ವರ ದೇಗುಲದ ಮುಂಬದಿಯಲ್ಲಿ ಎರಡು

ಉಯ್ಯಾಲೆ ಕಂಬಗಳಿದ್ದು, ದೇವಾಲಯದ ಮುಂದಿನದನ್ನು ಸೋವಣ್ಣನು, ಗಾಳಿಮಂಟಪದ ಬಳಿಯಿರುವ ಉಯ್ಯಾಲೆ ಕಂಬವನ್ನು ಮಲ್ಲಿನಾಥ ಒಡೆಯನು ನಿರ್ಮಿಸಿದನು.

ಚಾರಿತ್ರಿಕ ಮಹತ್ವ ಪಡೆದಿರುವ ಈ ದೇಗುಲ ಪ್ರಭುಗಳಿಂದ ಹಲವಾರು ಬಗೆಯ ದಾನದತ್ತಿಗಳನ್ನು[೫೮] ಪಡೆದಿತ್ತು. ಅದನ್ನು ಈ ಕೆಳಗಿನ ಪಟ್ಟಿಯಿಂದ ತಿಳಿಯಬಹುದು.

ದಾನದ ಕಾಲ	ದಾನ ನೀಡಿದವರು	ದಾನ ಪಡೆದವರು	ದಾನದ ವಸ್ತು	ದಾನದ ಉದ್ದೇಶ
ಕ್ರಿ.ಶ. ೧೨೮೬	ಪೆರುಮಾಳೆದೇವ ದಣ್ಣಾಯಕ	–	ಸೀಮೆಯೊಂದನ್ನು	–
ಕ್ರಿ.ಶ. ೧೩೩೦	ಬಲ್ಲಪ ದಣ್ಣಾಯಕ ಮತ್ತು ಸೀಗೆಯ ದಣ್ಣಾಯಕ	–	ಬೆಣ್ಣೆದೋಣೆ ಗ್ರಾಮ	ಅಮೃತಪಡಿ, ಅಂಗರಂಗ ಭೋಗಕ್ಕಾಗಿ
ಕ್ರಿ.ಶ. ೧೩೫೫	ಮಲ್ಲಿನಾಥ ಒಡೆಯ	ಸಾನಿಕ ಸೋವಣ್ಣ	ಈ ಮೊದಲು ಬಿಟ್ಟಿದ ಚಿಕ್ಕಪುರ ಗ್ರಾಮದ ಜೀರ್ಣೋದ್ಧಾರ ಮಾಡಿ ಪುನಃ ದಾನ ನೀಡಿದನು	ಅಂಗರಂಗಭೋಗ, ದೀಪ್ತಿ ಮತ್ತು ಅಮೃತಪಡಿಗೆ
ಕ್ರಿ.ಶ. ೧೩೫೬	ಮಲ್ಲಿನಾಥ ಒಡೆಯ	ಸ್ಥಾನಿಕ ಸೋವಣ್ಣ	ಈ ಮೊದಲು ದತ್ತಿ ಬಿಟ್ಟಿದ್ದ ಮಸುವಡಿಯಪುರವನ್ನು ಜೀರ್ಣೋದ್ಧಾರಗೊಳಿಸಿ ಪುನಃ ದತ್ತಿಯಾಗಿ ನೀಡಿದನು	ಅಂಗ, ರಂಗಭೋಗ, ದೀಪ್ತಿ ಮತ್ತು ಅಮೃತಪಡಿಗೆ

ಹೀಗೆ ಹಲವು ದಾನದತ್ತಿ ಪಡೆದು ಸಾಂಸ್ಕೃತಿಕವಾಗಿ ಮಹತ್ವ ಪಡೆದಿದ್ದ ಸಂಪಿಗೆ ಸಿದ್ದೇಶ್ವರ ದೇವರಿಗೆ ಪ್ರಸ್ತುತದಲ್ಲೂ ಪೂಜೆ ಉತ್ಸವಾದಿಗಳು ಸಲ್ಲುತ್ತಿವೆ. ಪ್ರತಿವರ್ಷ ಏಪ್ರಿಲ್ ತಿಂಗಳಲ್ಲಿ ರುದ್ರಾಭಿಷೇಕ ಮತ್ತು ಗುಗ್ಗಳ ಮಹೋತ್ಸವಗಳು ಈ ದೇವಾಲಯದ ವಿಶೇಷ ಆಚರಣೆಯಾಗಿವೆ. ಗುಗ್ಗಳ ಮಹೋತ್ಸವವನ್ನು ಕೆಂಡಾರ್ಚನೆ ಎಂದೂ ಕರೆಯುವುದು ವಾಡಿಕೆ. ದೇವಾಲಯದ ಮುಂಬದಿಯಲ್ಲಿ ಗುಂಡಿಯೊಂದನ್ನು ತೋಡಿ ಅದರಲ್ಲಿ ಕಟ್ಟಿಗೆ ಸುಟ್ಟು ಕೆಂಡಮಾಡುತ್ತಾರೆ. ಆಗ ದೇವರನ್ನು ಹೊತ್ತು ಅದರ ಮೇಲೆ ನಡೆಯುವರು. ಇದನ್ನು ಮಾಡುವ ವ್ಯಕ್ತಿ ಉಪವಾಸವಿರುತ್ತಾನೆ. ಈ ದೇವರನ್ನು ಲಿಂಗಾಯಿತರು ಪೂಜಿಸುತ್ತಾ ಬಂದಿರುವರು. ಇದಲ್ಲದೆ ಸಂಕ್ರಾಂತಿ, ಶಿವರಾತ್ರಿ ವಿಜಯದಶಮಿಗಳಂದು ವಿಶೇಷ ಪೂಜೆಗಳು ನೆರವೇರುತ್ತವೆ.

ಜನಪದ ಸಾಹಿತ್ಯದಲ್ಲಿಯೂ ಚಿತ್ರದುರ್ಗದ ಸಂಪಿಗೆ ಸಿದ್ದೇಶ್ವರನ ಉಲ್ಲೇಖವಿದೆ. ಚಿತ್ರದುರ್ಗದ ನಾಯಕ ಅರಸರು ಯುದ್ಧಗಳಿಗೆ ಹೋಗುವ ಸಮಯದಲ್ಲಿ ಸಂಪಿಗೆ ಸಿದ್ದೇಶ್ವರನನ್ನು ಬೇಡಿಕೊಂಡ ಬಗೆ ಈ ರೀತಿ ಇದೆ,

ಮೇಲೆ ದುರುಗದ ಮೇಲೆ ಸ್ವಾಮಿ ಸಿದ್ದೇಶನಿಗೆ।
ಕಾಯೊಡೆದು ಕೈಯ ಮುಗಿದಾನು॥
ಏನಪ್ಪ ಮುನಿಸ್ವಾಮಿ ಭಿನ್ನವ ಮಾಡಿಸದೆ
ನನಗೊಂದು ವಾಕ್ಯವ ಕೊಡೆಂದು॥
ನಿನ್ನ ಕತ್ತಿ ಎನ ಕಾರ್ಯವು ಸಮಗಾರ್ಯವಿಲ್ಲವೆಂದು।
ನೆತ್ತೀಲಿ ಕುಪ್ಪೆ ಕೊಟ್ಯಾನೆ॥[೫೯]

ಎಂದು ಸಂಪಿಗೆ ಸಿದ್ದೇಶ್ವರನನ್ನು ಕೋರುತ್ತಿದ್ದರು.

ಅರಸು ಮದಕೇರಣ್ಣ ಅಂದಣವನೇರಿ
ಹೊರಟಾನು ನೀರಥಡಿಗೇ।
ಅಂಗಳವ ತಾಬಿಟ್ಟು ಹೊರಟಾಗ ಸಂಪಿಗೆಸಿದ್ದ
ಹಾವಾಗಿ ಅಡ್ಡ ಸುಳಿದಾ[೬೦]

ಎಂದು ಜನಪದರು ದೇವತೆಗಳ ಬಗ್ಗೆ ಇದ್ದ ಭಯಭಕ್ತಿಗಳಿಂದ ದೇವರನ್ನು ಪೂಜಿಸದೆ ಯಾವ ಕಾರ್ಯವನ್ನೂ ಕೈಗೊಳ್ಳುತ್ತಿರಲಿಲ್ಲ. ಇದು ಅರಸ ಯುದ್ಧಕ್ಕೆ ಹೊರಟಾಗ ಅಪಶಕುನವಾದಂತೆ ಜನಪದರು ಸೂಚಿಸುವರು. ಇನ್ನೂ ಅವರು ಮುಂದುವರೆದು

ಟಾಕಿನಾ ಬಾಗಿಲ ಬಿಟ್ಟು ಹೊರಡುವಾಗ ಸಂಪಿಗೆಸಿದ್ದ
ಹಾವಾಗಿ ಅಡ್ಡ ಸುಳಿದ।[೬೧] ಎಂದು ಜನಪದ ಸಾಹಿತ್ಯದಲ್ಲಿ ಸಂಪಿಗೆ

ಸಿದ್ದೇಶ್ವರನ ಉಲ್ಲೇಖ ಕಾಣಬರುವುದು.

೫. ಫಲ್ಗುಣೇಶ್ವರ ದೇವಾಲಯ

ಚಿತ್ರದುರ್ಗ ಬೆಟ್ಟದ ಭೀಮನಕಲ್ಲು ಬತೇರಿಯ ಪಶ್ಚಿಮದಿಕ್ಕಿನ ತಪ್ಪಲಿನಲ್ಲಿರುವ ದೇವಾಲಯವಿದು. ಪಶ್ಚಿಮಾಭಿಮುಖವಾಗಿರುವ ಈ ದೇವಾಲಯವು ಗರ್ಭಗೃಹ ನವರಂಗ ಮತ್ತು ಮುಖಮಂಟಪಗಳಿಂದ ಕೂಡಿದೆ. ಬೃಹದಾಕಾರದ ಕಣಶಿಲೆಯ ಬಂಡೆಗಲ್ಲಿನ ಅಡಿಯ ವಿಶಾಲವಾದ ಗುಹೆಯನ್ನು ಗರ್ಭಗೃಹವನ್ನಾಗಿ ಬಳಸಿಕೊಳ್ಳಲಾಗಿದೆ. ಇದರಲ್ಲಿ ಸುಮಾರು ನಾಲ್ಕು ಅಡಿ ಎತ್ತರದ ಪ್ರತಿಷ್ಠಾಪನ ಶಿವಲಿಂಗವಿದೆ. ಆರು ಅಡಿ ಅಗಲದ ಚೌಕಾಕಾರದ ಪಾಣಿವಟ್ಟ ಇದ್ದು, ಜಲಹರಿಯು ಲಿಂಗದ ಬಲಬದಿಗೆ ಚಾಚಿಕೊಂಡಿದೆ. ಫಲ್ಗುಣೇಶ್ವರ ಶಿವಲಿಂಗ, ಹಾಯಕಲ್ಲಿನ ರಾಮಲಿಂಗೇಶ್ವರ ಮತ್ತು ದೊಡ್ಡಸಿದ್ದವ್ವನಹಳ್ಳಿಯ ಈಶ್ವರ ಲಿಂಗಗಳ ಆಕೃತಿಯಲ್ಲಿ ಸಾಮ್ಯತೆಯಿದ್ದು, ಇವು ಕಲ್ಯಾಣದ ಚಾಲುಕ್ಯರ ಕಾಲದವುಗಳಾಗಿವೆ. ಸರಳವಾಗಿರುವ ಗರ್ಭಗೃಹದ ಬಾಗಿಲುವಾಡದಲ್ಲಿ ಅರೆಗಂಬಗಳಿದ್ದು, ಮೇಲ್ಬದಿಯಲ್ಲಿ ಮುಂಚಾಚಿದ ತೋರಣವಿದೆ.

ನವರಂಗದಲ್ಲಿ ನಾಲ್ಕು ಕಂಬಗಳಿದ್ದು, ಇವುಗಳು ಚಚ್ಚೌಕ ಪೀಠದ ಮೇಲಿವೆ. ಇವು ಚೌಕಾಕಾರ, ಅಷ್ಟಕೋನ ಮತ್ತು ವೃತ್ತಾಕಾರಗಳಿಂದ ಕೂಡಿದ್ದು, ದಿಂಡು, ಹಲಗೆ ಮತ್ತು ಬೋದಿಗೆಗಳಿವೆ. ನವರಂಗದ ಬಾಗಿಲುವಾಡವು ಗರ್ಭಗೃಹದ ಬಾಗಿಲುವಾಡದಂತೆಯೇ ಇದೆ. ಮುಖಮಂಟಪವು ಕಕ್ಷಾಸನ ಮತ್ತು ಅರೆಗಂಬಗಳಿಂದ ಕೂಡಿದ್ದು, ಇಳಿಜಾರಾದ ಕಪೋತವನ್ನು ಹೊಂದಿದೆ. ದೇವಾಲಯದ ಅಧಿಷ್ಠಾನವು ಪೀಠ, ಕಂಠ, ಕುಮುದ, ಉಪಾನಗಳಿಂದ ರಚನೆಯಾಗಿದ್ದು, ಭಿತ್ತಿಯಲ್ಲಿ ಯಾವುದೇ ಅಲಂಕರಣಗಳಿಲ್ಲ. ಗರ್ಭಗೃಹದ ಬೃಹದಾಕಾರದ ಬಂಡೆಯ ಮೇಲೆ ದ್ರಾವಿಡ ಶೈಲಿಯ ಶಿಖರವಿದ್ದು ಯಾವುದೇ ಬಗೆಯ ಕಳಸವಿಲ್ಲ. ಫಲ್ಗುಣೇಶ್ವರ ದೇವಾಲಯದ ಮುಂದಣ ಮಂಟಪವನ್ನು ಅಂದರೆ ನವರಂಗ ಮತ್ತು ಮುಖಮಂಟಪಗಳನ್ನು ಹರಿಹರದ ಸಂಧಿವಿಗ್ರಹಿ ಸೋವಣ್ಣನು ಕ್ರಿ.ಶ.೧೨೫೯ರಲ್ಲಿ ಕಟ್ಟಿಸಿದ್ದನೆಂದು ಅದೇ ದೇಗುಲದಲ್ಲಿನ ಶಾಸನದಲ್ಲಿ ಉಕ್ತವಾಗಿದೆ.[೬೨] ಈ ದೇವಾಲಯ ಹೊಯ್ಸಳ ಶೈಲಿಯಲ್ಲಿ ನಿರ್ಮಾಣವಾಗಿದೆ. ದೇವಾಲಯದ ಎಡಬದಿಯಲ್ಲಿ ಬಳಪದ ಶಿಲೆಯಲ್ಲಿ ಕಂಡರಿಸಿದ ಮೂರು ಹಂತದ ವೀರಗಲ್ಲೊಂದು ಇದೆ. ಇದರ ಕೆಳಹಂತದಲ್ಲಿ ವೀರನು ಬಿಲ್ಲು ಬಾಣಗಳನ್ನು ಹಿಡಿದು ಹೋರಾಡುತ್ತಿರುವಂತೆಯೂ, ಮಧ್ಯಹಂತದಲ್ಲಿ ಅಪ್ಸರೆಯರೊಡಗೂಡಿ ಸ್ವರ್ಗಕ್ಕೆ ಹೋಗುತ್ತಿರುವಂತೆಯೂ, ಮೇಲಿನ ಹಂತದಲ್ಲಿ ವೀರ ಶಿವಲಿಂಗದ ಪಕ್ಕ ಪ್ರಣಾಮ ಮುದ್ರೆಯಲ್ಲಿ ಕುಳಿತಿರುವಂತೆಯೂ, ಪಕ್ಕದಲ್ಲಿ ವ್ಯಕ್ತಿಯೊರ್ವ ಲಿಂಗವನ್ನು ಪೂಜಿಸುತ್ತಿರುವಂತೆಯೂ ಚಿತ್ರಿತವಾಗಿದೆ.

೬. ಹಿಮವತ್ ಕೇದಾರ ಗುಹಾಲಯ

ಚಿತ್ರದುರ್ಗದ ಜೋಗಿಮಟ್ಟಿ ಬೆಟ್ಟಪರಿಸರದಲ್ಲಿರುವ ಹಿಮವತ್ ಕೇದಾರ ಗುಹೆಯು ಧಾರ್ಮಿಕವಾಗಿ ಬಹು ಮಹತ್ವಪಡೆದ ತಾಣ. ಇಲ್ಲಿನ ನೈಸರ್ಗಿಕ ಬಂಡೆಯೊಂದರಲ್ಲಿ ಸದಾಕಾಲ ನೀರು ಜಿನುಗುವ ಈ ಗುಹೆ ಕಣಿವೆಯೊಂದರಲ್ಲಿದೆ. ಹಿಂದೊಮ್ಮೆ ಶೈವ ಸಂಬಂಧಿತ ಪ್ರಮುಖ ಎಡೆಯಾಗಿದ್ದ ಈ ಪರಿಸರ ಪ್ರಸ್ತುತವೂ ಪೂಜನೀಯ ತಾಣವಾಗಿದೆ. ಪಶ್ಚಿಮಾಭಿಮುಖವಾಗಿರುವ ಇಲ್ಲಿನ ಗುಹೆಯಲ್ಲಿ ನಗ್ನಭೈರವ, ಶಿವಲಿಂಗ, ನಂದಿಯ ಶಿಲ್ಪಗಳಿವೆ. ಇಲ್ಲಿನ ಶಿವಲಿಂಗವನ್ನು ಕ್ರಿ.ಶ.೧೬೩೩ರಲ್ಲಿ ಸ್ಥಾಪಿಸಿದ್ದೆಂದು ಅಲ್ಲಿನ ನಂದಿಪೀಠದಲ್ಲಿ ದೊರೆತ ಶಾಸನವು ಪ್ರಸ್ತಾಪಿಸುವುದು. ಶಾಸನಸ್ಥ ಪೀಠದ ಮೇಲಿರುವ ಒಂದು ಅಡಿ ಎತ್ತರದ ನಂದಿಶಿಲ್ಪವು ಸಾಧಾರಣವಾಗಿದೆ. ಉಳಿದಂತೆ ಬಳಪದಶಿಲೆಯಲ್ಲಿ ಕಂಡರಿಸಲ್ಪಟ್ಟ ಭೈರವ ಶಿಲ್ಪ ಮತ್ತು ಪ್ರಭಾವಳಿಗಳು ಕಲಾತ್ಮಕ ಕೆತ್ತನೆಗಳಿಂದ ಕೂಡಿದ್ದು ಹೊಯ್ಸಳ ಶೈಲಿಯಲ್ಲಿವೆ. ಸುಮಾರು ಮೂರು ಅಡಿ ಎತ್ತರದ ನಗ್ನಭೈರವನ ಶಿಲ್ಪದ ರುಂಡಭಾಗವು ಭಗ್ನವಾಗಿದೆ. ಭೈರವನು ನಾಲ್ಕು ಕೈಗಳಲ್ಲಿ ತ್ರಿಶೂಲ, ಢಮರು, ಖಡ್ಗ ಮತ್ತು ರುಂಡಧಾರಿಯಾಗಿದ್ದು, ಅದರಿಂದ ಒಸರುವ ರಕ್ತವನ್ನು ನಾಯಿಯೊಂದು ನೆಕ್ಕುತ್ತಿದೆ. ಭೈರವನು ಕಂಠಿಹಾರ, ಸರ, ತೋಳ್ಬಂದಿ, ಕೈಬಳೆ, ಕಾಲ್ಕಡಗ, ರುಂಡಮಾಲೆ, ನೂಪುರ ಧರಿಸಿದಂತೆ ಶಿಲ್ಪಿತವಾಗಿದೆ. ಗುಹೆಗೆ ಅಭಿಮುಖವಾಗಿರುವ ಕಣಶಿಲೆಯ ಹುಟ್ಟು ಬಂಡೆಯೊಂದರಲ್ಲಿ ಅಪೂರ್ಣಕೆತ್ತನೆಯ ನಂದಿಶಿಲ್ಪವಿದೆ. ಚಿತ್ರದುರ್ಗ ಪರಿಸರದ ದೇವತೆಗಳನ್ನು ಹೊಳೆ ಪೂಜೆಗೆಂದು ಇಲ್ಲಿಗೆ ಹೊತ್ತು ತರುವುದು ವಾಡಿಕೆ. ಅಲ್ಲಿ ಪೂಜಿಸಿದ ನಂತರ ಪುನಃ ಮೂಲಸ್ಥಾನಕ್ಕೆ ಕರೆದೊಯ್ಯುವರು. ಇದು ಬಹು ಹಿಂದಿನಿಂದಲೂ ನಡೆದುಬಂದ ಪದ್ಧತಿಯೆಂಬುದು ಗಮನಾರ್ಹ.

೭. ಸಾನಂದ ಗಣಪತಿ ದೇವಾಲಯ

ಚಿತ್ರದುರ್ಗ ಬೆಟ್ಟದಲ್ಲಿನ ವಿಷದಕತ್ತಿ ಬಾಗಿಲನ್ನು ದಾಟಿ ಮುನ್ನಡೆದರೆ ಸಿಗುವ ದೇಗುಲವಿದು. ಪೂರ್ವಾಭಿಮುಖವಾಗಿರುವ ಇದು ಮೂಲತಃ ಆನೆಯಾಕಾರದ ಕಣಶಿಲೆಯ ಹುಟ್ಟು ಬಂಡೆಯೊಂದರಲ್ಲಿ ಗಣೇಶ ಶಿಲ್ಪವನ್ನು ಕಡೆಯಲಾಗಿದೆ. ಇದಕ್ಕೆ ಗರ್ಭಗೃಹ, ತೆರೆದ ಮಂಟಪವನ್ನು ನಿರ್ಮಿಸಲಾಗಿದೆ. ಗರ್ಭಗೃಹದಲ್ಲಿನ ಹುಟ್ಟು ಬಂಡೆಯ ಮೇಲಿನ ಗಣೇಶನ ಕೆತ್ತನೆಯು ಸುಮಾರು ನಾಲ್ಕು ಅಡಿ ಎತ್ತರವಿದೆ. ಸುಖಾಸೀನನಾಗಿ ಕುಳಿತಿರುವ ಗಣೇಶನು ತನ್ನ ನಾಲ್ಕು ಕೈಗಳಲ್ಲಿ ಅಂಕುಶ, ಪಾಶ, ಮೋದಕ ಮತ್ತು ಲೇಖನಿ ಹಿಡಿದಿರುವನು. ದೇಹವು ಕರಂಡಮುಕುಟ, ಕಂಠಿಹಾರ, ಉಪವೀತ, ಕೈಕಂಕಣ, ಉಂಗುರ, ಕಾಲ್ಕಡಗ ಹಾಗೂ ಉದರಬಂಧದಿಂದ ಅಲಂಕೃತವಾಗಿದೆ. ಕೂಡಲ ಶೃಂಗೇರಿ ಮಠದ ಗುರುಗಳು ಚಿತ್ರದುರ್ಗದಲ್ಲಿ ಬಿಡಾರ ಮಾಡುತ್ತಿದ್ದಾಗ ಪ್ರಾತಃಕಾಲದಲ್ಲಿ ಎದ್ದು, ಉಪ್ಪರಿಗೆ ಮೇಲೆ ನಿಂತು ಸಾನಂದ ಗಣೇಶನನ್ನು ದರ್ಶನ ಮಾಡುತ್ತಿದ್ದರೆಂಬ ಪ್ರತೀತಿಯಿದೆ. ಕ್ರಿ.ಶ. ೧೭ನೇ ಶತಮಾನದಲ್ಲಿ ನಿರ್ಮಾಣವಾಗಿರುವ ಈ ದೇವಾಲಯವು ವಿಜಯನಗರೋತ್ತರ ಶೈಲಿಯಲ್ಲಿದೆ.

೨.೩.೩. ರಚನಾತ್ಮಕ ದೇವಾಲಯಗಳು

ಬೃಹತ್ತಾದ ಬಂಡೆಗಲ್ಲುಗಳನ್ನಾಧರಿಸಿದ ಗುಹಾಲಯಗಳಿಂದ ಹೊರತಾದ ದೇವಾಲಯಗಳು ರಚನಾತ್ಮಕ ದೇವಾಲಯಗಳೆನಿಸಿವೆ. ಇವು ಯಾವುದೇ ಬಗೆಯ ಗುಹೆಗಳನ್ನಾಶ್ರಯಿಸದೆ ಸ್ವತಂತ್ರವಾಗಿ ನಿರ್ಮಾಣವಾಗಿವೆ. ಈ ಬಗೆಯ ಹಲವು ದೇವಾಲಯಗಳು ಚಿತ್ರದುರ್ಗ ಪರಿಸರದಲ್ಲಿ ಕಂಡುಬರುತ್ತವೆ.

೧. ಕಲ್ಲೇಶ್ವರ ದೇವಾಲಯ

ಮಲ್ಲಾಪುರ ಗ್ರಾಮದ ಕೆರೆಯ ಮುಂಬದಿಯಲ್ಲಿರುವ ಕಲ್ಲೇಶ್ವರ ದೇಗುಲವು ತ್ರಿಕೂಟ ದೇವಾಲಯವಾಗಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯವು ಕ್ರಿ.ಶ.೧೧ನೇ ಶತಮಾನದಲ್ಲಿ ನಿರ್ಮಾಣವಾಗಿದ್ದು ಕಲ್ಯಾಣದ ಚಾಲುಕ್ಯರ ಶೈಲಿಯಲ್ಲಿರುವುದು. ಮೂರು ಗರ್ಭಗೃಹ, ಮೂರು ಅಂತರಾಳ ಇವುಗಳಿಗೆ ತಾಗಿಕೊಂಡಂತೆ ಒಂದೇ ನವರಂಗವಿದೆ. ಮುಖ್ಯ ಗರ್ಭಗೃಹದಲ್ಲಿ ಸುಮಾರು ಮೂರು ಅಡಿಎತ್ತರದ ಪ್ರತಿಷ್ಠಾಪನಾ ಶಿವಲಿಂಗವಿದೆ. ವೃತ್ತಾಕಾರದ ಪಾಣಿವಟ್ಟಪಿರುವ ಲಿಂಗದ

ಜಲಹರಿಯು ಎಡಕ್ಕಿದೆ. ಗರ್ಭಗೃಹದ ಮುಂಬದಿಯ ಅಂತರಾಳದಲ್ಲಿ ಲಿಂಗಕ್ಕೆ ಅಭಿಮುಖವಾಗಿ ಸುಮಾರು ಎರಡು ಅಡಿ ಎತ್ತರದ ನಂದಿ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಬಾಗಿಲುವಾಡವು ಸರಳವಾಗಿದೆ. ಉಳಿದ ಎರಡು ಗರ್ಭಗೃಹಗಳಲ್ಲಿ ಇತ್ತೀಚೆಗೆ ಸ್ಥಾಪಿಸಲಾದ ಚಿಕ್ಕ ನಂದಿಯ ಶಿಲ್ಪಗಳಿವೆ. ಇವುಗಳ ಬಾಗಿಲುವಾಡಗಳಲ್ಲಿ ಪೂರ್ಣಕುಂಭ, ಅರೆಗಂಬ, ಮೇಲ್ಬದಿಯಲ್ಲಿ ಮುಂಚಾಚಿದ ತೋರಣಗಳಿಂದ ಕೂಡಿವೆ. ನವರಂಗದಲ್ಲಿನ ನಾಲ್ಕು ಸ್ತಂಭಗಳನ್ನು ಚೌಕ, ಅಷ್ಟಮುಖ, ಚೌಕದಲ್ಲಿ ಕಡೆದಿದ್ದು ಘಟ, ಫಲಕ, ಬೋದಿಗೆಗಳಿಂದ ಕೂಡಿವೆ. ವಿತಾನವು ಮುಗುಚಿದ ಪದ್ಮದ ಕೆತ್ತನೆ ಒಳಗೊಂಡಿದೆ. ಒಳಗೋಡೆಯಲ್ಲಿ ನಾಲ್ಕು ಕೂಡುಗಳಿವೆ. ನವರಂಗದ ದ್ವಾರವು ಅರೆಗಂಬ ಶೈವದ್ವಾರಪಾಲಕ ಮತ್ತು ಮುಂಚಾಚಿದ ತೊರಣದಿಂದ ಕೂಡಿದೆ. ದೇವಾಲಯದ ಮುಖ್ಯ ಗರ್ಭಗೃಹದ ಮೇಲೆ ಪಿರಮಿಡ್ಡಿನಾಕಾರದ ಕದಂಬನಾಗರ ಶೈಲಿಯ ಶಿಖರ ಮತ್ತು ಸುಖನಾಸಿಯಿದೆ. ನವರಂಗದ ಮುಂಬದಿಯಲ್ಲಿ ಮುಖಮಂಟಪವಿದೆ. ಅಧಿಷ್ಠಾನವು ಮಣ್ಣಿನಲ್ಲಿ ಮುಚ್ಚಿದ್ದು, ದೇಗುಲದ ಬಹುಭಾಗ ಹಾಳಾಗಿ ಅಲ್ಲಲ್ಲಿ ಪುನರ್ ನಿರ್ಮಾಣಗೊಂಡಿದೆ. ಪ್ರತಿವರ್ಷ ಶಿವರಾತ್ರಿ, ದಸರಾ, ದೀಪಾವಳಿ, ಮಕರಸಂಕ್ರಾಂತಿ ಹಬ್ಬಗಳಂದು ವಿಶೇಷ ಪೂಜೆಗಳು ಜರುಗುತ್ತವೆ.

೨. ಕಲ್ಲೇಶ್ವರ ದೇವಾಲಯ

ಚಿತ್ರದುರ್ಗ ಬಳಿಯ ಮದಕರಿಪುರ ಗ್ರಾಮದ ಉತ್ತರಕ್ಕೆ ಹೊಲದಲ್ಲಿರುವ ದೇವಾಲಯವಿದು. ಪೂರ್ವಾಭಿಮುಖವಾಗಿರುವ ಇದು ವಾಸ್ತುವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗಗಳನ್ನು ಹೊಂದಿದ್ದು, ಕಲ್ಯಾಣದ ಚಾಲುಕ್ಯರ ಅವಧಿಯ ನಿರ್ಮಿತಿಯಾಗಿದೆ ಮತ್ತು ಕಲ್ಯಾಣದ ಚಾಲುಕ್ಯರ ಶೈಲಿಯಲ್ಲಿದೆ. ಗರ್ಭಗೃಹದಲ್ಲಿ ಮೂರು ಅಡಿ ಎತ್ತರದ ಪ್ರತಿಷ್ಠಾಪನ ಲಿಂಗವಿದೆ. ಚೌಕಕಾರದ ಪಾಣಿವಟ್ಟ ಒಳಗೊಂಡಿದ್ದು, ಜಲಹರಿಯ ಲಿಂಗದ ಎಡಕ್ಕಿದೆ. ಗರ್ಭಗೃಹದ ಬಾಗಿಲುವಾಡವು ಸರಳವಾಗಿದ್ದು, ಪೂರ್ಣಕುಂಭದ ಕೆತ್ತನೆಗಳಿವೆ. ಅಂತರಾಳದಲ್ಲಿ ಲಿಂಗಕ್ಕೆ ಅಭಿಮುಖವಾಗಿ ಎರಡು ಅಡಿ ಉದ್ದ ಮತ್ತು ಎರಡು ಅಡಿ ಎತ್ತರವಿರುವ ನಂದಿಯನ್ನು ಪ್ರತಿಷ್ಠಾಪಿಸಿರುವರು. ಹಣೆಪಟ್ಟಿ, ಲೊಡಗ, ಹಗ್ಗಗಳಿಂದ ಇದು ಅಲಂಕೃತವಾಗಿದ್ದು, ಕಪ್ಪುಶಿಲೆಯಲ್ಲಿ ಕಡೆದಿದ್ದಾರೆ. ನವರಂಗದಲ್ಲಿ ಅರ್ಧಅಡಿ ಎತ್ತರದ ವೇದಿಕೆಯ ಮೇಲೆ ನಾಲ್ಕು ಕಂಬಗಳಿವೆ. ಅಷ್ಟಮುಖ ಮತ್ತು ಬಹುಮುಖದ ಕೆತ್ತನೆಗಳಿರುವ ಸ್ತಂಭಗಳ ಮೇಲೆ ವೃತ್ತಾಕಾರದ ದಿಂಡು, ಚೌಕಾಕಾರದ ಫಲಕ ಮತ್ತು ಸುರುಳಿಬೋದಿಗೆ ಇದೆ. ನವರಂಗದ ವಿತಾನದಲ್ಲಿ ಮುಗುಚಿದ ಪದ್ಮದ ಕೆತ್ತನೆಸಹಿತ ಭುವನೇಶ್ವರಿ ಇದೆ. ನವರಂಗದಲ್ಲಿ ಕುಳಿತು ಕೊಳ್ಳಲು ಕಕ್ಷಾಸನವಿದ್ದು, ಅದರ ಮೇಲೆ ಇತ್ತೀಚೆಗೆ ಗೋಡೆ ನಿರ್ಮಿಸಿರುವರು. ಇಲ್ಲಿನ ಗೋಡೆಯಲ್ಲಿ ಸಪ್ತಮಾತೃಕೆಯರು ಮತ್ತು ಗಜಲಕ್ಷ್ಮಿಯ ಉಬ್ಬುಶಿಲ್ಪಗಳನ್ನು ಅಳವಡಿಸಲಾಗಿದೆ. ಸಪ್ತಮಾತೃಕೆಯರು ಸಾಧಾರಣವಾಗಿ ಎಲ್ಲಾ ವರ್ಗದ ಜನರಿಂದಲೂ ಪೂಜೆಗೊಳ್ಳುವರು. ಸ್ಥಳೀಯವಾಗಿ ಇವರನ್ನು ಅಮ್ಮನವರು ಮುತ್ತೈದೆಯರೆಂದು ಕರೆಯುವುದು ವಾಡಿಕೆ. ರಕ್ತಬೀಜಾಸುರನೊಡನೆ ಕೌಶಿಕದುರ್ಗಿ ಹೋರಾಡುತ್ತಿರುವಾಗ ಆ ಅಸುರನ ರಕ್ತ ನೆಲಕ್ಕೆ ಸೋಕಿದ ತಕ್ಷಣ ಮತ್ತೊಬ್ಬ ಬೀಜಾಸುರ ಜನಿಸಿ ದೇವಿಯೊಡನೆ ಹೋರಾಟಕ್ಕಿಳಿಯುತ್ತಿದ್ದ. ಆ ಸಂದರ್ಭದಲ್ಲಿ ದೇವಿಯು ತನ್ನ ಸಹಾಯಕ್ಕಾಗಿ ಏಳುಜನ ದೇವತೆಯರನ್ನು ಸೃಷ್ಟಿಸಿದಳು. ಆ ಏಳು ಜನರೇ ಸಪ್ತಮಾತೃಕೆಯರಾದರು. ಪ್ರಸ್ತುತ ಶಿಲ್ಪದಲ್ಲಿರುವ ಏಳು ಜನ ದೇವತೆಗಳೆಂದರೆ ಬ್ರಾಹ್ಮಿ, ಮಹೇಶ್ವರಿ, ಕೌಮಾರಿ, ವೈಷ್ಣವಿ, ಇಂದ್ರಾಣಿ, ವಾರಾಹಿ ಮತ್ತು ಚಾಮುಂಡಿಯಾಗಿದ್ದಾರೆ. ಇವರೊಡನೆ ವೀರಭದ್ರ ಮತ್ತು ಗಣೇಶ ಇರುವುದು ವಾಡಿಕೆ. ದೇವಾಲಯದ ಅಧಿಷ್ಠಾನವು ಉಪಾನ, ಕಂಠ ಮತ್ತು ಕುಮುದಗಳನ್ನು ಹೊಂದಿದ್ದು, ಭಿತ್ತಿಯಲ್ಲಿ ಯಾವುದೇ ಅಲಂಕರಣಗಳಿಲ್ಲ. ಇವುಗಳ ಮೇಲ್ಬದಿಯಲ್ಲಿ ಇಳಿಜಾರಾದ ಕಪೋತವಿದೆ. ಗರ್ಭಗೃಹದ ಮೇಲೆ ಪಿರಮಿಡ್ಡಿನಾಕಾರದ ಕದಂಬನಾಗರ ಶೈಲಿಯ ಶಿಖರವಿದ್ದು, ಅದರ ಮೇಲೆ ಶಿಲೆಯ ಕಳಶವನ್ನು ಪ್ರತಿಷ್ಠಾಪಿಸಲಾಗಿದೆ.

ದೇವಾಲಯದ ಮುಂಬದಿಯಲ್ಲಿ ಕೈಮುಗಿದು ನಿಂತಿರುವ ಭಕ್ತ, ಸಿಂಹವ್ಯಾಳ, ನಿರಾಭರಣ ದ್ವಿಬಾಹು ಗಣೇಶನ ವಿಗ್ರಹಗಳಿವೆ. ಗಣೇಶ ವಿಗ್ರಹದ ತಲೆಯಭಾಗ ಭಗ್ನವಾಗಿದೆ. ಗಣೇಶನು ದಪ್ಪನೆಯ ಉಪವೀತ ಧರಿಸಿದ್ದು, ಸುಖಾಸೀನ ಭಂಗಿಯಲ್ಲಿ ಆಸೀನನಾಗಿರುವನು. ದೇವಾಲಯದ ಪಕ್ಕದಲ್ಲಿ ಮೂರು ವೀರಗಲ್ಲುಗಳಿದ್ದು ಅದರಲ್ಲಿ ಮೂರು ಪಟ್ಟಿಕೆಗಳಿವೆ. ಕೆಳಗಿನ ಹಂತದಲ್ಲಿ ವೀರ ಶತೃಗಳೊಡನೆ ಹೋರಾಡುತ್ತಿರುವ ಚಿತ್ರಣಗಳಿವೆ. ಮಧ್ಯ ಹಂತದಲ್ಲಿ ವೀರನು ಅಪ್ಸರೆಯರೊಡಗೂಡಿ ಸ್ವರ್ಗಕ್ಕೆ ಪಯಣಿಸುವ ಕೆತ್ತನೆಗಳಿವೆ. ಮೇಲಿನ ಹಂತದಲ್ಲಿ ವೀರನು ಲಿಂಗದ ಮುಂಬದಿಯಲ್ಲಿ ಕೈಮುಗಿದು ಧ್ಯಾನಾಸಕ್ತನಾಗಿ ಕುಳಿತಿದ್ದರೆ ಯತಿಯೊರ್ವ ಲಿಂಗವನ್ನು ಪೂಜಿಸುತ್ತಿರುವಂತೆ ಶಿಲ್ಪಿತವಾಗಿದೆ.

೩. ಹುಲಿಗೊಂದಿ ಸಿದ್ದೇಶ್ವರ ದೇವಾಲಯ

ಚಿತ್ರದುರ್ಗ ಬೆಟ್ಟದ ಪಶ್ಚಿಮ ದಿಕ್ಕಿನ ಚಂದ್ರವಳ್ಳಿಯ ಹುಲಿಗೊಂದಿ ಕಣಿವೆಯಲ್ಲಿರುವ ದೇವಾಲಯವಿದು. ಇದು ದಕ್ಷಿಣಾಭಿಮುಖವಾಗಿದ್ದು ಗರ್ಭಗೃಹ, ನವರಂಗ, ಮುಖಮಂಟಪಗಳನ್ನು ಒಳಗೊಂಡಿದೆ. ಗರ್ಭಗೃಹದಲ್ಲಿರುವ ಸುಮಾರು ನಾಲ್ಕುವರೆ ಅಡಿ ಎತ್ತರದ ನಗ್ನ ಭೈರವನ ಶಿಲಾಮೂರ್ತಿಯನ್ನು ಕಪ್ಪುಶಿಲೆಯಲ್ಲಿ ಕಡೆದಿರುವರು. ಭೈರವನು ತನ್ನ ನಾಲ್ಕು ಕೈಗಳಲ್ಲಿ ತ್ರಿಶೂಲ, ಢಮರು, ಖಡ್ಗ, ಮತ್ತು ರುಂಡ ಹಿಡಿದಿದ್ದಾನೆ. ರುಂಡದಿಂದ ಒಸರುತ್ತಿರುವ ರಕ್ತವನ್ನು ನಾಯಿಯೊಂದು ನೆಕ್ಕುತ್ತಿದ್ದು, ಸ್ತ್ರೀ ವಿಗ್ರಹವೊಂದು ಅದರಲ್ಲಿ ನೆರವಾಗುವಂತಿದೆ. ಜಟಾಧರನಾದ ಭೈರವನ ಮೂರ್ತಿಯು ಕಂಠಿಹಾರ, ಯಜ್ಞೋಪವೀತ, ಕಟಿಬಂದ, ರುಂಡಮಾಲೆ, ಕೆಯೂರ, ಕೈಕಡಗ, ತೊಳ್ಬಂದಿ, ಕಾಲ್ಕಡಗ, ನೂಪುರಗಳಿಂದ ಅಲಂಕೃತಗೊಂಡಿದೆ. ಪೀಠದಲ್ಲಿ ಭೈರವನ ವಾಹನವಾದ ವೃಶ್ಚಿಕವನ್ನು ಕಂಡರಿಸಿರುವರು. ಗರ್ಭಗೃಹದ ಬಾಗಿಲುವಾಡ ಬಳಪದಶಿಲೆಯಲ್ಲಿ ನಿರ್ಮಾಣವಾಗಿದ್ದು ಲತಾಸುರುಳಿ, ವಜ್ರಶಾಖೆ ಮತ್ತು ಸ್ತಂಭ ಶಾಖೆಗಳಿಂದ ಅಲಂಕೃತಗೊಡಿದೆ. ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಕೆತ್ತನೆಗಳಿದ್ದು, ದ್ವಾರದ ಇಕ್ಕೆಲದಲ್ಲಿ ಜಾಲಂದರ ಅಳವಡಿಸಿರುವರು. ನವರಂಗದಲ್ಲಿ ನೊಳಂಬ ಪಲ್ಲವ ಶೈಲಿಯ ನಾಲ್ಕು ಸ್ತಂಭಗಳಿವೆ. ಇವುಗಳ ಚೌಕಭಾಗವನ್ನು ಅಷ್ಟಮುಖ, ಹದಿನಾರುಮುಖ, ಅಷ್ಟಮುಖದ ಭಾಗಗಳು ಬೇರ್ಪಡಿಸಿರುವಂತೆ ಕಡೆದಿದ್ದು, ವೃತ್ತಾಕಾರದ ಘಟ, ಫಲಕ ಮತ್ತು ಸುರುಳಿ ಬೋದಿಗೆಗಳನ್ನು ಒಳಗೊಂಡಿವೆ. ಇಲ್ಲಿನ ಅಷ್ಟಮುಖ ಮತ್ತು ಹದಿನಾರು ಮುಖಗಳ ಮೇಲೆ ಪದ್ಮದ ಕೆತ್ತನೆಗಳಿವೆ. ಕಂಬಗಳ ಮೇಲ್ಬದಿಯ ಚೌಕಾಕಾರದ ಭಾಗಗಳು ಅಲಂಕೃತಗೊಂಡಿವೆ. ಇವುಗಳಲ್ಲಿ ಕೀರ್ತಿಮುಖವಿದ್ದು, ಅದರ ಬಾಯಿಂದ ಹೊರಬಂದ ಮುತ್ತಿನ ಸರದೋಪಾದಿಯ ಎಳೆಗಳು ಚೌಕಾಕಾರವನ್ನು ಸುತ್ತುವರೆದಿವೆ. ಈ ಅಲಂಕರಣದ ಮಧ್ಯೆ ಶಿವ, ನೃತ್ಯಗಾರ್ತಿಯರು, ವಾಧ್ಯಗಾರರು, ಭೈರವಿ, ಮಿಥುನಶಿಲ್ಪ ಹಾಗೂ ಪಂಚತಂತ್ರದ ಕಥೆಗಳನ್ನು ಅರಹುವ ಶಿಲ್ಪಗಳಿವೆ. ಪಂಚತಂತ್ರದ ಕಥೆಯನ್ನು ತಿಳಿಸುವ ಈ ಶಿಲ್ಪಗಳು ಹಾಳಾಗಿದ್ದು, ಒಂದನ್ನು ಮಾತ್ರ ಗುರುತಿಸಬಹುದು. ಒಂದು ಮರದ ಕೆಳಭಾಗದಲ್ಲಿ ಮಲಗಿರುವ ವ್ಯಕ್ತಿಯೊರ್ವನ ಕಾಲ ಬಳಿ ನಾಗಸರ್ಪವೊಂದು ಎಡೆಬಿಚ್ಚಿರುವಂತೆಯೂ ಅದನ್ನು ಕಂಡ ಮತ್ತೊಬ್ಬ ವ್ಯಕ್ತಿ ಓಡಿ ಬರುತ್ತಿರುವಂತೆಯೂ ಇಲ್ಲಿ ಸೂಚಿತವಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಪಂಚತಂತ್ರದ ಕಥೆಗಳು ಶಿಲ್ಪಿತವಾಗಿರುವ ಏಕೈಕ ದೇವಾಲಯ ಇದಾಗಿರುವುದು ಗಮನಾರ್ಹ. ನವರಂಗದ ಎಡಬದಿಗೆ ಇತ್ತೀಚೆಗೆ ವಿಸ್ತರಿಸಿ ಕಟ್ಟಲಾದ ಚಿಕ್ಕ ಗುಡಿಇದ್ದು, ಅದರಲ್ಲಿ ದಕ್ಷಬ್ರಹ್ಮನ ವಿಗ್ರಹವಿದೆ. ಸ್ಥಳೀಯರು ಇದನ್ನು ತುಪ್ಪದಮ್ಮ ಎಂದು ಕರೆಯುವುದು ವಾಡಿಕೆ. ನವರಂಗದ ಪಶ್ಚಿಮ ಮತ್ತು ಉತ್ತರಕ್ಕೆ ದ್ವಾರಗಳಿದ್ದು, ಗರ್ಭಗೃಹದ ದ್ವಾರದ ಪ್ರತಿರೂಪದಂತಿವೆ. ಮುಖಮಂಟಪವು ಕಕ್ಷಾಸನ ಮತ್ತು ಅರ್ಧಗಂಬಗಳಿಂದ ಕೂಡಿದೆ. ಇದರ ಮೇಲ್ಬದಿಯಲ್ಲಿ ಕಪೋತವಿದೆ.

ಹುಲಿಗೊಂದಿ ಸಿದ್ದೇಶ್ವರ ದೇವಾಲಯವು ಹಿಂದೊಮ್ಮೆ ಕಪಾಲಿಕನಾಥರ ಪ್ರಮುಖ ಆರಾಧನಾ ಕೇಂದ್ರವಾಗಿತ್ತಲ್ಲದೆ ನಾಥಪಂಥಿಯರ ಮಠವೊಂದು ಅಸ್ತಿತ್ವದಲ್ಲಿತ್ತು. ಲುಂಕೆಮಲೆಯ ಶಾಖಾ ಮಠಗಳಲ್ಲಿಯೇ ಇದು ಅತ್ಯಂತ ಪ್ರಭಾವಶಾಲಿಯಾಗಿತ್ತು.[೬೩] ದೇವಾಲಯದ ಮುಂಬದಿಯ

ದೀಪಸ್ತಂಭದ ಬಳಿ ಬಲಿಕಲ್ಲೊಂದನ್ನು ಇರಿಸಿರುವರು. ಇದರಲ್ಲಿ ಜೋಡಿಪಾದಗಳಿದ್ದು, ಅದನ್ನು ಸರ್ಪವೊಂದು ಸುತ್ತುವರೆದಿದೆ. ಇದರ ಮೂಲೆಗಳಲ್ಲಿ ಎರಡು ಪುರುಷ ರುಂಡಗಳು, ಬಲಿಕೊಟ್ಟ ಒಂದು ಟಗರು ಮತ್ತು ಕೋಣವನ್ನು ಕಡೆದಿರುವರು. ದೇಗುಲದ ಮುಂಬದಿಯಲ್ಲಿದ್ದ ತ್ರಿಶೂಲದ ಕಲ್ಲೊಂದುನ್ನು ಪ್ರಸ್ತುತ ಚಿತ್ರದುರ್ಗದ ಸ್ಥಳೀಯ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿಟ್ಟು ಸಂರಕ್ಷಿಸಲಾಗಿದೆ. ಇವು ಈ ಪರಿಸರದಲ್ಲಿ ನಾಥಪಂಥದ ಗಾಢತೆಯನ್ನು ಸೂಚಿಸುತ್ತವೆ. ಚಂದ್ರವಳ್ಳಿಯಲ್ಲಿ ಹೊಯ್ಸಳ ಕಾಲದ ನಗರ ಅಸ್ತಿತ್ವದಲ್ಲಿರುವಾಗ ಅಂದರೆ ಕ್ರಿ.ಶ.೧೩೦೦ರ ಅವಧಿಯಲ್ಲಿ ಈ ದೇಗುಲ ನಿರ್ಮಾಣವಾಗಿರಬಹುದೆಂದು ಎಂ.ಎಚ್.ಕೃಷ್ಣ ಉಲ್ಲೇಖಿಸಿದ್ದಾರೆ.[೬೪] ಆದರೆ ದೇವಾಲಯದಲ್ಲಿನ ಸ್ತಂಭ ಬಾಗಿಲುವಾಡಗಳು ನೊಳಂಬ ಪಲ್ಲವ ಶೈಲಿಯಲ್ಲಿದ್ದು, ಕ್ರಿ.ಶ. ೧೦ನೇ ಶತಮಾನದ ಅವಧಿಯಲ್ಲಿ ಈ ದೇವಾಲಯ ನಿರ್ಮಾಣವಾಗಿದೆ. ಈ ದೇವರ ಜಾತ್ರೆಯ ಪ್ರತಿವರ್ಷ ದಸರಾ ಹಬ್ಬದ ಸಮಯದಲ್ಲಿ ಜರುಗುವುದು. ಅಲ್ಲದೆ ಹಬ್ಬ ಹರಿದಿನಗಳಂದು ವಿಶೇಷಪೂಜೆಗಳು ಜರುಗುತ್ತವೆ. ಹುಲಿಗೊಂದಿ ಸಿದ್ದೇಶ್ವರನನ್ನು ಹಿಂದಿನಿಂದಲೂ ಲಿಂಗಾಯಿತರು ಪೂಜಿಸುತ್ತ ಬಂದಿರುವರು.

೪. ಚೋಳೇಶ್ವರ ದೇವಾಲಯ

ಪೂರ್ವಾಭಿಮುಖವಾಗಿರುವ ಚೋಳೇಶ್ವರ ದೇವಾಲಯವು ಗಾರೇಹಟ್ಟಿಯ ಮಧ್ಯಭಾಗದಲ್ಲಿ ನೆಲೆಗೊಂಡಿದೆ. ವಾಸ್ತುವಿನ್ಯಾಸದಲ್ಲಿ ಗರ್ಭಗೃಹ, ತೆರೆದ ಅಂತರಾಳ, ಸಭಾಮಂಟಪ ಮತ್ತು ನಂದಿಮಂಟಪಗಳನ್ನು ಕಾಣಬಹುದು. ಗರ್ಭಗೃಹದಲ್ಲಿ ಸುಮಾರು ಮೂರು ಅಡಿ ಎತ್ತರದ ಪ್ರತಿಷ್ಠಾಪನ ಲಿಂಗವಿದೆ. ಕ್ರಿ.ಶ.೧೧೨೬ರ ಅವಧಿಯಲ್ಲಿ ಆರನೇ ವಿಕ್ರಮಾದಿತ್ಯನ ಪ್ರಾಂತ್ಯಾಧಿಕಾರಿ ಉದಯಾದಿತ್ಯನು ಧರ್ಮಕಥಾ ಪ್ರಸಂಗ ಕೇಳಿ, ಪ್ರಭಾವಿತನಾಗಿ ಚೋಳೇಶ್ವರ ಲಿಂಗ ಪ್ರತಿಷ್ಠಾಪಿಸಿದನು.[೬೫] ಚೌಕಾಕಾರದ ಪಾಣಿವಟ್ಟನ್ನೊಳಗೊಂಡ ಜಲಹರಿ ಲಿಂಗದ ಎಡಭಾಗಕ್ಕಿದೆ. ಹಳೆಯ ಪಾಣಿವಟ್ಟು ಭಗ್ನಗೊಂಡಿದ್ದರಿಂದ ಹೊಸದನ್ನು ಅಳವಡಿಸಿರುವರು. ಗರ್ಭಗೃಹದ ದ್ವಾರವು ನವಿರಾದ ಕೆತ್ತನೆಗಳಿಂದ ಕೂಡಿದ್ದು, ಪಂಚಶಾಖೆಗಳನ್ನು ಒಳಗೊಂಡಿದೆ. ಇದರಲ್ಲಿ ವಲ್ಲಿಶಾಖೆ, ಸ್ತಂಭಶಾಖೆ, ಲತಾಸುರುಳಿ, ವಜ್ರಶಾಖೆಗಳು ಪ್ರಧಾನವಾಗಿವೆ. ಉಳಿದಂತೆ ಶೈವ ದ್ವಾರಪಾಲಕ ಶಿಲ್ಪಗಳು, ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಬಾಗಿಲುವಾಡದ ಮೇಲಿನ ಉತ್ತರಾಂಗ ಭಾಗದಲ್ಲಿ ಐದು ಶಿಖರದ ರಚನೆಗಳಿವೆ. ಅಂತರಾಳದಲ್ಲಿ ಒಂದೂವರೆ ಅಡಿ ಎತ್ತರ ಮತ್ತು ಎರಡು ಅಡಿ ಉದ್ದನೆಯ ನಂದಿ ಶಿಲ್ಪವಿದ್ದು, ಕಪ್ಪುಶಿಲೆಯಲ್ಲಿ ಕಡೆಯಲ್ಪಟ್ಟಿದೆ. ಅಂತರಾಳದಲ್ಲಿ ಒಳಪದ ಶಿಲೆಯ ಘಂಟಾಕಾರದ ಎರಡು ಕಂಬಗಳಿವೆ. ಇವು ತಿರುಗಣಿ ಯಂತ್ರದಿಂದ ತಯಾರಾಗಿದ್ದು ಚೌಕಾಕಾರ, ವೃತ್ತಾಕಾರದ ಬಳೆಗಳೊಡನೆ ಘಂಟಾಕಾರ, ಘಟ, ಫಲಕ, ಸರಳ ಬೋದಿಗೆಗಳಿವೆ.

ನವರಂಗದ ಅರ್ಧ ಅಡಿ ಎತ್ತರದ ವೇದಿಕೆಯ ಮೇಲೆ ನಾಲ್ಕು ಸ್ತಂಭಗಳಿದ್ದು, ಚೌಕಾಕಾರ, ಅಷ್ಟಮುಖ, ಚೌಕಾಕಾರದಲ್ಲಿ ಶಿಲ್ಪಿತವಾಗಿವೆ. ಇದರ ಮೇಲ್ಬದಿಯಲ್ಲಿ ಘಟ, ಫಲಕಗಳು ಸುರುಳಿ ಬೋದಿಗೆಗಳಿವೆ. ಅಷ್ಟಕೋನಾಕೃತಿಯ ವಿತಾನವು ಮುಗುಚಿದ ಪದ್ಮದ ಕೆತ್ತನೆ ಒಳಗೊಂಡಿದೆ. ನವರಂಗದ ಸುತ್ತಲೂ ಕುಳಿತುಕೊಳ್ಳಲು ಕಕ್ಷಾಸನವಿದ್ದು, ಅದರ ಮೇಲೆ ಗೋಡೆ ನಿರ್ಮಿಸಲಾಗಿದೆ. ಈ ಕಕ್ಷಾಸನದ ಮೇಲಿನ ಕಂಬಗಳು ಚೌಕಾಕಾರ ಮತ್ತು ವೃತ್ತದ ರಚನೆಯನ್ನೊಳಗೊಂಡಿವೆ. ದೇವಾಲಯದ ಅಧಿಷ್ಠಾನವು ಸರಳವಾಗಿದ್ದು, ಭಿತ್ತಿಯಮೇಲೆ ಯಾವುದೇ ಬಗೆಯ ಅಲಂಕರಣಗಳಿಲ್ಲ. ಇದರ ಮೇಲೆ ಕಪೋತ ಮತ್ತು ಇತ್ತೀಚೆಗೆ ನಿರ್ಮಿಸಲಾದ ತ್ರಿತಲ ಶಿಖರವಿದೆ.

ದೇವಾಲಯದ ಎದುರಿನ ಮಂಟಪದಲ್ಲಿ ಸರಿಸುಮಾರು ಐದು ಅಡಿ ಎತ್ತರದ ಅಲಂಕೃತ ನಂದಿ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಬಳಪದ ಶಿಲೆಯಲ್ಲಿ ಕಡೆದ ಇದರ ಕೊರಳಲ್ಲಿ ಲೊಡಗ, ಗಂಟೆಸರ, ಹಗ್ಗ, ಹಣೆಪಟ್ಟಿ ಧರಿಸಿದ್ದು, ಚೋಳೇಶ್ವರ ಲಿಂಗಕ್ಕೆ ಅಭಿಮುಖವಾಗಿದೆ. ಮಂಟಪದಲ್ಲಿನ ಕಂಬಗಳು ಚೌಕ, ಅಷ್ಟಮುಖ, ಮತ್ತು ಬಹುಮುಖಗಳ ಕೆತ್ತನೆಯಿಂದ ಕೂಡಿವೆ. ಇದರಲ್ಲಿ ನಾಗದೇವತೆಗಳೊಡನೆ ಇತರ ಶಿಲ್ಪಗಳಿದ್ದು, ಗುರುತಿಸಲಾಗದಷ್ಟು ಸವಕಳಿಯಾಗಿವೆ. ನಂದಿ ಮಂಟಪದ

ಸುತ್ತಲೂ ಗೋಡೆಯನ್ನು ಇತ್ತೀಚೆಗೆ ನಿರ್ಮಿಸಲಾಗಿದೆ. ಇದರ ಒಳಭಾಗದ ಪೂರ್ವಗೋಡೆಗೆ ಒರಗಿಸಿ, ಅಂದರೆ ಪಶ್ಚಿಮಾಭಿಮುಖವಾಗಿ ನಗ್ನಭೈರವ ಮತ್ತು ಗಣೇಶನ ಶಿಲ್ಪಗಳನ್ನು ಪ್ರತಿಷ್ಠಾಪಿಸಲಾಗಿದೆ.

ತ್ರಿಭಂಗಿಯಲ್ಲಿರುವ ನಗ್ನಭೈರವ ಶಿಲ್ಪವನ್ನು ಬಳಪದ ಶಿಲೆಯಲ್ಲಿ ಕಡೆದಿದ್ದು, ಅಜು ನಾಲ್ಕು ಅಡಿ ಎತ್ತರ, ಒಂದುವರೆ ಅಡಿ ಅಗಲವಿದೆ. ನಾಲ್ಕು ಕೈಗಳನ್ನು ಹೊಂದಿದ ಭೈರವನ ಮೇಲಿನ ಎರಡು ಕೈಗಳಲ್ಲಿ ತ್ರಿಶೂಲ, ಢಮರು ಹಿಡಿದಿದ್ದರೆ, ಉಳಿದ ಎರಡೂ ಕೈಗಳು ಭಗ್ನವಾಗಿವೆ. ಜಟಾಮುಕುಟಧಾರಿಯಾದ ಭೈರವನ ಕೇಶರಾಶಿಯು ಮಣಿಗಳಿಂದ ಪೋಣಿಸಿದಂತಿದ್ದು, ವ್ಯಕ್ತಿಯ ಬೋಳು ತಲೆಗೆ ಟೋಪನ್ ಹಾಕಿದಂತಿದೆ. ದೇಹವು ಕರ್ಣಕುಂಡಲ, ಕಂಠಿಹಾರ, ಸರ, ತೋಳ್ಬಂದಿ ಕೆಯೂರ, ಕೈಕಡಗ, ಕಟಿಬಂಧ, ರುಂಡಮಾಲೆ, ಉಪವೀತ, ಕಾಲ್ಕಡಗಗಳಿಂದ ಅಲಂಕೃತಗೊಂಡಂತೆ ಶಿಲ್ಪಿತವಾಗಿದೆ. ಪಾದುಕೆ ಧರಿಸಿರುವ ಭೈರವನು ವ್ಯಕ್ತಿಯೋರ್ವನನ್ನು ತುಳಿದುಕೊಂಡಿದ್ದಾನೆ. ಶಿಲ್ಪದ ಕೆಳಬದಿಯಲ್ಲಿ ದಕ್ಷಬ್ರಹ್ಮನ ಪುಟ್ಟ ಶಿಲ್ಪಗಳಿವೆ. ಶಿಲ್ಪದ ಮೇಲ್ಬದಿಯಲ್ಲಿ ಕೀರ್ತಿಮುಖದ ಪ್ರಭಾವಳಿ ಇದೆ. ಪ್ರಸ್ತುತ ವಿವರಿಸಿದ ಶಿಲ್ಪ ಮತ್ತು ಸೊಂಡೆಕೊಳ ಗ್ರಾಮದ ಹೊಲವೊಂದರಲ್ಲಿರುವ ಭೈರವನ ಶಿಲ್ಪ ಹೋಲಿಕೆಯಲ್ಲಿ ಏಕರೀತಿಯಾಗಿವೆ.

ನಂದಿ ಮಂಟಪದಲ್ಲಿ ಪಶ್ಚಿಮಾಭಿಮುಖವಾಗಿರುವ ಮತ್ತೊಂದು ಪ್ರಮುಖ ಶಿಲಾ ಮೂರ್ತಿ ಗಣೇಶನದು. ಸುಮಾರು ನಾಲ್ಕು ಅಡಿ ಎತ್ತರ, ಒಂದೂವರೆ ಅಡಿ ಅಗಲವಿರುವ ಗಣೇಶನ ಮೂರ್ತಿಯು ಸಮಭಂಗಿಯಲ್ಲಿದ್ದು, ಬಳಪದ ಶಿಲೆಯಲ್ಲಿ ಕಡೆಯಲ್ಪಟ್ಟಿದೆ. ನಿಂತ ಭಂಗಿಯಲ್ಲಿರುವ ಗಣಪತಿಯನ್ನು ಶಿಲ್ಪಶಾಸ್ತ್ರದಲ್ಲಿ ಸ್ಥಾನಿಕ ಗಣಪತಿ ಎಂದು ಸಂಬೋಧಿಸಲಾಗುತ್ತದೆ.[೬೬] ಕರಂಡ ಮುಕುಟಧಾರಿಯಾಗಿರುವ ಗಣೇಶನು ಕಂಠಿಹಾರ, ಸರ .ಯಜ್ಞೋಪವೀತ, ಉಪವೀತ, ಕಟಿಬಂಧ, ತೋಳ್ಬಂದಿ, ಕೈಕಂಕಣ, ಉಂಗುರ, ಕಾಲ್ಕಡದ ಧರಿಸಿದೆ. ನಾಲ್ಕು ಕೈಗಳನ್ನು ಹೊಂದಿರುವ ಗಣೇಶನು ಹಿಂದಿನ ಎರಡು ಕೈಗಳಲ್ಲಿ ಅಂಕುಶ, ಪಾಶ ಹಿಡಿದಿದ್ದರೆ, ಮುಂದಿನ ಎರಡು ಕೈಗಳು ಭಗ್ನಗೊಂಡಿವೆ. ಶಿಲ್ಪದ ಕೆಳಭಾಗದಲ್ಲಿ ಗಣೇಶ ತನ್ನ ಪತ್ನಿಯರಾದ ಸಿದ್ಧಿ, ಬುದ್ಧಿಯರೊಡನೆ ಇರುವುದು ಇದರ ವೈಶಿಷ್ಟ್ಯ.

ದೇವಾಲಯದ ಬಲ ಬದಿಯ ಮರದ ಬುಡವೊಂದರಲ್ಲಿ ಬಳಪದಶಿಲೆಯಲ್ಲಿ ಕಡೆದ ಹೊಯ್ಸಳ ಶೈಲಿಯ ವಿಷ್ಣು ಶಿಲ್ಪವಿದೆ. ಇದು ವಿಷ್ಣುವಿನ ೨೪ ರೂಪಗಳಲ್ಲಿ ಒಂದಾದ ಮಾಧವನದು. ಚತುರ್ಭುಜಧಾರಿ ಮಾಧವನು ಎರಡು ಕೈಗಳಲ್ಲಿ ಶಂಖ, ಚಕ್ರ ಹಿಡಿದಿದ್ದರೆ, ಉಳಿದೆರಡು ಕೈಗಳು ಭಗ್ನಗೊಂಡಿವೆ. ಕರಂಡಮುಕುಟ ಕಂಠಿಹಾರ, ವೈಜಯಂತಿಮಾಲೆ, ಉಪವೀತ, ಯಜ್ಞೋಪವೀತ, ಕೈಕಂಕಣ, ಕಾಲ್ಕಡಗ, ಕಟಿಬಂಧ, ನೂಪುರ ಸಹಿತ ನವಿರಾದ ಕೆತ್ತನೆಗಳಿಂದ ಕೂಡಿದೆ. ಶಿಲ್ಪದ ಇಕ್ಕೆಲದಲ್ಲಿ ಶ್ರೀದೇವಿ ಭೂದೇವಿಯರ ವಿಗ್ರಹಗಳಿದ್ದರೆ, ಮೇಲ್ಬದಿಯಲ್ಲಿ ಕೀರ್ತಿಮುಖದ ಪ್ರಭಾವಳಿ ಇದೆ.

ಚೋಳೇಶ್ವರ ದೇವಾಲಯದಲ್ಲಿರುವ ಕ್ರಿ.ಶ.೧೧೨೬ರ ಶಾಸನವೊಂದು[೬೭] ಕಲ್ಯಾಣದ ಚಾಲುಕ್ಯರ ಅವಧಿಯದಾಗಿದೆ. ಆ ಶಾಸನದಲ್ಲಿ ಚಾಲುಕ್ಯದೊರೆ ತ್ರಿಭುವನಮಲ್ಲದೇವರ [ಆರನೇ ವಿಕ್ರಮಾದಿತ್ಯ ಕ್ರಿ.ಶ.೧೦೭೬-೧೧೨೬] ಮಹಾಸಾಮಂತ ಉದಯಾದಿತ್ಯನು ಧರ್ಮ ಕಥಾ ಪ್ರಸಂಗದಲ್ಲಿ ಲಿಂಗಪ್ರತಿಷ್ಠೆಯ ಮಹಾತ್ಮೆಯನ್ನು ಕೇಳಿ ಎತ್ತರದ ಕಲ್ಲದೇಗುಲ ಕಟ್ಟಿಸಿ, ಚೋಳೇಶ್ವರ ಲಿಂಗ ಪ್ರತಿಷ್ಠಾಪಿಸಿ, ದೇವರ ರಂಗಭೋಗ ಸ್ನಾನ, ನೈವೇದ್ಯ ಮತ್ತು ಚೈತ್ರ ಪವಿತ್ರವೆಂಬ ಆಚರಣೆಗಾಗಿ ರುದ್ರಶಕ್ತಿಪಂಡಿತರಿಗೆ ಎರಡು ಹಳ್ಳಿಗಳನ್ನು ದತ್ತಿಯಾಗಿ ಒಪ್ಪಿಸಿದ್ದುದರ ಉಲ್ಲೇಖವಿದೆ. ಈ ದಾನದ ಒಂದು ವಿಶೇಷವೇನೆಂದರೆ ಇದು ದೇವರ ಪೂಜಾಕಾರ್ಯಕ್ಕೆ ಮೀಸಲಾಗಿರದೆ, ಬ್ರಾಹ್ಮಣರು ಪುರಾಣಗಳನ್ನು ಜನತೆಗೆ ಹೇಳುವುದಕ್ಕೂ, ವಿದ್ಯಾದಾನಕ್ಕೂ, ತಪೋದನರ ಆಹಾರಕ್ಕೂ ಸಹ ಎಂದಿರುವುದು ಸಾಮಾಜಿಕ ಸಾಂಸ್ಕೃತಿಕ ಚಟುವಟಿಕೆಗಳನ್ನು ಅಂದಿನ ಆಡಳಿತ ಪ್ರೋತ್ಸಾಹಿಸುತ್ತಿದ್ದನ್ನು ಸೂಚಿಸುತ್ತದೆ. ಇದರೊಡನೆ ಕಾಳಾಮುಖ ಸ್ಥಾನಾಚಾರ್ಯರ ನೆಲೆಯಾಗಿದ್ದ ಈ ದೇವಾಲಯವು ಪ್ರಮುಖ ಶೈಕ್ಷಣಿಕ ಕೇಂದ್ರವಾಗಿದ್ದುದು ಗಮನಾರ್ಹ ಸಂಗತಿ. ಚಿತ್ರದುರ್ಗ ಪರಿಸರದಲ್ಲಿ ಹಲವಾರು ಲೋಕೋಪಯೋಗಿ

ಕಾರ್ಯಗಳೊಡನೆ ಶಿಕ್ಷಣಕ್ಕಾಗಿ ಬ್ರಹ್ಮಪುರಿಗೇರಿ ಸ್ಥಾಪಿಸಿದ್ದ ಪೆರುಮಾಳೆದೇವ ದಣ್ಣಾಯಕನು ಕ್ರಿ.ಶ.೧೨೮೬ರಲ್ಲಿ ಚೋಳೇಶ್ವರ ದೇವಾಲಯದ ಅಮೃತಪಡಿಗೆ ಒಂದು ಸಲಿಗೆ ಗದ್ದೆಯನ್ನು ದಾನ ನೀಡಿದ್ದನು.[೬೮]

ಸಾಂಸ್ಕೃತಿಕ ಮತ್ತು ಶೈಕ್ಷಣಿಕವಾಗಿ ಮಹತ್ವ ಪಡೆದ ಚೋಳೇಶ್ವರ ದೇವರಿಗೆ ಶಿವರಾತ್ರಿ, ಮಕರ ಸಂಕ್ರಾಂತಿ, ವಿಜಯದಶಮಿ ಮುಂತಾದ ಹಬ್ಬಗಳಲ್ಲಿ ವಿಶೇಷ ಪೂಜೆಗಳು ಸಲ್ಲುತ್ತಿವೆ.

೪. ಮಹೇಶ್ವರ ದೇವಾಲಯ

ಗಾರೇಹಟ್ಟಿಯಿಂದ ಕಾವಾಡಿಗರಹಟ್ಟಿಗೆ ತೆರಳುವ ರಸ್ತೆಯ ಬಲಬದಿಯಲ್ಲಿ ಮಹೇಶ್ವರ ದೇಗುಲವಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯ ಗರ್ಭಗೃಹ, ಅಂತರಾಳ, ನವರಂಗಗಳನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಕಪ್ಪುಶಿಲೆಯಲ್ಲಿ ಕಡೆದ ಸುಮಾರು ನಾಲ್ಕು ಅಡಿ ಎತ್ತರದ ಪ್ರತಿಷ್ಠಾಪನಾ ಲಿಂಗವಿದೆ. ಇದೇ ದೇಗುಲದ ನವರಂಗದಲ್ಲಿನ ಕ್ರಿ.ಶ.೧೧೮೬ರ ಶಾಸನದಿಂದ ಕಾಮಯ್ಯನಾಯಕನು ಬೆಮ್ಮತ್ತೂರನ್ನು ಆಳುತ್ತಿದ್ದಾಗ ಅವನ ಅಜ್ಜ ಉದಯಾದಿತ್ಯನ ಹೆಗ್ಗಡೆ ಮಾಚಯ್ಯನ ಮಗಳು ಗಂಗವ್ವೆಯು ಶಿವಧರ್ಮೋತ್ತರ(ಪುರಾಣ)ದಲ್ಲಿ ಲಿಂಗಪ್ರತಿಷ್ಠೆಯ ಮಹಾತ್ಮೆಯನ್ನು ಕೇಳಿ ಲಿಂಗ ಪ್ರತಿಷ್ಠಾಪನೆ ಮಾಡಿ, ಕಾಮಯ್ಯ ನಾಯಕನನ್ನು ಬೇಡಿಕೊಂಡು, ನಗರೇರು ಹೊಲದ ಭೂಮಿಯೊಂದನ್ನು ಸೋವರಾಶಿ ಪಂಡಿತರಿಗೆ ಮಹಾದಾನವಾಗಿ ಅರ್ಪಿಸಿದ್ದಳೆಂದು ತಿಳಿದುಬರುತ್ತದೆ.[೬೯]

ಅಂತರಾಳದಲ್ಲಿ ಲಿಂಗಕ್ಕೆ ಎದುರಾಗಿ ಹಸಿರುಮಿಶ್ರಿತ ಕಪ್ಪು ಶಿಲೆಯಲ್ಲಿ ಕಡೆಯಲಾದ ನಂದಿಶಿಲ್ಪವಿದ್ದು ಒಂದೂವರೆ ಅಡಿ ಎತ್ತರ, ಎರಡು ಅಡಿ ಉದ್ದವಿದೆ. ನವರಂಗದಲ್ಲಿ ನಾಲ್ಕು ಕಂಬಗಳಿದ್ದು, ಚೌಕಾಕಾರ, ವೃತ್ತಾಕಾರ, ಅಷ್ಟಮುಖ ಮತ್ತು ಚೌಕಾಕಾರಗಳಲ್ಲಿ ಕಡೆದಿರುವರು. ಇವುಗಳ ಮೇಲೆ ಯಾವುದೇ ಬಗೆಯ ಅಲಂಕರಣಗಳಿಲ್ಲ. ದೇವಾಲಯದ ಭಿತ್ತಿಯು ಅಲಂಕಾರರಹಿತವಾಗಿದ್ದು, ಗರ್ಭಗೃಹದ ಮೇಲೆ ಯಾವುದೇ ಶಿಖರವಿಲ್ಲ. ಈ ದೇವಾಲಯವು ಕಲ್ಯಾಣದ ಚಾಲುಕ್ಯರ ಕಾಲದ ನಿರ್ಮಾಣವಾಗಿದ್ದು, ಕಲ್ಯಾಣದ ಚಾಲುಕ್ಯರ ಶೈಲಿಯಲ್ಲಿದೆ.

ದೇವಾಲಯದ ಮುಂಬದಿಯ ಜಗಲಿಯ ಮೇಲಿನ ಸುಮಾರು ಮೂರು ಅಡಿ ಎತ್ತರದ ಭಗ್ನ ವಿಷ್ಣು ಶಿಲ್ಪವಿದ್ದು, ಬಳಪದ ಶಿಲೆಯಲ್ಲಿ ಕಡೆಯಲಾಗಿದೆ. ವಿಷ್ಣುವು ತನ್ನ ನಾಲ್ಕು ಕೈಗಳಲ್ಲಿ ಶಂಖ, ಚಕ್ರ, ಗದೆ ಮತ್ತು ಪದ್ಮ ಹಿಡಿದಿದ್ದಾನೆ. ಕಿರೀಟಮುಕುಟ, ಕೈಕಂಕಣ, ಹಾರ, ಸರ, ಉಪವೀತ, ಯಜ್ಞೋಪವೀತ, ಕಾಲ್ಕಡಗ ಧಾರಿಯಾಗಿದ್ದು, ಮೇಲಿನ ಪ್ರಭಾವಳಿ ಭಾಗವು ಭಗ್ನಗೊಂಡಿದೆ.

೬. ರಾಮೇಶ್ವರ ದೇವಾಲಯ

ಮಲ್ಲಾಪುರ ಗ್ರಾಮದ ಉತ್ತರದಿಕ್ಕಿಗೆ ಪೂರ್ವಾಭಿಮುಖವಾಗಿರುವ ದೇಗುಲವಿದು. ಗರ್ಭಗೃಹ, ತೆರೆದ ಅಂತರಾಳ, ನವರಂಗಗಳನ್ನು ಒಳಗೊಂಡಿದ್ದು, ಗರ್ಭಗೃಹದಲ್ಲಿ ೩ ಅಡಿ ಎತ್ತರದ ಪ್ರತಿಷ್ಠಾಪನಲಿಂಗವಿದೆ. ಲಿಂಗದಲ್ಲಿ ಯಾವುದೇ ಬಗೆಯ ಪಾಣಿವಟ್ಟು ಇಲ್ಲ. ಗರ್ಭಗೃಹದ ಬಾಗಿಲುವಾಡವು ಸರಳವಾಗಿದ್ದು, ಶೈವದ್ವಾರಪಾಲಕರ ಶಿಲ್ಪಗಳು ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬು ಕೆತ್ತನೆಗಳಿಂದ ಕೂಡಿದೆ. ರಾಮೇಶ್ವರ ಲಿಂಗಕ್ಕೆ ಅಭಿಮುಖವಾಗಿ ತೆರೆದ ಅಂತರಾಳದಲ್ಲಿ ನಂದಿಶಿಲ್ಪವನ್ನು ಸ್ಥಾಪಿಸಿರುವರು. ನವರಂಗದಲ್ಲಿ ನಾಲ್ಕು ಕಂಬಗಳಿದ್ದು, ಚೌಕಾಕಾರ ಅಷ್ಟಮುಖ ಮತ್ತು ಚೌಕಾಕಾರದಲ್ಲಿ ಕಡೆದಿದ್ದರೆ, ಇವುಗಳ ಮೇಲೆ ಘಟ, ಫಲಕ ಮತ್ತು ಬೋದಿಗೆಗಳಿವೆ. ನವರಂಗದ ಒಳಗೋಡೆಯಲ್ಲಿ ಸಪ್ತಮಾತೃಕೆಯರ ಶಿಲ್ಪಗಳಿವೆ. ಈ ಹಿಂದೆ ವಿವರಿಸಿದಂತೆ ಸಪ್ತಮಾತೃಕೆಯರನ್ನು ಮುತ್ತೈದೆ ಕನ್ಯೆಯರೆಂದು, ಅಮ್ಮನವರೆಂದು ಕರೆಯುವುದು ವಾಡಿಕೆ. ಈ ಶಿಲ್ಪ ಪಟ್ಟಿಕೆಯಲ್ಲಿ ಬ್ರಾಹ್ಮಿ, ಮಾಹೇಶ್ವರಿ, ಕೌಮಾರಿ, ವೈಷ್ಣವಿ, ವಾರಾಹಿ, ಇಂದ್ರಾಣಿ ಮತ್ತು ಚಾಮುಂಡಿಯರನ್ನು ಕಡೆಯಲಾಗಿದೆ. ಇವುಗಳ ಇಕ್ಕೆಲಗಳಲ್ಲಿ ವೀರಭದ್ರ ಮತ್ತು ಗಣಪತಿಯ ಶಿಲ್ಪಗಳಿವೆ. ದೇವಾಲಯದ ಮುಂಬದಿಯಲ್ಲಿ ಕಪ್ಪುಶಿಲೆಯ ನಾಗಶಿಲ್ಪಗಳಿದ್ದರೆ ಬಲಬದಿಯಲ್ಲಿರುವ ವೀರಗಲ್ಲಿನ ಬಹುಭಾಗ ಭೂಮಿಯಲ್ಲಿ ಹೂತುಹೋಗಿದೆ. ಕ್ರಿ.ಶ.೧೧ನೇ ಶತಮಾನದಲ್ಲಿ ನಿರ್ಮಾಣವಾತುವ ಈ ದೇವಾಲಯ ಹೊಯ್ಸಳರ ಶೈಲಿಯಲ್ಲಿದೆ.

೭. ಕಾಶಿವಿಶ್ವನಾಥ ದೇವಾಲಯ

ಚಿತ್ರದುರ್ಗ ಬೆಟ್ಟದ ಅಕ್ಕತಂಗಿ ಹೊಂಡದ ಬಳಿಯ ಪೂರ್ವಾಭಿಮುಖವಾಗಿರುವ ದೇವಾಲಯವೇ ಕಾಶಿವಿಶ್ವನಾಥನದ್ದು. ಗರ್ಭಗೃಹ, ಅಂತರಾಳ, ಸಭಾಮಂಟಪ ಮತ್ತು ಮುಖಮಂಟಪಗಳಿರುವ ಈ ದೇವಾಲಯದ ಗರ್ಭಗೃಹದಲ್ಲಿ ಸುಮಾರು ಎರಡುವರೆ ಅಡಿ ಎತ್ತರದ ಪ್ರತಿಷ್ಠಾಪನ ಶಿವಲಿಂಗವಿದೆ. ಗರ್ಭಗೃಹದ ದ್ವಾರವು ಪೂರ್ಣಕುಂಭ, ಲಲಾಟದಲ್ಲಿ ಗಣೇಶನ ಉಬ್ಬು ಶಿಲ್ಪಗಳನ್ನು ಒಳಗೊಂಡಿದೆ. ಅಂತರಾಳದ ಬಾಗಿಲುವಾಡದಲ್ಲಿ ದ್ವಾರಪಾಲಕರ ಶಿಲ್ಪಗಳ ಬದಲಾಗಿ ವ್ಯಾಳಗಳ ಶಿಲ್ಪ ಕಡೆಯಲಾಗಿದೆ. ಸಭಾಮಂಟಪದಲ್ಲಿ ಲಿಂಗಕ್ಕೆ ಅಭಿಮುಖವಾಗಿ ಎರಡು ಅಡಿ ಎತ್ತರ ನಂದಿಶಿಲ್ಪವಿದೆ. ಇಲ್ಲಿನ ಎರಡು ಕಂಬಗಳನ್ನು ಚೌಕಾಕಾರ, ಹದಿನಾರುಮುಖ, ಚೌಕಾಕಾರ, ಹದಿನಾರುಮುಖ, ಚೌಕಾಕಾರದಲ್ಲಿ ಕಡೆಯಲಾಗಿದ್ದು, ಮೇಲೆ ಮೊಗ್ಗಿನಂತೆ ಬಾಗಿದ ಪುಷ್ಪಬೋದಿಗೆ ಕಡೆದಿರುವರು. ಈ ಸ್ತಂಭದ ಮೇಲೆ ನಂದಿ, ಭೈರವ, ಗಂಡಭೇರುಂಡ, ಪುರುಷಾಮೃಗ, ಗಣೇಶ, ವೀರಭದ್ರ ಮೊದಲಾದ ಶಿಲ್ಪಗಳಿವೆ. ಶಿಲ್ಪಾಶಾಸ್ತ್ರದ ಪರಿಭಾಷೆಯಲ್ಲಿ ಈ ವಿಧದ ಕಂಬಗಳನ್ನು 'ಮಿಶ್ರಕಸ್ತಂಭ' ಎಂದು ಕರೆಯಲಾಗುತ್ತದೆ. ಗರ್ಭಗೃಹ ಮತ್ತು ಅಂತರಾಳಕ್ಕೆ ಪ್ರದಕ್ಷಿಣಾಪಥವಿದ್ದು, ಇದು ನವರಂಗಕ್ಕೆ ಸಂಪರ್ಕ ಕಲ್ಪಿಸುತ್ತದೆ. ಸಭಾಮಂಟಪದ ಬಾಗಿಲುವಾಡದಲ್ಲಿ ತ್ರಿಶೂಲ, ಢಮರು, ಗದೆ ಮತ್ತು ಅಭಯ ಮುದ್ರೆಯಲ್ಲಿರುವ ಶೈವದ್ವಾರ ಪಾಲಕ ಶಿಲ್ಪಗಳು ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಕೆತ್ತನೆ ಇದೆ. ಮುಖಮಂಟಪವು 'ಪಾದಬಂದ' ರೀತಿಯ ಅಧಿಷ್ಠಾನದ ಮೇಲೆ ನಿರ್ಮಿತವಾಗಿದ್ದು, ಕಕ್ಷಾಸನ ಮತ್ತು ಕಂಬಗಳಿಂದ ಕೂಡಿದೆ. ಇದು 'S' ಆಕಾರದ ಇಳಿಜಾರಾದ ಕಪೋತ ಹೊಂದಿದೆ. ಮುಖಮಂಟಪದ ಮುಂದಿರುವ ಹಸ್ತಿಹಸ್ತದೊಳಗಿನ ಕೂಟಾಲಂಕರಣದಲ್ಲಿ ಆರಾಮಭಂಗಿಯಲ್ಲಿ ಕುಳಿತ ರಾಣಿಯೊರ್ವಳ ಶಿಲ್ಪವಿದೆ. ಅವಳ ಕೈ ಮೇಲೆ ಗಿಳಿಯೊಂದು ಕುಳಿತಿರುವುದು ಈ ದೇವಾಲಯದ ವೈಶಿಷ್ಟ್ಯಗಳಲ್ಲೊಂದು. ವಿಜಯನಗರ ಶೈಲಿಯಲ್ಲಿರುವ ಈ ದೇವಾಲಯವು ಕ್ರಿ.ಶ.೧೬ನೇ ಶತಮಾನದ ನಿರ್ಮಿತಿಯಾಗಿರುವುದು. ದೇವಾಲಯದ ಮುಂಬದಿಯಲ್ಲಿ ಅಧಿಷ್ಠಾನದ ಮೇಲೆ ಹತ್ತು ಅಡಿಎತ್ತರದ ದೀಪಸ್ತಂಭವಿದೆ.

೮. ಉಮಾಮಹೇಶ್ವರ ದೇವಾಲಯ

ರಂಗಯ್ಯನ ಬಾಗಿಲ ಬಳಿ ಇರುವ ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಗರ್ಭಗೃಹ, ಅಂತರಾಳ, ತೆರೆದ ಮಂಟಪಗಳ ರಚನೆಯನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಮೂರು ಅಡಿ ಎತ್ತರದ ಪ್ರತಿಷ್ಠಾಪನ ಲಿಂಗವಿದೆ. ಗರ್ಭಗೃಹದ ದ್ವಾರದಲ್ಲಿ ಪೂರ್ಣಕುಂಭ, ಲಲಾಟದಲ್ಲಿ ನಂದಿ ಮತ್ತು ಶಿವಲಿಂಗದ ಕೆತ್ತನೆಗಳಿವೆ. ಶಿವಲಿಂಗಕ್ಕೆ ಅಭಿಮುಖವಾಗಿ ಎರಡೂವರೆ ಅಡಿ ಎತ್ತರ, ಮೂರುವರೆ ಅಡಿ ಉದ್ದವಿರುವ ನಂದಿಶಿಲ್ಪವನ್ನು ಪ್ರತಿಷ್ಠಾಪಿಸಿರುವರು. ಅಂತರಾಳದ ದ್ವಾರದಲ್ಲಿ ತ್ರಿಶೂಲ, ಢಮರು, ಖಡ್ಗ, ಗದೆಗಳನ್ನು ಹಿಡಿದಿರುವ ಶೈವದ್ವಾರಪಾಲಕರ ಶಿಲ್ಪಗಳಿವೆ. ಲಲಾಟದಲ್ಲಿ ಪದ್ಮದ ಕೆತ್ತನೆಯಿದೆ.

ತೆರೆದ ಮಂಟಪದಲ್ಲಿ ಆರು ಸ್ವತಂತ್ರವಾದ ಕಂಭಗಳಿವೆ. ಈ ಕಂಬಗಳಲ್ಲಿ ಮೂರು ಚಚ್ಚೌಕ ಭಾಗಗಳಿದ್ದು, ಪ್ರತಿಯೊಂದರ ಮಧ್ಯೆ ಅಷ್ಟಮುಖ, ಹದಿನಾರು ಮುಖದ ಪಟ್ಟಿಕೆಗಳಿವೆ. ಮೇಲ್ಭಾಗದಲ್ಲಿ ಮೊಗ್ಗಿನಾಕಾರದ ಪುಷ್ಪಬೋದಿಗೆಯಿದೆ. ಈ ಚಚ್ಚೌಕ ಭಾಗಗಳ ಮೇಲೆ ದ್ವಿಭುಜಧಾರಿ ಗಣೇಶ, ವೇಣುಗೋಪಾಲ, ವೀರಾಂಜನೇಯ, ನರಸಿಂಹ, ವ್ಯಾಳ, ಬೇಡರ ಕಣ್ಣಪ್ಪ, ಶಿವಲಿಂಗ, ಜಟಾಧರ ಭೈರವ, ಆನೆ, ಕೋತಿ, ನಗ್ನಭೈರವ, ಮೂರುಕಾಲುಳ್ಳ ಅಪೂರ್ವ ಸ್ತ್ರೀಶಿಲ್ಪ, ಹಣ್ಣನ್ನು ತಿನ್ನುತ್ತಿರುವ ಕೋತಿ, ಕುಂಭಪಂಜರ ಜೊತೆಗೆ ಭಕ್ತಶಿಲ್ಪಗಳಿದ್ದು, ಕಂಬದ ಅಲಂಕರಣವನ್ನು ಹೆಚ್ಚಿಸಿವೆ. ಕೆಳಭಾಗದಲ್ಲಿ ಚೌಕಾಕಾರವಾಗಿರುವ ಕಂಬಗಳು ಮೇಲೆ ಹೋದಂತೆ ಸಪೂರವಾಗುತ್ತಾ ಹೋಗುತ್ತವೆ.

ತೆರೆದ ಮಂಟಪದ ಬಲಬದಿಯ ಮೂಲೆಯಲ್ಲಿ ಸುಮಾರು ನಾಲ್ಕು ಅಡಿ ಎತ್ತರದ ವೀರಭದ್ರನ ಮೂರ್ತಿಯಿದೆ. ಅಂಕುಡೊಂಕಾದ ಮುಖಭಾವದೊಂದಿಗೆ ಕಪ್ಪುಶಿಲೆಯಲ್ಲಿ ಕಡೆಯಲಾದ ಈ ಶಿಲ್ಪ ಪೂರ್ವಾಭಿಮುಖವಾಗಿದೆ. ವೀರಭದ್ರನು ತ್ರಿಭಂಗಿಯಲ್ಲಿ ನಿಂತಿದ್ದು, ತನ್ನ ನಾಲ್ಕು ಕೈಗಳಲ್ಲಿ ತ್ರಿಶೂಲ,

ಢಮರು, ಖಡ್ಗ ಮತ್ತು ಖೇಟಗಳನ್ನು ಹಿಡಿದಿದ್ದಾನೆ. ದೇಹದ ಆಭರಣಗಳ ಪೈಕಿ ಕಿರೀಟಮುಕುಟ, ಎದೆಕವಚ, ಕಂಠಿಹಾರ, ಯಜ್ಞೋಪವೀತ, ಕಂಕಣ, ಕೇಯೂರ, ಕಾಲ್ಕಡಗ, ನೂಪುರ, ರುಂಡಮಾಲೆಗಳಿವೆ. ಶಿಲ್ಪದ ಎರಡೂ ಬದಿಗಳಲ್ಲಿ ಸೂರ್ಯ ಚಂದ್ರರ ಕೆತ್ತನೆಗಳಿವೆ.

ದೇವಾಲಯದ ಮುಂಬದಿಯ ಸುಮಾರು ಹತ್ತು ಅಡಿ ಎತ್ತರದ ದೀಪಸ್ತಂಭವಿದ್ದು, ಇದರ ಕೆಳಭಾಗದಲ್ಲಿ ಕೈಮುಗಿದುನಿಂತ ದಂಪತಿಗಳ ಭಕ್ತಶಿಲ್ಪಗಳಿವೆ. ಕ್ರಿ.ಶ.೧೭ನೇ ಶತಮಾನದಲ್ಲಿ ನಿರ್ಮಾಣವಾದ ಈ ದೇಗುಲವು ವಿಜಯನಗರ ಶೈಲಿಯಲ್ಲಿರುವುದು. ದೇವಾಲಯದಲ್ಲಿ ಪ್ರತಿ ಸೋಮವಾರ ಮಕರಸಂಕ್ರಾಂತಿ, ಶಿವರಾತ್ರಿ, ಯುಗಾದಿ, ವಿಜಯದಶಮಿ ಮುಂತಾದ ಹಬ್ಬಗಳ ಅವಧಿಯಲ್ಲಿ ವಿಶೇಷ ಪೂಜೆಗಳು ಜರುಗುತ್ತವೆ. ಬ್ರಾಹ್ಮಣರು ಈ ದೇವಾಲಯವನ್ನು ಪೂಜಿಸುತ್ತಿರುವರು.

೯. ಸುಬ್ರಮಣ್ಯೇಶ್ವರ ದೇವಾಲಯ

ನೆಲ್ಲಿಕಾಯಿ ಸಿದ್ದಪ್ಪನ ಬೆಟ್ಟದ ಪೂರ್ವದಿಕ್ಕಿನ ಬುಡದಲ್ಲಿ ಸುಬ್ರಮಣ್ಯೇಶ್ವರ ದೇವಾಲಯ ನೆಲೆಗೊಂಡಿದೆ. ಈ ದೇಗುಲವಿರುವ ಪ್ರದೇಶವು ೧೨ನೇ ಶತಮಾನದಲ್ಲಿ ನಾಗತೀರ್ಥವೆಂದು ಪ್ರಸಿದ್ಧಿಪಡೆದಿತ್ತು. ಇದೇ ಬೆಟ್ಟಪರಿಸರದಲ್ಲಿನ ಶಾಸನವೊಂದು ಇದನ್ನು ದಕ್ಷಿಣ ಪರ್ವತ ನಾಗತೀರ್ಥ ಎಂದು ಪ್ರಸ್ತಾಪಿಸಿದೆ.[೨೦] ನಾಯಕ ಅರಸರ ಕಾಲದಲ್ಲಿ ಇದನ್ನು ನಾಗತೇರಹರವು ಎಂದು ಕರೆಯಲಾಗುತಿತ್ತು. ನಾಗತೀರ್ಥವು ೧೨ನೇ ಶತಮಾನದಿಂದಲೇ ನಾಗನ ಆರಾಧನೆಗೆ ಸಂಬಂಧಿಸಿದ ಕ್ಷೇತ್ರವೆಂಬುದು ಇದರಿಂದ ಶೃತಪಡುತ್ತದೆ. ನಾಗನಿಗೂ ಸುಬ್ರಮಣ್ಯನಿಗೂ ಇರುವ ಸಂಬಂಧದ ಹಿನ್ನೆಲೆಯಲ್ಲಿ ಈ ಪರಿಸರದಲ್ಲಿ ಸುಬ್ರಮಣ್ಯೇಶ್ವರನ ಗುಡಿ ನೆಲೆಗೊಂಡಿರಬಹುದು.

ಪೂರ್ವಾಭಿಮುಖವಾಗಿರುವ ಈ ದೇವಾಲಯವು ಚೌಕಾಕಾರದ ಸರಳ ರಚನೆಯುಳ್ಳ ಒಂದೇ ಕೋಣೆಯಿಂದ ಕೂಡಿದೆ. ಕೋಣೆಯ ಮಧ್ಯದಲ್ಲಿ ಆಲಯಕ್ಕೆ ಆಧಾರವಾಗಿರುವ ನಾಲ್ಕು ಕಂಬಗಳ ಮಧ್ಯೆ ಮತ್ತು ಕಂಬಗಳಿಗೆ ಹೊಂದಿಕೊಂಡಂತೆ ೨೦ ಸೆಂ.ಮೀ. ಎತ್ತರದ ವೇದಿಕೆ ನಿರ್ಮಿಸಲಾಗಿದೆ. ದ್ವಾರಕ್ಕೆ ಅಭಿಮುಖವಾಗಿರುವ ಭಿತ್ತಿಯಲ್ಲಿ ಪುಷ್ಪದ ಕೆತ್ತನೆಯ ಕೆಳಗೆ ಏಳು ಹೆಡೆಯ ಹಾವಿನ ನೆರಳಲ್ಲಿರುವ ಶಿವಲಿಂಗವೂ, ಎಡಬಲಗಳಲ್ಲಿ ನಾಗರ ಉಬ್ಬುಶಿಲ್ಪಗಳೂ ಇವೆ. ಸುಮಾರು ಕ್ರಿ.ಶ.೧೯೨೮ರ ಅವಧಿಯಲ್ಲಿ ಎಂ.ಎಚ್.ಕೃಷ್ಣ ಪರಿಶೀಲನಾರ್ಥವಾಗಿ ಈ ದೇಗುಲಕ್ಕೆ ಭೇಟಿ ಇತ್ತಾಗ ಒಳಗಿನ ಕಟ್ಟೆಯೊಂದರ ಮೇಲೆ ಶಿವಲಿಂಗವೂ ಎರಡು ನಾಗರ ಕಲ್ಲುಗಳೂ ಇದ್ದವು.[೨೧] ಆದರೆ ಪ್ರಸ್ತುತ ದೇವಾಲಯದ ಕಟ್ಟೆ ಅಥವಾ ಅದರ ಅಕ್ಕಪಕ್ಕದಲ್ಲಾಗಲೀ ಯಾವುದೇ ಬಗೆಯ ಶಿಲ್ಪಾವಶೇಷಗಳಿಲ್ಲ. ಇಲ್ಲಿನ ಸ್ತಂಭಗಳ ಮೇಲೆ ವೇಣುಗೋಪಾಲ, ಕಾಳಿಂಗಮರ್ಧನ, ಆಂಜನೇಯ, ಪುರುಷಾಮೃಗ, ನಂದಿ, ಲಿಂಗ, ದೇವಿಯರುಂಡ ಮೊದಲಾದ ಉಬ್ಬುಶಿಲ್ಪಗಳಿವೆ. ನಾಯಕ ಅರಸರು ಸುಬ್ರಮಣ್ಯೇಶ್ವರ ದೇವರಿಗೆ ನಾಗಾಭರಣವೊಂದನ್ನು ಮಾಡಿಸಿಕೊಟ್ಟಿದ್ದಾರೆ.[೨೨] ವಾಸ್ತುಶೈಲಿ ಹಿನ್ನೆಲೆ ಮತ್ತು ಕ್ಷೇತ್ರದ ಧಾರ್ಮಿಕ ಮಹತ್ವವನ್ನು ಗಮನಿಸಿದರೆ ಇದು ವಿಜಯನಗರ ಕಾಲದಲ್ಲಿ ನಿರ್ಮಾಣವಾಗಿರಬಹುದು.

೧೦. ತುಂಗಭದ್ರೇಶ್ವರ ದೇವಾಲಯ

ತುಂಗಭದ್ರೇಶ್ವರ ದೇವಾಲಯವನ್ನು ಚಿತ್ರದುರ್ಗ ಬೆಟ್ಟದ ಭೀಮನಕಲ್ಲುಗಿರಿಯ ದಕ್ಷಿಣ ತಪ್ಪಲಿನಲ್ಲಿ ಪೂರ್ವಾಭಿಮುಖವಾಗಿ ನಿರ್ಮಿಸಲಾಗಿದೆ. ವಾಸ್ತುವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ತೆರೆದಮಂಟಪಗಳನ್ನು ಒಳಗೊಂಡಿದ್ದು, ಕಣಶಿಲೆಯಿಂದ ನಿರ್ಮಿತವಾಗಿದೆ. ಗರ್ಭಗೃಹ ಅಂತರಾಳದಲ್ಲಿನ ಶಿವಲಿಂಗ ಮತ್ತು ನಂದಿಶಿಲ್ಪಗಳು ನಿಧಿಗಳ್ಳರ ಆಸೆಗೆ ಸಂಪೂರ್ಣ ಭಗ್ನಗೊಂಡಿವೆ. ಮೂಲತಃ ಗರ್ಭಗೃಹಕ್ಕೆ ಬಾಗಿಲುವಾಡವಿದ್ದು, ಪ್ರಸ್ತುತ ಅದರ ಗುರುತುಗಳು ಹಾಗೆಯೇ ಉಳಿದುಬಂದಿವೆ. ಅಂತರಾಳದ ಬಾಗಿಲುವಾಡದಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳಿದ್ದು, ತ್ರಿಶೂಲ, ಖಡ್ಗ, ಗದೆ ಮತ್ತು ಅಭಯ ಹಸ್ತದಲ್ಲಿವೆ. ಇದರ ಲತಾಸುರುಳಿ ವಜ್ರಪಟ್ಟಿಕೆ ಅಲಂಕರಣದೊಡನೆ ಲಲಾಟಫಲಕದಲ್ಲಿ ಗಣೇಶನ ಉಬ್ಬುಕೆತ್ತನೆ ಇದೆ. ತೆರೆದ ಮಂಟಪದಲ್ಲಿ ಎರಡು ಕಂಬಗಳಿದ್ದು, ಚೌಕಾಕಾರ ಅಷ್ಟಮುಖ

ಮತ್ತು ಹದಿನಾರು ಮುಖಗಳಾಗಿ ಕಡೆಯಲಾಗಿದೆ. ಇವುಗಳ ಮೇಲೆ ಸರಳ ಬೋದಿಗೆ ಇದೆ. ಈ ಸ್ತಂಭಗಳ ಮೇಲೆ ಮಂಟಪದೊಳಗಿನ ನಂದಿ, ರಾಜಪೋಷಾಕು ಧರಿಸಿ ಪ್ರಣಾಮ ಮುದ್ರೆಯಲ್ಲಿ ನಿಂತಿರುವ ಭಕ್ತರು, ಗದೆಹಿಡಿದ ವೀರ, ಕಮಂಡಲ ಹಿಡಿದು ನಿಂತಿರುವ ಗಡ್ಡಾದಾರಿ ಯತಿಗಳ ಶಿಲ್ಪಗಳಿವೆ. ದೇವಾಲಯದ ಹೊರಭಿತ್ತಿಯಲ್ಲಿ ಪರಸ್ಪರ ಅಭಿಮುಖವಾಗಿರು ಮೀನಿನ ಉಬ್ಬು ಶಿಲ್ಪಗಳಿವೆ. ಲಕ್ಷ್ಮಣ್ ತೆಲಗಾವಿಯರು ಒಂದೆಡೆ ಈ ದೇವಾಲಯವನ್ನು ಕುರಿತು "ತುಂಗಭದ್ರೇಶ್ವರ ದೇವಾಲಯವು ನಾಯಕ ಅರಸರ ಅವಧಿಯಲ್ಲಿ ಲಕ್ಷ್ಮಿನರಸಿಂಹ ಸ್ವಾಮಿಯ ನೆಲೆಯಾಗಿದ್ದು, ಇಲ್ಲಿ ಆ ದೇವರ ಕೇಲು ಇದ್ದಿತು. ಚಿತ್ರದುರ್ಗದ ಪತನದ ತರುವಾಯ ಓಬವ್ವನ ಮೊಮ್ಮಕ್ಕಳಲ್ಲಿ ಹಿರಿಯವನಾದ ದೊಡ್ಡಹನುಮ ಈ ದೇವರ ಪೆಟ್ಟಿಗೆ ಸಮೇತ ಎದುರಿಗೆ ನಿಲ್ಲಿಸಲಾದ ಕಂಬದ (ನರಸಿಂಹಸ್ವಾಮಿ) ದೇವರನ್ನು ತೆಗೆದುಕೊಂಡು ಹೋಗಿ ಚಳ್ಳಕೆರೆಯ ಸಮೀಪದ ಬೆಳಗೆರೆಯಲ್ಲಿ ಸ್ಥಾಪಿಸಲಾಯಿತು ಎಂದೂ, ಇನ್ನೂ ಮುಂದುವರೆದು ಪಾಳುಬಿದ್ದಿದ್ದ ಈ ದೇಗುಲದಲ್ಲಿ ೨೦ನೇ ಶತಮಾನದ ಮೂರನೇ ದಶಕದಲ್ಲಿ ಸ್ವಾಮಿಯೊರ್ವರಿಂದ ಈ ದೇಗುಲದಲ್ಲಿ ತುಂಗ ಭದ್ರೇಶ್ವರ ಲಿಂಗ ಸ್ಥಾಪಿಸಲ್ಪಟ್ಟಿತೆಂದು ಆ ಸ್ವಾಮೀಜಿಯವರು ಲಿಂಗೈಕ್ಯರಾದ ತರುವಾಯ ಅವರ ಸಮಾಧಿಯನ್ನು ದೇವಾಲಯದ ಮುಂಬದಿಯಲ್ಲೆ ಮಾಡಲಾಯಿತು ಅವರ ಸಮಾಧಿ ಇಂದಿಗೂ ದೇವಾಲಯದ ಎದುರಿನಲ್ಲಿದೆ"[೭೩] ಎಂದು ಉಲ್ಲೇಖಿಸಿರುವರು. ಆದರೆ ಇದು ಮೂಲತ ವೈಷ್ಣವ ಪಂಥದ ದೇವಾಲಯವೆಂಬ ಸಂಗತಿಯನ್ನು ಸಮರ್ಥಿಸುವ ಲಿಖಿತ ಆಧಾರಗಳಾಗಲೀ ಅಥವಾ ಪ್ರಾಚ್ಯಾವಶೇಷಗಳಾಗಲೀ ಲಭ್ಯವಿಲ್ಲ. ತುಂಗಭದ್ರೇಶ್ವರ ದೇವಾಲಯ ಮೂಲತ ಶೈವ ಪಂಥೀಯ ದೇಗುಲವೇ ಆಗಿತ್ತೆಂಬುದನ್ನು ಬಾಗಿಲುವಾಡದ ಶೈವದ್ವಾರಪಾಲಕ ಶಿಲ್ಪಗಳು, ಲಲಾಟದಲ್ಲಿನ ಗಣೇಶ ಶಿಲ್ಪಗಳಲ್ಲದೇ ಸ್ತಂಭದ ಮೇಲಿನ ಕಮಂಡಲ ಹಿಡಿದು ನಿಂತ ಗಡ್ಡಧಾರಿ ಯತಿ, ನಂದಿ ಶಿಲ್ಪಗಳು ಸಮರ್ಥಿಸುತ್ತವೆ. ಹಾಗಾಗಿ ಇದು ಲಕ್ಷ್ಮಿನರಸಿಂಹಸ್ವಾಮಿಯ ನೆಲೆಯಾಗಿರದೇ ಮೂಲತಃ ಶೈವಪಂಥಿಯ ದೇವಾಲಯವೇ ಆಗಿತ್ತೆನ್ನಬಹುದು. ವಿಜಯನಗರ ಶೈಲಿಯಲ್ಲಿರುವ ಈ ದೇವಾಲಯವನ್ನು ೧೬ನೇ ಶತಮಾನದಲ್ಲಿ ಕಟ್ಟಿರುವರು. ಇದೇ ದೇವಾಲಯದ ಎಡಬದಿಯಲ್ಲಿ ಬೃಹತ್ ಕಲ್ಲಾಸರೆಯಲ್ಲಿರುವ ಹಾಗೂ ಇಂದಿಗೂ ಸುಸ್ಥಿಯಲ್ಲಿ ಉಳಿದುಕೊಂಡಿರುವ ಕಟ್ಟೆ ಅಥವಾ ಎತ್ತರದ ಜಗುಲಿಯು ಚಲವಾದಿಗಳು ತಮ್ಮ ಜಾತಿ ವ್ಯಾಜ್ಯಗಳನ್ನು ನ್ಯಾಯತೀರ್ಮಾನ ಮಾಡುವ ಎಡೆಯಾಗಿದ್ದಿತು.[೭೪] ಇದನ್ನು ಯಾಜಮಾನ ಕಟ್ಟೆ, ಪಂಚಾಯಿತಿ ಮತ್ತು ಉಗ್ರಾಣದ ಕಟ್ಟೆಯೆಂತಲು ಕರೆಯಲಾಗುತ್ತಿತ್ತು. ದೇವಾಲಯಗಳ ವ್ಯಾಜ್ಯವಿಲೇವಾರಿಗೆ ಸಂಬಂಧಿಸಿದಂತೆ ನ್ಯಾಯಾಲಯಗಳಾಗಿ ಕಾರ್ಯನಿರ್ವಹಿಸುತ್ತಿದ್ದುದಕ್ಕೆ ಹಿಡಿದ ಕೈಗನ್ನಡಿಯಿದು.

೧೧. ಬೀರಗಲ್ಲೇಶ್ವರ ದೇವಾಲಯ

ದೊಡ್ಡಪೇಟೆಯ ಪಾರ್ಶ್ವನಾಥ ದೇವಾಲಯದ ಹಿಂಬದಿಯ ಕಂಬಳಿಬೀದಿಯಲ್ಲಿ ಬೀರಗಲ್ಲೇಶ್ವರ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯವು ಮೂರುಗರ್ಭಗೃಹ, ಅಂತರಾಳ, ಸಭಾಮಂಟಪದ ವಾಸ್ತುವಿನ್ಯಾಸದಿಂದ ನಿರ್ಮಾಣವಾಗಿದೆ. ಮುಖ್ಯಗರ್ಭಗೃಹದಲ್ಲಿ ಸುಮಾರು ಒಂದೂವರೆ ಅಡಿ ಎತ್ತರದ ಪ್ರತಿಷ್ಠಾಪನ ಲಿಂಗವಿದೆ. ವೃತ್ತಾಕಾರದ ಪ್ರಾಣಿವಟ್ಟವಿರುವ ಲಿಂಗದ ಎಡಭಾಗಕ್ಕೆ ಜಲಹರಿ ಇರುವುದು. ಗರ್ಭಗೃಹದ ಬಾಗಿಲುವಾಡವು ಶೈವ ದ್ವಾರಪಾಲಕರಿಂದ ಕೂಡಿದ್ದು, ಲಲಾಟದಲ್ಲಿ ಗಣೇಶನ ಉಬ್ಬುಕೆತ್ತನೆ ಇದೆ. ಮುಖ್ಯಗರ್ಭಗೃಹದ ಬಲಬದಿಯ ಗರ್ಭಗೃಹದಲ್ಲಿ ಗಣೇಶನ ಮೂರ್ತಿ ಪ್ರತಿಷ್ಠಾಪಿಸಿರುವರು. ಮೂರುಅಡಿ ಎತ್ತರದ ಈ ಶಿಲಾಮೂರ್ತಿಯನ್ನು ಕಪ್ಪುಶಿಲೆಯಲ್ಲಿ ಕಡೆಯಲಾಗಿದೆ. ಸುಖಾಸೀನ ಭಂಗಿಯಲ್ಲಿ ಆಸೀನನಾಗಿರುವ ಗಣೇಶನು ತನ್ನ ನಾಲ್ಕು ಕೈಗಳಲ್ಲಿ ಅರ್ಧಚಂದ್ರಾಯುಧ, ಅಂಕುಶ, ದಂತ, ಮೋದಕ ಹಿಡಿದಿರುವನು. ಗಣೇಶನು ಕರಂಡಮುಕುಟ ಧಾರಿಯಾಗಿದ್ದು, ಕಂಠಿಹಾರ, ಕೆಯೂರ, ಕರ್ಣಕುಂಡಲ, ಕಂಕಣ, ಕಟಿಬಂಧ ಕಾಲ್ಕಡಗ ಉಪವೀತಗಳಿಂದ ಅಲಂಕೃತನಾಗಿರುವಂತೆ ಶಿಲ್ಪಿತವಾಗಿರುವನು. ಮುಖ್ಯ ಗರ್ಭಗೃಹದ

ಎಡಬದಿಯಲ್ಲಿರುವ ಗರ್ಭಗೃಹದಲ್ಲಿ ಪಾರ್ವತಿಯ ಮೂರ್ತಿಯನ್ನು ಪೂರ್ವಾಭಿಮುಖವಾಗಿ ಪ್ರತಿಷ್ಠಾಪಿಸಿದ್ದಾರೆ. ಅರ್ಧ ಅಡಿ ಎತ್ತರದ ಪದ್ಮಪೀಠದ ಮೇಲೆ ಸಮಭಂಗಿಯಲ್ಲಿರುವ ಪಾರ್ವತಿಯ ವಿಗ್ರಹವು ಮೂರು ಅಡಿ ಎತ್ತರವಿದ್ದು, ಕಪ್ಪು ಶಿಲೆಯಲ್ಲಿ ಕಡೆಯಲಾಗಿದೆ. ಎರಡು ಕೈಗಳನ್ನು ಹೊಂದಿರುವ ಪಾರ್ವತಿಯು ಬಲಗೈಯಲ್ಲಿ ಪದ್ಮ ಹಿಡಿದಿದ್ದರೆ, ಎಡಗೈ ಕಟಿಯ ಮೇಲಿದೆ. ಕರಂಡಮುಕುಟ ಧಾರಿಯಾಗಿರುವ ಪಾರ್ವತಿಯು ಕಂಠಿಹಾರ, ಕರ್ಣಕುಂಡಲ, ಕೆಯೂರ, ಕೈಬಳೆ, ಕುಚಬಂದ, ಕಟಿಬಂಧ, ಕಾಲ್ಕಡಗ ಪಾದಾಭರಣ ಧರಿಸಿದ್ದು, ಶಿಲ್ಪದ ಅಂದವನ್ನು ಹೆಚ್ಚಿಸಿವೆ. ಗರ್ಭಗೃಹಗಳ ಮುಂಬದಿಯ ಅಂತರಾಳದಲ್ಲಿ ಶಿವಲಿಂಗಕ್ಕೆ ಅಭಿಮುಖವಾಗಿ ಕಪ್ಪುಶಿಲೆಯ ಪುಟ್ಟ ನಂದಿಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ನವರಂಗದಲ್ಲಿ ಉತ್ತರಾಭಿಮುಖವಾಗಿ ತ್ರಿಭಂಗಿಯಲ್ಲಿ ನಿಂತಿರುವ ವೀರಭದ್ರನ ಶಿಲಾಮೂರ್ತಿ ಇದೆ. ಕಪ್ಪು ಶಿಲೆಯಲ್ಲಿ ಕಡೆದ ಇದು ಸುಮಾರು ಮೂರು ಅಡಿ ಎತ್ತರವಿದೆ. ವೀರಭದ್ರನು ತನ್ನ ನಾಲ್ಕು ಕೈಗಳಲ್ಲಿ ಬಿಲ್ಲು, ಬಾಣ, ಖಡ್ಗ ಮತ್ತು ಖೇಟ ಹಿಡಿದಿರುವನು. ಉಳಿದಂತೆ ಕಿರೀಟಮುಕುಟ, ಸರ್ಪಕುಂಡಲ, ಹಾರ, ಉಪವೀತ, ರುಂಡಮಾಲೆ, ಕೆಯೂರ, ಭುಜವಲ್ಯ, ಕೈಕಂಕಣ, ಸೊಂಟಪಟ್ಟಿ, ಕಾಲ್ಕಡಗ ಧರಿಸಿದ್ದು, ಶಿಲ್ಪದ ಮೇಲೆ ಕೀರ್ತಿಮುಖದ ಪ್ರಭಾವಳಿ ಇದೆ.

ಸಭಾಮಂಟಪದಲ್ಲಿ ಎರಡು ಕಂಬಗಳಿವೆ. ಇವುಗಳ ಕಾಂಡಭಾಗವನ್ನು ಮಧ್ಯದಲ್ಲಿನ ಎಂಟು, ಹದಿನಾರು ಮುಖದ ಪಟ್ಟಿಕೆಗಳು ಎರಡು ಭಾಗಗಳಾಗಿ ವಿಭಾಗಿಸಿದಂತೆ ಕಡೆಯಲ್ಪಟ್ಟಿವೆ. ಇವುಗಳ ಮೇಲೆ ಸರಳ ಬೋದಿಗೆ ಇದ್ದು, ಮೆಲ್ಛಾವಣಿಯನ್ನು ಹೊತ್ತುನಿಂತಿವೆ. ಸ್ತಂಭಗಳ ಚೌಕಭಾಗದ ಮೇಲೆ ವೇಣುಗೋಪಾಲ, ನಗ್ನಭೈರವ, ನಂದಿ, ಗಣೇಶ, ಪದ್ಮದಳಗಳೊಡನೆ ಪತ್ನಿಸಮೇತರಾಗಿರುವ ಭಕ್ತರ ಉಬ್ಬುಶಿಲ್ಪಗಳಿವೆ. ವಿತಾನದಲ್ಲಿ ಊರ್ಧ್ವಮುಖ ಪದ್ಮದ ಅಲಂಕರಣವಿದೆ. ಗರ್ಭಗೃಹದ ಅಧಿಷ್ಠಾನ ಭಾಗವು ಮಣ್ಣಿನಿಂದ ಆವೃತವಾಗಿದ್ದು, ಭಿತ್ತಿಯು ಅಲಂಕಾರ ರಹಿತವಾಗಿದೆ. ಗರ್ಭಗೃಹದ ಮೇಲೆ ಪಿರಮಿಡ್ಡಿನಾಕಾರದ ಚಿಕ್ಕ ಶಿಖರವಿದೆ.

ಬೀರಗಲ್ಲೇಶ್ವರ ದೇವಾಲಯದಲ್ಲಿ ಶ್ರಾವಣಮಾಸದಲ್ಲಿ ರುದ್ರಾಭಿಷೇಕ, ಗಂಗಾಪೂಜೆ, ಅನ್ನ ಸಂತರ್ಪಣೆ ಕಾರ್ಯಕ್ರಮಗಳು ವಿಶೇಷವಾಗಿ ಜರುಗುತ್ತವೆ. ಅಲ್ಲದೆ ಶಿವರಾತ್ರಿಯಲ್ಲಿ ನಡೆಯುವ ಪಾರ್ವತಿಯ ಪೂಜೆ ವಿಶೇಷವಾಗಿದ್ದು, ಈ ದೇವಾಲಯದಲ್ಲಿ ನವರಾತ್ರಿ ಉತ್ಸವವು ವಿಜೃಂಭಣೆಯಿಂದ ಜರುಗುವುದು. ಸುಮಾರು ಕ್ರಿ.ಶ.೧೬ನೇ ಶತಮಾನದ ಈ ದೇವಾಲಯವು ವಿಜಯನಗರ ಶೈಲಿಯಲ್ಲಿದೆ. ಈ ದೇಗುಲವನ್ನು ಲಿಂಗಾಯಿತರು ಪೂಜಿಸುತ್ತಿರುವರು.

೧೨. ಗಾರೆಬಾಗಿಲ ಈಶ್ವರ ದೇವಾಲಯ

ಚಿತ್ರದುರ್ಗದ ಗಾರೆಬಾಗಿಲ ಸುತ್ತಿನ ಕೋಟೆಯ ದ್ವಾರದ ಮುಂಬದಿಯಲ್ಲಿನ ಈ ದೇಗುಲವು ಗಾರೇಬಾಗಿಲ ಈಶ್ವರ ದೇವಾಲಯ ಎಂದು ಪ್ರಸಿದ್ಧವಾಗಿದೆ. ವಾಸ್ತುವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ತೆರೆದ ಮಂಟಪಗಳನ್ನು ಕಾಣಬಹುದು. ಗರ್ಭಗೃಹದಲ್ಲಿ ಸುಮಾರು ಮೂರು ಅಡಿ ಎತ್ತರದ ಪ್ರತಿಷ್ಠಾಪನ ಲಿಂಗವಿದೆ. ಚೌಕಾಕಾರದ ಪಾಣಿವಟ್ಟ ಇರುವ ಜಲಹರಿ ಲಿಂಗದ ಎಡಭಾಗಕ್ಕಿದೆ. ಈ ಶಿವಲಿಂಗವು ಆಕೃತಿಯಲ್ಲಿ ಉಮಾಮಹೇಶ್ವರ ದೇವಾಲಯದಲ್ಲಿನ ಲಿಂಗವನ್ನು ಹೋಲುತ್ತದೆ. ಗರ್ಭಗೃಹದ ದ್ವಾರವು ಪೂರ್ಣಕುಂಭ ಸಹಿತ ಲಲಾಟದಲ್ಲಿ ಪದ್ಮದ ಕೆತ್ತನೆಗಳಿಂದ ಕೂಡಿದೆ. ಅಂತರಾಳದಲ್ಲಿರುವ ನಂದಿಶಿಲ್ಪವು ಎರಡು ಅಡಿ ಎತ್ತರ, ಮೂರು ಅಡಿ ಉದ್ದವಿದ್ದು, ಕಪ್ಪು ಶಿಲೆಯಲ್ಲಿ ಶಿಲ್ಪಿತವಾಗಿದೆ. ಬಾಗಿಲುವಾಡವು ಶೈವ ದ್ವಾರಪಾಲಕರಿಂದ ಕೂಡಿದ್ದು, ಲಲಾಟದಲ್ಲಿ ಶಿವಲಿಂಗದ ಕೆತ್ತನೆಯಿದೆ. ಬಾಗಿಲುವಾಡದ ಮೇಲಿನ ಉತ್ತರಾಂಗ ಭಾಗದಲ್ಲಿ ಹೂವು, ವ್ಯಾಳ, ಮತ್ತು ಹುಲಿಯ ಕೆತ್ತನೆಗಳಿವೆ. ಮುಖಮಂಟಪದಲ್ಲಿ ನಾಲ್ಕು ಸ್ವತಂತ್ರ ಕಂಬಗಳಿವೆ. ಇವು ಚೌಕಾಕಾರ, ಎಂಟು, ಹದಿನಾರು, ಎಂಟು ಮುಖದ ಕೆತ್ತನೆ ಮತ್ತು ಚೌಕಾಕಾರದಿಂದ ಕೂಡಿದ್ದು, ಮೇಲೆ ಹೋದಂತೆ ಸಪೂರವಾಗುತ್ತ ಹೋಗಿವೆ. ಇವುಗಳ ಮೇಲೆ ಸರಳಬೋದಿಗೆ ಇದೆ. ಸ್ತಂಭ ಮತ್ತು ಭಿತ್ತಿಗಳಲ್ಲಿ ಯಾವುದೇ ಬಗೆಯ ಅಲಂಕಾರಗಳಿಲ್ಲ. ಮುಖಮಂಟಪದಲ್ಲಿ ಕೈಮುಗಿದುನಿಂತ ಭಕ್ತನೊರ್ವನ ಶಿಲ್ಪವಿದ್ದು, ಹುಲಿಯೊಂದು ತನ್ನ ಮುಂಗಾಲನ್ನು

ಎತ್ತಿ ಅವನ ಮೇಲೆ ಆಕ್ರಮಣ ಮಾಡುವಂತೆಯೂ, ಬಲಬದಿಯಲ್ಲಿ ನಂದಿ ಮತ್ತು ಶಿವಲಿಂಗಗಳಿರುವಂತೆಯೂ ಕಂಡರಿಸಲಾದ ಒಂದು ಶಿಲ್ಪವಿರುವುದು. ಸ್ಥಳೀಯವಾಗಿ ಪ್ರಚಲಿತವಿರುವ ಐತಿಹ್ಯದ ಪ್ರಕಾರ ಈ ಶಿಲ್ಪ ಶಿವಭಕ್ತನಾದ ಶಂಕರಯ್ಯ ಎಂಬ ವ್ಯಕ್ತಿಯದು. ಶಿವಭಕ್ತನಾದ ಶಂಕರಯ್ಯನು ಈ ದೇವರ ಪರಮ ಭಕ್ತ. ಇವನು ಶಿವರಾತ್ರಿಯ ದಿನ ದೇವರ ಪೂಜೆಗಾಗಿ ಬಿಲ್ವಪತ್ರೆ ತರಲು ಕಾಡಿಗೆ ಹೋಗಿದ್ದಾಗ ಅಲ್ಲಿ ಹುಲಿಯೊಂದು ಆಕ್ರಮಣ ಮಾಡಿತೆಂದೂ, ಅದರಿಂದ ಪಾರಾಗಲು ಬೇರೆ ದಾರಿ ಇಲ್ಲದೆ ಮರವೇರಿ ಕುಳಿತು ಅಲ್ಲಿಂದಲೇ ಶಿವನನ್ನು ಜಪಿಸತೊಡಗಿ ರಾತ್ರಿಯೆಲ್ಲಾ ಅಲ್ಲೇ ಕಳೆದ. ಬೆಳಗಾದಾಗ ಇದರಿಂದ ಪಾರಾಗಿ ಬಂದನೆಂಬ ಐತಿಹ್ಯವು ಪ್ರಚಲಿತದಲ್ಲಿದೆ. ಹುಲಿಯಿಂದ ಪಾರಾಗಿ ಬಂದ ಭಕ್ತನ ಕಥೆಯನ್ನು ತಿಳಿಸುವ ಸಲುವಾಗಿ ಈ ಶಿಲ್ಪವನ್ನು ಹಾಕಿಸಿದ್ದಾರೆಂಬುದು ಪ್ರತೀತಿ. ಆದರೆ ಭಕ್ತನ ಪೋಷಾಕುಗಳನ್ನು ಗಮನಿಸಿದರೆ ಅವನೊಬ್ಬ ವೀರನಂತೆ ಶಿಲ್ಪಿತನಾಗಿದ್ದಾನೆ. ವೀರನು ಪ್ರಣಾಮ ಮುದ್ರೆಯಲ್ಲಿ ನಿಂತಿದ್ದಾನೆ. ವೀರಗಚ್ಚೆ ಹಾಕಿದ್ದಾನೆ. ಕೆಯೂರ, ಕೈಕಂಕಣ, ಕಾಲ್ಕಡಗ ಧರಿಸಿದ್ದಾನೆ. ಸೊಂಟದ ಬಲಭಾಗದಲ್ಲಿ ಕಠಾರಿ ಸಿಕ್ಕಿಸಿಕೊಂಡಿರುವನು. ಈತ ಧರಿಸಿರುವನು ಕಿರೀಟವು ವಿಜಯನಗರ ಶೈಲಿಯಲ್ಲಿದೆ. ಇವುಗಳನ್ನು ಗಮನಿಸಿದರೆ ಇದು ಬಹುಶಃ ವಿಜಯನಗರದ ಅವಧಿಯಲ್ಲಿ ಹುಲಿಯೊಡನೆ ನಡೆದ ಹೋರಾಟದಲ್ಲಿ ಮೃತನಾದ ಅಧಿಕಾರಿಯೋರ್ವನ ಶಿಲ್ಪವಿರಬಹುದು. ಅವನು ಶಿವಭಕ್ತನಾಗಿರುವುದರಿಂದ ಅವನ ಶಿಲ್ಪದ ಪಕ್ಕದಲ್ಲಿ ಶಿವಲಿಂಗವನ್ನು, ನಂದಿಯನ್ನು ಕಡೆದಿರಬಹುದು. ಒಟ್ಟಾರೆಯಾಗಿ ಅವನು ಒರ್ವ ಶಿವಭಕ್ತನಾಗಿದ್ದನೆಂಬುದು ತಿಳಿದುಬರುತ್ತದೆ. ಈ ದೇವಾಲಯವು ಕ್ರಿ.ಶ.೧೭ನೇ ಶತಮಾನದಲ್ಲಿ ನಿರ್ಮಾಣವಾಗಿದ್ದು, ವಿಜಯನಗರ ಶೈಲಿಯಲ್ಲಿದೆ.

೧೩. ಕೆಂಚೇಶ್ವರ ದೇವಾಲಯ

ಚಿತ್ರದುರ್ಗದ ಜೋಡುಬತೇರಿ ದ್ವಾರದ ಬಳಿ ಉತ್ತರಾಭಿಮುಖವಾಗಿ ಈ ದೇವಾಲಯವಿದೆ. ವಾಸ್ತುವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ಮುಖಮಂಟಪವನ್ನು ಒಳಗೊಂಡ ಈ ದೇವಾಲಯವು ಪಾಳೆಯಗಾರರ ಕಾಲದ ನಿರ್ಮಿತಿಯಾಗಿರುವುದು. ಗರ್ಭಗೃಹದಲ್ಲಿ ಕಪ್ಪು ಶಿಲೆಯಲ್ಲಿ ಕಡೆದ ಪುಟ್ಟ ಶಿವಲಿಂಗವಿದ್ದು, ಇದರ ಪೀಠಭಾಗ ಭೂಮಿಯಲ್ಲಿ ಮುಚ್ಚಿಹೋಗಿದೆ. ಇದರ ಬಾಗಿಲುವಾಡದಲ್ಲಿ ಪೂರ್ಣಕುಂಭಗಳು ಲಲಾಟದಲ್ಲಿ ಪದ್ಮವನ್ನು ಕಡೆದಿರುವರು. ಅಂತರಾಳದಲ್ಲಿ ಒಂದು ಅಡಿ ಎತ್ತರದ ನಂದಿಶಿಲ್ಪ ಹಾಗೂ ಜೋಡಿಪಾದಗಳಿವೆ. ಅಂತರಾಳದ ಬಾಗಿಲುವಾಡದಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಇವರು ತಮ್ಮ ನಾಲ್ಕು ಕೈಗಳಲ್ಲಿ ತ್ರಿಶೂಲ, ಢಮರು, ಖಡ್ಗ, ಅಭಯಹಸ್ತ ಧಾರಿಗಳಾಗಿದ್ದಾರೆ. ಕಿರೀಟಮುಕುಟ, ಸರ, ಹಾರ ಕರ್ಣಾಭರಣ, ಕಾಲ್ಕಡಗ ಧರಿಸಿದ್ದು, ಶಿಲ್ಪದ ಮೇಲ್ಬದಿಯಲ್ಲಿ ಕೀರ್ತಿಮುಖದ ಕೆತ್ತನೆ ಇದೆ. ದ್ವಾರದ ಇಕ್ಕೆಲಗಳಲ್ಲಿ ಹೂಬಳ್ಳಿ ಮತ್ತು ವಜ್ರಪಟ್ಟಿಕಗಳ ಅಲಂಕರಣವಿದೆ. ಮುಖಮಂಟಪದಲ್ಲಿ ಎರಡು ಕಂಬಗಳಿದ್ದು, ಚೌಕಾಕಾರ, ಎಂಟು, ಹದಿನಾರು ಪಾರ್ಶ್ವಗಳು ಮತ್ತು ಚೌಕಾಕಾರದಲ್ಲಿ ಅವುಗಳನ್ನು ಕಡೆಯಲಾಗಿದೆ. ಮೇಲ್ಬದಿಯಲ್ಲಿ ಪುಷ್ಪಬೋದಿಗೆ ಇದೆ. ಮುಖ ಮಂಟಪದ ಗೋಡೆಯಲ್ಲಿರುವ ಮೂರು ಚಿಕ್ಕಗೂಡುಗಳಲ್ಲಿ ಗಣೇಶ, ಲಕ್ಷ್ಮಿ, ಮತ್ತು ನಗ್ನ ಭೈರವನ ಶಿಲ್ಪಗಳನ್ನು ಕಡೆಯಲಾಗಿದ್ದು, ಇವುಗಳು ಹೊರಟಾಗಿ ಶಿಲ್ಪಿತವಾಗಿವೆ. ಇವುಗಳ ಬದಿಯಲ್ಲಿಯೇ ಹೆಡೆಬಿಚ್ಚಿದ ನಾಗನ ರಚನೆ ಇದೆ.

ದೇವಾಲಯದ ಅಧಿಷ್ಠಾನವು ಭೂಮಿಯಲ್ಲಿ ಮುಚ್ಚಿಹೋಗಿದೆ. ಗೋಡೆಯಲ್ಲಿ ಮೀನು, ಆಮೆ ಮತ್ತು ಹೆಡೆ ಬಿಚ್ಚಿರುವ ನಾಗನ ಕೆತ್ತನೆಗಳಿವೆ. ಗರ್ಭಗೃಹದ ಮೇಲಿನ ಕೈಪಿಡಿ ಗೋಡೆಯಲ್ಲಿ ಹಂಸ, ಗಿಳಿ, ಪಾರಿವಾಳ ಮತ್ತು ರುಂಡಗಳ ರಚನೆಗಳಿವೆ. ಇದರ ಮೇಲೆ ಗಾರೆಯಿಂದ ನಿರ್ಮಾಣಗೊಂಡ ದ್ರಾವಿಡಶೈಲಿಯ ದ್ವಿತಲ ಶಿಖರವಿದೆ. ಇದರಲ್ಲಿ ಅರೆಗಂಬ ಮತ್ತು ಕೂಡುಗಳ ರಚನೆಗಳಿದ್ದು, ಅವು ಕೀರ್ತಿಮುಖ ಹಾಗೂ ಹೂಬಳ್ಳಿಗಳಿಂದ ಅಲಂಕೃತಗೊಂಡಿವೆ. ಕೂಡುಗಳಲ್ಲಿ ದೇವತಾಶಿಲ್ಪಗಳಿದ್ದರೂ ಅವುಗಳು ಗುರುತಿಸಲಾಗದಷ್ಟು ಹಾಳಾಗಿವೆ. ಶಿಖರದ ಮೇಲ್ಭಾಗವು ದುಂಡಾಗಿದ್ದು, ಯಾವುದೇ ಬಗೆಯ ಕಳಶಗಳಿಲ್ಲ. ದೇವಾಲಯದ ಎಡಬದಿಯಲ್ಲಿಯೇ ಒಂದು ಪುಟ್ಟ ಮೆಟ್ಟಿಲು ಬಾವಿಯಿದ್ದು, ಕೆಂಚಮಲ್ಲಪ

ಅಥವಾ ಕೆಂಚಪ್ಪನ ಬಾವಿ ಎಂದು ಕರೆಯುವುದು ವಾಡಿಕೆ. ಈ ದೇವಾಲಯದಲ್ಲಿ ಹಬ್ಬಗಳ ದಿನದಲ್ಲಿ ವಿಶೇಷ ಪೂಜಾಕಾರ್ಯಗಳು ಜರುಗುತ್ತವಾದರೂ ಈ ದೇವಾಲಯಕ್ಕೆ ಬರುವ ಭಕ್ತಾದಿಗಳ ಸಂಖ್ಯೆ ಮಾತ್ರ ತೀರಾವಿರಳ.

೧೪. ಈಶ್ವರ ದೇವಾಲಯ

ಕೆಂಚೇಶ್ವರ ದೇಗುಲದ ಹಿಂಬದಿಯಲ್ಲಿ ಪೂರ್ವಾಭಿಮುಖವಾಗಿ ಈಶ್ವರ ದೇವಾಲಯವಿದೆ. ಚಿತ್ರದುರ್ಗ ನಾಯಕ ಅರಸರ ಅವಧಿಯಲ್ಲಿ ಕಟ್ಟಿದ ಈ ದೇವಾಲಯದ ವಾಸ್ತು ವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ಸಭಾಮಂಟಪಗಳಿವೆ. ಗರ್ಭಗೃಹದಲ್ಲಿ ೩ ಅಡಿ ಎತ್ತರದ ಕಪ್ಪುಶಿಲೆಯ ಪತಿಷ್ಠಾಪನ ಲಿಂಗವಿದೆ. ಗರ್ಭಗುಡಿಯ ಬಾಗಿಲುವಾಡದಲ್ಲಿ ಪೂರ್ಣಕುಂಭಗಳು, ಲಲಾಟದಲ್ಲಿ ಪದ್ಮದ ಉಬ್ಬು ರಚನೆಗಳಿವೆ. ಕಪ್ಪುಶಿಲೆಯ ಅಲಂಕೃತ ನಂದಿ ಶಿಲ್ಪವು ಲಿಂಗಕ್ಕೆ ಅಭಿಮುಖವಾಗಿ ಅಂತರಾಳದಲ್ಲಿದೆ. ಶೈವ ದ್ವಾರಪಾಲಕ ಶಿಲ್ಪಗಳಿರುವ ಅಂತರಾಳದ ದ್ವಾರದ ಲಲಾಟದಲ್ಲಿ ಗಣೇಶನ ಉಬ್ಬುಗೆತ್ತನೆ ಇದೆ. ಸಭಾಮಂಟಪದಲ್ಲಿ ನಾಲ್ಕು ಕಂಬಗಳಿದ್ದು, ಮುಂದಿನ ಕಂಬಗಳಿಗೆ ಹೊಂದಿಕೊಂಡಂತೆ ಇತ್ತೀಚೆಗೆ ಗೋಡೆ ನಿರ್ಮಿಸಲಾಗಿದೆ. ಸ್ತಂಭಗಳ ಕೆಳಭಾಗ ಮತ್ತು ಮೇಲಿನ ಭಾಗಗಳು ಚೌಕಾಕಾರದಲ್ಲಿದ್ದು, ಮಧ್ಯಭಾಗ ಎಂಟು, ಹದಿನಾರು ಪಾಶ್ವದ ಪಟ್ಟಿಕೆಗಳಿಂದ ಕೂಡಿದೆ. ಸ್ತಂಭದ ಮೇಲೆ ಪುಷ್ಪಬೋದಿಗೆಗಳಿವೆ. ಸ್ತಂಭಗಳ ಮೇಲಿನ ಕಮಾನಿನಾಕಾರದ ರಚನೆಯ ಒಳಗೆ ಕೈಮುಗಿದು ನಿಂತಿರುವ ರಾಜದಂಪತಿಗಳು, ಲಿಂಗ, ಪುರುಷಾಮೃಗ, ಮೂರುತಲೆಯ ಕಾಮಧೇನು, ಶಿವಲಿಂಗಕ್ಕೆ ಹಾಲೆರೆಯುತ್ತಿರುವ ಹಸುವಿನ ಶಿಲ್ಪಗಳು ಸ್ತಂಭವನ್ನು ಅಲಂಕರಣಗೊಳಿಸಿವೆ. ಸಭಾಮಂಟಪವನ್ನೇರಲು ಸೋಪಾನಗಳಿದ್ದು, ಮುಂಬದಿಯಲ್ಲಿ ಕಕ್ಷಾಸನವಿದೆ. ಸಭಾಮಂಟಪದ ದ್ವಾರದ ಬಳಿ ಪೂರ್ವಾಭಿಮುಖವಾಗಿ ಸುಖಾಸೀನ ಭಂಗಿಯಲ್ಲಿ ಆಸೀನವಾಗಿರುವ ಭೈರವನ ಶಿಲಾಮೂರ್ತಿ ಇದೆ. ಚತುರ್ಭುಜದಾರಿ ಭೈರವನು ತ್ರಿಶೂಲ, ಢಮರು, ಖಡ್ಗ, ಕಪಾಲ ಹಿಡಿದಿರುವನು. ಭೈರವನು ಜಟಾಧರನಾಗಿದ್ದು ಕರ್ಣಾಭರಣ, ಕಂಠಾಭರಣ ರುಂಡಮಾಲೆ ಕಂಕಣ, ಕಾಲ್ಕಡಗಗಳಂಥ ಆಭರಣಗಳನ್ನು ಧರಿಸಿರುವನು. ವಾಸ್ತುವಿನ್ಯಾಸದಲ್ಲಿ ಪಾಳೆಯಗಾರರ ಅವಧಿಯಲ್ಲಿ ನಿರ್ಮಾಣವಾದ ಈ ದೇವಾಲಯ ವಿಜಯನಗರ ಶೈಲಿಯಲ್ಲಿದೆ.

೧೫. ಗಂಗಾಧರೇಶ್ವರ ದೇವಾಲಯ

ಗಂಗಾಧರೇಶ್ವರ ದೇವಾಲಯವು ಕಾವಾಡಿಗರಹಟ್ಟಿಯ ನೈರುತ್ಯಕ್ಕಿರುವ ದಳವಾಯಿ ಮುದ್ದಣ್ಣನ ಹೊಂಡದ ಬಳಿ ನೆಲೆಗೊಂಡಿದೆ. ಪೂರ್ವಾಭಿಮುಖವಾದ ಈ ದೇವಾಲಯವು ಚಿತ್ರದುರ್ಗದ ನಾಯಕ ಅರಸರ ಅವಧಿಯಲ್ಲಿ ನಿರ್ಮಾಣವಾಗಿದ್ದು, ವಿಜಯನಗರ ಶೈಲಿಯಲ್ಲಿದೆ. ಇದರ ವಾಸ್ತುವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ಪ್ರದಕ್ಷಿಣಾಪಥ, ನವರಂಗ, ಮತ್ತು ಇತ್ತೀಚೆಗೆ ನಿರ್ಮಿಸಿದ ಮಹಾಮಂಟಪದ ರಚನೆ ಕಾಣಬಹುದು. ಗರ್ಭಗೃಹದಲ್ಲಿ ಮೂರು ಅಡಿ ಎತ್ತರವಿರುವ ಕಪ್ಪುಶಿಲೆಯ ಪ್ರತಿಷ್ಠಾಪನ ಲಿಂಗವಿದೆ. ವೃತ್ತಾಕಾರದ ಪಾಣಿವಟ್ಟ ಇರುವ ಲಿಂಗದ ಜಲಹರಿಯು ಲಿಂಗದ ಎಡಭಾಗಕ್ಕಿದೆ. ಲಿಂಗಕ್ಕೆ ಹಿತ್ತಾಳೆಯ ಮುಖಪದ್ಮವಿದ್ದು, ಹೆಡೆಬಿಚ್ಚಿರುವ ನಾಗನ ನೆರಳಿನಲ್ಲಿದೆ. ಪೂರ್ಣಕುಂಭದ ಕೆತ್ತನೆಗಳಿರುವ ಗರ್ಭಗೃಹದ ದ್ವಾರದ ಲಲಾಟದಲ್ಲಿ ಹೂವಿನ ಕೆತ್ತನೆ ಇದೆ. ಅಂತರಾಳದಲ್ಲಿ ಎರಡು ಅಡಿ ಎತ್ತರ, ಮೂರು ಅಡಿ ಉದ್ದದ ಕಪ್ಪುಶಿಲೆಯ ನಂದಿಶಿಲ್ಪ ಸ್ಥಾಪಿಸಿರುವರು. ತಲೆಪಟ್ಟಿ, ಲೊಡಗ, ಹಗ್ಗಸಹಿತ ಅಲಂಕೃತಗೊಂಡಿದೆ. ಇದು ಅಂತರಾಳದ ದ್ವಾರದಲ್ಲಿ ಶೈವ ದ್ವಾರಪಾಲಕರ ಉಬ್ಬುಶಿಲ್ಪಗಳಿವೆ. ಸಾಂಧಾರ ಪ್ರಕಾರದ ಈ ದೇವಾಲಯದ ಗರ್ಭಗೃಹ ಮತ್ತು ಅಂತರಾಳಕ್ಕೆ ಹೊಂದಿಕೊಂಡತೆ ಪ್ರದಕ್ಷಿಣಾಪಥವಿದೆ. ನವರಂಗದಲ್ಲಿರುವ ನಾಲ್ಕು ಕಂಬಗಳ ಕಾಂಡವನ್ನು ಎಂಟು ಮತ್ತು ಹದಿನಾರು ಪಾರ್ಶ್ವಗಳು ಮೂರು ಭಾಗಗಳನ್ನಾಗಿ ವಿಂಗಡಿಸಿವೆ. ಮೇಲ್ಭಾಗದಲ್ಲಿ ಸರಳ ಬೋದಿಗೆ ಇದ್ದು, ವಿತಾನದಲ್ಲಿ ಮುಗುಚಿದ ಪದ್ಮದ ಕೆತ್ತನೆಯಿದೆ. ನವರಂಗದ ನಾಲ್ಕೂ ದಿಕ್ಕಿಗೆ ದ್ವಾರಗಳಿದ್ದು ಶೈವದ್ವಾರಪಾಲಕರನ್ನೂ, ಲಲಾಟದಲ್ಲಿ ಪದ್ಮವನ್ನೂ ಕೆತ್ತಿರುವರು. ಇದರ ಮುಂಬದಿಯ ಮಹಾಮಂಟಪವನ್ನು ಇತ್ತೀಚೆಗೆ ನಿರ್ಮಿಸಲಾಗಿದೆ.

ದೇವಾಲಯದ ಪಕ್ಕದಲ್ಲಿ ಚಿತ್ರದುರ್ಗ ನಾಯಕ ಅರಸರ ಅವಧಿಯಲ್ಲಿ ದಳವಾಯಿಯಾಗಿದ್ದ ಮುದ್ದಣ್ಣ ಕಟ್ಟಿಸಿದ ಸುಂದರವಾದ ಪುಷ್ಕರಣಿ ಇದೆ. ಪ್ರಸ್ತುತ ಅದನ್ನು ದಳವಾಯಿ ಮುದ್ದಣ್ಣನಹೊಂಡ ಎಂದು ಕರೆಯುತ್ತಾರೆ. ಬಸವನ ಜಯಂತಿ, ಬಲಿಪಾಡ್ಯಮಿ, ವಿಜಯದಶಮಿ ಮುಂತಾದ ಹಬ್ಬಗಳಲ್ಲಿ ವಿಶೇಷ ಪೂಜೆ ನಡೆದರೆ, ಶಿವರಾತ್ರಿ ಹಬ್ಬದ ಮಾರನೇ ದಿನ ಗಂಗಾಧರೇಶ್ವರ ದೇವರ ಅಡ್ಡಪಲ್ಲಕ್ಕಿ ಉತ್ಸವ ನಡೆಯುತ್ತದೆ.

೧೬. ಕರಿವರ್ತೀಶ್ವರ ದೇವಾಲಯ

ಕಾಮನ ಬಾಗಿಲ ದಕ್ಷಿಣಕ್ಕಿರುವ ರಾಮದೇವರ ಒಡ್ಡಿನ ಬಳಿ ಇರುವ ಸುಂದರ ದೇಗುಲವಿದು. ಪೂರ್ವಾಭಿಮುಖವಾಗಿರುವ ಈ ದೇವಾಲಯವು ಗರ್ಭಗೃಹ, ಸಭಾಮಂಟಪಗಳನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಎರಡು ಅಡಿ ಎತ್ತರದ ಕಪ್ಪುಶಿಲೆಯ ಪ್ರತಿಷ್ಠಾಪನ ಲಿಂಗವಿದೆ. ನಾಯಕ ಅರಸರ ದಾಖಲೆಗಳು ಪ್ರಸ್ತಾಪಿಸುವಂತೆ ಈ ಲಿಂಗವನ್ನು ಕೊನೆಯ ಮದಕರಿ ನಾಯಕ ಪ್ರತಿಷ್ಠಾಪಿಸಿದನು.[೭೫] ಲತಾಸುರಳಿ ಮತ್ತು ಪುಷ್ಪಗಳಿಂದ ಅಲಂಕರಣಗೊಂಡ ಗರ್ಭಗೃಹದ ಬಾಗಿಲುವಾಡವು ಶೈವ ದ್ವಾರಪಾಲಕ ಶಿಲ್ಪಗಳು ಮತ್ತು ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಕೆತ್ತನೆಯನ್ನು ಒಳಗೊಂಡಿದೆ. ಸಭಾಮಂಟಪದಲ್ಲಿನ ಆರು ಕಂಬಗಳಲ್ಲಿ ಮಧ್ಯದ ನಾಲ್ಕು ಕಂಬಗಳನ್ನು ಕಪ್ಪುಶಿಲೆಯಲ್ಲಿ ಕಡೆದಿದ್ದು, ಚಚ್ಚೌಕವಾದ ಪೀಠದ ಮೇಲಿವೆ. ಸ್ತಂಭದ ಚೌಕಾಕಾರದ ಎರಡು ಭಾಗಗಳ ಮಧ್ಯೆ ಎಂಟು ಮತ್ತು ಹದಿನಾರು ಪಾರ್ಶ್ವದ ರಚನೆಗಳಿವೆ. ನವರಂಗದ ಮೇಲಿನ ವಿತಾನವು ಅಲಂಕೃತವಾಗಿದ್ದು, ಭುವನೇಶ್ವರಿ ಇದೆ. ಈ ಸ್ತಂಭಗಳ ಮೇಲೆ ನೃತ್ಯಗಣಪ, ವಿಷ್ಣುವಿನ ವರಹಾವತಾರ, ಕೂರ್ಮಾವತಾರ, ವೇಣುಗೋಪಾಲ, ಕಾಳಿಂಗಮರ್ಧನ, ಹಂಸ, ಕೃಷ್ಣ ಸ್ತ್ರೀಯರ ವಸ್ತ್ರಾಪಹರಣ ಮಾಡುತ್ತಿರುವ ಶಿಲ್ಪ, ನಂದಿ, ಗಂಡಭೇರುಂಡ, ಆಂಜನೇಯ, ಪದ್ಮದ ಉಬ್ಬು ಕೆತ್ತನೆಗಳಿವೆ. ಸಭಾಮಂಟಪದ ಮುಂಬದಿಯಲ್ಲಿನ ಎರಡು ಕಂಬಗಳು ಮಾತ್ರ ಬಳಪದ ಶಿಲೆಯಲ್ಲಿದ್ದು, ಇವು ತಿರುಗಣೆ ಚಕ್ರದಿಂದ ತಯಾರಿಸಿದವುಗಳಾಗಿವೆ. ಇವು ಚೌಕಾಕಾರ ಮತ್ತು ವೃತ್ತಾಕಾರ ಘಂಟಾಕಾರದ ರಚನೆಗಳಿಂದ ಕೂಡಿದ್ದು, ಹೊಯ್ಸಳ ಶೈಲಿಯಲ್ಲಿವೆ. ದೇವಾಲಯದ ಅಧಿಷ್ಠಾನವು ಮಣ್ಣಲ್ಲಿ ಹೂತಿದ್ದು, ಭಿತ್ತಿಯಲ್ಲಿ ಅಲಂಕಾರಗಳಿಲ್ಲ. ಗರ್ಭಗೃಹದ ಮೇಲೆ ಪಿರಮಿಡ್ಡಿನಾಕಾರದ ಚಿಕ್ಕ ಶಿಖರವಿದೆ. ದೇವಾಲಯದ ಮುಂದೆ ಸುಂದರವಾದ ಪುಷ್ಕರಣಿ ಇದೆ.

ಕರಿವರ್ತೀಶ್ವರ ದೇವಾಲಯದ ಸಭಾಮಂಟಪದ ಮುಂದಿನ ಎರಡು ಕಂಬಗಳು ಹೊಯ್ಸಳ ಶೈಲಿಯಲ್ಲಿವೆ.[೭೬] ಇದರೊಡನೆ ದೇಗುಲದ ಅಧಿಷ್ಠಾನವೂ ಇದೇ ಅವಧಿಯದು. ತರುವಾಯ ಈ ದೇವಾಲಯ ಹಾಳುಬಿದ್ದಿದೆ. ಮೇಲೆ ವಿವರಿಸಿದಂತೆ ಪಾಳೆಯಗಾರರ ದೊರೆ ಕೊನೆಯ ಮದಕರಿನಾಯಕ ಅವಧಿಯಲ್ಲಿ ಲಿಂಗದ ಪುನರ್ ಸ್ಥಾಪನೆಯಾಗಿರುವುದನ್ನು ಗಮನಿಸಿದರೆ ಬಹುಶಃ ಇದೇ ಅವಧಿಯಲ್ಲಿ ದೇವಾಲಯ ಜೀರ್ಣೋದ್ಧಾರಗೊಂಡಿದೆ. ಆಗ ಅಲ್ಲಿದ್ದ ಹಳೆಯ ಒಂದೆರಡು ಅವಶೇಷಗಳನ್ನು ದೇವಾಲಯಗಳನ್ನು ಕಟ್ಟಲು ಬಳಸಿರುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಹೀಗಿದ್ದರೂ ದೇವಾಲಯದ ಬಹುಭಾಗ ಪಾಳೆಯಗಾರರ ಅವಧಿಯಲ್ಲಿಯೇ ನಿರ್ಮಾಣವಾಗಿರುವುದು ಸ್ಪಷ್ಟ.

೧೭. ನೆಲ್ಲಿಕಾಯಿ ಸಿದ್ದಪ್ಪನ ದೇವಾಲಯ

ನೆಲ್ಲಿಕಾಯಿ ಸಿದ್ದಪ್ಪನ ಬತೇರಿ ಗಿರಿಯ ಮೇಲೆ ನಿರ್ಮಿಸಲಾಗಿರುವ ದೇಗುಲವಿದು. ಉತ್ತರಾಭಿಮುಖವಾಗಿರುವ ಈ ದೇವಾಲಯವು ಚೌಕಾಕಾರದ ಸರಳ ರಚನೆಯುಳ್ಳ ಒಂದೇ ಕೋಣೆಯಿಂದ ಕೂಡಿದೆ. ಯಾವುದೇ ಸ್ತಂಭಗಳಿಲ್ಲದ ಈ ಕೋಣೆಯಲ್ಲಿ ಹುಟ್ಟುಬಂಡೆಯ ಮೇಲೆ ನೆಲ್ಲಿಕಾಯಿಗಾತ್ರದ ಲಿಂಗವನ್ನು ಕೊರೆದು ಮೂಡಿಸಲಾಗಿದೆ. ಅಂತೆಯೇ ಇದೇ ಬೆಟ್ಟದ ಪೂರ್ವದಿಕ್ಕಿನ ತಪ್ಪಲಿನಲ್ಲಿರುವ ಬಾಳೇಕಾಯಿ ಸಿದ್ದೇಶ್ವರ ಗುಹಾಲಯದಲ್ಲಿ ಸಿದ್ಧಿಪುರುಷರು ಎಂದು ಹೆಸರಾದ ರಸಸಿದ್ಧರು ವಾಸವಾಗಿದ್ದರು. ಇವರು ವಾಸವಾಗಿದ ಈ ಬೆಟ್ಟ ಮತ್ತು ಮೇಲಿನ ನೆಲ್ಲಿಕಾಯಿ ಗಾತ್ರದ

ಲಿಂಗದಿಂದ ಈ ದೇವಾಲಯಕ್ಕೆ ನೆಲ್ಲಿಕಾಯಿ ಸಿದ್ದಪ್ಪ ಎಂಬ ಹೆಸರು ಬಂದಿರಬಹುದು. ನೆಲ್ಲಿಕಾಯಿ ಸಿದ್ದಪ್ಪನ ಬತೇರಿ ಸುತ್ತಿನ ಕೋಟೆ ನಿರ್ಮಾಣವಾದದ್ದು ಚಿತ್ರದುರ್ಗದ ಮೊದಲ ನಾಯಕ ಅರಸ ಮತ್ತಿ ತಿಮ್ಮಣ್ಣನಾಯಕನ ಅವಧಿಯಲ್ಲಿ. ಇವನು ಕೋಟೆಯ ನಿರ್ಮಾಣಮಾಡುವ ಅವಧಿಯಲ್ಲಿಯೇ ಈ ದೇಗುಲವನ್ನು ನಿರ್ಮಾಣ ಮಾಡಬಹುದಾದ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ.

೧೮. ಒಂಟಿಕಲ್ಲು ಬಸವನ ದೇವಾಲಯ

ಗಾರೆಬಾಗಿಲ ದ್ವಾರದ ಒಳಭಾಗದ ಪುಟ್ಟ ಬಂಡೆಯೊಂದರ ಮೇಲೆ ಪೂರ್ವಾಭಿಮುಖವಾಗಿ ನಿರ್ಮಿಸಲಾದ ದೇವಾಲಯವಿದು. ಚಿತ್ರದುರ್ಗದ ಅತ್ಯಾಕರ್ಷಕ ದೇವಾಲಯಗಳಲ್ಲಿ ಇದೂ ಒಂದು. ಕಣಶಿಲೆಯ ಹುಟ್ಟು ಬಂಡೆಯೊಂದರ ಮೇಲೆ ದಪ್ಪನೆಯ ಕಂಬವೊಂದನ್ನು ನಿಲ್ಲಿಸಿದ್ದು, ಕಂಬದ ಮೇಲೆ ಪೆಟ್ಟಿಗೆಯಾಕಾರದ ಪುಟ್ಟ ದೇವಾಲಯ ಕಟ್ಟಲಾಗಿದೆ. ಇದರಲ್ಲಿ ನಂದಿಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ನಂದಿಯನ್ನು ಆಡುಭಾಷೆಯಲ್ಲಿ ಬಸವಣ್ಣ ಎಂದು ಕರೆಯುವುದು ವಾಡಿಕೆ. ಇದರೊಡನೆ ಈ ದೇಗುಲವು ಒಂಟಿ ಶಿಲಾ ಸ್ತಂಭವನ್ನು ಆಸರೆಯಾಗಿ ಹೊಂದಿರುವುದರಿಂದ ಒಂಟಿಕಲ್ಲು ಬಸವಣ್ಣ ಎಂದೇ ಪ್ರಸಿದ್ಧಿಹೊಂದಿದೆ. ಈ ಕಂಬವನ್ನು ಚೌಕಾಕಾರ ಎಂಟು, ಹದಿನಾರು, ಪಾರ್ಶ್ವಗಳಲ್ಲಿ ಮತ್ತು ಚೌಕಾಕಾರದಲ್ಲಿ ಕಡೆಯಲಾಗಿದೆ. ಗರ್ಭಗೃಹ ಮಾತ್ರ ಇರುವ ಇದರ ಬಾಗಿಲುವಾಡದಲ್ಲಿ, ದ್ವಿಭುಜಧಾರಿ ಶೈವದ್ವಾರಪಾಲಕರ ಶಿಲ್ಪಗಳು ಮತ್ತು ಲಲಾಟದಲ್ಲಿ ಗಣೇಶನ ಉಬ್ಬು ಕೆತ್ತನೆಗಳಿವೆ. ಗರ್ಭಗೃಹದ ಮೇಲೆ ಕಂದಂಬನಾಗರ ಶೈಲಿಯ ಸಣ್ಣ ಶಿಖರವಿದೆ. ದೇವಾಲಯದ ಮುಂಬದಿಯ ದೀಪಸ್ತಂಭದಲ್ಲಿ ಒಂದೂವರೆ ಅಡಿ ಎತ್ತರದ ಕೈಮುಗಿದುನಿಂತ ಭಕ್ತಶಿಲ್ಪವಿದೆ. ಇವನು ಧರಿಸಿದ ಪೋಷಾಕುಗಳನ್ನು ನೋಡಿದರೆ ಇವನೋರ್ವ ನಾಯಕ ಅರಸನಾಗಿರುವಂತೆ ಕಾಣುತ್ತಾನೆ. ಇವನು ಬಹುಶಃ ಈ ದೇಗುಲದ ನಿರ್ಮಾಪಕನಾಗಿರಬಹುದು. ಕ್ರಿ.ಶ.೧೭ನೇ ಶತಮಾನದಲ್ಲಿ ನಿರ್ಮಾಣವಾಗಿದ್ದಿರಬಹುದಾದ ಈ ದೇಗುಲವು ವಿಜಯನಗರ ಶೈಲಿಯಲ್ಲಿದೆ.

೧೯. ಜ್ಞಾನೇಶ್ವರ ದೇವಾಲಯ

ಟಾಕಿನ ಬಾಗಿಲ ಮಹಾದ್ವಾರದ ಎಡಬದಿಯ ಕಡಿದಾದ ಹುಟ್ಟು ಬಂಡೆಯ ಮೇಲೆ ಸರಳ ರಚನೆಯ ಗರ್ಭಗೃಹ ಮಾತ್ರ ಇರುವ ದೇವಾಲಯವಿದು. ಪೂರ್ವಾಭಿಮುಖ ವಾಗಿರುವ ಇದರಲ್ಲಿ ಹಸಿರುಮಿಶ್ರಿತ ಕಪ್ಪುಶಿಲೆಯ ಪ್ರತಿಷ್ಠಾಪನಲಿಂಗವಿದೆ. ದುರಾದೃಷ್ಟವಶಾತ್ ಲಿಂಗದ ಪೀಠಭಾಗ ಮಾತ್ರವಿದ್ದು, ಅದರ ಮೇಲಿನ ರುದ್ರಭಾಗ ಲಭ್ಯವಿಲ್ಲ. ಇದರ ಬಾಗಿಲುವಾಡದಲ್ಲಿ ತ್ರಿಶೂಲ, ಢಮರು, ಖಡ್ಗ ಮತ್ತು ಅಭಯ ಹಸ್ತಧಾರಿಗಳಾದ ಶೈವ ದ್ವಾರಪಾಲಕರ ಶಿಲ್ಪಗಳಿದ್ದು, ಕಿರೀಟಮುಕುಟ, ಕೈಕಂಕಣ, ಸೊಂಟಪಟ್ಟಿ, ಹಾರ, ಕಾಲ್ಕಡಗಳನ್ನು ಧರಿಸಿರುವರು. ಇವುಗಳ ಮೇಲೆ ಕೀರ್ತಿಮುಖದ ಕೆತ್ತನೆಯಿದೆ. ಉಳಿದಂತೆ ಸರಳವಾಗಿರುವ ಬಾಗಿಲುವಾಡದ ಲಲಾಟದಲ್ಲಿ ಯಾವುದೇ ಬಗೆಯ ಕೆತ್ತನೆಗಳಿಲ್ಲ. ಈ ದೇವಾಲಯದ ವಾಸ್ತುಶೈಲಿಯನ್ನು ಅವಲೋಕಿಸಿದರೆ ಇದು ಕ್ರಿ.ಶ.೧೮ನೇ ಶತಮಾನದಲ್ಲಿ ನಿರ್ಮಾಣವಾಗಿರುವ ದೇವಾಲಯವಾಗಿದೆ.

೨೦. ಪರ್ಜನ್ಯೇಶ್ವರ ದೇವಾಲಯ

ಚಿತ್ರದುರ್ಗ ಬೆಟ್ಟದಲ್ಲಿರುವ ಅಕ್ಕತಂಗಿ ಹೊಂಡದ ಪೂರ್ವಕ್ಕೆ ಅಂದರೆ ತುಪ್ಪದಕೊಳಗಿರಿಯ ತಪ್ಪಲಲ್ಲಿರುವ ದೇವಾಲಯವಿದು. ಕಡಿದಾದ ಬಂಡೆಯಲ್ಲಿ ಸರಳ ರಚನೆಯುಳ್ಳ ಗರ್ಭಗೃಹವನ್ನು ಮಾತ್ರ ನಿರ್ಮಿಸಲಾಗಿದೆ. ಗರ್ಭಗೃಹದಲ್ಲಿ ಸರಿಸುಮಾರು ಮೂರುವರೆ ಅಡಿ ಎತ್ತರದ ಕಪ್ಪುಶಿಲೆಯ ಪ್ರತಿಷ್ಠಾಪನ ಲಿಂಗವಿದೆ. ಚೌಕಾಕಾರದ ಪಾಣಿವಟ್ಟವಿರುವ ಜಲಹರಿಯು ಲಿಂಗದ ಎಡದಿಕ್ಕಿಗಿದೆ. ಗರ್ಭಗೃಹದ ಬಾಗಿಲುವಾಡದಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಹೂಬಳ್ಳಿ ಮತ್ತು ವಜ್ರಪಟ್ಟಿಕೆಗಳ ಅಲಂಕರಣವಿರುವ ಬಾಗಿಲುವಾಡದ ಲಲಾಟಬಿಂಬದಲ್ಲಿ ಪದ್ಮದ ರಚನೆಯಿದೆ. ದೇವಾಲಯದ ಹೊರಗೋಡೆಯ ಮೇಲೆ ಹೆಡೆಬಿಚ್ಚಿದ ನಾಗರ ಹಾವಿನ ರಚನೆಯಿದೆ. ದೇವಾಲಯದ ಮುಂಬದಿಯಲ್ಲಿ ನಿಸರ್ಗ ನಿರ್ಮಿತ ನೀರಿನ

ದೋಣೆಯಿರುವುದು. ಈ ದೇವಾಲಯವು ಕ್ರಿ.ಶ.೧೭ನೇ ಶತಮಾನದ ನಿರ್ಮಿತಿಯಾಗಿದ್ದು, ವಿಜಯನಗರೋತ್ತರ ಶೈಲಿಯಲ್ಲಿದೆ.

೨೧. ಪಾತಾಳೇಶ್ವರ ದೇವಾಲಯ

ಸಂತೇ(ಸಿದ್ದಯ್ಯನ)ಬಾಗಿಲ ಒಳಬದಿಯಲ್ಲಿ ಪೂರ್ವಾಭಿಮುಖವಾಗಿರುವ ದೇಗುಲವಿದು. ಪ್ರವೇಶ ದ್ವಾರದಿಂದ ಸುಮಾರು ಇಪ್ಪತ್ತೆರಡು ಮೆಟ್ಟಿಲಿಳಿದರೆ ದೇವಾಲಯದ ಸಭಾಮಂಟಪ ಗೋಚರವಾಗುತ್ತದೆ. ಗರ್ಭಗೃಹದಲ್ಲಿ ಎರಡು ಅಡಿ ಎತ್ತರದ ಪ್ರತಿಷ್ಠಾಪನ ಲಿಂಗವಿದೆ. ಇದರ ಪಕ್ಕದಲ್ಲಿ ಕಪ್ಪುಶಿಲೆಯ ಎರಡು ಅಡಿಎತ್ತರದ ಪಾರ್ವತಿಯ ಶಿಲಾಮೂರ್ತಿಯೂ ಇದೆ. ಅರ್ಧ ಅಡಿ ಎತ್ತರದ ಪದ್ಮಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತ ಪಾರ್ವತಿಯ ಶಿಲ್ಪವು ಒಂದೂವರೆ ಅಡಿ ಎತ್ತರವಿರುವುದು. ಪಾರ್ವತಿಯು ತನ್ನ ನಾಲ್ಕು ಕೈಗಳಲ್ಲಿ ತ್ರಿಶೂಲ, ಡಮರು, ಪದ್ಮ ಮತ್ತು ಅಭಯ ಹಸ್ತದಲ್ಲಿರುವಳು. ಕರಂಡಮುಕುಟ ಧಾರಿಯಾಗಿದ್ದು, ಕೊರಳಲ್ಲಿ ಹಾರ, ಸರ, ಕರ್ಣಕುಂಡಲ, ತೋಳ್ಬಂದಿ, ಕೈಬಳೆ, ಕಾಲ್ಕಡಗ ಪಾದಾಭರಣ ಧರಿಸಿರುವಳು. ಪಾರ್ವತಿಯ ಶಿಲ್ಪದಲ್ಲಿನ ಉಡುಗೆಯು ನೆರಿಗೆ ನೆರಿಗೆ ಯಾಗಿ ಚಿತ್ರಿತವಾಗಿದೆ.

ಗರ್ಭಗೃಹದ ಬಾಗಿಲುವಾಡದಲ್ಲಿ ಶೈವದ್ವಾರಪಾಲಕರ ಶಿಲ್ಪಗಳಿದ್ದು, ಲಲಾಟದಲ್ಲಿ ಗಣೇಶನ ಉಬ್ಬುಕೆತ್ತನೆಯಿದೆ. ಸಭಾಮಂಟಪದ ನಾಲ್ಕು ಕಂಬಗಳ ಮಧ್ಯೆ ಬಾವಿಯಿದ್ದು, ಸದಾಕಾಲ ನೀರಿನಿಂದ ತುಂಬಿರುತ್ತದೆ. ಈ ಕಂಬಗಳನ್ನು ಚೌಕಾಕಾರ, ಅಷ್ಟಮುಖ ಮತ್ತು ಬಹುಮುಖಗಳಲ್ಲಿ ಕೆತ್ತಿರುವರು. ಈ ದೇವಾಲಯವು ಕ್ರಿ.ಶ.೧೬ನೇ ಶತಮಾನದಲ್ಲಿ ನಿರ್ಮಾಣವಾಗಿದ್ದು, ವಿಜಯನಗರ ಶೈಲಿಯಲ್ಲಿದೆ. ಪ್ರತಿವರ್ಷ ಮಕರ ಸಂಕ್ರಾಂತಿ, ಶಿವರಾತ್ರಿ ಹಾಗೂ ಬಸವನ ಹಬ್ಬಗಳಂದು ಪಾತಾಳೇಶ್ವರನಿಗೆ ವಿಶೇಷ ಅಭಿಷೇಕ ಮತ್ತು ಪೂಜೆಗಳನ್ನು ಏರ್ಪಡಿಸಲಾಗುತ್ತದೆ.

೨೨. ಮಹಾಬಲೇಶ್ವರ ದೇವಾಲಯ

ಗಾರೆಹಟ್ಟಿ ರಸ್ತೆಯ ಬೃಹನ್ಮಠ ಸಂಯುಕ್ತ ಪದವಿಪೂರ್ವ ಕಾಲೇಜಿನ ಆವರಣದಲ್ಲಿ ಈ ದೇಗುಲವಿದೆ. ಪೂರ್ವಭಿಮುಖವಾಗಿರುವ ಇದರ ವಾಸ್ತುವಿನ್ಯಾಸದಲ್ಲಿ ಗರ್ಭಗೃಹ, ಸಭಾಮಂಟಪ ಮತ್ತು ಮುಖಮಂಟಪದ ರಚನೆಗಳಿವೆ. ಗರ್ಭಗೃಹದಲ್ಲಿ ಎರಡು ಅಡಿ ಎತ್ತರದ ಕಪ್ಪುಶಿಲೆಯ ಪ್ರತಿಷ್ಠಾಪನಾ ಲಿಂಗವಿದ್ದು, ಅದರ ಪೀಠಸ್ತಭಾಗ ಭೂಮಿಯಲ್ಲಿ ಹೂತಿದೆ. ಈ ಲಿಂಗ ಮತ್ತು ಗಾರೆಹಟ್ಟಿಯಲ್ಲಿನ ಕಣ್ಣೇಶ್ವರ ಲಿಂಗಗಳ ಆಕೃತಿಯಲ್ಲಿ ಸಾಮ್ಯತೆಗಳಿದ್ದು, ಇವು ಬಹುಶಃ ಒಂದೇ ಕಾಲದಲ್ಲಿ ನಿರ್ಮಾಣವಾಗಿರಬಹುದು. ಶಿವಲಿಂಗದ ಮುಂಬದಿಯಲ್ಲಿ ಚಿಕ್ಕದಾದ ನಂದಿಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಸರಳವಾಗಿರುವ ಗರ್ಭಗೃಹದ ಬಾಗಿಲುವಾಡವು ಹೂಬಳ್ಳಿ, ವಜ್ರಪಟ್ಟಿಕೆಗಳ ಅಲಂಕರಣಗಳಿಂದ ಕೂಡಿದ್ದು, ಲಲಾಟಬಿಂಬದಲ್ಲಿ ಕಮಂಡಲವನ್ನು ಕಡೆದಿರುವರು. ಗರ್ಭಗೃಹದ ಮೇಲಿರುವ ಗೋಪುರ ಆಧುನಿಕ ನಿರ್ಮಿತಿಯಾಗಿದೆ. ಸಭಾಮಂಟಪದಲ್ಲಿ ಯಾವುದೇ ಕಂಬಗಳಿಲ್ಲ. ಮುಖಮಂಟಪದಲ್ಲಿನ ಎರಡು ಕಂಬಗಳನ್ನು ಚೌಕ ಮತ್ತು ಅಷ್ಟಮುಖಗಳಲ್ಲಿ ಕಡೆಯಲಾಗಿದೆ. ಇವುಗಳ ಮೇಲೆ ಗಣೇಶ, ನಂದಿ, ಕೈಮುಗಿದು ನಿಂತ ಭಕ್ತರ ಉಬ್ಬುಶಿಲ್ಪಗಳಿವೆ. ಕ್ರಿ.ಶ.೧೮ನೇ ಶತಮಾನದಲ್ಲಿ ನಿರ್ಮಾಣವಾಗಿರುವ ಈ ದೇವಾಲಯವು ವಿಜಯನಗರ ಶೈಲಿಯಲ್ಲಿರುವುದನ್ನು ಕಾಣಬಹುದು.

೨೩. ಆಡುಮಲ್ಲೇಶ್ವರ ದೇವಾಲಯ

ಚಿತ್ರದುರ್ಗದ ದಕ್ಷಿಣಕ್ಕಿರುವ ಆಡುಮಲ್ಲೇಶ್ವರ ವನ್ಯಜೀವಿಧಾಮದಲ್ಲಿರುವ ದೇಗುಲವಿದು. ಸುಂದರ ನಿಸರ್ಗತಾಣದ ಮಧ್ಯೆ ಕಟ್ಟಿರುವ ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ ಮತ್ತು ಸಭಾಮಂಟಪಗಳಿಂದ ಕೂಡಿದೆ. ಗರ್ಭಗೃಹದಲ್ಲಿ ಮೂರು ಅಡಿ ಎತ್ತರದ ಪ್ರತಿಷ್ಠಾಪನ ಲಿಂಗವಿದೆ. ಬಾಗಿಲುವಾಡವು ಸರಳವಾಗಿದ್ದು, ಶೈವ ದ್ವಾರಪಾಲಕರು, ಲಲಾಟದಲ್ಲಿ ನಂದಿಯ ಉಬ್ಬುಗೆತ್ತನೆಗಳನ್ನು ಒಳಗೊಂಡಿದೆ. ಸಭಾಮಂಟಪದಲ್ಲಿ ಲಿಂಗಕ್ಕೆ ಅಭಿಮುಖವಾಗಿ ಕಪ್ಪುಶಿಲೆಯಲ್ಲಿ

ಕಡೆದ ಇತ್ತೀಚಿನ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಸಭಾಮಂಟಪದಲ್ಲಿನ ಸ್ತಂಭಗಳು ಮೂರು ಚೌಕಾಕಾರದ ಭಾಗಗಳಿಂದ ಕೂಡಿದ್ದು, ಇವುಗಳ ಮಧ್ಯೆ ಎಂಟು ಮತ್ತು ಹದಿನಾರು ಪಾರ್ಶ್ವದ ಪಟ್ಟಿಕೆಗಳಿವೆ. ಗರ್ಭಗೃಹದ ಮೇಲೆ ಗಾರೆ ಮತ್ತು ಗಚ್ಚಿನಿಂದ ಕಟ್ಟಿದ ದ್ವಿತಲ ಶಿಖರವಿದ್ದು, ಯಾವುದೇ ಬಗೆಯ ಕಳಸಗಳಿಲ್ಲ.

ದೇವಾಲಯದ ಮುಂಬದಿಯಲ್ಲಿ ಸುಂದರವಾದ ಪುಷ್ಕರಣಿಯಿದೆ. ಚಿತ್ರದುರ್ಗ ನಾಯಕ ಅರಸರ ಅವಧಿಯಲ್ಲಿ ಅಧಿಕಾರಿಯಾಗಿದ್ದ ಆಡೂರು ಮಲ್ಲಪ್ಪ ಎಂಬುವನು ಈ ದೇವಾಲಯವನ್ನು ಕ್ರಿ.ಶ.೧೭ನೇ ಶತಮಾನದಲ್ಲಿ ಕಟ್ಟಿಸಿದನೆಂಬುದು ಪ್ರತೀತಿ. ಕಾಲಾಂತರದಲ್ಲಿ ಅವನ ಊರು ಮತ್ತು ಹೆಸರುಗಳ ಮಿಶ್ರಣದಿಂದ ಆಡುಮಲ್ಲೇಶ್ವರ ಎಂದು ಪ್ರಸಿದ್ಧಿ ಪಡೆದಿದೆ. ಇತ್ತೀಚೆಗೆ ಅರಣ್ಯ ಇಲಾಖೆಯವರು ವನ್ಯಜೀವಿಧಾಮ ಸ್ಥಾಪಿಸಿರುವುದರಿಂದ ಇದೊಂದು ಪ್ರೇಕ್ಷಣೀಯ ಸ್ಥಳವಾಗಿ ಮಾರ್ಪಟ್ಟಿದೆ.

೨೪. ಈರಪ್ಪನ ಶಿವಾಲಯ

ಹಿಡಿಂಬೇಶ್ವರ ಬೆಟ್ಟ ಮತ್ತು ಕಹಳೆ ಬತೇರಿಗಳ ಬೃಹದಾಕಾರದ ಬಂಡೆಗಳ ಮಧ್ಯೆ ಈ ಶಿವಾಲಯವಿದೆ. ಗರ್ಭಗೃಹ, ತೆರದ ಅಂತರಾಳ, ಸಭಾಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಯಾವುದೇ ಲಿಂಗವಿರದೆ ಇತ್ತೀಚೆಗೆ ನಿಧಿಗಳ್ಳರ ಅಗೆತಕ್ಕೆ ತುತ್ತಾಗಿದೆ. ಗರ್ಭಗೃಹದ ದ್ವಾರದಲ್ಲಿ ಶೈವ ದ್ವಾರಪಾಲಕರ ಶಿಲ್ಪಿಗಳಿವೆ. ನವರಂಗದಲ್ಲಿ ಯಾವುದೇ ಕಂಬಗಳಿಲ್ಲ, ಇಲ್ಲಿನ ಎಡಬದಿಯ ಗೋಡೆಯ ಮೇಲೆ ವೀರಭದ್ರ, ನಗ್ನ ಭೈರವ, ಪುರುಷಾಮೃಗ, ಯಂತ್ರೋದ್ಧಾರಕ ರಚನೆಗಳಿವೆ. ಸಭಾಮಂಟಪದ ಬಾಗಿಲುವಾಡವು ಗರ್ಭಗೃಹದ ಬಾಗಿಲುವಾಡದಂತೆಯೇ ಇದೆ. ದೇವಾಲಯದ ಒಳಗೋಡೆಯಲ್ಲಿರುವ ೧೯ನೇ ಶತಮಾನದ ಕನ್ನಡ ಲಿಪಿಯ ಶಾಸನದಿಂದ ಇದನ್ನು ಮೆದೆಹಳ್ಳಿ ರುದ್ರಪ್ಪನ ಮಗ ಈರಪ್ಪ ಮಾಡಿಸಿದ ಶಿವಾಲಯ ಎಂದು ಭಾವಿಸಲಾಗಿತ್ತು.[೨೨] ಆದರೆ ಈ ದೇವಾಲಯದಲ್ಲಿ ಇತ್ತೀಚೆಗೆ ದೊರೆತ ಶಾಸನವೊಂದರಿಂದ ಇದು ಕ್ರಿ.ಶ.೧೬೫೮ರಲ್ಲಿ ನಿರ್ಮಾಣವಾದ ದೇವಾಲಯ ಎಂದು ತಿಳಿದುಬಂದಿದೆ.[೨೩]

೨೫. ಚಂದ್ರಮೌಳೇಶ್ವರ ದೇವಾಲಯ

ಚಿತ್ರದುರ್ಗದ ಶೃಂಗೇರಿ ಮಠದ ಆವರಣದಲ್ಲಿರುವ ದೇಗುಲವಿದು. ದಕ್ಷಿಣಾಭಿಮುಖವಾಗಿರುವ ಈ ದೇವಾಲಯವು ಪಾಳೆಯಗಾರರ ಕಾಲದ ನಿರ್ಮಿತಿಯಾಗಿದೆ. ಚಿಕ್ಕದಾದ ಮೂರು ಗರ್ಭಗೃಹ ಮತ್ತು ಮುಖಮಂಟಪವಿರುವ ಈ ದೇವಾಲಯದಲ್ಲಿ ಚಂದ್ರಮೌಳೇಶ್ವರ ಗಣೇಶ ಮತ್ತು ಶಾರದಾದೇವಿಯ ವಿಗ್ರಹಗಳಿವೆ. ಮುಖ್ಯ ಗರ್ಭಗೃಹದಲ್ಲಿ ಎರಡೂವರೆ ಅಡಿ ಎತ್ತರವಿರುವ ಸ್ಪಟಿಕದ ಪ್ರತಿಷ್ಠಾಪನ ಲಿಂಗವಿದೆ. ಉಳಿದ ಎರಡು ಗರ್ಭಗೃಹದಲ್ಲಿನ ಗಣೇಶ ಮತ್ತು ಶಾರದಾದೇವಿಯ ಮೂರ್ತಿಗಳು ಆಧುನಿಕ ಕಾಲದವುಗಳಾಗಿವೆ. ಗರ್ಭಗೃಹದ ದ್ವಾರದಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಸಭಾಮಂಟಪದ ಕಂಬಗಳನ್ನು ಚೌಕ ಮತ್ತು ಅಷ್ಟಮುಖದಲ್ಲಿ ಕಡೆಯಲಾಗಿದೆ. ಚಿತ್ರದುರ್ಗದ ನಾಯಕ ಅರಸ ಹಿರೇ ಮದಕರಿನಾಯಕನು ಕ್ರಿ.ಶ.೧೭೨೧ ರಿಂದ ಕ್ರಿಶ೧೭೪೯ರ ಅವಧಿಯಲ್ಲಿ ಚಂದ್ರಮೌಳೇಶ್ವರನ ಸ್ಪಟಿಕದ ಲಿಂಗ ಸ್ಥಾಪಿಸಿದನು.[೨೯]

೨೬. ಸಿದ್ಧರಾಮೇಶ್ವರ ದೇವಾಲಯ

ಬುರುಜನಹಟ್ಟಿ ವೃತ್ತದ ಬಳಿ ದಕ್ಷಿಣಾಭಿಮುಖವಾಗಿರುವ ದೇಗಲವಿದು. ಸುಮಾರು ನಾಲ್ಕು ಅಡಿ ಎತ್ತರದ ಅಧಿಷ್ಠಾನದ ಮೇಲೆ ಕಟ್ಟಿದ ಈ ದೇಗುಲ ಗರ್ಭಗೃಹ, ಅಂತರಾಳ, ನವರಂಗಗಳಿಂದ ಕೂಡಿದೆ. ಗರ್ಭಗೃಹದ ಗದ್ದಿಗೆಯ ಮೇಲೆ ಮೂರು ಶಿವಲಿಂಗಗಳನ್ನು ಸ್ಥಾಪಿಸಿರುವರು. ಗರ್ಭಗೃಹದ ಬಾಗಿಲುವಾಡವು ಸರಳವಾಗಿದೆ. ಶೈವ ದ್ವಾರಪಾಲಕರ ಶಿಲ್ಪಗಳಿರುವ ಅಂತರಾಳದ ಬಾಗಿಲುವಾಡದಲ್ಲಿ ಹೂಬಳ್ಳಿ, ವಜ್ರಪಟ್ಟಿಕೆಗಳ ರಚನೆಗಳಿವೆ. ಲಲಾಟಫಲಕದಲ್ಲಿ ಗಜಲಕ್ಷ್ಮಿಯ ಉಬ್ಬು ಶಿಲ್ಪವನ್ನು ಕೆತ್ತಿರುವರು. ನವರಂಗದಲ್ಲಿನ ನಾಲ್ಕು ಕಂಬಗಳು ಚೌಕಾಕಾರವಾಗಿವೆ. ಇದರ ಮೇಲೆ ವಿಷ್ಣು, ಹಸು, ವೀರಭದ್ರ

ಕಾಮಧೇನು, ವ್ಯಾಳ, ಜಟಾಧರಭೈರವನ ಉಬ್ಬುಶಿಲ್ಪಗಳಿವೆ. ನವರಂಗದ ಪೂರ್ವ ಮತ್ತು ದಕ್ಷಿಣ ದಿಕ್ಕಿಗೆ ದ್ವಾರಗಳಿವೆ. ಗರ್ಭಗೃಹದ ಮೇಲೆ ಕದಂಬನಾಗರ ಶೈಲಿಯ ಶಿಖರವಿರುವ ಈ ದೇವಾಲಯ ಪಾಳೆಯಗಾರರ ಕಾಲದ ನಿರ್ಮಿತಿಯಾಗಿದೆ.

೨೭. ಕಣ್ಣೇಶ್ವರ ದೇವಾಲಯ

ಗಾರೆಹಟ್ಟಿಯ ಚೋಳೇಶ್ವರ ದೇಗುಲದ ಬಲಬದಿಯಲ್ಲಿರುವ ಚಿಕ್ಕ ಗರ್ಭಗೃಹ ಮಾತ್ರ ಇರುವ ದೇವಾಲಯವಿದು. ಪೂರ್ವಾಭಿಮುಖವಾಗಿರುವ ಗರ್ಭಗೃಹದಲ್ಲಿ ಕಪ್ಪುಶಿಲೆಯ ಒಂದು ಅಡಿ ಎತ್ತರದ ಶಿವಲಿಂಗವಿದೆ. ಇದರ ಪೀಠಭಾಗವು ಭೂಮಿಯಲ್ಲಿ ಹೂತಿದ್ದು, ರುದ್ರಭಾಗ ಮಾತ್ರ ಗೋಚರವಾಗುತ್ತಿದೆ. ಲಿಂಗಕ್ಕೆ ಅಭಿಮುಖವಾಗಿ ಚಿಕ್ಕದಾದ ಕಪ್ಪುಶಿಲೆಯ ನಂದಿಶಿಲ್ಪವಿದೆ. ದೇವಾಲಯದ ರಚನೆಯನ್ನು ಗಮನಿಸಿದರೆ ಕಾರಣಾಂತರಗಳಿಂದ ನಿರ್ಮಾಣಕಾರ್ಯ ಸ್ಥಗಿತಗೊಳಿಸಿರುವುದು ವೇದ್ಯವಾಗುತ್ತದೆ.

೨೮. ನೀಲಕಂಠೇಶ್ವರ ದೇವಾಲಯ

ಚಿತ್ರದುರ್ಗ ನಗರದ ಮಧ್ಯಭಾಗದಲ್ಲಿ ಈ ದೇವಾಲಯ ನೆಲೆಗೊಂಡಿದೆ. ಗರ್ಭಗೃಹ ಮತ್ತು ಸಭಾ ಮಂಟಪಗಳಿರುವ ಈ ದೇಗುಲ ಇತ್ತೀಚೆಗೆ ಸಂಪೂರ್ಣ ನವೀಕರಣಗೊಂಡಿದೆ. ಚಿತ್ರದುರ್ಗ ನಾಯಕ ಅರಸರ ದಾಖಲೆಗಳು ತಿಳಿಸುವಂತೆ ಈ ದೇಗುಲವು ನಿರ್ಮಾಣವಾದದ್ದು ಭರಮಣ್ಣನಾಯಕನ ಆಳ್ವಿಕೆಯ ಅವಧಿಯಲ್ಲಿ. ಗರ್ಭಗೃಹದಲ್ಲಿ ಸುಮಾರು ೩ ಅಡಿ ಎತ್ತರ ವಿರುವ ಲಿಂಗವನ್ನು ಪ್ರತಿಷ್ಠಾಪಿಸಿರುವರು. ಲಿಂಗದ ಪಾಣಿವಟ್ಟವು ಅದರ ಬಲದಿಕ್ಕಿಗಿರುವುದು. ಈ ಗರ್ಭಗೃಹದ ಎಡ ಬಲ ಬದಿಗಳಲ್ಲಿನ ಗರ್ಭಗೃಹಗಳಲ್ಲಿ ಗಣೇಶ ಮತ್ತು ಪಾರ್ವತಿ ವಿಗ್ರಹಗಳನ್ನು ಸ್ಥಾಪಿಸಿದ್ದಾರೆ. ಇದರೊಡನೆ ಭದ್ರಕಾಳಿ, ನಂದಿ, ಷಣ್ಮುಖ, ನವಗ್ರಹಗಳ ಆಧುನಿಕ ಮೂರ್ತಿಗಳನ್ನು ಪ್ರತಿಷ್ಠಾಪಿಸಿರುವರು. ದೇವಾಲಯದ ಮುಂಬದಿಯಲ್ಲಿ ಮೈಲಾರಲಿಂಗನ ಸೀಬಾರ ಕಟ್ಟೆಯಿಂದೆ. ಪ್ರತೀವರ್ಷ ಯುಗಾದಿ, ಶಿವರಾತ್ರಿ, ಬಸವನ ಜಯಂತಿ, ನರಕ ಚತುರ್ದಶಿ, ದೀಪಾವಳಿ ಹಬ್ಬಗಳಂದು ವಿಶೇಷ ಪೂಜೆಗಳು, ಜರುಗುತ್ತವೆ.

೩.೩ ವೈಷ್ಣವ ದೇವಾಲಯಗಳು

ಚಿತ್ರದುರ್ಗ ಪರಿಸರದಲ್ಲಿ ವೈಷ್ಣವ ಧರ್ಮದ ಪ್ರಾಚೀನತೆಯನ್ನು ಗುರುತಿಸುವುದು ಕಷ್ಟಸಾಧ್ಯವಾದರೂ ಅದು ಪ್ರಬಲಗೊಂಡಿದ್ದು ಹೊಯ್ಸಳರ ಪ್ರಾಂತ್ಯಾಧಿಕಾರಿ ಪೆರುಮಾಳೆದೇವ ದಂಣ್ಣಾಯಕನ ಅವಧಿಯಲ್ಲಿ. ತರುವಾಯದ ವಿಜಯನಗರದ ಅರಸರು ಮತ್ತು ಪಾಳೆಯಗಾರರ ಅವಧಿಯಲ್ಲಿ ಪ್ರಮುಖ ಧರ್ಮವಾಗಿ ಅಸ್ತಿತ್ವದಲ್ಲಿತ್ತು. ಈ ಅವಧಿಯಲ್ಲಿ ಕೆಲವು ವೈಷ್ಣವ ದೇವಾಲಯಗಳು ಚಿತ್ರದುರ್ಗ ಪರಿಸರದಲ್ಲಿ ನಿರ್ಮಾಣಗೊಂಡವು.

೧. ಗೋಪಾಲಕೃಷ್ಣ ದೇವಾಲಯ

ಮೇಲುದುರ್ಗದ ಗರುಡಾಂಜನೇಯ ದ್ವಾರದ ಮುಂದಿನ ದಿಣ್ಣೆಯಲ್ಲಿ ಗೋಪಾಲಕೃಷ್ಣ ದೇವಾಲಯ ಕಟ್ಟಲಾಗಿದೆ. ದ್ರಾವಿಡ ಶೈಲಿಯಲ್ಲಿರುವ ಈ ದೇವಾಲಯದಲ್ಲಿ ಗರ್ಭಗೃಹ, ಅಂತರಾಳ, ನವರಂಗ, ಮುಖಮಂಟಪಗಳನ್ನು ಕಾಣಬಹುದು. ಗರ್ಭಗೃಹ ಮತ್ತು ಅಂತರಾಳವನ್ನು ಒಳಗೊಂಡಂತೆ ಪ್ರದಕ್ಷಿಣಾಪಥವಿದ್ದು, ಇದು ಗರ್ಭಗೃಹಕ್ಕಿಂತ ಕೆಳಮಟ್ಟದಲ್ಲಿದೆ. ಗರ್ಭಗೃಹದಲ್ಲಿ ಪೂರ್ವಾಭಿಮುಖವಾಗಿರುವ ಕಪ್ಪುಶಿಲೆಯ ಗೋಪಾಲಕೃಷ್ಣನ ಮೂರ್ತಿಯು ಹೊಯ್ಸಳ ಕಲಾಶೈಲಿಯನ್ನು ಹೋಲುತ್ತದೆ. ಇದು ಒಂದು ಅಡಿ ಎತ್ತರದ ಪದ್ಮಪೀಠದ ಮೇಲೆ ನಾಲ್ಕು ಅಡಿ ಎತ್ತರವಿದೆ. ಸುಂದರವಾದ ಮಕರ ತೋರಣವು ವಲ್ಲಿ ಪ್ರಭಾವಳಿಯನ್ನು ಹೊಂದಿದ್ದು, ವಲ್ಲಿಯ ಸುರುಳಿಗಳಲ್ಲಿ ವಿಷ್ಣುವಿನ ದಶಾವತಾರದ ಚಿಕಣಿ ಬಿಂಬಗಳನ್ನು ಕೆತ್ತಲಾಗಿದೆ. ಪ್ರಭಾವಳಿಯ ಮಧ್ಯದಲ್ಲಿರುವ ಸಿಂಹಲಲಾಟದ ಕೆಳಗೆ ಗೋಪಾಲಕೃಷ್ಣನು ಬಲಗಾಲನ್ನು ಕರ್ತರಿ ಕಾಲಾಗಿಸಿ ತ್ರಿಭಂಗಿಯಲ್ಲಿ ನಿಂತು ವೇಣುವನ್ನು ನುಡಿಸುತ್ತಿರುವನು. ದೇವನು ಜಟಾಮುಕುಟ ಧಾರಿಯಾಗಿದ್ದು,

ಕೇಶವನ್ನು ಎಡಭಾಗದಲ್ಲಿ ಮುಡಿಕಟ್ಟಿರುವನು. ಮುಖವು ಅಂಡಾಕಾರವಾಗಿದ್ದು, ಅರೆಮುಚ್ಚಿದ ಕಣ್ಣುಗಳು ಗಾನದಲ್ಲಿ ತನ್ಮಯನಾಗಿರುವುದನ್ನು ಬಿಂಬಿಸಿದೆ. ಎರಡು ಕೈಗಳಿಂದ ವೇಣುವನ್ನು ಹಿಡಿದಿರುವ ಗೋಪಾಲನಿಗೆ ಕೊರಳಲ್ಲಿ ಸುಂದರವಾದ ಪದಕವಿದೆ. ಕೈತೋಳಿನಲ್ಲಿ ಭುಜವಲ್ಯ, ಕೇಯೂರ, ಕೈಗಳಲ್ಲಿ ದಪ್ಪದಾದ ಪಟ್ಟಿಯಂತಹ ಕಡಗವಿದೆ. ಸಣ್ಣದಾದ ಕಟಿಯುಳ್ಳ ಗೋಪಾಲನು ಮಣಿಮಾಲೆಯಿಂದ ಕೂಡಿದ ಕಟೀಬಂಧ ಧರಿಸಿದ್ದು, ಅದರ ಮುತ್ತಿನ ಮಾಲೆಗಳು ತೊಡೆಯನ್ನಾವರಿಸಿವೆ. ಕೊರಳಲ್ಲಿ ವೈಜಯಂತಿ ಕಂಠಿಹಾರವಿದ್ದು, ಉಪವೀತಧಾರಿಯಾಗಿದ್ದಾನೆ. ಪಾದದಲ್ಲಿ ದಪ್ಪವಾದ ಅಂದುಗೆಯಿದೆ. ಗರ್ಭಗೃಹದ ಬಾಗಿಲುವಾಡದಲ್ಲಿ ಸರಳತೆಯಿದ್ದು, ಲಲಾಟದಲ್ಲಿ ಪದ್ಮವೂ, ಕೆಳ ಭಾಗದಲ್ಲಿ ವೈಷ್ಣವ ದ್ವಾರಪಾಲಕರು ಇದ್ದಾರೆ. ಅಂತರಾಳದಲ್ಲಿ ಉತ್ತರಾಭಿಮುಖವಾಗಿ ಲಕ್ಷ್ಮಿ ಮೂರ್ತಿಯನ್ನು ಸ್ಥಾಪಿಸಲಾಗಿದೆ. ಪದ್ಮಪೀಠದಲ್ಲಿ ಆಸೀನಳಾಗಿರುವ ಲಕ್ಷ್ಮಿ ಮೂರ್ತಿಯು ಕಪ್ಪುಶಿಲೆಯದಾಗಿದ್ದು, ಮೂರು ಅಡಿ ಎತ್ತರವಿದೆ. ಲಕ್ಷ್ಮಿ ತನ್ನ ಹಿಂದಿನ ಬಲಗೈಯಲ್ಲಿ ಪದ್ಮ ಹಿಡಿದಿದ್ದರೆ ಎಡಗೈ ಭಗ್ನಗೊಂಡಿದೆ. ಮುಂದಿನ ಬಲಗೈ ಅಭಯಹಸ್ತದಲ್ಲಿದ್ದರೆ, ಎಡಗೈ ವರದ ಹಸ್ತದಲ್ಲಿದೆ. ಕೊರಳಲ್ಲಿ ಕೌಸ್ತುಭ, ಕಂಠಾಭರಣ, ಕೆಯೂರ, ಧರಿಸಿರುವಂತೆ ಶಿಲ್ಪತವಾಗಿದೆ. ಅಂತರಾಳದ ದ್ವಾರವು ಅಲಂಕೃತವಾಗಿದ್ದು, ಲತಾಸುರುಳಿ, ವಜ್ರದ ಅಲಂಕರಣ ಮತ್ತು ವಲ್ಲಿಯ ಪ್ರಭಾವಳಿ ಇದೆ. ವಲ್ಲಿಯ ಸುರುಳಿಗಳಲ್ಲಿ ವಿಷ್ಣುವಿನ ದಶಾವತಾರದ ಚಿಕಣಿ ಬಿಂಬಗಳಿರುವುದು ಈ ದೇವಾಲಯದ ವಿಶೇಷತೆ. ದ್ವಾರಬಂಧದಲ್ಲಿ ಗಜಲಕ್ಷ್ಮಿ ಕೆಳಭಾಗದಲ್ಲಿ ವೈಷ್ಣವ ದ್ವಾರಪಾಲಕರ ಉಬ್ಬುಶಿಲ್ಪಗಳಿವೆ. ಸಾಂಧಾರ ಪ್ರಾಕಾರದ ಈ ದೇವಾಲಯದ ಗೂಢಮಂಟಪದಲ್ಲಿ ಪೀಠದ ಮೇಲೆ ಆಸೀನನಾಗಿರುವ ಗರುಡಶಿಲ್ಪವಿದೆ. ವೀರಾಸನದಲ್ಲಿ ಆಸೀನನಾಗಿರುವ ಗರುಡ ಪ್ರಣಾಮ ಮುದ್ರೆಯಲ್ಲಿದ್ದು, ಕಂಠಿಹಾರ, ಸರ, ಉಪವೀತ, ವೈಜಯಂತಿ ಮಾಲೆ, ಸ್ಕಂಧಮಾಲೆ, ಕೆಯೂರ, ಕಾಲುಕಡಗ ಧರಿಸಿದ್ದಾನೆ. ಮೂರ್ತಿಯ ಹಿಂಬದಿಯಲ್ಲಿ ವಲ್ಲಿ ಪ್ರಭಾವಳಿಯ ತೋರಣವಿದೆ. ಬಳಪದಶಿಲೆಯ ಈ ಮೂರ್ತಿ ಹೊಯ್ಸಳ ಶೈಲಿಯಲ್ಲಿದೆ. ಗರ್ಭಗೃಹ ಮತ್ತು ಅಂತರಾಳ ಹೊಯ್ಸಳ ಕಾಲದ ನಿರ್ಮಿತಿಗಳಾಗಿದ್ದು, ವಿಜಯನಗರದ ಅವಧಿಯಲ್ಲಿ ಈ ದೇಗುಲದ ನವರಂಗ ನಿರ್ಮಾಣವಾದಂತೆ ತೋರುತ್ತದೆ. ನವರಂಗದ ವಿಶಿಷ್ಟವಾದ ಸಂಯೋಗಸ್ತಂಭಗಳು ಈ ಮೇಲಿನ ಅಭಿಪ್ರಾಯವನ್ನು ದೃಢಪಡಿಸುತ್ತವೆ. ವಿಜಯನಗರಕಾಲದ ಸ್ತಂಭ ಪ್ರಾಕಾರಗಳಲ್ಲಿ ಸಂಯೋಗ ಸ್ತಂಭ ವಿಶಿಷ್ಟ ಬಗೆಯದಾಗಿದೆ. ಇದರಲ್ಲಿ ಸಾಮಾನ್ಯವಾಗಿ ಪೀಠವೊಂದರ ಮೇಲೆ ಮಧ್ಯಭಾಗದಲ್ಲಿ ಪ್ರಧಾನ ಕಂಬವಿದ್ದು, ಸುತ್ತಲೂ ಸಣ್ಣ ಸಣ್ಣ ಕಂಬಗಳನ್ನು ಒಳಗೊಂಡಿರುತ್ತದೆ. ಈ ಸಣ್ಣ ಕಂಬಗಳು ಪ್ರಧಾನ ಕಂಬದ ದಂಡಭಾಗವನ್ನು ಸುತ್ತಲೂ ಆವರಿಸಿರುತ್ತವೆ. ಈ ಬಗೆಯ ಕಂಬವನ್ನು ಹಂಪೆಯ ವಿಜಯವಿಠಲ ದೇಗುಲದಲ್ಲಿ ಕಾಣಬಹುದು. ಆದರೆ ಗೋಪಾಲಕೃಷ್ಣ ದೇವಾಲಯದ ನವರಂಗದಲ್ಲಿನ ಸಂಯೋಗ ಸ್ತಂಭಗಳು ಇದಕ್ಕಿಂತ ಸ್ವಲ್ಪ ಭಿನ್ನವಾಗಿದೆ. ಒಂದು ಚೌಕಾಕಾರದ ಪೀಠದ ಸುತ್ತ ನಾಲ್ಕು ಸಣ್ಣ ಕಂಬಗಳಿದ್ದು, ಮಧ್ಯದಲ್ಲಿ ಪ್ರಧಾನ ಕಂಬವೂ ಇದೆ. ಈ ಕಂಬಗಳೆಲ್ಲವನ್ನು ಸೇರಿಸುವಂತೆ ಮೇಲೆ ಮುಚ್ಚಿಗೆಯೂ ಇದೆ. ಇದರ ಮೇಲೆ ಎತ್ತರವಿಲ್ಲದ ಎಂಟು ಕಂಬಗಳ ಎರಡು ಹಂತಗಳು, ಇವುಗಳ ಮೇಲೆ ಕಂಬಗಳನ್ನು ಸೇರಿಸುವಂತೆ ಮುಚ್ಚಿಗೆಯಿದ್ದು, ಇದರ ಮೇಲೆ ವಿವಿಧ ಶಿಲ್ಪಾಲಂಕರಣಗಳೊಡನೆ ರಾಮಾಯಣದ ಕಥಾನಕಶಿಲ್ಪವಿರುವುದು ಇದರ ವಿಶೇಷತೆಯಾಗಿದೆ.

ಕಂಬದ ಕಾಂಡಭಾಗವೊಂದರಲ್ಲಿ ರಾಮ ಮತ್ತು ರಾವಣರು ಪರಸ್ಪರ ಅಭಿಮುಖವಾಗಿ ರಥವನ್ನೇರಿ ನಿಂತಿದ್ದು, ಬಿಲ್ಲುಬಾಣ ಹಿಡಿದು ಹೋರಾಡುತ್ತಿರುವ ದೃಶ್ಯವನ್ನು ಕೆತ್ತಿರುವರು. ಮತ್ತೊಂದೆಡೆ ರಾಮನು ಹನುಮನ ಭುಜವನ್ನೇರಿ ಕುಳಿತು ಎದುರಾಳಿಯೊಡನೆ ಬಿಲ್ಲು ಹಿಡಿದು ಯುದ್ಧದಲ್ಲಿ ತೊಡಗಿರುವಂತೆ ರಾಮಾಯಣದ ಶಿಲ್ಪಗಳನ್ನು ಕಡೆಯಲಾಗಿದೆ. ಉಳಿದಂತೆ ಕಂಬಗಳಮೇಲೆ ವಿಷ್ಣುವಿನ ಕಾಳಿಂಗಮರ್ಧನ, ಪ್ರಣಾಮ ಮುದ್ರೆಯಲ್ಲಿರುವ ಯೋಗಿ, ಹನುಮ, ಪದ್ಮಾಸನಸ್ತ ದೇವಿಯರ ಶಿಲ್ಪ, ಯುದ್ಧನಿರತ ಯೋಧರು, ಮುಂಗಾಲನ್ನು ಮೇಲೆತ್ತಿದ ಅಶ್ವದಮೇಲೆ ಕುಳಿತು ಕಹಳೆ ಊದುತ್ತಿರುವ

ವ್ಯಕ್ತಿ, ಅರಸು ದಂಪತಿಗಳಿಗೆ ಛತ್ರಿಛಾಮರ ಹಿಡಿದ ಸೇವಕರು, ಹಾವಾಡಿಗ, ನೃತ್ಯಗಾರ್ತಿಯರು, ವಾದ್ಯಗಾರರು, ವ್ಯಾಳ, ಪದ್ಮದಕೆತ್ತನೆ, ತಂಬೂರಿಹಿಡಿದು ಕೃಷ್ಣನನ್ನು ಭಜಿಸುತ್ತಿರುವ ಪುರಂದರದಾಸರು, ಬಾಲಕೃಷ್ಣ ಕತ್ತಿ ಗುರಾಣಿ ಹಿಡಿದ ಯೋಧ, ದೇವಿಯ ರುಂಡ, ನವಿಲು, ಲಕ್ಷ್ಮಿ, ಹನುಮ, ವೀರಾಸನದಲ್ಲಿರುವ ಗರುಡ ಮುಂತಾದ ಉಬ್ಬು ಶಿಲ್ಪಗಳನ್ನು ಕಡೆಯಲಾಗಿದೆ. ಈ ಕಂಬಗಳ ಮೇಲೆ ಪುಷ್ಪಬೋದಿಗೆಯಿದೆ. ನವರಂಗದ ವಿತಾನವು ಸುಂದರವಾಗಿದ್ದು, ಉತಕ್ಷಿತ್ ವಿಧಾನದ ಭುವನೇಶ್ವಯನ್ನು ಒಳಗೂಂಡಿದೆ. ವಿತಾನದಲ್ಲಿ ಗಿಳಿ, ಕಿನ್ನರಶಿಲ್ಪ, ಗಂಡಭೇರುಂಡ ಶಿಲ್ಪಗಳನ್ನು ಕಡೆಯಲಾಗಿದೆ. ನವರಂಗದ ನಾಲ್ಕೂ ದಿಕ್ಕಿಗೆ ದ್ವಾರಗಳಿವೆ. ನವಂಗದಲ್ಲಿ ಪೆರಿಯಾಳ್ವಾರ್, ತಿರುಮಂಗೈಯಾಳ್ವಾರ್, ಪುದುತ್ತಾಳ್ವಾರ್, ತೊಂಡರಾಳ್ವಾರ್, ಭಾಷ್ಯಕಾರ, ಮಧುರಕವಿ ನಮ್ಮಾಳ್ವರ್ ಪೊಯ್‌ಹರಿಮ್ಮಾಳ್ವಾರ್, ಅಳವಂದಾರ್, ನಾಥಮುನಿ ಮತ್ತು ಕುಲಶೇಖರಾಳ್ವಾರ್ ಎಂಬ ಹನ್ನೊಂದು ಆಳ್ವಾರರ ವಿಗ್ರಹಗಳಿವೆ. ಶ್ರೀವೈಷ್ಣವ ದೇವಾಲಯಗಳಲ್ಲಿ ಆಳ್ವಾರರ ಸನ್ನಿಧಿಯಿರುವುದು ನಿಯಮಬದ್ಧವಾದ್ದರಿಂದ ಈ ವಿಗ್ರಹಗಳನ್ನು ಇಲ್ಲಿನ ನವರಂಗದಲ್ಲಿ ಸ್ಥಾಪಿಸಲಾಗಿದೆ. ನವರಂಗದ ಬಾಗಿಲುವಾಡಗಳು ವೈಷ್ಣವ ದ್ವಾರಪಾಲಕರು ಲಲಾಟದಲ್ಲಿ ಗಜಲಕ್ಷ್ಮಿ ಉಬ್ಬುಗೆತ್ತನೆಗಳನ್ನು ಒಳಗೊಂಡಿವೆ.

ವಿಜಯನಗರದ ಅರಸರ ತರುವಾಯ ಚಿತ್ರದುರ್ಗವನ್ನಾಳಿದ ನಾಯಕ ಅರಸರು ಈ ದೇಗುಲದ ಮುಖಮಂಟಪವನ್ನು ನಿರ್ಮಿಸಿದರೆಂಬುದು ಕಟ್ಟಡದ ಲಕ್ಷಣಗಳಿಂದ ವೇದ್ಯವಾಗುತ್ತದೆ. ದೇವಾಲಯದ ನವರಂಗವನ್ನು ಪ್ರವೇಶಿಸಲು ಇರುವ ಕಿರಿದಾದ ಬಾಗಿಲಿನ ಮೇಲೆ ಒಳಮುಖದಲ್ಲಿ ಗರ್ಭಗುಡಿಯಲ್ಲಿನ ಗೋಪಾಲಕೃಷ್ಣನಿಗೆ ಅಭಿಮುಖವಾಗಿ ರಾಜಪುರುಷನೋರ್ವನು ನಾಲ್ವರು ಸ್ತ್ರೀಯರೊಡನೆ ಕೈಮುಗಿದು ನಿಂತಿರುವ ಶಿಲ್ಪವನ್ನು ಅಳವಡಿಸಲಾಗಿದೆ. ವಿದ್ವಾಂಸರು ಗುರುತಿಸಿರುವಂತೆ ಇದು ಚಿತ್ರದುರ್ಗದ ನಾಯಕ ಅರಸ ಬಿಚ್ಚುಗತ್ತಿ ಭರಮಣ್ಣನಾಯಕ ಮತ್ತು ಅವನ ನಾಗತಿಯರದು.[೮೦] ಮುಖಮಂಟಪದ ಬಲ ಹಾಗೂ ಎಡಭಾಗದಲ್ಲಿ ಎತ್ತರವಾದ ಜಗಲಿಯಿದೆ. ಇಲ್ಲಿನ ಕಂಬಗಳು ಕೆಳಭಾಗ ಮತ್ತು ಮೇಲಿನ ಭಾಗದಲ್ಲಿ ಚೌಕಾಕಾರವಾಗಿದ್ದು, ಮಧ್ಯದಲ್ಲಿ ಎಂಟು ಮತ್ತು ಹದಿನಾರು ಪಾಶ್ವದ ಕೆತ್ತನೆಗಳಿಂದ ಕೂಡಿವೆ. ಚೌಕಭಾಗಗಳಲ್ಲಿ ಪೂರ್ಣಕುಂಭ, ಕತ್ತಿ ಗುರಾಣಿ ಹಿಡಿದ ಯೋಧ, ಸಿಂಹ, ವ್ಯಾಳ, ಜಟಾಧಾರಿಭೈರವ, ಕುದುರೆಯನ್ನೇರಿ ಭರ್ಚಿ ಹಿಡಿದಿರುವ ವೀರ, ವಾದ್ಯಗಾರರು, ನೃತ್ಯಗಾರ್ತಿಯರು ಮುಂತಾದ ಉಬ್ಬುಶಿಲ್ಪಗಳಿವೆ. ದೇವಾಲಯದ ಮುಂಬದಿಯಲ್ಲಿ ಬಲಿಪೀಠವಿದೆ. ಅರ್ಧಕಡೆದ ದೀಪಸ್ತಂಭವು ದೇಗುಲದ ಬಲಬದಿಯಲ್ಲಿದೆ.

ಗೋಪಾಲಕೃಷ್ಣ ದೇವಾಲಯದ ಮುಖಮಂಟಪದಲ್ಲಿ ನಿಲ್ಲಿಸಿರುವ ಕ್ರಿ.ಶ.೧೩೩೮ರ ಶಾಸನವು ಗೋಪಾಲಕೃಷ್ಣನನ್ನು 'ಶ್ರೀರಾಮಕೃಷ್ಣ ಗೋಪಾಲ ದೇವರು' ಎಂದು ಸಂಬೋಧಿಸಿದ್ದು, ಆಗ ಚಿತ್ರದುರ್ಗದ ಪ್ರಾಂತ್ಯಾಧಿಕಾರಿಯಾಗಿದ್ದ ಹಿರಿಯ ಬಲ್ಲಪ್ಪದಣ್ಣಾಯಕನು ನಗರೇರನ್ನು ಗೋಪಾಲಪುರವೆಂದು ಮರು ನಾಮಕರಣಮಾಡಿ ಈ ದೇವಾಲಯಕ್ಕೆ ದಾನ ನೀಡಿದ್ದ ಸಂಗ ತಿಯನ್ನು ಅರಹುತ್ತದೆ.[೮೧] ಆಗ ಈ ದೇವಾಲಯದ ಸ್ಥಾನಿಕನಾಗಿದ್ದವನು ನಂಬಿಯಾರು ಗಡಬದೆಯ ಎಂಬುದೂ ಅದೇ ಶಾಸನದಲ್ಲಿ ಉಕ್ತವಾಗಿದೆ. ಹದಿನೆಂಟನೆಯ ಶತಮಾನದಲ್ಲಿ ಗೋಪಾಲಕೃಷ್ಣ ದೇವಾಲಯದ ಪಕ್ಕದಲ್ಲಿ ಶ್ರೀ ವೈಷವ ಸಂಪ್ರದಾಯದ ಮಠವೊಂದಿದ್ದು, ಅದನ್ನು 'ಪಂಚರಾತ್ರ ಮಠಂ' ಎಂದು ಕರೆಯಲಾಗುತ್ತಿದ್ದಿತೆಂದು ವ್ಯಕ್ತಪಡುತ್ತದೆ.[೮೧]

ಗೋಪಾಲಕೃಷ್ಣ ದೇವಾಲಯದ ಪರಿಸರವು ವೈಷ್ಣವ ಹಾಗೂ ಶ್ರೀವೈಷ್ಣವ ಕ್ಷೇತ್ರ ವಾಗಿದ್ದಿತು. ಪ್ರಸ್ತುತ ಪ್ರತಿವರ್ಷ ಮಾಘಶುದ್ಧ ಪೌರ್ಣಮಿಯ ದಿನದಂದು ಶ್ರೀಗೋಪಾಲಸ್ವಾಮಿ ರಥೋತ್ಸವವು ನಡೆಯುತ್ತದೆ.

೨. ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯ

ಚಿತ್ರದುರ್ಗದಿಂದ ತುರುವನೂರಿಗೆ ತೆರಳುವ ರಸ್ತೆಯ ಎಡಬದಿಯಲ್ಲಿ ಪೂರ್ವಾಭಿಮುಖವಾಗಿರುವ ದೇವಾಲಯವಿದು. ವಾಸ್ತುವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ,

ನವರಂಗ, ಮಹಾಮಂಟಪ, ಪ್ರಾಕಾರಮಂಟಪ ಸಹಿತ ಸುತ್ತಲೂ ಪೌಳಿಗೋಡೆಯನ್ನು ನಿರ್ಮಿಸಲಾಗಿದೆ. ಗರ್ಭಗೃಹದಲ್ಲಿ ಸುಮಾರು ಐದು ಅಡಿ ಎತ್ತರದ ಕಪ್ಪುಶಿಲೆಯ ವೆಂಕಟೇಶ್ವರನ ಮೂರ್ತಿಯಿದೆ. ವೆಂಕಟೇಶ್ವರನು ತನ್ನ ಹಿಂದಿನ ಕೈಗಳಲ್ಲಿ ಶಂಖ, ಚಕ್ರ ಹಿಡಿದಿದ್ದರೆ ಮುಂದಿನ ಕೈಗಳು ಅಭಯಮುದ್ರೆ ಮತ್ತು ಕಟಿಯವಲಂಬಿತವಾಗಿರುವುವು. ತಲೆಗೆ ಕಿರೀಟಮುಕುಟ ಧರಿಸಿರುವ ಶಿಲ್ಪದ ಮೇಲೆ ಕೀರ್ತಿಮುಖದ ಪ್ರಭಾವಳಿಯಿದೆ. ಶಿಲ್ಪದ ಕೆಳಗೆ ಎಡ ಮತ್ತು ಬಲಬದಿಯಲಿ ಕೈಗಳಲ್ಲಿ ಪದ್ಮಹಿಡಿದಿದ್ದು, ಉಳಿದ ಕೈ ಇಳಿಬಿಟ್ಟು ನಿಂತಿರುವ ಶ್ರೀದೇವಿ ಮತ್ತು ಭೂದೇವಿಯರ ಶಿಲ್ಪಗಳಿವೆ. ವೆಂಕಟೇಶ್ವರನು ಕೊರಳಲ್ಲಿ ವೈಜಯಂತಿ ಹಾರ, ಯಜ್ಞೋಪವೀತ, ಭುಜವಲ್ಯ, ಕೆಯೂರ, ಕೈಕಂಕಣ, ಉಪವೀತ, ಕಾಲ್ಕಡಗ ಅಂದುಗೆ ಧಾರಿಯಾಗಿರುವನು. ಗರ್ಭಗೃಹದ ಬಾಗಿಲುವಾಡವು ಸರಳವಾಗಿದೆ. ಅಂತರಾಳದ ದ್ವಾರಕ್ಕೆ ಹಿತ್ತಾಳೆಯ ಕವಚ ಅಳವಡಿಸಿದ್ದು, ಅದರಲ್ಲಿ ವೈಷ್ಣವ ದ್ವಾರಪಾಲಕರು, ಹೂಬಳ್ಳಿಗಳ ಅಲಂಕರಣ, ಗರುಡಮೂರ್ತಿಗಳು, ಶಂಖ, ನಾಮ, ಚಕ್ರದ ರಚನೆಗಳಿವೆ. ನವರಂಗದಲ್ಲಿರುವ ನಾಲ್ಕು ಕಂಬಗಳ ಕಾಂಡಭಾಗವನ್ನು ಎಂಟು, ಹದಿನಾರು ಪಾಶ್ವದ ಕೆತ್ತನೆಗಳು ಮೂರು ಚೌಕಾಕಾರ ಭಾಗಗಳನ್ನಾಗಿ ವಿಂಗಡಿಸಿದಂತೆ ಕಡೆಯಲ್ಪಟ್ಟಿವೆ. ಇವುಗಳ ಮೇಲೆ ಪುಷ್ಪಬೋದಿಗೆಯಿದೆ. ವಿತಾನದಲ್ಲಿ ಊರ್ಧ್ವಮುಖ ಪದ್ಮದ ಕೆತ್ತನೆಯಿದೆ. ನವರಂಗದ ಗೋಡೆಯಲ್ಲಿ ಶ್ರೀವೈಷ್ಣವ ಪಂಥದ ಆಳ್ವಾರರ ಮೂರ್ತಿಗಳನ್ನು ಕಡೆದಿರುವರು. ನವರಂಗದ ದ್ವಾರದಲ್ಲಿ ವೈಷ್ಣವ ದ್ವಾರಪಾಲಕರ ಶಿಲ್ಪಗಳಿವೆ. ಮಹಾಮಂಟಪದಿಂದ ನವರಂಗಕ್ಕೆ ಹೋಗಲು ಪಾವಟಿಗೆಗಳನ್ನು ಅಳವಡಿಸಲಾಗಿದೆ.

ವಿಶಾಲವಾದ ಮಹಾಮಂಟಪದ ನಾಲ್ಕೂ ದಿಕ್ಕಿಗೆ ದ್ವಾರಗಳಿವೆ. ವೇದಿಕೆಯ ಮೇಲೆ ಹನ್ನೆರಡು ಬೃಹದಾಕಾರದ ಕಂಬಗಳಿವೆ. ಇವು ಗಾತ್ರದಲ್ಲಿ ದೊಡ್ಡವು. ಈ ಕಂಬಗಳನ್ನು ನೇರವಾಗಿ ನಿಲ್ಲಿಸಿದ್ದು, ಚೌಕ ಮತ್ತು ಅಷ್ಟಮುಖಗಳಲ್ಲಿ ಕೆತ್ತಿರುವರು. ಇವುಗಳಿಗೆ ತಾಗಿಕೊಂಡಂತೆ ಸಿಂಹವು ತನ್ನ ಮುಂಗಾಲುಗೆಳೆರಡನ್ನು ಮೇಲೆತ್ತಿ ಮುಂಚಾಚಿದ ತೊಲೆಯನ್ನು ಹೊತ್ತುನಿಂತಿರುವಂತೆ ಕಡೆಯಲಾಗಿದೆ. ಈ ಕಂಬಗಳು ವಿಜಯನಗರ ಶೈಲಿಯಲ್ಲಿವೆ. ವಿತಾನವು ಅಷ್ಟಕೋನಾಕೃತಿಯಲ್ಲಿದ್ದು, ಭುವನೇಶ್ವರಿಯನ್ನೊಳಗೊಂಡಿದೆ. ಮಹಾಮಂಟಪದ ಮುಖ್ಯದ್ವಾರವು ವೈಷ್ಣವ ದ್ವಾರಪಾಲಕ ಶಿಲ್ಪಗಳು, ಹೂವು, ಲತಾಬಳ್ಳಿ, ವಜ್ರಪಟ್ಟಿಕೆ ಅಲಂಕರಣದಿಂದ ಕೂಡಿದ್ದು, ದ್ವಾರಬಂಧದಲ್ಲಿ ನಾಮದ ಕೆತ್ತನೆ ಇದೆ.

ಗರ್ಭಗೃಹದ ಭಿತ್ತಿಯು ಅಲಂಕಾರ ರಹಿತವಾಗಿದ್ದು, ಮೇಲ್ಭಾಗದಲ್ಲಿ ಗಾರೆಯಿಂದ ಕಟ್ಟಿದ ದ್ರಾವಿಡಶೈಲಿಯ ದ್ವಿತಲ ಶಿಖರವಿದೆ. ಈ ಶಿಖರದಲ್ಲಿ ಕೂಡುಗಳು ಅರ್ಧಗಂಬಗಳಿವೆ. ಕೂಡುಗಳಲ್ಲಿ ಯಾವುದೇ ದೇವತಾ ಶಿಲ್ಪಗಳಿಲ್ಲ. ಇದು ಕೀರ್ತಿಮುಖ, ಹೂಬಳ್ಳಿಗಳಿಂದ ಅಲಂಕೃತವಾಗಿದೆ. ಶಿಖರದಮೇಲೆ ಲೋಹದ ಕಳಶವಿದೆ. ದೇವಾಲಯದ ಸುತ್ತಲೂ ಪ್ರಕಾರಮಂಟಪದ ಸಹಿತ ಪೌಳಿಗೋಡೆಯಿದೆ. ದೇವಾಲಯದ ಎಡಬದಿಯಲ್ಲಿ ಪ್ರಣಾಮಮುದ್ರೆಯಲ್ಲಿದ್ದು, ಸಮಭಂಗಿಯಲ್ಲಿ ನಿಂತಿರುವ ಹನುಮನಿಗೆ ಪುಟ್ಟ ಗುಡಿಕಟ್ಟಿರುವರು. ದೇವಾಲಯದ ಮುಂಬದಿಯಲ್ಲಿ ಸುಮಾರು ಹದಿನೈದು ಅಡಿ ಎತ್ತರದ ದೀಪಸ್ತಂಭ ಮತ್ತು ಪುಷ್ಕರಣಿ ನಿರ್ಮಿಸಿರುವರು.

ಚಿತ್ರದುರ್ಗ ನಾಯಕ ಅರಸರು ವೈಷ್ಣವ ಧರ್ಮವನ್ನು ಅವಲಂಬಿಸಿದ್ದು, ವೆಂಕಟರಮಣನ ಆರಾಧಕರಾಗಿದ್ದರು. ರಾಜಾ ಬಿಚ್ಚುಗತ್ತಿ ಭರಮಣ್ಣನಾಯಕನು ಕ್ರಿ.ಶ.೧೭೧೫ರಲ್ಲಿ ವೆಂಕಟರಮಣಸ್ವಾಮಿಯ ಅಮೃತಪಡಿ, ನಂದಾದೀಪ, ಮಂತ್ರಪುಷ್ಪಗಳೊಡನೆ ಇನ್ನಿತರ ಸೇವೆಗಳಿಗಾಗಿ ಪಿಳ್ಳೆಕೆರೇನಹಳ್ಳಿ ಗ್ರಾಮವನ್ನು ದಾನವಾಗಿ ನೀಡಿದ್ದನು.[೮೩] ದೇವರಿಗೆ ಕ್ರಿ.ಶ.೧೭೬೦ರ ಸುಮಾರಿನಲ್ಲಿ ತಿಪ್ಪಣ್ಣನ ಮಗ ಪಂಪಣ್ಣ ಎಂಬುವನು ಗಂಟೆಯೊಂದನ್ನು ಒಪ್ಪಿಸಿದ್ದನು.[೮೪] ವೆಂಕಟರಮಣ ಸ್ವಾಮಿಯ ರಥೋತ್ಸವದಲ್ಲಿ ಜಾತಿಮತದ ಭೇದವಿಲ್ಲದೆ ಅಸಂಖ್ಯಾತ ಜನ ಪಾಲ್ಗೊಳ್ಳುತ್ತಾರೆ. ಇದರ ಒಂದು ವಿಶೇಷತೆ ಎಂದರೆ ನಾಯಕ ಜನಾಂಗದವರು ನಿಶಾನಿಗಳನ್ನಿಡದೆ ಈ ರಥೋತ್ಸವ ಜರುಗುವುದಿಲ್ಲ. ಇದು ನಾಯಕರ ಕಾಲದಿಂದ ನಡೆದು ಬಂದ ಪದ್ಧತಿಯಾಗಿದೆ. ಬೆಳಿಗ್ಗೆ ತಿರುನಕ್ಷತ್ರ ಹುಟ್ಟಿದ

ಅವಧಿಯಲ್ಲಿ ಈ ರಥವನ್ನು ಎಳೆಯುತ್ತಾರೆ. ಈ ತೇರನ್ನು ಸವರ್ಣೆಯರು 'ಮೈಲಿಗೆತೇರು' ಎಂದು ಕರೆಯುವುದು ಇದರ ವಿಶೇಷತೆ.

೩. ಗರುಡಾಂಜನೇಯ ದ್ವಾರದ ಆಂಜನೇಯ ದೇವಾಲಯ

ಗೋಪಾಲಕೃಷ್ಣ ದೇವರ ಮತ್ತು ಹೊಂಡದ ಆವರಣವನ್ನು ತಲುಪುವ ಮಾರ್ಗದಲ್ಲಿ ಅಡ್ಡಹಾಯ್ದಿರುವ ತುಪ್ಪದಕೊಳ ಬತೇರಿ ಕೋಟೆಸುತ್ತಿನ ದ್ವಾರದಲ್ಲಿರುವ ದೇವಾಲಯವಿದು. ಚಿತ್ರದುರ್ಗ ನಾಯಕ ಅರಸರ ಅವಧಿಯಲ್ಲಿ ನಿರ್ಮಾಣಗೊಂಡ ಕೋಟೆಸುತ್ತಿನ ಈ ದ್ವಾರವನ್ನು 'ಗರುಡಾಂಜನೇಯ ಬಾಗಿಲು' ಎಂದು ಕರೆಯುವುದು ವಾಡಿಕೆ. ಈ ಬಾಗಿಲ ಮಂಟಪದ ಹಿಂಬದಿಯಲ್ಲಿ ಎಡಬಲಗಳಲ್ಲಿಯೂ ಹುಟ್ಟು ಬಂಡೆಯ ಮೇಲೆ ಹನುಮಂತ ಮತ್ತು ಗರುಡರ ಉಬ್ಬು ಕೆತ್ತನೆಗಳಿವೆ. ಹುಟ್ಟು ಬಂಡೆಯ ಮೇಲಿನ ಹನುಮಂತನ ಕೆತ್ತನೆ ಐದು ಅಡಿ ಎತ್ತರ ಇದ್ದು, ಈ ಹುಟ್ಟು ಬಂಡೆ ಬಳಸಿಕೊಂಡು ಒಂದು ಗುಡಿಯನ್ನು ದ್ವಾರದ ಮೂಲರಚನೆಯಲ್ಲಿಯೇ ಅಳವಡಿಸಿಕೊಂಡಂತೆ ನಿರ್ಮಿಸಲಾಗಿದೆ. ಇದರ ಮುಂಬದಿಯ ಹುಟ್ಟು ಬಂಡೆಯ ಮೇಲೆ ಮೂಡಿಸಿರುವ ಗರುಡಮೂರ್ತಿಯ ರಕ್ಷಣೆಗಾಗಿ ಅಲ್ಲಿಯೇ ಕಲ್ಲುಚಪ್ಪಡಿಗಳನ್ನಿಟ್ಟು ಗೂಡಿನಂತಹ ಪುಟ್ಟ ಗುಡಿಯನ್ನು ಸೃಷ್ಟಿಸಲಾಗಿದೆ. ಈ ಸಂಬಂಧವಾಗಿ ದ್ವಾರ ನಿರ್ಮಾಣವಾಗುವ ಪೂರ್ವದಲ್ಲಿಯೇ ಅಂದರೆ ಚಿತ್ರದುರ್ಗದಲ್ಲಿ ಕಾಮಗೇತಿ ಅರಸರ ಆಳ್ವಿಕೆ ಪ್ರಾರಂಭವಾಗುವ ಮುನ್ನವೇ ಇವುಗಳು ನಿರ್ಮಾಣಗೊಂಡಿರುವ ಸಾಧ್ಯತೆ ಇದೆ.[೮೫]

೪. ಚನ್ನಕೇಶವ ದೇವಾಲಯ

ಚಿತ್ರದುರ್ಗ ನಗರದ ಸಿ.ಕೆ.ಪುರ ಬಡಾವಣೆಯಲ್ಲಿ ಪೂರ್ವಾಭಿಮುಖವಾಗಿರುವ ದೇವಾಲಯವಿದು. ಇದರ ವಾಸ್ತುರಚನೆಯಲ್ಲಿ ಗರ್ಭಗೃಹ, ಅಂತರಾಳ, ಸಭಾಮಂಟಪ ಮತ್ತು ಮುಖಮಂಟಪಗಳಿವೆ. ಗರ್ಭಗೃಹದಲ್ಲಿ ಎರಡು ಅಡಿ ಎತ್ತರದ ಗರುಡ ಪೀಠದ ಮೇಲೆ ಮೂರುವರೆ ಅಡಿ ಎತ್ತರದ ಕಪ್ಪುಶಿಲೆಯ ಚನ್ನಕೇಶವನ ಮೂರ್ತಿಯಿದೆ. ವಿಷ್ಣುವಿನ ಇಪ್ಪತ್ನಾಲ್ಕು ಅವತಾರಗಳಲ್ಲಿ ಇದು ವಾಸುದೇವನದು. ವಾಸುದೇವನು ತನ್ನ ನಾಲ್ಕೂ ಕೈಗಳಲ್ಲಿ ಶಂಖ, ಚಕ್ರ, ಪದ್ಮ, ಗದೆಗಳನ್ನು ಹಿಡಿದಿರುವನು. ಕಿರೀಟಮುಕುಟ ಧರಿಸಿದ್ದು, ಇದರ ಮೇಲೆ ಕೀರ್ತಿಮುಖದ ಪ್ರಭಾವಳಿಯ ಕೆತ್ತನೆಯಿದೆ. ಕೊರಳಲ್ಲಿ ವೈಜಯಂತಿಮಾಲೆ, ಕಂಠಿಹಾರ, ಧರಿಸಿದ್ದಾನೆ. ಉಳಿದಂತೆ ಉಪವೀತ, ಯಜ್ಞೋಪವೀತ, ಭುಜವಲ್ಯ, ಕೆಯೂರ, ಕಂಕಣ, ಸೊಂಟಪಟ್ಟಿ, ಅಂದುಗೆ, ಕಾಲುಕಡಗ ಧರಿಸಿರುವಂತೆ ಬಿಂಬಿತನಾಗಿದ್ದಾನೆ. ವಾಸುದೇವನ ಕೆಳಬದಿಯಲ್ಲಿ ಶ್ರೀದೇವಿ, ಭೂದೇವಿಯರು ಚಿಕ್ಕ ಶಿಲ್ಪಗಳನ್ನು ಕಡೆಯಲಾಗಿದೆ. ಗರ್ಭಗೃಹದ ಬಾಗಿಲುವಾಡವು ಸರಳವಾಗಿದೆ., ಅಂತರಾಳದ ಬಾಗಿಲುವಾಡದಲ್ಲಿ ವೈಷ್ಣವ ದ್ವಾರಪಾಲಕರ ಶಿಲ್ಪಗಳಿವೆ. ಇವುಗಳು ತಮ್ಮ ನಾಲ್ಕು ಕೈಗಳಲ್ಲಿ ಶಂಖ, ಚಕ್ರ, ಗದೆ, ಅಭಯ ಹಸ್ತದಾರಿಗಳಾಗಿದ್ದು, ಅಲಂಕೃತವಾಗಿವೆ. ದ್ವಾರಬಂಧದಲ್ಲಿ ಗಣೇಶನ ಉಬ್ಬುಗೆತ್ತನೆಯಿದೆ. ಅಂತರಾಳದ ಎಡಬದಿಯ ಗರ್ಭಗೃಹದಲ್ಲಿ ಎರಡು ಅಡಿ ಎತ್ತರದ ಪದ್ಮಪೀಠದ ಮೇಲೆ ಮೂರು ಅಡಿ ಎತ್ತರದ ಆಂಜನೇಯನ ವಿಗ್ರಹವನ್ನು ಸ್ಥಾಪಿಸಲಾಗಿದೆ. ವಾಯುಪುತ್ರನಾದ ಹನುಮನ ಬಲಗೈ ತಪ್ಪಡ ಮುದ್ರೆಯಲ್ಲಿದ್ದರೆ, ಎಡಗೈಯಲ್ಲಿ ಪುಷ್ಪವನ್ನು ಹಿಡಿದಿರುವನು. ಕಿವಿಯಲ್ಲಿ ದೊಡ್ಡದಾದ ಕರ್ಣಕುಂಡಲ ಕಂಠಿಹಾರ, ಕೆಯೂರ, ಕಾಲ್ಕಡಗ ಧರಿಸಿದ್ದು, ವೀರಭಂಗಿಯಲ್ಲಿ ನಿಂತಿದ್ದಾನೆ. ಹನುಮ ತನ್ನ ಪಾದಗಳಿಂದ ಅಕ್ಷಯ ಕುಮಾರನೆಂಬ ಅಸುರನನ್ನು ತುಳಿದಿರುವಂತೆ ಶಿಲ್ಪಿತವಾಗಿದ್ದಾನೆ. ಇದರ ಬಾಗಿಲುವಾಡದಲ್ಲಿ ಪೂರ್ಣಕುಂಭ, ದ್ವಾರಬಂಧದಲ್ಲಿ ಪದ್ಮದ ಕೆತ್ತನೆಗಳಿವೆ. ಅಂತರಾಳದ ಬಲಬದಿಯ ಗರ್ಭಗೃಹದಲ್ಲಿ ಈಶ್ವರನ ಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಪೂರ್ಣಕುಂಭಗಳಿಂದ ಕೂಡಿರುವ ಬಾಗಿಲುವಾಡದ ಲಲಾಟದಲ್ಲಿ ಪದ್ಮದ ರಚನೆಯಿದೆ.

ಸಭಾಮಂಟಪದಲ್ಲಿ ಕಣಶಿಲೆಯ ಆರು ಕಂಬಗಳಿದ್ದು, ಇವುಗಳನ್ನು ಚೌಕಾಕಾರ, ಎಂಟು, ಹದಿನಾರು ಪಾರ್ಶ ಮತ್ತು ಚೌಕಾಕಾರದಲ್ಲಿ ಕಡೆಯಲಾಗಿದೆ. ಇವುಗಳ ಮೇಲೆ ಘಟ, ಫಲಕ ಮತ್ತು ಸರಳ ಬೋದಿಗೆಗಳಿವೆ. ಸ್ತಂಭಗಳ ಚೌಕಾಕಾರದಲ್ಲಿ, ಜಟಾಧರಭೈರವ, ಪದ್ಮ, ಗಜಹಂಸ, ಗಣೇಶ, ವಿಷ್ಣು

ಶಿವಲಿಂಗ, ಧ್ಯಾನಾಸಕ್ತನಾಗಿ ಪ್ರಣಾಮ ಮುದ್ರೆಯಲ್ಲಿ ಆಸೀನನಾದ ಭಕ್ತನ ಉಬ್ಬುಶಿಲ್ಪಗಳಿವೆ. ಮುಖಮಂಟಪದಲ್ಲಿ ಎಂಟು ಕಂಬಗಳಿದ್ದು ಚೌಕಾಕಾರ, ಎಂಟು ಹದಿನಾರು, ಎಂಟು ಪಾರ್ಶ್ವದ ಕೆತ್ತನೆಗಳಿಂದ ಕಡೆಯಲಾಗಿದೆ. ಮುಖಮಂಟಪದಲ್ಲಿ ಆನೆ ಮತ್ತು ಕುದುರೆಯ ಸ್ಮಾರಕಶಿಲ್ಪಗಳು ಗಮನಸೆಳೆಯುತ್ತವೆ. ಎರಡು ಆನೆಯ ಶಿಲ್ಪಗಳು ನಿಂತಭಂಗಿಯಲ್ಲಿದ್ದು, ಮುಂದಕ್ಕೆ ತನ್ನ ಸೊಂಡಿಲನ್ನು ಸುತ್ತಿಕೊಂಡು ಇಳಿಬಿಟ್ಟಿವೆ. ದೇಹಕ್ಕೆ ಝೂಲದ ಅಲಂಕರಣವಿದೆ. ಉಳಿದ ಎರಡು ಶಿಲ್ಪಗಳು ಕುದುರೆಯವು. ಅವುಗಳ ಬೆನ್ನಮೇಲೆ ಕುಳಿತ ಸವಾರನ ಕಾಲು ಮತ್ತು ಕಿರುದೇಹ ಭಾಗ ಮಾತ್ರ ಉಳಿದಿದೆ. ಕುದುರೆಯ ಮೇಲೆ ಝೂಲ, ಕೊರಳಲ್ಲಿ ಬಗೆಬಗೆಯ ಸರಗಳು, ಮುಖಕ್ಕೆ ಕಡಿವಾಣ ಹಾಕಲಾಗಿದೆ. ಇದರ ಬಾಲಭಾಗವು ಭಗ್ನವಾಗಿದೆ. ಇದಕ್ಕಿಂತ ಭಿನ್ನವಿರುವ ಎತ್ತರದ ಕುದುರೆ ಶಿಲ್ಪವು ದಾವಣಗೆರೆ ಜಿಲ್ಲೆ ಹರಪನಹಳ್ಳಿ ತಾಲೂಕಿನ ಚಿಗಟೇರಿ ಗ್ರಾಮದ ನಾರದಮುನಿ ದೇವಾಲಯದಲ್ಲಿದೆ. ಈ ದೇವಾಲಯದ ಅನ್ಯಪ್ರಾಣಿಗಳ ಸ್ಮಾರಕಗಳು ಬಹುಶಃ ಯುದ್ಧದಲ್ಲಿ ಮಡಿದ ಕುದುರೆ ಮತ್ತು ಆನೆಗಳ ನೆನಪಿನಾರ್ಥವಾಗಿ ಕಡೆದಿರಬಹುದು. ಈ ಸ್ಮಾರಕ ಶಿಲ್ಪಗಳು ಶೈಲಿಯ ದೃಷ್ಟಿಯಿಂದ ಸುಮಾರು ಕ್ರಿ.ಶ.೧೭ನೇ ಶತಮಾನದ್ದಾಗಿವೆ. ದೇವಾಲಯದ ಆವರಣದಲ್ಲಿ ಗರ್ಭಗೃಹ ಮಾತ್ರವಿರುವ ಪುಟ್ಟ ಲಕ್ಷ್ಮಿಯ ದೇಗುಲವಿದೆ. ಒಂದು ಅಡಿ ಎತ್ತರದ ಪದ್ಮಪೀಠದ ಮೇಲೆ ಎರಡು ಅಡಿ ಎತ್ತರದ ಕಪ್ಪುಶಿಲೆಯ ಮೂರ್ತಿಯನ್ನು ಸ್ಥಾಪಿಸಲಾಗಿದೆ. ಲಕ್ಷ್ಮಿಯು ತನ್ನ ನಾಲ್ಕು ಕೈಗಳಲ್ಲಿ ಎರಡು ಕೈಗಳಲ್ಲಿ ಪದ್ಮಗಳಿದ್ದರೆ, ಉಳಿದ ಎರಡು ಕೈಗಳು ಅಭಯ ಮತ್ತು ವರದ ಮುದ್ರೆಯಲ್ಲಿವೆ. ಲಕ್ಷ್ಮಿಯು ಕರಂಡಮುಕುಟ, ಕರ್ಣಕುಂಡಲ, ವೈಜಯಂತಿಹಾರ, ಕಂಠಿಹಾರ, ಭುಜವಲ್ಯ, ಕೆಯೂರ, ಕಂಕಣಗಳಿಂದ ಅಲಂಕೃತವಾಗಿದ್ದು, ಸುಖಾಸೀನ ಭಂಗಿಯಲ್ಲಿ ಆಸೀನಳಾಗಿದ್ದಾಳೆ. ಗರ್ಭಗೃಹದ ಬಾಗಿಲುವಾಡದಲ್ಲಿ ವೈಷ್ಣವ ದ್ವಾರಪಾಲಕರ ಶಿಲ್ಪಗಳಿದ್ದು, ದ್ವಾರಬಂಧದಲ್ಲಿ ಪದ್ಮದ ಕೆತ್ತನೆಯಿದೆ.

ದೇವಾಲಯದ ಮೇಲಿನ ಕೈಪಿಡಿ ಗೋಡೆಯಲ್ಲಿ ಅರಳಿಮರದ ಎಲೆಗಳ ರಚನೆಗಳಿವೆ. ಗರ್ಭಗೃಹದ ಮೇಲೆ ಯಾವುದೇ ಬಗೆಯ ಶಿಖರಗಳಿಲ್ಲ. ದೇವಾಲಯದ ಸುತ್ತಲೂ ಆಳೆತ್ತರದ ಪೌಳಿಗೋಡೆ ಇದೆ. ದೇವಾಲಯದ ಮುಂಬದಿಯಲ್ಲಿ ಸುಮಾರು ೩೦ ಅಡಿ ಎತ್ತರಿದ ದೀಪಸ್ತಂಭವಿದೆ. ದೇವಾಲಯದ ಹಿಂಬದಿಯಲ್ಲಿ ಸುಂದರವಾದ ಪುಷ್ಕರಣಿ ನಿರ್ಮಿಸಿರುವರು. ಕ್ರಿ.ಶ.೧೮೦೭ರಲ್ಲಿ ಚಿತ್ರದುರ್ಗ ತಾಲೂಕಿನ ಹುಲ್ಲೂರು ಗ್ರಾಮದಿಂದ ಚನ್ನಕೇಶವ ಶಿಲಾಮೂರ್ತಿ ತಂದು ಸ್ಥಾಪಿಸಲಾಯಿತೆಂದೂ, ೧೮೦೮-೦೯ರಲ್ಲಿ ದೇವಾಲಯ ನಿರ್ಮಾಣಕಾರ್ಯ ಪೂರ್ಣವಾಯಿತೆಂದೂ ಐತಿಹಾಸಿಕ ದಾಖಲೆಗಳಿಂದ ತಿಳಿದುಬರುತ್ತದೆ.[೮೬]

೫. ಲಕ್ಷ್ಮಣರಾಯರ ಮುಖ್ಯಪ್ರಾಣ ದೇವರ ದೇವಾಲಯ

ತ್ಯಾಗರಾಜ ಮಾರುಕಟ್ಟೆ ಬೀದಿಯ ಉತ್ತರ ದಿಕ್ಕಿನ ರಸ್ತೆಯ ಅಂತ್ಯದಲ್ಲಿ ಈ ದೇವಾಲಯವಿದೆ. ಮುಖಮಂಟಪ ಮತ್ತು ಗರ್ಭಗೃಹಗಳಿರುವ ಈ ದೇವಾಲಯ ದಕ್ಷಿಣಾಭಿಮುಖವಾಗಿದ್ದು, ಮೂಲತಃ ಕಣಶಿಲೆಯಿಂದ ಕಟ್ಟಲಾಗಿದೆ. ಹಾಗೆಯೇ ನವೀಕರಣಗೊಂಡಿದೆ. ಗರ್ಭಗೃಹದಲ್ಲಿ ಸುಮಾರು ನಾಲ್ಕು ಅಡಿ ಎತ್ತರದ ಹನುಮನ ಉಬ್ಬುಗೆತ್ತನೆಯ ಶಿಲ್ಪವಿದೆ. ಹನುಮಂತನ ಬಲಗೈ ತಪ್ಪಡ ಮುದ್ರೆಯಲ್ಲಿದ್ದು, ಎಡಗೈಯಲ್ಲಿ ಪುಷ್ಪವೊಂದನ್ನು ಹಿಡಿದಿರುವನು. ತಲೆಗೆ ತಲೆದೊಡವು ಹಾರ, ಸರ, ಕರ್ಣಕುಂಡಲ, ಕೆಯೂರ, ಕಾಲ್ಕಡಗ ಧರಿಸಿದ ಹನುಮನು ವೀರಗಚ್ಚೆ ಹಾಕಿ ನಿಂತಿರುವನು. ಗರ್ಭಗೃಹದ ದ್ವಾರದಲ್ಲಿ ವೈಷ್ಣವ ದ್ವಾರಪಾಲಕ ಶಿಲ್ಪಗಳಿದ್ದು, ಲಲಾಟದಲ್ಲಿ ಪದ್ಮದ ಕೆತ್ತನೆಯಿದೆ. ಮುಖಮಂಟಪದಲ್ಲಿನ ಎರಡು ಕಂಬಗಳನ್ನು ಚೌಕಾಕಾರ ಮತ್ತು ಅಷ್ಟಮುಖಗಳಲ್ಲಿ ಕಡೆಯಲಾಗಿದೆ. ಈ ಕಂಬಗಳ ಮೇಲೆ ಪೂರ್ಣಕುಂಭ, ಕಾಳಿಂಗಮರ್ಧನ, ನೃತ್ಯಗಾರರು, ವಾದ್ಯಗಾರರು ಮತ್ತು ಪದ್ಮಗಳ ಉಬ್ಬುಗೆತ್ತನೆಗಳಿವೆ. ಈ ದೇವಾಲಯವು ಕ್ರಿ.ಶ.೧೮ ಶತಮಾನದ ವಿಜಯನಗರೋತ್ತರ ಶೈಲಿಯಲ್ಲಿದೆ.

೬. ಕೋಡಿ ಹನುಮಂತರಾಯನ ಗುಡಿ

ತಿಮ್ಮಣ್ಣನಾಯಕನ ಕೆರೆ ಕೋಡಿಯ ಬಳಿ ಆಗ್ನೇಯ ದಿಕ್ಕಿಗಿರುವ ದೇವಾಲಯವಿದು. ತಿಮ್ಮಣ್ಣನಾಯಕನ ಕೆರೆಯ ಕೋಡಿಯ ಬಳಿ ಈ ದೇವಾಲಯ ಇರುವುದರಿಂದ ಇದು ಕೋಡಿ ಹನುಮಂತರಾಯನಗುಡಿ ಎಂಬ ಅಭಿಧಾನ ಪಡೆದಿದೆ. ಗರ್ಭಗೃಹ, ಮುಖಮಂಟಪ, ಮತ್ತು ಸಣ್ಣ ದೀಪಸ್ತಂಭಗಳನ್ನು ಹೊಂದಿದ ಈ ದೇವಾಲಯ ಪಶ್ಚಿಮಾಭಿಮುಖವಾಗಿದೆ. ಗರ್ಭಗೃಹದಲ್ಲಿ ಕಣಶಿಲೆಯಲ್ಲಿ ಕಡೆದ ನಾಲ್ಕೂವರೆ ಅಡಿ ಎತ್ತರದ ಆಂಜನೇಯನ ಶಿಲ್ಪವಿದೆ. ಹನುಮಂತನು ತನ್ನ ಎರಡೂ ಕೈಗಳಲ್ಲಿ ಬಲಗೈ ತಪ್ಪಡ ಮುದ್ರೆಯಲ್ಲಿ ಮತ್ತು ಎಡಗೈ ಫಲ ಹಿಡಿದಿದೆ. ಆಭರಣ ಮತ್ತು ಉಡುಪುಗಳನ್ನು ಧರಿಸಿದೆ. ಮುಖಮಂಟಪದಲ್ಲಿ ಚೌಕ ಮತ್ತು ಅಷ್ಟಮುಖದಲ್ಲಿ ಕಡೆದ ಎರಡು ಕಂಬಗಳಿದ್ದು, ಚೌಕಾಕಾರದ ಒಂದು ಭಾಗದಲ್ಲಿ ನಗ್ನ ಭೈರವನ ಶಿಲ್ಪವಿದೆ. ಈ ಶಿಲ್ಪವು ನಿಂತಭಂಗಿಯಲ್ಲಿದ್ದು, ರುಂಡಮಾಲೆ ಧರಿಸಿದೆ. ತನ್ನ ನಾಲ್ಕು ಕೈಗಳಲ್ಲಿ ತ್ರಿಶೂಲ, ಢಮರು ಖಡ್ಗ ಮತ್ತು ಕಪಾಲ ಹಿಡಿದಿರುವನು. ಜಟಾಮುಕುಟ ಧರಿಸಿದ್ದು, ಹಾರ, ಕೆಯೂರ, ಸೊಂಟಪಟ್ಟಿ, ಕಾಲುಕಡಗ ಧರಿಸಿದ್ದಾನೆ. ದೇವಾಲಯದ ಮುಂಬದಿಯಲ್ಲಿ ಆರು ಅಡಿ ಎತ್ತರದ ದೀಪಸ್ತಂಭವಿದ್ದು, ದೇಗುಲದ ಸುತ್ತಲೂ ಇತ್ತೀಚೆಗೆ ನಿರ್ಮಿಸಿದ ಪೌಳಿಗೋಡೆಯಿದೆ. ದೇವಾಲಯದ ಮುಂಬದಿಯಲ್ಲಿರುವ ಹಳೆಯ ಕರೆಯನ್ನು ತಿಮ್ಮಣ್ಣನಾಯಕನು ದುರಸ್ತಿಗೊಳಿಸಿದ ಸಮಯದಲ್ಲಿ ಈ ದೇವಾಲಯವನ್ನು ನಿರ್ಮಾಣ ಮಾಡಿದ್ದಿರಬಹುದಾದ ಸಾಧ್ಯತೆಗಳಿವೆ.

೭. ತಂಗಿಹೊಂಡದ ಆಂಜನೇಯ ದೇವಾಲಯ

ಗರ್ಭಗೃಹ, ತೆರೆದಮುಖಮಂಟಪ ಒಳಗೊಂಡ ಈ ದೇಗುಲವು ತಂಗಿಹೊಂಡದ ಪಶ್ಚಿಮಕ್ಕೆ ಅಂದರೆ ಕಾಶಿವಿಶ್ವನಾಥನ ದೇವಾಲಯದ ಆವರಣದಲ್ಲಿ ನೆಲೆಗೊಂಡಿದೆ. ದಕ್ಷಿಣಾಭಿಮುಖವಾಗಿರುವ ಇದರ ಗರ್ಭಗೃಹದಲ್ಲಿ ಆಂಜನೇಯನ ಶಿಲ್ಪವನ್ನು ಪ್ರತಿಷ್ಠಾಪಿಸಿರುವರು. ಆಂಜನೇಯನು ವೀರಗಚ್ಚೆ ಹಾಕಿದ್ದು, ಹಾರ, ಸರ, ಕೆಯೂರ, ಕಾಲ್ಕಡಗ, ಕರ್ಣಕುಂಡಲಗಳಿಂದ ಅಲಂಕೃತನಾಗಿದ್ದಾನೆ. ತನ್ನ ಬಲಗೈ ತಪ್ಪಡ ಮುದ್ರೆಯಲ್ಲಿದ್ದು, ಎಡಗೈಯಲ್ಲಿ ಹೂ ಹಿಡಿದಿರುವನು. ಗರ್ಭಗೃಹದ ದ್ವಾರವು ಸರಳವಾಗಿದ್ದು, ವೈಷ್ಣವ ದ್ವಾರಪಾಲಕರ ಶಿಲ್ಪಗಳನ್ನು ಒಳಗೊಂಡಿದೆ. ಮುಖಮಂಟಪದ ಎರಡು ಕಂಬಗಳ ಕಾಂಡಭಾಗವನ್ನು ಮಧ್ಯದ ಅಷ್ಟಕೋನ ಮತ್ತು ಹದಿನಾರು ಕೋನದ ಕೆತ್ತನೆಗಳು ಎರಡು ಭಾಗಗಳನ್ನಾಗಿ ವಿಂಗಡಿಸಿದಂತೆ ಕಡೆಯಲ್ಪಟ್ಟಿವೆ. ದೇವಾಲಯಕ್ಕೆ ಅಭಿಮುಖವಾಗಿ ಕೈಮುಗಿದುನಿಂತ ಭಕ್ತಶಿಲ್ಪದ ಕೆತ್ತನೆಯುಳ್ಳ ಎಂಟು ಅಡಿ ಎತ್ತರದ ದೀಪಸ್ತಂಭ ಇದೆ. ಇದರ ಕೆಳಭಾಗ ಚೌಕಾಕಾರವಾಗಿದ್ದು, ಮೇಲ್ಭದಿಯನ್ನು ಎಂಟು ಮತ್ತು ಹದಿನಾರು ಪಾಶ್ವಗಳಿಂದ ಕೆತ್ತಲಾಗಿದೆ. ಕ್ರಿ.ಶ.೧೬ನೇ ಶತಮಾನದಲ್ಲಿ ನಿರ್ಮಾಣವಾಗಿರಬಹುದಾದ ಈ ದೇವಾಲಯ ವಿಜಯನಗರ ಶೈಲಿಯಲ್ಲಿದೆ.

ತಣ್ಣೀರಿನ ದೋಣಿ ದಾಟಿ ಮುನ್ನಡೆದರೆ ಬಲಬದಿಯ ಹುಟ್ಟು ಬಂಡೆಯ ದಕ್ಷಿಣ ದಿಕ್ಕಿನ ಮೇಲ್ಮೈಯಲ್ಲಿ ೬ ಅಡಿ ಎತ್ತರದ ಹನುಮನ ಶಿಲ್ಪ ಕಂಡರಿಸಲಾಗಿದೆ. ಈ ಶಿಲ್ಪವೂ ಸಹ ಹಿಂದೆ ವಿವರಿಸಿದ ಶಿಲ್ಪ ಲಕ್ಷಣಗಳನ್ನು ಹೋಲುತ್ತದೆ. ಶಿಲ್ಪದ ಎಡಬದಿಯಲ್ಲಿ ಪ್ರಣಾಮ ಮುದ್ರೆಯಲ್ಲಿ ಕುಳಿತಿರುವ ವ್ಯಕ್ತಿಯೋರ್ವನ ಶಿಲ್ಪವಿದೆ.

೮. ಹಜಾರಿ ಮುಖ್ಯಪ್ರಾಣದೇವರ ದೇವಾಲಯ

ಸಂತೆಬಾಗಿಲ ಮಹಾದ್ವಾರದ ಒಳಅಂಚಿನ ಪೂರ್ವಭಾಗದಲ್ಲಿ ದಕ್ಷಿಣಾಭಿಮುಖವಾಗಿರುವ ದೇವಾಲಯವೇ ಇದು. ಗರ್ಭಗೃಹ, ಸಭಾಮಂಟಪ ಒಳಗೊಂಡ ಈ ದೇಗುಲವನ್ನು ಕೋಟೆಯ ಹೊರಸುತ್ತಿನ ದಿಡ್ಡಿ ಬಾಗಿಲಿನಿಂದ ಪ್ರವೇಶಿಸಲು ಹಿಂದೊಮ್ಮೆ ಬಾಗಿಲುಗಳಿದ್ದವು. ಪ್ರಸ್ತುತ ಈ ಬಾಗಿಲುಗಳನ್ನು ಮುಚ್ಚಿ ಇತ್ತೀಚೆಗೆ ಲಕ್ಷ್ಮಿವೆಂಕಟೇಶ್ವರ ದೇವಾಲಯ ನಿರ್ಮಿಸಲಾಗಿದೆ. ಗರ್ಭಗೃಹದಲ್ಲಿ ಸುಮಾರು ಮೂರು ಅಡಿ ಎತ್ತರದ ಸಮಭಂಗಿಯಲ್ಲಿ ನಿಂತ

ಆಂಜನೇಯನು ಪ್ರಣಾಮ ಮುದ್ರೆಯಲ್ಲಿರುವುದು ಈ ಶಿಲ್ಪದ ವೈಶಿಷ್ಟ್ಯತೆ. ಸಭಾಮಂಟಪದಲ್ಲಿನ ಸ್ತಂಭಗಳನ್ನು ಚೌಕ ಮತ್ತು ಅಷ್ಟಮುಖಗಳಲ್ಲಿ ಕಡೆಯಲಾಗಿವೆ. ಗರ್ಭಗೃಹದ ದ್ವಾರದಲ್ಲಿ ಅಲಂಕೃತ ಕೆತ್ತನೆಗಳಿವೆ. ಇದರ ಬಾಗಿಲುವಾಡದಲ್ಲಿ ವೈಷ್ಣವ ದ್ವಾರಪಾಲಕ ಶಿಲ್ಪಗಳು, ಅರೆಗಂಬ, ಲತಾಸುರುಳಿ, ವಜ್ರಪಟ್ಟಿಕೆಗಳಿವೆ. ಅರೆಗಂಬವು ಮೊಗ್ಗಿನಾಕಾರದ ಪುಷ್ಪಬೋದಿಗೆಗಳನ್ನು ಹೊಂದಿದ್ದು, ಇದರ ಎರಡೂ ಬದಿಗಳಿಗೆ ಗಿಳಿಗಳನ್ನು ಕಡೆದಿರುವುದು ಪಾಳೆಯಗಾರರ ವಾಸ್ತುಶೈಲಿಯ ವಿಶೇಷತೆಯಾಗಿದೆ. ಗರ್ಭಗೃಹದ ಮೇಲೆ ಇಳಿಜಾರಾದ ಕಪೋತವಿದೆ. ಇದರ ಮೇಲಿನ ಕೈಪಿಡಿ ಗೋಡೆಯಲ್ಲಿ ಕಮಂಡಲ ಹಿಡಿದ ಗಡ್ಡದಾರಿ ಯತಿಯ ಶಿಲ್ಪ ಮತ್ತು ಸ್ತ್ರೀಯೊರ್ವಳ ಶಿಲ್ಪಗಳಿವೆ. ದೇವಾಲಯದ ಮುಂಬದಿಯ ದೀಪಸ್ತಂಭವು ಸುಮಾರು ೧೫ ಅಡಿ ಎತ್ತರವಿದೆ. ಇದರ ಕೆಳಭಾಗದಲ್ಲಿ ಪ್ರಾಣಮ ಮುದ್ರೆ ಸಹಿತ ಸಮಭಂಗಿಯಲ್ಲಿ ನಿಂತ್ತಿರುವ ಭಕ್ತನೋರ್ವನ ಶಿಲ್ಪವಿದೆ. ಈ ವ್ಯಕ್ತಿ ಧರಿಸಿದ ಕಿರೀಟ ನಾಯಕ ಅರಸರು ಧರಿಸುವ ಕಿರೀಟದಂತಿದೆ. ಒಡವೆ ಮತ್ತು ಉಡುಗೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಇದೊಂದು ನಾಯಕ ಅರಸನ ಶಿಲ್ಪವೆಂಬುದು ವೇದ್ಯವಾಗುತ್ತದೆ. ಕ್ರಿ.ಶ.೧೬ನೇ ಶತಮಾನದಲ್ಲಿ ಈ ಕೋಟೆ ನಿರ್ಮಾಣದ ಹಂತದಲ್ಲಿಯೇ ಈ ದೇವಾಲಯವನ್ನು ನಿರ್ಮಿಸಿರಬಹುದು. ಈ ದೇವಾಲಯ ವಿಜಯನಗರ ಶೈಲಿಯಲ್ಲಿದೆ.

೯. ಪೇಟೆ ಆಂಜನೇಯಸ್ವಾಮಿ ದೇವಾಲಯ

ದಕ್ಷಿಣಾಭಿಮುಖವಾದ ಈ ದೇವಾಲಯ ತ್ಯಾಗರಾಜ ಮಾರುಕಟ್ಟೆಯ ಮುಂಬದಿಯಲ್ಲಿದೆ. ಗರ್ಭಗೃಹ ಸಭಾಮಂಟಪಗಳು ಈ ದೇಗುಲದ ಮೂಲ ರಚನೆಗಳಾಗಿದ್ದು, ಉಳಿದಂತೆ ನವೀಕರಣಗೊಳಿಸಲಾಗಿದೆ. ಚಿತ್ರದುರ್ಗದ ಬಖೈರ್‌ನಲ್ಲಿ ಈ ಆಂಜನೇಯನನ್ನು 'ಪೇಟೆಯ ಮುಖ್ಯಪ್ರಾಣ' ಎಂದು ಸಂಬೋಧಿಸಿದೆ. ಗರ್ಭಗೃಹದಲ್ಲಿ ಸುಮಾರು ಐದು ಅಡಿ ಎತ್ತರದ ಆಂಜನೇಯ ಉಬ್ಬು ಶಿಲ್ಪವಿದೆ. ಆಂಜನೇಯನು ವೀರಾಸನದಲ್ಲಿ ನಿಂತಿದ್ದು, ತಲೆದೊಡವು ಆಭರಣ, ಸರ, ಕೆಯೂರ, ಕಾಲ್ಕಡಗ ಧರಿಸಿರುವನು. ತನ್ನ ಬಲಗೈ ತಪ್ಪಡ ಮುದ್ರೆಯಲ್ಲಿ, ಎಡಗೈಯಲ್ಲಿ ಪದ್ಮವನ್ನು ಹಿಡಿದಿರುವನು. ಗರ್ಭಗೃಹದ ಬಾಗಿಲುವಾಡವು ಸರಳವಾಗಿದ್ದು, ವೈಷ್ಣವ ದ್ವಾರಪಾಲಕರ ಶಿಲ್ಪಗಳಿಂದ ಅಲಂಕೃತಗೊಂಡಿದೆ. ಇವುಗಳೊಡನೆ ಲತಾಬಳ್ಳಿ ದ್ವಾರಬಂದದಲ್ಲಿ ಪದ್ಮದ ಉಬ್ಬುಗೆತ್ತನೆಗಳಿವೆ. ಸಭಾಮಂಟಪದಲ್ಲಿನ ನಾಲ್ಕು ಕಂಬಗಳ ಕಾಂಡ ಭಾಗವನ್ನು ಎಂಟು ಮತ್ತು ಹದಿನಾರು ಪಾರ್ಶ್ವದ ಕೆತ್ತನೆಗಳು ಮೂರು ಭಾಗಗಳನ್ನಾಗಿ ವಿಂಗಡಿಸಿವೆ. ಕಾಂಡದ ಚೌಕಾಕಾರದಲ್ಲಿ ಪುರಂದರದಾಸರು, ವಾದ್ಯಗಾರರು, ನೃತ್ಯಗಾರ್ತಿಯರು, ಗದೆಹಿಡಿದ ವೀರ, ಹುಲಿಯೊಡನೆ ಹೋರಾಡುತ್ತಿರುವ ವೀರ, ಖಡ್ಗಧಾರಿ ವೀರ, ನಂದಿ, ಪ್ರಾಣಮ ಮುದ್ರೆಯಲ್ಲಿನ ಭಕ್ತ, ಪೂರ್ಣಕುಂಭ ಮತ್ತು ಪದ್ಮದ ಉಬ್ಬುಗೆತ್ತನೆಗಳಿವೆ. ಭಾವನಾತ್ಮಕವಾಗಿ ಮತ್ತು ಸಾಂಸ್ಕೃತಿಕವಾಗಿ ಈ ಭಾಗದ ಪ್ರಮುಖ ಕೇಂದ್ರವೆಂದು ಪರಿಗಣಿಸಲ್ಪಟ್ಟ ಈ ದೇವಾಲಯವು ಹಿಂದೊಮ್ಮೆ ನ್ಯಾಯತೀರ್ಮಾನದ ಎಡೆಯಾಗಿದ್ದುದು ಗಮನಾರ್ಹ ಸಂಗತಿ. ದಾವಣಗೆರೆ ಗ್ರಾಮದ ಗೌಡಿಕೆ ಹಕ್ಕಿನ ಕುರಿತು ಸಾದರ ಮುದಿಯಣ್ಣಗೌಡನಿಗೂ, ಕುರುಬರ ನಾಗಯ್ಯ ಮತ್ತು ಗೊಲ್ಲರ ಗಿಡ್ಡಯ್ಯಗೌಡನಿಗೆ ಕ್ರಿ.ಶ.೧೭೦೬ ಸೆಪ್ಟಂಬರ್ ೨೯ರಂದು ಈ ವ್ಯಾಜ್ಯ ಜರುಗಿತು.[೮೭] ಭಿಚ್ಚುಗತ್ತಿ ಭರಮಣ್ಣನಾಯಕನ ಆಳ್ವಿಕೆಯ ೧೭ನೇ ವರ್ಷದಲ್ಲಿ ಜರುಗಿದ ಈ ವ್ಯಾಜ್ಯ ಇತ್ಯರ್ಥವಾದದ್ದು ದಿವ್ಯ ಪ್ರಮಾಣದ ಮೂಲಕ ಎಂಬುದು ಇದರ ವಿಶೇಷತೆ. ಈ ದೇವಾಲಯದ ಶೈಲಿ ಮತ್ತು ನ್ಯಾಯತೀರ್ಮಾನದ ಅವಧಿಯನ್ನು ಗಮನಿಸಿದರೆ ಈ ದೇವಾಲಯ ೧೬ನೇ ಶತಮಾನದಲ್ಲಿಯೇ ವಿಜಯನಗರ ಶೈಲಿಯಲ್ಲಿ ನಿರ್ಮಾಣವಾಗಿದೆ.

೧೦. ತಗ್ಗಿನ ಹನುಮಂತ ದೇವಾಲಯ

ಬುರುಜನಹಟ್ಟಿ ವೃತ್ತದ ಬಳಿ ದಕ್ಷಿಣಾಭಿಮುಖವಾಗಿರುವ ದೇವಾಲಯವಿದು. ಚೌಕಾಕಾರದ ಚಿಕ್ಕ ಗರ್ಭಗೃಹ ಮಾತ್ರ ಹೊಂದಿರುವ ಈ ದೇಗುಲ ಕಣಶಿಲೆಯಲ್ಲಿ ನಿರ್ಮಿತವಾದದ್ದು. ಇದರಲ್ಲಿ ಕಣಶಿಲೆಯ ಮೂರು ಅಡಿ ಎತ್ತರದ ಹನುಮನ ಶಿಲ್ಪವನ್ನು ಸ್ಥಾಪಿಸಿರುವರು. ಅಲಂಕಾರ ರಹಿತ

ಬಾಗಿಲುವಾಡದಲ್ಲಿ ವೈಷ್ಣವ ದ್ವಾರಪಾಲಕ ಶಿಲ್ಪಗಳು, ದ್ವಾರಬಂಧದಲ್ಲಿ ಪದ್ಮದ ಕೆತ್ತನೆ ಇದೆ. ಗರ್ಭಗೃಹವನ್ನು ಏರಲು ಪಾವಟಿಗೆಗಳಿದ್ದು, ಬದಿಯಲ್ಲಿ ಹಸ್ತಿಹಸ್ತಗಳಿವೆ. ದೇವಾಲಯದ ಮುಂಬದಿಯಲ್ಲಿ ಚಿಕ್ಕದಾದ ದೀಪಸ್ತಂಭವಿದೆ. ಈ ದೇವಾಲಯ ೧೮ನೇ ಶತಮಾನದಾಗಿದ್ದು, ವಿಜಯನಗರೋತ್ತರ ಶೈಲಿಯಲ್ಲಿ ನಿರ್ಮಾಣವಾಗಿರುವುದು.

೧೧. ವೇಣು ಗೋಪಾಲಸ್ವಾಮಿ ದೇವಾಲಯ

ಬುರುಜನಹಟ್ಟಿ ವೃತ್ತದಿಂದ ಸಿಹಿನೀರಿನ ಹೊಂಡದ ದ್ವಾರಕ್ಕೆ ತೆರಳುವ ರಸ್ತೆಯ ಬಲಬದಿಯಲ್ಲಿ ವೇಣುಗೋಪಾಲಸ್ವಾಮಿಯ ದೇವಾಲಯವಿದೆ. ಚಿತ್ರದುರ್ಗ ನಾಯಕ ಅರಸರ ಅವಧಿಯಲ್ಲಿ ಇಲ್ಲಿ ವ್ಯಾಸರಾಯರ ಮಠ ಅಸ್ತಿತ್ವದಲ್ಲಿತ್ತು. ವಾಸ್ತುವಿನ್ಯಾಸದಲ್ಲಿ ಗರ್ಭಗೃಹ, ಸಭಾಮಂಟಪ ಮತ್ತು ಮುಖಮಂಟಪಗಳನ್ನು ಒಳಗೊಂಡ ಈ ದೇವಾಲಯ ಪೂರ್ವಾಭಿಮುಖವಾಗಿದೆ. ಚೌಕಾಕಾರದ ವಿಶಾಲ ಗರ್ಭಗೃಹದಲ್ಲಿ ಮೂರು ಅಡಿ ಎತ್ತರದ ಕಪ್ಪುಶಿಲೆಯ ವೇಣುಗೋಪಾಲನ ಮೂರ್ತಿ ಸ್ಥಾಪಿಸಲಾಗಿದೆ. ಕರ್ತರಿ ಕಾಲಿನಲ್ಲಿರುವ ವೇಣುಗೋಪಾಲನು ತನ್ನ ನಾಲ್ಕು ಕೈಗಳಲ್ಲಿ ಎರಡು ಕೈಗಳಲ್ಲಿ ಶಂಖ, ಚಕ್ರ, ಧರಿಸಿದ್ದು, ಇನ್ನೆರಡು ಕೈಗಳಲ್ಲಿ ವೇಣು ಹಿಡಿದು ನುಡಿಸುತ್ತಿರುವನು. ಜಟಾಮುಕುಟಧಾರಿ ಗೋಪಾಲಸ್ವಾಮಿಯ ಮೇಲೆ ಕೀರ್ತಿ ಮುಖದ ಪ್ರಭಾವಳಿ ಇದೆ. ಕಂಠಿಹಾರ, ವೈಜಯಂತಿಮಾಲೆ, ಭುಜವಲ್ಯ, ಕೆಯೂರ, ಉಪವೀತ, ಕಾಲ್ಕಡಗ, ಅಂದುಗೆಗಳನ್ನು ವೇಣುಗೋಪಾಲನು ಧರಿಸಿರುವನು. ವೇಣುವಿನ ನಾದಸ್ವರವನ್ನು ಗೋಪಿಕಾಸ್ತ್ರೀಯರು ಮತ್ತು ಹಸುಗಳು ತಲ್ಲೀನವಾಗಿ ಕೇಳುತ್ತಾ ಗೋಪಾಲಸ್ವಾಮಿಯನ್ನೆ ದಿಟ್ಟಿಸಿ ನೋಡುತ್ತಿರುವಂತೆ ಶಿಲ್ಪಿತವಾಗಿದೆ. ಗರ್ಭಗೃಹದ ಬಾಗಿಲುವಾಡವು ಸರಳವಾಗಿದ್ದು, ಸಭಾಮಂಟಪದಲ್ಲಿ ಯಾವುದೇ ಸ್ತಂಭಗಳಿಲ್ಲ. ಮುಖಮಂಟದ ಎಡಬದಿಯಲ್ಲಿ ದಕ್ಷಿಣಾಭಿಮುಖವಾಗಿ ಹನುಮಂತನನ್ನು ಬಲಬದಿಯಲ್ಲಿ ಉತ್ತಾರಭಿಮುಖವಾಗಿ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ದೇವಾಲಯದ ಸುತ್ತಲೂ ನಾಲ್ಕು ಅಡಿ ಎತ್ತರದ ಪೌಳಿಗೋಡೆ ನಿರ್ಮಿಸಲಾಗಿದೆ. ಈ ದೇಗುಲಕ್ಕೆ ಸಮೀಪವಿರುವ ಸಿಹಿನೀರು ಹೊಂಡದ ದ್ವಾರದಲ್ಲಿ ಗೋಪಾಲಸ್ವಾಮಿ ವೃಂದಾವನ ನಿರ್ಮಿಸಿ ಅದರ ರಕ್ಷಣಾರ್ಥವಾಗಿ ಚಿಕ್ಕಗುಡಿ ಕಟ್ಟಲಾಗಿದೆ. ಮೂಲತಃ ಕ್ರಿ.ಶ.೧೭ನೇ ಶತಮಾನದ್ದಾಗಿರಬಹುದಾದ ಈ ದೇವಾಲಯ ಸಂಪೂರ್ಣ ನವೀಕರಣಗೊಂಡಿದೆ.

೧೨. ಯೋಗಾನರಸಿಂಹ ಸ್ವಾಮಿ ದೇವಾಲಯ

ಅಯ್ಯಣ್ಣನ ಪೇಟೆಯ ತ್ಯಾಗರಾಜ ಮಾರುಕಟ್ಟೆಯ ಬಳಿ ಪಶ್ಚಿಮಾಭಿಮುಖವಾಗಿರುವ ದೇಗುಲವಿದು. ವಾಸ್ತುವಿನ್ಯಾಸದಲ್ಲಿ ಗರ್ಭಗೃಹ ಮುಖಮಂಟಪ ಮತ್ತು ಚಿಕ್ಕ ದೀಪಸ್ತಂಭಗಳನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಸಮಾರು ಮೂರು ಅಡಿ ಎತ್ತರದ ಯೋಗಾನರಸಿಂಹನ ಕಪ್ಪುಶಿಲೆಯ ಮೂರ್ತಿಯನ್ನು ಸ್ಥಾಪಿಸಲಾಗಿದೆ. ಉತ್ಕುಟಿತ ಭಂಗಿಯಲ್ಲಿರುವ ನರಸಿಂಹನು ತನ್ನ ನಾಲ್ಕು ಕೈಗಳಲ್ಲಿ ಶಂಖ, ಚಕ್ರವನ್ನು ಎರಡು ಕೈಗಳಲ್ಲಿ ಹಿಡಿದಿದ್ದರೆ, ಉಳಿದ ಎರಡು ಕೈಗಳನ್ನು ಮೊಣಕಾಲಿನ ಮೇಲೆ ಇಳಿ ಬಿಟ್ಟಿರುವನು. ಹಿರಣ್ಯಕಷುವಿನ ಸಂಹಾರಕ್ಕಾಗಿ ವಿಷ್ಣು ತಾಳಿದ ಅವತಾರವಿದು. ಮಾನವನ ದೇಹ, ಸಿಂಹದ ಮುಖಹೊಂದಿ ನರಸಿಂಹ ಎಂದು ಹೆಸರಾದ. ನರಸಿಂಹನು ಕರಂಡ ಮುಕುಟಧಾರಿಯಾಗಿದ್ದು, ಹಾರ, ಸರ, ಉಪವೀತ, ಭುಜವಲ್ಯ, ಕೆಯೂರ, ಕಂಕಣ ಕಾಲ್ಕಡಗ, ಪಾದಾಭರಣಗಳನ್ನು ಯೋಗಾನರಸಿಂಹ ಧರಿಸಿರುವನು. ಗರ್ಭಗೃಹದ ದ್ವಾರವು ಸರಳವಾಗಿದೆ. ಮುಖಮಂಟಪದ ಕಂಬಗಳನ್ನು ಚೌಕ ಮತ್ತು ಅಷ್ಟಮುಖಗಳಲ್ಲಿ ಕಡೆಯಲಾಗಿದೆ. ದೇವಾಲಯದ ಮುಂಬದಿಯಲ್ಲಿ ಐದು ಅಡಿ ಎತ್ತರದ ದೀಪಸ್ತಂಭವಿದೆ. ದೇವಾಲಯದ ಮುಂದಿನ ಕಂಬವೊಂದರ ಮೇಲೆ ಕ್ರಿ.ಶ.೧೮೭೨ರ ಅವಧಿಯ ಕನ್ನಡ ಲಿಪಿಯ ಶಾಸನವು ಈ ಪರಿಸರದಲ್ಲಿ ಶ್ರೀನಿವಾಸ ಸರೋವರ ಇದ್ದ ಬಗ್ಗೆ ಪ್ರಸ್ತಾಪಿಸುತ್ತದೆ.[೭೯] ಆದರೆ ಪ್ರಸ್ತುತ ಈ ಬಗೆಯ ಯಾವುದೇ ಕುರುಹುಗಳು ಈ ಪರಿಸರದಲ್ಲಿಲ್ಲ. ಈ ಹಿಂದೆ ದೇಗುಲದ ಹಿಂಬದಿಯಲ್ಲಿ ಒಂದು ಹೊಂಡವಿದ್ದು, ಕಾಲಾಂತರದಲ್ಲಿ ಅದು ಮುಚ್ಚಿಹೋಯಿತು. ಪ್ರಸ್ತುತ ತಿಳಿಸಿದ ಹೊಂಡವೇ ಶ್ರೀನಿವಾಸ ಸರೋವರವಾಗಿರಬಹುದು.

೧೩. ಪಾಡುರಂಗ ವಿಠಲನ ಗುಡಿ

ತ್ಯಾಗರಾಜ ಮಾರುಕಟ್ಟೆಯ ಬಳಿ ಪೂರ್ವಾಭಿಮುಖವಾದ ದೇವಾಲಯವಿದು. ಗರ್ಭಗೃಹ ಮಾತ್ರ ಮೂಲರೂಪದಲ್ಲಿರುವ ದೇವಾಲಯವನ್ನು ನವೀಕರಿಸಿ ಸಭಾಮಂಟಪವನ್ನು ನಿರ್ಮಿಸಲಾಗಿದೆ. ಗರ್ಭಗೃಹದಲ್ಲಿ ಸುಮಾರು ಎರಡೂವರೆ ಅಡಿ ಎತ್ತರದ ಪಾಡುರಂಗನ ಕಪ್ಪುಕಲ್ಲಿನ ಮೂರ್ತಿಯಿದ್ದು, ಇದು ಹರಿಹರದ ಹೊಳೆಯಲ್ಲಿ ದೊರೆಯಿತೆಂಬ ಪ್ರತೀತಿ ಇದೆ. ಗರ್ಭಗೃಹದ ಬಾಗಿಲುವಾಡವು ವೈಷ್ಣವ ದ್ವಾರಪಾಲಕರು, ಲಲಾಟದಲ್ಲಿ ಗಣೇಶನ ಉಬ್ಬು ಕೆತ್ತನೆಗಳನ್ನೊಳಗೊಂಡಿವೆ. ದೇವಾಲಯದ ಮುಂಬದಿಯಲ್ಲಿ ಏಳು ಅಡಿ ಎತ್ತರದ ದೀಪಸ್ತಂಭವಿದೆ. ಕ್ರಿ.ಶ.೧೭೭೮ರಲ್ಲಿ ರಾಜಾ ವೀರಮದಕರಿನಾಯಕನು ದೇಗುಲಕ್ಕೆ ಜೋಡಿಚಿಕ್ಕೇನಹಳ್ಳಿ ಗ್ರಾಮವನ್ನು ದತ್ತಿ ನೀಡಿದ್ದನು.[೮೦] ಪ್ರತಿವರ್ಷ ವೈಶಾಖ ಹುಣ್ಣಿಮೆಯಂದು ಪಾಂಡುರಂಗ ವಿಠಲಸ್ವಾಮಿಯ ರಥೋತ್ಸವವು ಜರುಗುತ್ತದೆ.

೩.೪ ಶಾಕ್ತ ದೇವಾಲಯಗಳು

ಇಂದು ಭಾರತ ದೇಶದಲ್ಲೆಲ್ಲ ಹಿಂದೂಗಳಲ್ಲಿ ಶಾಕ್ತ ಸಂಪ್ರದಾಯ ಒಂದು ವಿಶಿಷ್ಟ ಆಚರಣೆಯಾಗಿದೆ. ಶಕ್ತಿಯು ಅಂದರೆ ಮಾತೃಸ್ವರೂಪಳಾದ ಸ್ತ್ರೀ ದೇವತೆಯು ನಾನಾ ಸ್ವರೂಪದಲ್ಲಿ ಆರಾಧಿಸಲ್ಪಡುವುದಲ್ಲದೆ, ದೇಶದ ಬೇರೆ ಬೇರೆ ಭಾಗಗಳಲ್ಲಿ ಅಸಂಖ್ಯಾತ ದೇಗುಲಗಳನ್ನು ನಿರ್ಮಿಸಿರುವುದು ಸುವಿಧಿತ. ಪ್ರಸ್ತುತ ಚಿತ್ರದುರ್ಗ ಪರಿಸರದಲ್ಲಿ ಅನೇಕ ಶಾಕ್ತ ದೇವಾಲಯಗಳಿದ್ದು, ಅವುಗಳನ್ನು ಎರಡು ವರ್ಗಗಳಾಗಿ ವಿಂಗಡಿಸಲಾಗಿದೆ.

೩.೪.೧ ಗುಹಾ ದೇವಾಲಯಗಳು

೧. ಬನಶಂಕರಿ ದೇವಾಲಯ

ಕಾಮನಬಾಗಿಲ ಒಳಸುತ್ತಿನ ದಕ್ಷಿಣಕ್ಕಿರುವ ಮದ್ದುಬೀಸುವ ಕಲ್ಲಿನ ಬಳಿಯ ಬೃಹದಾಕಾರದ ಬಂಡೆಯಡಿಯಲ್ಲಿ ನೆಲೆಗೊಂಡಿರುವ ದೇಗುಲವಿದು. ಸಂಪೂರ್ಣ ಗುಹಾಲಯವಾಗಿರುವ ಇದು ಚಿತ್ರದುರ್ಗದ ಪ್ರಾಚೀನ ದೇವಾಲಯಗಳಲ್ಲೊಂದು. ಒಂದು ಚಿಕ್ಕ ಕೋಣೆಯಂತಿರುವ ಇದರಲ್ಲಿ ಎರಡು ಬನಶಂಕರಿಯ ವಿಗ್ರಹಗಳಿವೆ. ಶಾಸನಗಳಲ್ಲಿ ಈ ದೇವಿಯನ್ನು ಬನದದೇವಿ ಎಂದೂ, ಪಾಳೆಯಗಾರರ ವಂಶಾವಳಿಗಳಲ್ಲಿ ಬಂದಮ್ಮ ಎಂದೂ ಉಲ್ಲೇಖಿಸಲಾಗಿದೆ. ಇಲ್ಲಿನ ಹಳೆಯ ವಿಗ್ರಹ ಭಗ್ನವಾಗಿದ್ದರಿಂದ ೧೯೮೩ರಲ್ಲಿ ಬನಶಂಕರಿಯ ಹೊಸ ವಿಗ್ರಹವನ್ನು ಸ್ಥಾಪಿಸಲಾಗಿದೆ. ಇಲ್ಲಿನ ಹಳೆಯ ವಿಗ್ರಹವು ಸರಿಸುಮಾರು ಐದು ಅಡಿ ಎತ್ತರವಿದ್ದು, ಕಪ್ಪುಶಿಲೆಯಲ್ಲಿ ಕಡೆದಿರುವರು. ಸುಖಾಸೀನ ಭಂಗಿಯಲ್ಲಿರುವ ಬನಶಂಕರಿಯು ತನ್ನ ನಾಲ್ಕು ಕೈಗಳಲ್ಲಿ ತ್ರಿಶೂಲ, ಢಮರು, ಖಡ್ಗ ಮತ್ತು ಕಪಾಲ ಹಿಡಿದಿರುವಳು. ಕರಂಡ ಮುಕುಟಧಾರಿಯಾಗಿದ್ದು, ಶಿಲ್ಪದ ಮೇಲಿನ ಕೀರ್ತಿಮುಖದ ಪ್ರಭಾವಳಿಯಲ್ಲಿನ ವಲ್ಲಿ ಅಲಂಕರಣವು ಸುಂದರವಾಗಿದೆ. ಕಿವಿಯಲ್ಲಿ ಕರ್ಣಕುಂಡಲ, ಕಂಠಿಹಾರ, ಭುಜವಲ್ಯ ಧರಿಸಿದಂತೆ ದೇವಿಯು ಶಿಲ್ಪಿತವಾಗಿರುವಳು. ಸುಂದರ ಮತ್ತು ನವಿರಾದ ಕೆತ್ತನೆ ಸಹಿತವಿರುವ ಈ ಶಿಲಾ ಮೂರ್ತಿ ಹೊಯ್ಸಳರ ಅವಧಿಯದು. ಕ್ರಿ.ಶ.೧೬ನೇ ಶತಮಾನದ ಚಿತ್ರದುರ್ಗ ಪರಿಸರದಲ್ಲಿ ದೊರೆತ ಶಾಸನವೊಂದು 'ಬನದ ದೇವಿಯ ಭೂಮಿ' ಎಂದು ಉಲ್ಲೇಖಿಸುತ್ತದೆ.[೯೦] ಇದು ಬನಶಂಕರಿ ದೇವಿಯ ಪೂಜೆಗೆ ನೀಡಿದ ಭೂಮಿಯಾಗಿದ್ದು, ಭೂಮಿಯ ಒಡೆತನವನ್ನು ಸೂಚಿಸುತ್ತದೆ.

ದೇವಾಲಯದ ಮುಂಬದಿಯಲ್ಲಿ ಬಳಪದ ಶಿಲೆಯಲ್ಲಿ ಕಡೆದ ಮೂರು ಅಡಿ ಎತ್ತರದ ವೀರಗಲ್ಲೊಂದನ್ನು ಉತ್ತರಾಭಿಮುಖವಾಗಿ ನಿಲ್ಲಿಸಲಾಗಿದೆ. ವೀರನು ತನ್ನ ಕೈಯಲ್ಲಿ ಬಿಲ್ಲುಹಿಡಿದು ನಿಂತಿರುವನು. ವೀರನು ತನ್ನ ಕೇಶವನ್ನು ಮುಡಿಗಟ್ಟಿರುವನು. ಸೊಂಟದಲ್ಲಿ ಗುದ್ದುಬಾಕನ್ನು ಇರಿಸಿಕೊಂಡಿರುವ ವೀರನು ವೀರಗಚ್ಚೆ ಧರಿಸಿರುವನು. ತನ್ನ ಕಾಲಲ್ಲಿ ವ್ಯಕ್ತಿಯೋರ್ವನನ್ನು ತುಳಿದುಕೊಂಡಿರುವಂತೆ ಶಿಲ್ಪಿತವಾಗಿರುವ ಈ ವೀರಗಲ್ಲು ಶೈಲಿಯ ದೃಷ್ಟಿಯಿಂದ ೧೮ನೇ ಶತಮಾನದ್ದಾಗಿದೆ.

೨) ಏಕನಾಥೇಶ್ವರಿ ದೇವಾಲಯ

ಚಿತ್ರದುರ್ಗ ಕೋಟೆಯ ಮಧ್ಯರಂಗದಲ್ಲಿ ದಕ್ಷಿಣಾಭಿಮುಖವಾಗಿ ಈ ದೇಗುಲವಿದ್ದು, ಬೃಹತ್ ಕಲ್ಲಾಸರೆಯಲ್ಲಿ ನೆಲೆಗೊಂಡಿದೆ. ಚಿತ್ರದುರ್ಗದ ಶಾಸನಗಳು ಮತ್ತು ಸಾಹಿತ್ಯದಲ್ಲಿ ಈ ದೇವತೆಯನ್ನು ಎಕ್ಕನಾಥಿ ಎಕ್ಕನಾದಿ, ಏಕನಾತಿ, ಯಕನಾತಿ ಎಂದು ವಿವಿಧ ಹೆಸರುಗಳಿಂದ ಕರೆದಿರುವರು. ಚಿತ್ರದುರ್ಗದ ಚರಿತ್ರೆಯಲ್ಲಿ ಗಮನಾರ್ಹ ಸ್ಥಾನ ಪಡೆದ ಸ್ಥಳೀಯ ದೇವತೆಗಳಲ್ಲಿ ಅಂದರೆ ನವದುರ್ಗಿಯರಲ್ಲಿ ಹಿರಿಯವಳೆಂದೂ, ಅಜ್ಜಿಯೆಂದೂ ಆಧರಣೀಯಳಾಗಿದ್ದಾಳೆ. ಪ್ರಸ್ತುತ ಈ ದೇವತೆಯನ್ನು ಜನತೆ ಏಕನಾಥೇಶ್ವರಿ ಎಂದೂ ಸಂಬೋಧಿಸುತ್ತಾರೆ.

ಏಕನಾಥೇಶ್ವರಿ ದೇವಾಲಯದಲ್ಲಿ ಗರ್ಭಗೃಹ, ನವರಂಗ, ತೆರೆದಮಂಟಪ, ದೀಪಸ್ತಂಭಗಳ ರಚನೆಗಳ ವಾಸ್ತುವಿನ್ಯಾಸವನ್ನು ಕಾಣಬಹುದು. ಗರ್ಭಗೃಹ ಮತ್ತು ನವರಂಗ ಬೃಹತ್ ಬಂಡೆಯೊಂದನ್ನು ಆಧರಿಸಿ ನಿರ್ಮಿತವಾಗಿವೆ. ಗರ್ಭಗೃಹದಲ್ಲಿನ ಹುಟ್ಟು ಬಂಡೆಯಮೇಲೆ ಕಂಡರಿಸಲಟ್ಟ ರುಂಡರೂಪದಲ್ಲಿರುವ ಏಕನಾಥೇಶ್ವರಿ ಶಿಲ್ಪವು ಪ್ರಭಾವಳಿಸಹಿತ ೬೧ ಸೆಂ.ಮೀ. ಎತ್ತರವಿದೆ. ಕಮಾನಿನ ರಚನೆಯಲ್ಲಿರುವ ಈ ದೇವಿಯ ಮೂರ್ತಿ ಶಿರೋಭಾಗದಿಂದ ಎದೆಯ ಮೇಲ್ಭಟ್ಟದವರೆಗೆ ಮಾತ್ರ ಶಿಲ್ಪಿತವಾಗಿದೆ. ಅಗಲವಾದಮುಖ, ಉದ್ದವಾದ ಕಿವಿಗಳಲ್ಲಿನ ದೊಡ್ಡ ಕರ್ಣಕುಂಡಲ, ಅಗಲವಾದ ನಯನಗಳು, ನೀಳನಾಸಿಕ, ಮತ್ತು ಕೋರೆಹಲ್ಲುಗಳು, ತಲೆಯಮೇಲೆ ಏಳು ನಾಗರಸರ್ಪಗಳ ಶಿರೋಭೂಷಣ, ದೇವಿಯ ಆಚೆ ಈಚೆ ಎರಡು ಚಿಕ್ಕ ಸ್ತಂಭಗಳಿವೆ. ಹೀಗೆ ದೇವಿಯ ಆಕೃತಿ, ಮುಖಭಾವ ಒಟ್ಟಾರೆ ಸೌಮ್ಯ ಮತ್ತು ರೌದ್ರಗಳ ಮಿಶ್ರಣದಂತೆ ಭಾಸವಾಗುತ್ತದೆ. "ಈ ದೇವಿಯನ್ನು ಬಿ.ಲಕ್ಷ್ಮೀನರಸು, ಎಸ್. ಶ್ರೀಕಂಠಯ್ಯ ಹಾಗೂ ಹುಲ್ಲೂರು ಶ್ರೀನಿವಾಸ ಜೋಯಿಸರು ಆಂಧ್ರಭೃತ್ಯರ ಅವಧಿಯ ಬೌದ್ಧ ದೇವತೆ ತಾರಾಭಗವತಿ ಎಂದು ಅಭಿಪ್ರಾಯಪಟ್ಟಿದ್ದಾರೆ. ಅಂದರೆ ಪ್ರಾಚೀನ ಕಾಲದಲ್ಲಿ ಇದು ಬೌದ್ಧದೇವತೆ. ಬುದ್ಧನಿಗೆ ಏಕನಾಥ ಎಂಬ ಹೆಸರೂ ಇದೆ. ಏಕನಾಥನ ಈ ಈಶ್ವರಿಯು ಏಕನಾಥೇಶ್ವರಿಯಾದಳು. ಬೌದ್ಧ ಧರ್ಮವು ದಕ್ಷಿಣಪಥದಲ್ಲಿ ನಶಿಸಿದ ತರುವಾಯ ವೈದಿಕರು ಬೌದ್ಧ ದೇವತೆಗಳನ್ನು ತಮ್ಮ ಅನುಕೂಲಕ್ಕಾಗಿ ತಮ್ಮ ತಮ್ಮ ದೇವತೆಗಳನ್ನಾಗಿ ಮಾರ್ಪಡಿಸಿಕೊಂಡು ಆ ದೇವಾಲಯಗಳನ್ನೆಲ್ಲಾ ತಮ್ಮದೆಂದು ಕರೆದರು. ಅಂತಹ ದೇವಾಲಯಗಳಲ್ಲಿ ಏಕನಾಥೇಶ್ವರಿಯ ದೇವಾಲಯವು ಒಂದು ಎಂಬುದು ಅವರ ಅಂಬೋಣ".[೧] ಆದರೆ ಈ ಮೇಲ್ಕಾಣಿಸಿದ ಸಂಗತಿಯನ್ನು ಪರಿಶೀಲಿಸಿರುವ ಬಿ.ರಾಜಶೇಖರಪ್ಪನವರು ಇದು ಬೌದ್ಧ ದೇವತೆ ತಾರಾಭಗವತಿ ಎಂಬುದನ್ನು ತಿರಸ್ಕರಿಸಿ ಅದು ಏಕನಾಥೇಶ್ವರಿ ಎಂಬ ಬೌದ್ದೇತರ ದೇವತೆಯದೆಂದು ಸಮರ್ಥಿಸಿದ್ದಾರೆ.[೨] ಪೂರ್ಣಕುಂಭದ ರಚನೆಗಳಿರುವ ಗರ್ಭಗೃಹದ ಬಾಗಿಲುವಾಡವು ಚಿಕ್ಕ ಚಿಕ್ಕ ಕೂಡುಗಳಿಂದ ಕೂಡಿದೆ. ಎಕ್ಕನಾಥಿಯ ಅತಿ ಪ್ರಾಚೀನ ಉಲ್ಲೇಖ ಸಿಗುವುದು ಮಡಿವಾಳ ಮಾಚಿದೇವನ ವಚನದಲ್ಲಿ. ಅವರು ತಮ್ಮ ವಚನದಲ್ಲಿ ಚಿತ್ರದುರ್ಗಕ್ಕೆ ಸಮೀಪವಾಗಿರುವ ಉಚ್ಚಂಗಿದುರ್ಗವನ್ನು ಹೆಸರಿಸಿರುವುದರಿಂದ ಅವರು ಪ್ರಸ್ತಾಪಿಸಿರುವ ಎಕ್ಕನಾಥಿ ಚಿತ್ರದುರ್ಗದ ಎಕ್ಕನಾಥಿಯೇ ಆಗಿರುವ ಸಂಭವವಿದೆ.[೩] ಚಿತ್ರದುರ್ಗವು ಕರ್ನಾಟಕದಲ್ಲಿ ಎಕ್ಕನಾಥಿ ಆರಾಧನೆಯ ಪ್ರಮುಖನೆಲೆಯಾಗಿರುವುದು ಗಮನಾರ್ಹ. ಏಕನಾಥೇಶ್ವರಿ ೧೨ನೇ ಶತಮಾನಕ್ಕೆ ಪೂರ್ವದಲ್ಲೇ ಅಸ್ತಿತ್ವದಲ್ಲಿದ್ದಂತೆ ತೋರುತ್ತದೆ. ಚಿತ್ರದುರ್ಗದಲ್ಲಿ ಏಕನಾಥಿಯ ಅತೀ ಪ್ರಾಚೀನ ಉಲ್ಲೇಖವಿರುವ ಶಾಸನವೊಂದು ಇತ್ತೀಚೆಗೆ ಬೆಳಕಿಗೆ ಬಂದಿದ್ದು, ಕ್ರಿ.ಶ. ೧೪೨೦ರಲ್ಲಿ ವಿರುಪಣ್ಣ ಎಂಬ ಚಿತ್ರದುರ್ಗದ ಪ್ರಾಂತ್ಯಪಾಲಕನೊಬ್ಬನು ಏಕನಾಥಿಗೆ ದಂನ್ನಾದೇವಿಯ ತೋಟದ ಸ್ಥಳದ ಭೂಮಿಯೊಂದನ್ನು ದಾನವಾಗಿ ನೀಡಿದ್ದನು.[೪] ಬಹುಶಃ ಈ ಅವಧಿಯಲ್ಲಿಯೇ ಇದರ ಗರ್ಭಗೃಹವೂ ನಿರ್ಮಾಣವಾಗಿರುವ ಸಾಧ್ಯತೆಯಿದೆ.

ನವರಂಗವು ಬೃಹತ್ತಾದ ಬಂಡೆಯನ್ನವಲಂಬಿಸಿದ್ದು, ಯಾವುದೇ ಕಂಬಗಳಿಲ್ಲ. ಕ್ರಿ.ಶ.೧೯೨೯ರಲ್ಲಿ ಪರಿಶೀಲನಾರ್ಥವಾಗಿ ಈ ದೇಗುಲಕ್ಕೆ ಭೇಟಿ ನೀಡಿದ ಎಂ.ಎಚ್. ಕೃಷ್ಣರವರು ನವರಂಗದಲ್ಲಿ ಮೈಸೂರಿನ ದೊರೆ ಮುಮ್ಮಡಿ ಕೃಷ್ಣರಾಜ ಒಡೆಯರು ಪತ್ನಿ ಸಮೇತರಾಗಿ ನಿಂತಿರುವ

ದಂಪತಿಗಳ ಪ್ರತಿಕೃತಿಯ ವರ್ಣಚಿತ್ರವಿದ್ದ ಬಗ್ಗೆ ಉಲ್ಲೇಖಿಸಿದ್ದಾರೆ.[೯೫] ಆದರೆ ಪ್ರಸ್ತುತ ಯಾವುದೇ ವರ್ಣಚಿತ್ರ ದೇವಾಲಯದ ಯಾವ ಭಾಗದಲ್ಲಿಯೂ ಇಲ್ಲ. ನವರಂಗದ ಉತ್ತರದಿಕ್ಕಿನ ಗೋಡೆಗೆ ಅಂದರೆ ಗರ್ಭಗೃಹ ದ್ವಾರದ ಬಲಬದಿಯ ಗೋಡೆಗೆ ಒರಗಿಸಿರುವ ನಗ್ನ ಭೈರವನ ಶಿಲ್ಪವಿರುವುದು. ಇದು ಸುಮಾರು ಒಂದು ಅಡಿ ಎತ್ತರವಿರುವ ಕಪ್ಪುಶಿಲೆಯ ಮೂರ್ತಿಯಾಗಿದೆ. ಜಟಾಧಾರಿ ಭೈರವನು ನಗ್ನನಾಗಿದ್ದು ರುಂಡಮಾಲೆ ಧರಿಸಿರುವನು. ಕರ್ಣಕುಂಡಲ, ಹಾರ, ಕಟಿಬಂಧ, ಕೆಯೂರ, ಕಾಲ್ಕಡಗ, ಧರಿಸಿರುವನು. ತನ್ನ ನಾಲ್ಕು ಕೈಗಳಲ್ಲಿ ತ್ರಿಶೂಲ, ಢಮರು, ಖಡ್ಗ, ಅಕ್ಷಯಪಾತ್ರೆ ಮತ್ತು ರುಂಡವೊಂದನ್ನು ಹಿಡಿದಿರುವನು. ರುಂಡದಿಂದ ಹೊರಬರುತ್ತಿರುವ ರಕ್ತವನ್ನು ನಾಯಿಯೊಂದು ತನ್ನ ಮುಂಗಾಲುಗಳನ್ನೆತ್ತಿ ಸೇವಿಸಲು ಪ್ರಯತ್ನಿಸುತ್ತಿರುವಂತೆ ಶಿಲ್ಪಿತವಾಗಿದೆ.

ಭೈರವನ ಶಿಲ್ಪದ ಎಡಬದಿಯಲ್ಲಿ ದಕ್ಷಿಣಾಭಿಮುಖವಾಗಿ ಅನ್ನಪೂರ್ಣೇಶ್ವರಿಯ ಶಿಲ್ಪವಿದೆ. ಸುಮಾರು ಒಂದು ಅಡಿ ಎತ್ತರದ ಈ ಶಿಲ್ಪವನ್ನು ಕಪ್ಪುಶಿಲೆಯಲ್ಲಿ ಕಡೆಯಲಾಗಿದೆ. ಅನ್ನಪೂರ್ಣೇಶ್ವರಿಯು ತನ್ನ ನಾಲ್ಕು ಕೈಗಳಲ್ಲಿ ಮುಂದಿನ ಕೈಗಳು ಧ್ಯಾನ ಮುದ್ರೆಯಲ್ಲಿದ್ದರೆ, ಹಿಂದಿನ ಎರಡು ಕೈಗಳು ಭಗ್ನವಾಗಿವೆ. ದೇಹದ ಆಭರಣಗಳ ಪೈಕಿ ಕರಂಡಮುಕುಟ, ಕರ್ಣಕುಂಡಲ, ಸರ, ಹಾರ, ಕೆಯೂರ, ಭುಜವಲ್ಯ, ಕಾಲ್ಕಡಗ ಧರಿಸಿದ್ದು, ಚಿಕ್ಕಪೀಠದ ಮೇಲೆ ಸುಖಾಸೀನ ಭಂಗಿಯಲ್ಲಿ ಆಸೀನವಾಗಿರುವಳು. ಶಿಲ್ಪದ ಮೇಲ್ಬದಿಯಲ್ಲಿ ಕೀರ್ತಿಮುಖದ ಪ್ರಭಾವಳಿ ಇದೆ. ನವರಂಗದ ದ್ವಾರವು ಶೈವ ದ್ವಾರಪಾಲಕರಿಂದ ಅಲಂಕೃತವಾಗಿದ್ದು, ದ್ವಾರಬಂಧದಲ್ಲಿ ಪದ್ಮದ ರಚನೆ ಒಳಗೊಂಡಿದೆ.

ಮುಖಮಂಟಪದಲ್ಲಿ ಎಂಟು ಸ್ವತಂತ್ರ ಕಂಬಗಳಿವೆ. ಇವುಗಳನ್ನು ಚೌಕಾಕಾರ, ಅಷ್ಟಮುಖ ಮತ್ತು ಹದಿನಾರು ಕೋನಗಳಿಂದ ಕಡೆಯಲಾಗಿದ್ದು, ವಿಜಯನಗರ ಶೈಲಿಯಲ್ಲಿವೆ. ನವರಂಗದ ದ್ವಾರದ ಬಲಬದಿಯ ಕಲ್ಲಾಸರೆಯಲ್ಲಿ ಕತ್ತಿಹಿಡಿದ ವೀರನ ಶಿಲ್ಪವಿದೆ. ಈತ ತನ್ನ ಬಲಗೈಯಲ್ಲಿ ಖಡ್ಗವನ್ನು ವೀರಾವೇಶದಿಂದ ಎತ್ತಿಹಿಡಿದಿದ್ದರೆ, ಇಳಿಬಿಟ್ಟಿರುವ ಎಡಗೈಯಲ್ಲಿ ಒರೆಯಂತ ಸಾಧನ ಹಿಡಿದಿದ್ದಾನೆ. ವೀರಗಚ್ಚೆ ಹಾಕಿದ್ದು, ರಾಜಪೋಷಾಕು ತೊಟ್ಟು ಸರ್ವಾಭರಣ ಭೂಷಿತನಾಗಿದ್ದಾನೆ. ಸೊಂಟದ ಬಲಭಾಗದಲ್ಲಿ ಕಠಾರಿ ಸಿಕ್ಕಿಸಿಕೊಂಡಿರುವನು. ಈತ ಧರಿಸಿರುವ ಪೇಟ ಸಾಧಾರಣವಾಗಿ ನಾಯಕ ಅರಸರು ಧರಿಸುವ ಪೇಟದಂತೆಯೇ ಇದೆ. ಚಿತ್ರದುರ್ಗ ಕೋಟೆಯಲ್ಲಿ ನಾಯಕ ಅರಸರಕಾಲದ ವಿವಿಧ ಸ್ಮಾರಕಗಳಲ್ಲಿ ಕಂಡುಬಂದಿರುವ ರಾಜರು ಮತ್ತು ರಾಜಸಂಬಂಧಿಗಳ ಶಿಲ್ಪಗಳನ್ನು ಇದು ನಿಕಟವಾಗಿ ಹೋಲುತ್ತದೆ. ಈ ಶಿಲ್ಪ ಮತ್ತು ಏಕನಾಥೇಶ್ವರಿ ದೇವಾಲಯ ಪರಸ್ಪರ ನಿಕಟ ಸಂಬಂಧ ಹೊಂದಿವೆ. ಈ ನಿಟ್ಟಿನಲ್ಲಿ ಏಕನಾಥಮ್ಮನ ದೇಗುಲ ನಿರ್ಮಾಣಕ್ಕೆ ಸಂಬಂಧಿಸಿದಂತೆ ಈ ಅರಸ ವಂಶಾವಳಿಗಳು ಪ್ರಾಸ್ತಪಿಸುವ ಕಥೆಯೊಂದು ಕೂತುಹಲಕರ ಮತ್ತು ಸ್ವಾರಸ್ಯಕರವಾದದ್ದು. "ತಿಮ್ಮಣ್ಣ ನಾಯಕನು ನೆಲ್ಲಿಕಾಯಿ ಸಿದ್ದಪ್ಪನಗಿರಿಯ ಸುತ್ತಿನಕೋಟೆ, ರಣಮಂಡಲ ಸುತ್ತಿನಕೋಟೆ ಮತ್ತು ವನಕೆಗಂಡಿ ಬಾಗಿಲು ಸುತ್ತಿನ ಕೋಟೆ ಹೀಗೆ ಒಟ್ಟು ಮೂರು ಸುತ್ತಿನ ಕೋಟೆಗಳನ್ನು ನಿರ್ಮಿಸತೊಡಗಿದ. ಇವುಗಳನ್ನು ಬೆಳಗಿನಿಂದ ಸಂಜೆಯವರೆಗೆ ಕಟ್ಟಿದರೂ ಮರುದಿನ ಬೆಳಗ್ಗೆ ವೇಳೆಗೆ ಪೂರ್ತಿ ಬಿದ್ದು ಹೋಗುತ್ತಿದ್ದವಂತೆ. ಪ್ರತಿನಿತ್ಯವೂ ಈ ಘಟನೆ ಮುಂದುವರೆಯ ತೊಡಗಿದಾಗ ನಾಯಕ ಶಕುನ ಕೇಳುತ್ತಾನೆ. ಆಗ ಏಕನಾಥಮ್ಮಳ ಯಳವರ್ತಿಯ ಹಳೇಪೈಕದ ಗಿರಿಯನೆಂಬ ದಂಡಿಗೆದಾಸಯ್ಯನ ಮೈಹೊಕ್ಕು ನಾನು ಏಕನಾಥಿ, ಇಲ್ಲಿರುವ ದೇವತೆಗಳೆಲ್ಲ ನನ್ನ ಅಧೀನರು. ನಾನು ಇಲ್ಲಿ ಒಂದು ಬಂಡೆಯಲ್ಲಿ ಮೂಡಿದ್ದೇನೆ. ಈ ಕೋಟೆ ನಿಲ್ಲದಂತೆ ಮಾಡಿರುವವಳು ನಾನೇ. ನನ್ನ ಜಾಗದಲ್ಲಿ ಬಂದು ನನ್ನ ದರ್ಶನ ಮಾಡದೆ, ನನ್ನ ಅಪ್ಪಣೆ ಇಲ್ಲದೆ ನೀನು ಇಲ್ಲಿ ಊರು ನಿರ್ಮಿಸಲು ಆಗದು ಎಂದು ಪರಿಚಾರಿಸಿದಳಂತೆ. ಹೀಗೆ ತನ್ನ ನೆಲೆಯಲ್ಲಿರುವ ಏಕನಾಥೇಶ್ವರಿಯ ಪ್ರಭಾವವನ್ನು ಮನಗಂಡ ಮತ್ತಿ ತಿಮ್ಮಣ್ಣನಾಯಕ ದೇವಿಗೆ ಪಟ್ಟದ ಕೋಣವೊಂದನ್ನು ಬಿಡುತ್ತಾನೆ. ಆ ವರ್ಷದೊಳಗೆ ದೇಗುಲ ಕಟ್ಟಿಸುತ್ತೇನೆಂದು ಹರಕೆ ಕಟ್ಟುತ್ತಾನೆ. ಆಗ ಕೋಟೆಗಳು ಗಟ್ಟಿಯಗಿ ನಿಲ್ಲುತ್ತವೆ. ನಂತರ ಹರಕೆ ತೀರಿಸುವ ನಿಟ್ಟಿನಲ್ಲಿ ಈ ನಾಯಕ ಏಕನಾಥಮ್ಮನ ಗುಡಿ ದೀಪಸ್ತಂಭಗಳನ್ನು ನಿರ್ಮಿಸಿದನು.[೯೬] ಈ ಮೇಲ್ಕಾಣಿಸಿದ ಅಂಶಗಳ ಹಿನ್ನೆಲೆಯಲ್ಲಿ

ಈ ದೇಗುಲದ ನಿರ್ಮಾಪಕನಾದ ಮತ್ತಿ ತಿಮ್ಮಣ್ಣನಾಯಕನು ದೇವತೆಯ ನಿಷ್ಠಾವಂತ ಭಕ್ತನಾಗಿದ್ದ ಸಂಗತಿ ಸುಸ್ಪಷ್ಟ. ಈ ಮೇಲೆ ವಿವರಿಸಿದ ನವರಂಗದ ಹುಟ್ಟು ಬಂಡೆಯ ಮೇಲಿನ ವೀರಶಿಲ್ಪವು ದುರ್ಗದ ನಾಯಕ ಅರಸರ ಪ್ರಥಮದೊರೆ ಮತ್ತಿ ತಿಮ್ಮಣ್ಣನಾಯಕನದೆಂಬುದು ಇತಿಹಾಸಕಾರರ ಅಭಿಮತ.[೬೭]

ಮುಖಮಂಟಪದ ಮೇಲೆ ಚಿತ್ರದುರ್ಗ ನಾಯಕ ಅರಸರ ಅವಧಿಯಲ್ಲಿ ಗಾರೆಯಿಂದ ನಿರ್ಮಿಸಿದ ಕೂಡುಗಳಿದ್ದು, ವಿವಿಧ ದೇವತಾ ಶಿಲ್ಪಗಳ ರಚನೆಗಳಿಂದ ಕೂಡಿವೆ. ಈ ದೇವತಾಶಿಲ್ಪಗಳು ಗುರುತಿಸಲಾಗದಷ್ಟು ಹಾಳಾಗಿವೆ. ಕೂಡುಗಳು ಕೀರ್ತಿಮುಖ, ಹೂಬಳ್ಳಿ, ವಜ್ರಪಟ್ಟಿಕೆ, ಗಿಳಿ, ಅರೆಗಂಬಗಳ ರಚನೆಗಳಿಂದ ಅಲಂಕೃತಗೊಂಡಿವೆ. ದೇವಾಲಯದ ಮುಂದಿನ ೧೫ ಮೀಟರ್ ಎತ್ತರದ ದೀಪಸ್ತಂಭ ಮತ್ತು ಉಯ್ಯಾಲೆ ಕಂಬವನ್ನು ಇಮ್ಮಡಿ ಮದಕರಿನಾಯಕ ನಿರ್ಮಿಸಿದನು. ಈ ಸ್ತಂಭದ ಕೆಳಭಾಗದಲ್ಲಿ ಏಕನಥೇಶ್ವರಿಗೆ ಅಭಿಮುಖವಾಗಿ ಕೈಮುಗಿದು ನಿಂತಿರುವ ೩.೫ ಅಡಿ ಎತ್ತರದ ಇಮ್ಮಡಿ ಮದಕರಿನಾಯಕನ ಉಬ್ಬುಶಿಲ್ಪವನ್ನು ಕಡೆಯಲಾಗಿದೆ. ಅತ್ಯಂತ ಧೃಡಕಾಯ ಶರೀರ ಹೊಂದಿದ ಇಮ್ಮಡಿ ಮದಕರಿನಾಯಕ ಏಕನಾಥೇಶ್ವರಿಗೆ ಕೈಮುಗಿದು ನಿಂತಿರುವನು. ಚೀಲದೋಪಾದಿಯ ನಾಯಕ ಅರಸರ ಕಿರೀಟ, ಕರ್ಣಕುಂಡಲ, ಕಂಠಾಭರಣ, ಭುಜವಲ್ಯ, ತೋಳ್ಬಂದಿ, ಉಂಗುರ, ಸೊಂಟದಪಟ್ಟಿ, ಕಾಲ್ಕಡಗ ಧರಿಸಿರುವನು. ಸೊಂಟಪಟ್ಟಿಯಲ್ಲಿ ಕಠಾರಿ ಸಿಕ್ಕಿಸಿಕೊಂಡಿರುವನು. ಇದೇ ದೀಪಸ್ತಂಭದ ಪೂರ್ವಪಾರ್ಶ್ವದಲ್ಲಿ ಪೂರ್ವಾಭಿಮುಖವಾಗಿ ಕೈಮುಗಿದು ನಿಂತಿರುವ ನಾಗತಿಯಶಿಲ್ಪವಿದೆ. ನಾಯಕ ಅರಸರ ದಾಖಲೆಗಳು ತಿಳಿಸುವಂತೆ ಈ ಶಿಲ್ಪ ಕನಕಮ್ಮ ನಾಗತಿಯದು. ಪ್ರಣಾಮ ಮುದ್ರೆಯಲ್ಲಿರುವ ನಾಗತಿಯು ಕಂಠಿಹಾರ, ಕರ್ಣಕುಂಡಲ, ಕುಚಬಂಧ, ಕೆಯೂರ, ಉಂಗುರ, ಸೊಂಟಪಟ್ಟಿ, ಕಾಲ್ಕಡಗ ಧರಿಸಿರುವಳು. ನಾಗತಿ ತೊಟ್ಟ ಉಡುಗೆಯು ನರಿಗೆ ನರಿಗೆಯಾಗಿರುವಂತೆ ಶಿಲ್ಪಿತವಾಗಿರುವುದು. ನಾಗತಿಯ ಶಿಲ್ಪದ ಎರಡೂ ಭುಜದ ಮೇಲೆ ಗಿಳಿಗಳನ್ನು ಕಡೆದಿರುವುದು ಶಿಲ್ಪದ ಅಂದವನ್ನು ಇಮ್ಮಡಿಗೊಳಿಸಿದೆ. "ನಾಯಕ ಅರಸರ ವಂಶಾವಳಿಗಳಲ್ಲಿ ಏಕನಾಥಮ್ಮನ ಉಚ್ಚಾಯ ಕುಂಡ್ರುವ ಗಾಳಿಮಂಟಪವೊಂದು ಭರಮಣ್ಣನಾಯಕನ ಕಾಲದಲ್ಲಿ ನಿರ್ಮಾಣವಾಯಿತೆಂಬ ಉಲ್ಲೇಖವಿದ್ದು, ಅದು ಏಕನಾಥೇಶ್ವರಿ ದೇವಾಲಯದ ಮುಂದಿನ ಉಯ್ಯಾಲೆ ಕಂಬದ ಹಿಂದಿನ ಮಗ್ಗುಲಲ್ಲಿರುವ ಕಲ್ಲು ಕಟ್ಟಡವೇ ಆಗಿರಬಹುದು."[೬೮] ಈ ಮಂಟಪವನ್ನು ಭರಮಣ್ಣನಾಯಕನ ಮಂಟಪ ಎಂದು ಕರೆಯಬಹುದು.

ಏಕನಾಥೇಶ್ವರಿ ದೇವಾಲಯದ ಬಲಬದಿಯ ಬೃಹದಾಕಾರದ ಹುಟ್ಟು ಬಂಡೆಯ ಉತ್ತರ ಪಾರ್ಶ್ವದಲ್ಲಿರುವ ಶಿಲ್ಪ ಗಮನ ಸೆಳೆಯುತ್ತದೆ. ಬಂಡೆಯ ಇಳಿಜಾರು ಮೇಲ್ಮೈಯಲ್ಲಿ ಎರಡು ಸ್ತಂಭಗಳು ಹಾಗೂ ಒಂದು ದುಂಡು ಕಮಾನಿನ ಚೌಕಟ್ಟಿನ ನಡುವೆ ಒಬ್ಬ ವ್ಯಕ್ತಿ ಕೈಮುಗಿದುಕೊಡು ಕುಳಿತಿರುವಂತೆ ಕಡೆಯಲಾಗಿರುವ ಉಬ್ಬು ಶಿಲ್ಪವಿದ್ದು, ಸ್ಥಳೀಯವಾಗಿ ಈ ಶಿಲ್ಪವನ್ನು ಬುದ್ಧ, ಜಿನ, ತೀರ್ಥಕರ ಎಂದು ಕರೆಯುವರು.[೬೯] ಎರಡು ಸ್ತಂಭಗಳು ಸಹಿತ ಕಮಾನಿನೊಳಗೆ ಪ್ರಣಾಮ ಮುದ್ರೆಯಲ್ಲಿ ಕುಳಿತಿರುವ ಈ ವ್ಯಕ್ತಿಯು ಕರ್ಣಾಭರಣ, ಕೊರಳಲ್ಲಿ ಸರ, ಕೈಕಂಕಣ, ತೋಳ್ಬಂದಿ ಧರಿಸಿರುವ ಇವನ ತಲೆಯ ಮೇಲೆ ಛಾಮರದ ರಚನೆಯಿದೆ. ಇವನ ಬಳಿ ಶಿವಲಿಂಗ, ಆದರ ಬಲಕ್ಕೆ ಪೂಜಿಸುತ್ತಿರುವ ಪೂಜಕ, ಎಡಕ್ಕೆ ನಂದಿಯ ಶಿಲ್ಪಗಳಿದ್ದು, ಇಲ್ಲಿ ಚಿತ್ರಿತನಾಗಿರುವ ವ್ಯಕ್ತಿ ಒಬ್ಬ ಶೈವ ಪಂಥೀಯನಾಗಿದ್ದನೆಂಬುದನ್ನು ಶೃತಪಡಿಸುತ್ತವೆ. ಇವನು ಉಡುಪುಧಾರಿಯಾಗಿದ್ದು, ಪಾದದ ಬಳಿ ಪಂಚೆಯ ನರಿಗೆಯ ಚಿತ್ರಣವಿದೆ. ತನ್ನ ಕೇಶರಾಶಿಯನ್ನು ಮುಡಿಕಟ್ಟಿ ಎಡಭಾಗಕ್ಕೆ ಬಿಟ್ಟುಕೊಂಡಿರುವನು. ಇವನ ಬಲಬದಿಯಲ್ಲಿ ತುದಿಯನ್ನು ಮೇಲ್ಮುಖವಾಗಿ ನಿಲ್ಲಿಸಿರುವ ಒಂದು ಖಡ್ಗವೂ ಇರುವುದು ಗಮನಾರ್ಹ. ಈ ಶಿಲ್ಪದ ಲಕ್ಷಣಗಳನ್ನು ಅವಲೋಕಿಸಿದರೆ ಇವನು ಒಬ್ಬ ವೀರ, ಬಹುಶಃ ಒಬ್ಬ ರಾಜ ಅಥವಾ ರಾಜಸಂಬಂಧಿ ಅಥವಾ ರಾಜನ ಮುಖ್ಯ ಸೇವೆಯಲ್ಲಿದ್ದ ಒಬ್ಬ ಪ್ರತಿಷ್ಠಿತನದಿರಬಹುದು ಎನಿಸುತ್ತದೆ. ಈ ಶಿಲ್ಪದ ಮುಂಬದಿಯ ಪುಟ್ಟ ಗವಿಯಲ್ಲಿ ಹಾಳಾದ ಶಿಲಾಪೀಠಗಳು, ಕಲ್ಲು ಚಪ್ಪಡಿಗಳಿವೆ. ಈ ಗವಿಯಲ್ಲಿಯೇ

ಈ ಹಿಂದೆ ಹೊಯ್ಸಳ ಶೈಲಿಯ ವೀರಭದ್ರ ದೇವರ ಶಿಲ್ಪ ದೊರೆತಿದ್ದು, ಅದು ಪ್ರಸ್ತುತ ರಾಜ್ಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯಲ್ಲಿದೆ.[೧೦೦] ಪಾಳೆಯಗಾರರ ಹಸ್ತಪ್ರತಿಗಳಲ್ಲಿ ಪ್ರಸ್ತಾಪಿಸಿರುವ ಕ್ರಿ.ಶ.೧೪ನೇ ಶತಮಾನದ ವೀರ ಮಲ್ಲಣ್ಣ ಒಡೆಯನ ಮನೆದೇವರು 'ಗವಿವೀರಣ್ಣ' ದೇವರು ಇದೇ ಇರಬಹುದು. ಶೈಲಿಯ ದೃಷ್ಟಿಯಿಂದ ವ್ಯಕ್ತಿ ಈ ಶಿಲ್ಪವು ಹೊಯ್ಸಳರ ಕಡೆಗಾಲ ಅಥವಾ ವಿಜಯನಗರದ ಆದಿಕಾಲಕ್ಕೆ ಸೇರುತ್ತದೆ. ಒಟ್ಟಾರೆ ಈ ಶಿಲ್ಪಿತ ವ್ಯಕ್ತಿ ಒಬ್ಬ ಶೈವ ಪಂಥೀಯನೆಂಬುದು ಮಾತ್ರ ಸ್ಪಷ್ಟ.

ಚಿತ್ರದುರ್ಗದ ದೇವತೆಗಳ ಹೆಸರು ಗ್ರಾಮೀಣರಲ್ಲಿ ಮತ್ತೆ ಮತ್ತೆ ಕೇಳಿಬರುತ್ತದೆ. ಇವರು ಏಕಾನಾಥೇಶ್ವರಿಯನ್ನು ಯಕನಾತಿ ಎಂದು ಬದಲಾಯಿಸಿಕೊಂಡಿದ್ದಾರೆ. ಚಿತ್ರದುರ್ಗದ ನಾಯಕ ಅರಸರು ಏಕನಾಥಿಯ ಅಪ್ಪಣೆಯನ್ನು ಪಡೆದು ಯುದ್ಧಕ್ಕೆ ಹೊರಡುತ್ತಿದ್ದರು. ಅವರು,

ಮೇಲು ದುರ್ಗದ ಮೇಲೆ ಏಕನಾಥಿ ಎಲ್ಲಮ್ಮಗೆ
ಕಾಯೊಡೆದು ಕಯ್ಯ ಮುಗಿದು।
ಏನಮ್ಮ ನನತಾಯಿ ಬಿನ್ನಾಹ ಮಾಡೇನು
ಎನಗೊಂದು ಮಾತನ್ಹೇಳು।
ಕತ್ತಿಯ ಕಾರ್ಯವು ಕೈಗೂಡಿಬಂದರೆ।
ಹಸ್ತದ ಪುಷ್ಪವ ಕೊಡು।[೧೦೧]

ಎಂದು ಏಕನಾಥೇಶ್ವರಿಯನ್ನು ಪ್ರಾರ್ಥಿಸುತ್ತಿದ್ದರು. ಇದಲ್ಲದೆ ಜನರು ಸಹ ದೇವಿಗೆ ತಮ್ಮ ಸೇವೆ ಸಲ್ಲಿಸಿ, ಅವಳಲ್ಲಿ ಕಷ್ಟನಿವಾರಣೆಗಾಗಿ ಭಿನ್ನವಿಸುತ್ತಿದ್ದರು. ಅವರು,

ಕೆಂಡದಂಥ ಹೂವು ಕೊಂಡು ಹೋಗೊಜಾಣ
ಕೊಂಡಣ್ಣ ಇದರ ಬೆಲೆಯೇನು। ಮೇಲುದುರುಗದ
ಕೆಂಡದಂಥೋಳ ತುರುಬಿಗೆ॥
ಬಟ್ಟಲಂಥ ಕಣ್ಣು ಬಿಟ್ಟು ನೋಡು ಏಕನಾಥಮ್ಮ
ಪಟ್ಟಣದಾಗೆ ಬಡವರನ। ನಾವಿದ್ದೀವಿ
ಬಿಟ್ಟು ನೋಡೆ ನಿನ್ನ ಕಿರುಗಣ್ಣ॥
ಕೇಳಿ ಕೊಳ್ಳೊನ ಬಾರೆ ಕೆಂಡಗಣ್ಣಿನಮ್ಮ
ದುಂಡುಗಲ್ಲಾಗೆ ಇರುವಳನ। ಏಕನಾಥಮ್ನ
ಕೇಳಿಕೊಳ್ಳೊನ ಬಾರೆ ಸೆರಗ್ಹೊಡ್ಡಿ॥[೧೦೨]

ದೊಡ್ಡದಾದ ಕಣ್ಣನ್ನು ಹೊಂದಿದ್ದು, ದುಂಡುಗಲ್ಲಿನ ಬಂಡೆಯಲ್ಲಿ ಒಡಮೂಡಿರುವ ಏಕನಾಥಮ್ಮನಿಗೆ ಭಕ್ತರು ಈ ರೀತಿ ಮೊರೆಯಿಟ್ಟಿದ್ದನ್ನು ಕಾಣಬಹುದು. ಅವರು ದೇವಿಯನ್ನು ಕುರಿತು,

ಏಕನಾಥಿ ಎಲ್ಲಮ್ಮನ ಮಕವೊಂದ ಸಿರಿಕಾಣೆ
ಸೆಖೆ ಬಾಳವೆಂದು ಬೆವೆತಳೆ। ಮದಕೇರಣ್ಣ
ರತುನದ ಬೀಸಣಿಗೆ ಕಳಿವ್ಯಾನೆ[೧೦೩]

ಎಂದು ಹಾಡಿದ್ದಾರೆ. ಏಕನಾಥಿ ಸೆಖೆಯಿಂದ ಬೆವೆತಿದ್ದನ್ನು ಮನಗಂಡ ಮದಕೇರಣ್ಣನು ರತ್ನಖಚಿತವಾದ ಬೀಸಣಿಗೆ ಕಳುಹಿಸಿದ್ದನ್ನು ಜನಪದರು ಕೊಂಡಾಡಿರುವರು.

ಏಕನಾಥೇಶ್ವರಿ ದೇವಿಯ ಜಾತ್ರಾ ಮಹೋತ್ಸವ ಬಹು ವಿಜೃಂಬಣೆಯಿಂದ ವರ್ಷಕೊಮ್ಮೆ ನಡೆಯುತ್ತದೆ. ಇದು ಯುಗಾದಿಯ ನಂತರ ೧೫ ದಿನಗಳಿಗೆ ಬರುವ ಶನಿವಾರದಂದು ನಡೆಯುತ್ತದೆ. ಇದರ ಅಂಗವಾಗಿ ನಡೆಯುವ ದೊಡ್ಡ ಜಾತ್ರೆ ಮತ್ತು ಸಿಡಿ ಆಕರ್ಷಣೀಯ. ಮೊದಲಿಗೆ ಈ ಜಾತ್ರೆಯು ಬೆಟ್ಟದ ಮೇಲಿನ ದೇವಾಲಯದ ಮುಂಬದಿಯ ಬಯಲಿನಲ್ಲಿ ಜರುಗುತಿತ್ತು. ಈಗ ಬೆಟ್ಟದ ಕೆಳಗಿರುವ ಈ ದೇವಿಯ ಪಾದಗಟ್ಟೆಯ ಬಳಿ ಜಾತ್ರೆಯನ್ನು ನಡೆಸಲಾಗುತ್ತಿದೆ. ಈ ಪಾದಗಟ್ಟೆಯನ್ನು ಚಿತ್ರದುರ್ಗದ ನಾಯಕ ಅರಸನಾದ ಭರಮಣ್ಣನಾಯಕನು ಕಟ್ಟಿಸಿದನು. ಸಿಡಿ ಎಂದರೆ ಸುಮಾರು ಆರೇಳು ಅಡಿ

ಎತ್ತರದ ಬಲವಾದ ಮರದ ಕಂಬವನ್ನು ನೆಟ್ಟು ಅದರಮೇಲೆ ಸುಲಭವಾಗಿ ತಿರುಗಬಲ್ಲ ಚೌಕಾಕಾರದಿಂದ ಮಾಡಿದ ತಿರುಗಣೆಗೆ ಸುಮಾರು ೩೦ ಅಡಿ ಉದ್ದದ ಮರದ ತೊಲೆಯೊಂದನ್ನು ಅಡ್ಡವಾಗಿ ಅಳವಡಿಸಿರುತ್ತಾರೆ. ಇದನ್ನು ಹೂವು ಮತ್ತು ಸೊಪ್ಪುಗಳಿಂದ ಶೃಂಗರಿಸಿರುತ್ತಾರೆ. ಇದರ ಕೆಳಭಾಗದಲ್ಲಿ ಮುಖ ಅಡಿಮಾಡಿ ಸಿಡಿ ಆಡುವ ಭಕ್ತನ ಸೊಂಟಕ್ಕೂ ಕಂಬಕ್ಕೂ ಬಟ್ಟೆಗಳ ಸಹಾಯದಿಂದ ಬಿಗಿಯಾಗಿ ಕಟ್ಟಿ ಕಂಬದ ಇನ್ನೊಂದು ತುದಿಯಿಂದ ಹಗ್ಗದ ಸಹಾಯದಿಂದ ಮೂರು ಸುತ್ತು ತಿರುಗಿಸುತ್ತಾರೆ. ಸಿಡಿ ಆಡುವ ಭಕ್ತನು ಮಡಿ ಉಡುಗೆ ತೊಟ್ಟಿದ್ದು, ಸುತ್ತಿ ಬರುತ್ತಾ ದೇವಿಗೆ ನಮಿಸುತ್ತಾ, ಕೈಕಾಲುಗಳನ್ನು ಆಡಿಸುತ್ತಿರುತ್ತಾನೆ. ಆ ಸಮಯದಲ್ಲಿ ಕಹಳೆ, ಡೋಲು, ತಮ್ಮಟೆಗಳನ್ನು ಬಾರಿಸುತ್ತಾ ಭಕ್ತಿ ಭಾವದಿಂದ ಹರಕೆ ಮಾಡಿಕೊಂಡು ಸ್ತ್ರೀಪುರುಷ ಭಕ್ತರು ತಾರತಮ್ಯವಿಲ್ಲದೆ ಸಿಡಿಯಾಡುತ್ತಾರೆ. ನಾಯಕ ಅರಸರ ಅವಧಿಯಲ್ಲಿ ಏಕನಾಥಮ್ಮನಿಗೆ ಬಂಡಿಸಿಡಿ ಸೇವೆ ನಡೆಯುತ್ತಿದ್ದುದು ಗಮನಾರ್ಹ.

೩.೪.೨. ರಾಚನಿಕ ದೇವಾಲಯಗಳು

೧) ರಾಜಾ ಉತ್ಸವಾಂಬೆ ಉಚ್ಚಂಗಿ ಎಲ್ಲಮ್ಮ ದೇವಾಲಯ

ಚಿತ್ರದುರ್ಗದ ಸಿದ್ದಯ್ಯನ ಬಾಗಿಲಿನಿಂದ ಕಾಮನಬಾಗಿಲಿಗೆ ತೆರಳುವ ಮಾರ್ಗದ ಬಲಬದಿಯಲ್ಲಿ ಉತ್ಸವಾಂಬೆಯ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯವನ್ನು ಸ್ಥಳೀಯವಾಗಿಯೇ ವಿಪುಲವಾಗಿ ದೊರೆಯುವ ಕಣಶಿಲೆಯಿಂದ ಕಟ್ಟಲಾಗಿದೆ. ದೇವಾಲಯದಲ್ಲಿರುವ ಉತ್ಸವಾಂಬೆಯ ಶಿಲಾಮೂರ್ತಿಯನ್ನು ಪ್ರತಿಷ್ಠಾಪಿಸಿದ ಸಂಗತಿ ಸ್ವಾರಸ್ಯಕರವಾದದ್ದು. ಚಿತ್ರದುರ್ಗದ ನಾಯಕ ಅರಸರು ಉತ್ಸವಾಂಬೆಯ ಪರಮ ಭಕ್ತರಾಗಿದ್ದರು. ದುರ್ಗದ ನಾಯಕ ಅರಸ ಇಮ್ಮಡಿ ಮದಕರಿನಾಯಕನಿಗೆ ಪುತ್ರಸಂತಾನವಿರಲಿಲ್ಲ. ನಾಯಕನು ಸಂತಾನಾಪೇಕ್ಷೆಯಿಂದ ಶ್ರೀಉತ್ಸವಾಂಬೆಯ 'ಇದರೆತ್ತಿ' ಮಾಡಿದನು. ಅಂದರೆ ಅವನ ಪತ್ನಿ ಬೇವನ್ನುಟ್ಟು ದೇವಿಯ ದರ್ಶನಮಾಡಿ ಭಕ್ತಿಯಿಂದ ಪೂಜಿಸಿದಳು. ದೇವತೆಯ ವರಪ್ರಸಾದದಿಂದ ಅವರಿಗೆ ಒಬ್ಬ ಮಗಳು ಜನಿಸಿದಳು. ಪಾಳೆಯಗಾರನು ಸಂತುಷ್ಟನಾಗಿ ಮಲಗಿರುವಾಗ ದೇವತೆಯು ಕನಸಿನಲ್ಲಿ ಬಂದು, ತನ್ನನ್ನು ಉಚ್ಚಂಗಿದುರ್ಗದಿಂದ ತಂದು ಚಿತ್ರದುರ್ಗದಲ್ಲಿ ಪ್ರತಿಷ್ಠಾಪಿಸುವಂತೆ ಅಪ್ಪಣೆಯಾಯಿತಂತೆ. ಕ್ರಿ.ಶ.೧೬೬೫ರಲ್ಲಿ ಪೂಜಾರಿ ಕೆಂಚಯ್ಯ ಮತ್ತು ಚೌಡಿಕೆ ಸಿದ್ದಯ್ಯ ಎಂಬುವರು ಉಚ್ಚಂಗಿದುರ್ಗದಿಂದ ಮೂರ್ತಿಯನ್ನು ಹೊತ್ತುತಂದು ಪ್ರತಿಷ್ಠಾಪಿಸಿದರು. ಪ್ರಾರಂಭದಲ್ಲಿ ಇದಕ್ಕೆ ಒಂದು ಚಿಕ್ಕಗುಡಿ ಕಟ್ಟಲಾಯಿತು. ತರುವಾಯ ಭರಮಣ್ಣನಾಯಕ ಮತ್ತು ಹಿರೇ ಮದಕರಿನಾಯಕನ ಅವಧಿಯಲ್ಲಿ ಭವ್ಯ ಶಿಲಾ ದೇಗುಲವನ್ನು ನಿರ್ಮಿಸಲಾಯಿತು. ದೇವಾಲಯದ ವಾಸ್ತುವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ಸಭಾಮಂಟಪ, ಮುಖಮಂಟಪ ದ್ವಾರ ಮತ್ತು ಪ್ರಾಕಾರಮಂಟಪಗಳನ್ನು ಕಾಣಬಹುದು.

ಗರ್ಭಗೃಹದಲ್ಲಿ ಸಮಾರು ಮೂರುವರೆ ಅಡಿ ಎತ್ತರದ ಕಪ್ಪುಶಿಲೆಯ ಉಚ್ಚಂಗಿ ಎಲ್ಲಮ್ಮನ ಶಿಲಾಮೂರ್ತಿ ಸ್ಥಾಪಿಸಲಾಗಿದೆ. ಈ ಹಿಂದೆ ವಿವರಿಸಿದಂತೆ ಇದು ಉಚ್ಚಂಗಿ ಮೂಲದಿಂದ ತಂದದ್ದು. ಸುಖಾಸೀನ ಭಂಗಿಯಲ್ಲಿ ಕುಳಿತಿರುವ ದೇವಿಯು ತನ್ನ ನಾಲ್ಕೂ ಕೈಗಳಲ್ಲಿ ತ್ರಿಶೂಲ, ಢಮರು, ಖಡ್ಗ ಮತ್ತು ಕಪಾಲ ಹಿಡಿದಿರುವಳು. ಕರಂಡಮುಕುಟ ಧರಿಸಿದ ಶಿಲ್ಪದ ಮೇಲ್ಬದಿಯಲ್ಲಿ ಕೀರ್ತಿಮುಖದ ಪ್ರಭಾವಳಿ ಇದೆ. ದೇವಿಯು ಕಂಠಿಹಾರ, ಸರ, ತೋಳ್ಬಂದಿ, ಕೈಕಡಗ, ಉಂಗುರ, ಕಟಿಬಂಧ, ಕಾಲ್ಕಡಗ, ಪಾದಾಭರಣ ಧರಿಸಿರುವಳು. ದೇವಿಯ ಉಡುಗೆಯು ನರಿಗೆ ನರಿಗೆಯಾಗಿರುವಂತೆ ಶಿಲ್ಪಿತವಾಗಿದೆ. ದೇವಿಯನ್ನು ಪೂಜಿಸುತಿದ್ದ ಮೇಲುದುರ್ಗದ ಹಿರೇಮಠದ ಜಂಗಮರಿಗೆ ಬಸಾಪುರ ಗ್ರಾಮವನ್ನು ಭರಮಣ್ಣನಾಯಕನು ದಾನ ನೀಡಿದ್ದನು.[೧೦೪] ಹಾಲುಮತದ ಮಾದಪ್ಪ ಪರಶುರಾಮಪ್ಪನ ಮನೆತನದರು ಹಿಂದೆ ಎರಡನೇ ಕಸ್ತೂರಿ ರಂಗಪ್ಪನಾಯಕನ ಅವಧಿಯಲ್ಲಿ ದೇವಿಗೆ ದೊಡ್ಡದಾದ ಕಲಾತ್ಮಕ ಕೆತ್ತನೆಯ ಹಿತ್ತಾಳೆ ಹಿಡಿಯ ಚೌಡಿಕೆ ಮಾಡಿಸಿದ್ದರು. ಉತ್ಸವಾಂಬೆ ಮೂರ್ತಿಯ ಬಲಬದಿಯಲ್ಲಿ ಸುಮಾರು ನಾಲ್ಕು ಅಡಿ ಎತ್ತರದ ಕಪ್ಪುಶಿಲೆಯ ಪರಶುರಾಮನ ಮೂರ್ತಿಯಿದೆ. ಇದು ನಾಯಕನಹಟ್ಟಿಯ ಕೆರೆಯಲ್ಲಿ

ದೊರೆಯಿತೆಂಬುದು ಸ್ಥಳೀಯರ ಪ್ರತೀತಿ. ಈ ಮೂರ್ತಿಯನ್ನು ಇತ್ತೀಚಿನ ಕೆಲವರು 'ವಿವಿಧ ಆಯುಧ ಸಮೇತಳಾಗಿ ನಿಂತಿರುವ ಯುದ್ಧ ದೇವತೆಯ ರೂಪದಲ್ಲಿರುವ ಎಲ್ಲಮ್ಮನ ಮೂರ್ತಿ' ಎಂದು ಉಲ್ಲೇಖಿಸಿರುವರು.[೧೦೫] ಆದರೆ ಇದು ಸಮಂಜಸವಲ್ಲ. ಇದರ ಶಿಲ್ಪ ಲಕ್ಷಣಗಳ ಅವಲೋಕನದಿಂದ ಇದು ಪರಶುರಾಮನ ಮೂರ್ತಿಯೆಂಬ ಸಂಗತಿ ವೇದ್ಯವಾಗುತ್ತದೆ. ಸಮಭಂಗಿಯಲ್ಲಿ ನಿಂತಿರುವ ಪರಶುರಾಮನು ತನ್ನ ನಾಲ್ಕು ಕೈಗಳಲ್ಲಿ ಬಿಲ್ಲು, ಬಾಣ, ಗದೆ ಮತ್ತು ಚಂದ್ರಾಯುಧ ಹಿಡಿದಿರುವನು. ಶಿಲ್ಪದ ಮೇಲ್ಬದಿಯಲ್ಲಿ ಕೀರ್ತಿಮುಖದ ಸುಂದರ ಪ್ರಭಾವಳಿಯಿದೆ. ಕಿರೀಟಮುಕುಟ, ಕಂಠಿಹಾರ, ಸರ, ಬೆರಳಿಗೆ ಉಂಗುರ, ಕೆಯೂರ, ಕಾಲಿಗೆ ಪಂಡುಗ, ಅಂದುಗೆಗಳನ್ನು ಧರಿಸಿರುವಂತೆ ಶಿಲ್ಪಿತವಾಗಿದೆ. ಶೈಲಿಯ ದೃಷ್ಟಿಯಲ್ಲಿ ವಿಜಯನಗರೋತ್ತರ ಅವಧಿಯಲ್ಲಿ ಶಿಲ್ಪಿತವಾಗಿದೆ. ಗರ್ಭಗೃಹ ಮತ್ತು ಅಂತರಾಳದ ಬಾಗಿಲುವಾಡಕ್ಕೆ ಹಿತ್ತಾಳೆಯ ಕವಚ ಹೊದಿಸಲಾಗಿದೆ.

ನವರಂಗದಲ್ಲಿರುವ ಸ್ವತಂತ್ರವಾದ ನಾಲ್ಕು ಕಂಬಗಳು ಚೌಕಾಕಾರದ ಪೀಠದ ಮೇಲಿವೆ. ಇವುಗಳನ್ನು ಚೌಕಾಕಾರ, ಎಂಟು, ಹದಿನಾರು, ಎಂಟು ಪಾರ್ಶ್ವದ ಕೆತ್ತನೆಗಳಲ್ಲಿ ಕಡೆಯಲ್ಪಟ್ಟಿದ್ದು, ಮೇಲ್ಭಾಗದಲ್ಲಿ ಘಟ, ಫಲಕ ಮತ್ತು ಬೋದಿಗೆಗಳಿವೆ. ಇವುಗಳ ಚೌಕ ಭಾಗದಮೇಲೆ ಹೋರಾಟದಲ್ಲಿ ಮಗ್ನನಾಗಿರುವ ವೀರ, ಕರುವಿಗೆ ಹಾಲುಣಿಸುತ್ತಿರುವ ಹಸು, ಕೈಮುಗಿದು ನಿಂತ ಭಕ್ತ, ಹಂಸ, ನರ್ತಿಸುತ್ತಿರುವ ಸ್ತ್ರೀ ಶಿಲ್ಪಗಳಿವೆ. ವಿಶಾಲವಾದ ಮುಖಮಂಟಪದಲ್ಲಿ ಹನ್ನೆರಡು ಕಂಬಗಳಿವೆ. ಇವುಗಳು ವಿಜಯನಗರ ಶೈಲಿಯಲ್ಲಿದ್ದು, ಹಂಪೆಯ ಹಜಾರಾಮುಸ್ವಾಮಿ ದೇಗುಲದ ಮುಖಮಂಟಪದಲ್ಲಿನ ಕಂಬಗಳಿಗೆ ಹೋಲುತ್ತವೆ. ಇವುಗಳಲ್ಲಿ ಪೀಠ ಮತ್ತು ಮೂರು ಚೌಕಾಕಾರದ ಭಾಗಗಳಿದ್ದು, ಮಧ್ಯದಲ್ಲಿ ಎಂಟು ಮತ್ತು ಹದಿನಾರು ಪಾರ್ಶ್ವದ ಕೆತ್ತನೆಗಳಿವೆ. ಇದರ ಮೇಲ್ಬದಿಯಲ್ಲಿ ಪುಷ್ಪಬೋದಿಗೆಗಳಿವೆ. ಕಂಬಗಳ ಚೌಕಭಾಗದಲ್ಲಿ ಗಂಡಭೇರುಂಡ, ವಾದ್ಯಗಾರರು, ನೃತ್ಯಗಾರರು, ನಾಟ್ಯಗಣಪ, ಗಜವನ್ನೇರಿರುವ ಸ್ತ್ರೀ, ವ್ಯಾಳ, ಚಾಮರ ಹಿಡಿದ ಸ್ತ್ರೀ, ಪೂರ್ಣಕುಂಭ, ಹಾವಾಡಿಗ, ಹನುಮ, ಕೈಮುಗಿದು ನಿಂತ ಭಕ್ತ, ಜೋಗತಿಯರು, ಬೇಡರ ಕಣ್ಣಪ್ಪ, ವೀರಾಸನದಲ್ಲಿ ಆಸೀನನಾದ ಗರುಡ, ಕುದುರೆ ಸವಾರಿ ಮಾಡುತ್ತ ಭರ್ಚಿ ಎಸೆಯುತ್ತಿರುವ ವೀರನ ಉಬ್ಬುಶಿಲ್ಪಗಳನ್ನು ಕಡೆದಿರುವರು. ಗರ್ಭಗೃಹದ ಅಧಿಷ್ಠಾನವು ಉಪಪೀಠ, ಉಪಾನ, ಕಂಠ, ಕುಮುದ, ಶಾಲಗಳನ್ನು ಒಳಗೊಡಿದೆ. ದೇಗುಲದ ಬಲಬದಿಯ ಗೋಡೆಯಲ್ಲಿ ರಾಜಹಂಸ, ಕೋತಿ, ಪುರುಷಾಮೃಗ, ಪರಶುರಾಮ, ಗಜ, ಪಂಚಮುಖಿ ಹಸು, ಕಾಳಿಂಗಮರ್ಧನದ ಉಬ್ಬುಶಿಲ್ಪಗಳಿವೆ. ಗರ್ಭಗೃಹದ ಮೇಲ್ಬದಿಯಲ್ಲಿ ತ್ರಿತಲ ಶಿಖರವಿದ್ದು, ನಾಲ್ಕು ಕೂಡುಗಳಿವೆ. ಇದರಲ್ಲಿ ಯಾವುದೇ ಬಗೆಯ ದೇವತಾಶಿಲ್ಪಗಳಿಲ್ಲ. ಇದರಲ್ಲಿ ಗ್ರೀವ, ಶಿಖರ ಮತ್ತು ಸ್ತೂಪಿಗಳನ್ನು ಕಾಣಬಹುದು. ದೇವಾಲಯಕ್ಕೆ ಅಭಿಮುಖವಾಗಿ ಮಾತಂಗಿ ಮಾವುರಾಣಿಯರ ಪಾದುಕೆಗಳ ಪುಟ್ಟ ಗುಡಿಗಳಿವೆ.

ದೇವಾಲಯದ ಪ್ರಾಕಾರ ಮಂಟಪವು ೪೦೦x೨೦೦ ಅಡಿಗಳಷ್ಟು ವಿಸ್ತೀರ್ಣವಾಗಿದೆ. ಇದರಲ್ಲಿ ೧೧೭ ಸ್ತಂಭಗಳಿವೆ. ಇದರಲ್ಲಿ ಊರ್ಧ್ವ ಮುಖದ ಪದ್ಮ ಪೀಠದ ಮೇಲೆ ಹದಿನಾರು ಮುಖದ ಕೆತ್ತನೆಗಳಿರುವ ಈ ಕಂಬದ ಮಧ್ಯೆ ಅಧೋಮುಖ ಮತ್ತು ಊರ್ಧ್ವಮುಖದ ಪದ್ಮದ ಕೆತ್ತನೆಗಳಿದ್ದು, ಇದರ ಮಧ್ಯೆ ಸುತ್ತಲೂ ದುಂಡಾದ ಕವಣೆಕಲ್ಲಿನೋಪಾದಿಯ ಕೆತ್ತನೆಗಳಿವೆ. ಕಂಬದ ಮೇಲೆ ಅಧೋಮುಖ ಪದ್ಮದ ಕೆತ್ತನೆಯಿದ್ದು, ಮೇಲೆ ಚೌಕಾಕಾರ ಮತ್ತು ಪುಷ್ಪಬೋದಿಗೆಗಳಿವೆ. ಇದು ಪಾಳೆಯಗಾರರ ವಾಸ್ತುಶೈಲಿಯಲ್ಲಿನ ವಿಶಿಷ್ಟವಾದ ಕಂಬವಾಗಿದೆ. ಪ್ರಾಕಾರ ಮಂಟಪದಲ್ಲಿ ಹನುಮಂತ, ನಂದಿ, ಶಿವಲಿಂಗ, ಬೇಡರಕಣ್ಣಪ್ಪ, ಪ್ರಣಾಮ ಮುದ್ರೆಯಲ್ಲಿರುವ ಭರಮಣ್ಣನಾಯಕನ ಶಿಲ್ಪ, ನಾಯಕ ತನ್ನ ಸೈನ್ಯದೊಡನೆ ಯುದ್ಧಕ್ಕೆ ಹೊರಟಿರುವ ಶಿಲ್ಪಗಳ ಚಿತ್ರಣಗಳಿವೆ. ದ್ವಾರಮಂಟಪದ ಸಹಿತ ಪೂರ್ವ, ಉತ್ತರ, ದಕ್ಷಿಣಕ್ಕೆ ಮೂರು ದ್ವಾರಗಳಿವೆ. ದ್ವಾರ ಮಂಟಪದ ಅಧಿಷ್ಠಾನವು ಉಪಪೀಠ, ಕಂಠ, ಉಪಾನ, ಪದ್ಮ, ಕುಮುದ ಗಳಪಾದಗಳಿಂದ ಕೂಡಿದ್ದು, ಭಿತ್ತಿಯ ಶಿಖರಗಳ ರಚನೆಯ ಮಧ್ಯೆ ಹನುಮಂತ, ವಿಷ್ಣು, ಪರಶುರಾಮನ ಶಿಲ್ಪಗಳಿವೆ. ದ್ವಾರ ಮಂಟಪದ ಬಾಗಿಲುವಾಡವು ಅಲಂಕೃತವಾಗಿದ್ದು, ಲತಾಬಳ್ಳಿ,

ಲಲಾಟದಲ್ಲಿ ಗಣೇಶನ ಉಬ್ಬುಕೆತ್ತನೆಯಿದೆ. ಇದರ ಮೇಲಿನ ಉಪ್ಪರಿಗೆ ಭಾಗದಲ್ಲಿ ಕಮಾನಿನಾಕಾರದ ಬಾಗಿಲುವಾಡಗಳಿವೆ. ದೇವಾಲಯದ ಮುಂದಿನ ದೊಡ್ಡ ದೀಪಸ್ತಂಭ ಮತ್ತು ಉಯ್ಯಾಲೆ ಕಂಬಗಳನ್ನು ಕ್ರಿ.ಶ.೧೭೪೩ರಲ್ಲಿ 'ಚಿಪ್ಪರಗಿ ಜಾನ್' ಎಂಬುವನು ನಿಲ್ಲಿಸಿದುದಾಗಿ ನಾಯಕ ಅರಸರ ವಂಶಾವಳಿಗಳಲ್ಲಿ ಹೇಳಿದೆ.[೧೦೬]

ಉಚ್ಚಂಗಿ ಎಲ್ಲಮ್ಮ ಮತ್ತು ಪರಶುರಾಮನ ವಿಗ್ರಹಗಳ ಮಜ್ಜನ ಮಾಡಲು ಎರಡು ಹೊಂಡಗಳು ನಿರ್ಮಾಣವಾದವು. ಅವುಗಳನ್ನು ಉಚ್ಚಂಗೆಮ್ಮನ ಹೊಂಡ ಮತ್ತು ಪರಶುರಾಮನ ಹೊಂಡಗಳೆಂದು ಕರೆಯುವರು. ಈ ಕುರಿತು ಜನಪದರು ದೇವಿಯ ಉತ್ಸವದ ಸಮಯದಲ್ಲಿ,

ಹೊರಹೊಂಡ ವಳಹೊಂಡ ವಳಗೆ ನಾಲ್ಕುಹೊಂಡ
ಇಂತ ಸಿರಿದೇವಿಯ ಮಠ ಕಟ್ಟಿಸಿದ ಮದಕೇರಣ್ಣ।
ಸಿರಿದೇವಿಯ ಗುಡಿಕಟ್ಟಿಸಿದ॥
ಇಂತ ಸಿರಿದೇವಿಯ ಮಜ್ಜನಕೆ।
ಸೀನೀರು ಹೊಂಡವಾ ತೆಗೆಸೀದಾ॥
ಜಲವ ತೇಪಿಸಿದನು ಮೇಲುದುರುಗಾಕೆ[೧೦೭]

ಎಂದು ಹಾಡುವರು. ಚಿತ್ರದುರ್ಗದ ಕೊನೆಯ ನಾಯಕ ರಾಜವೀರ ಮದಕರಿನಾಯಕನು ಈ ದೇವಿಯ ಪರಮಭಕ್ತನಾಗಿದ್ದನು. ಪ್ರಾತಃಕಾಲದಲ್ಲಿ ದೇವಿಯನ್ನು ಧ್ಯಾನಿಸುತ್ತಿದ್ದನು. ಈ ಅರಸನು ಯುದ್ಧಕ್ಕೆ ಹೊರಡುವ ಮುನ್ನ ದೇವಿಯ ಸಮ್ಮುಖದಲ್ಲಿ ನಿಂತು,

ಕಂಡೆ ನಿಮ್ಮಯ ಪಾದವ ಶ್ರೀಉತ್ಸವಾಂಬ।
ಕಂಡೆ ನಿಮ್ಮಯ ಪಾದವ।
ಧರಣೀಶ ಮದಕರಿ ರಾಜೇಂದ್ರನ ಕರುಣದಿ ರಕ್ಷಿಸಮ್ಮ।
ದುರುಳ ಶತ್ರುಗಳ ಸಂಹರಿಸಿ ಸಂಸ್ಥಾನವ ಪಾಲಿಸಬೇಕು।[೧೦೮]

ಎಂದು ಪ್ರಾರ್ಥಿಸುತ್ತಿದ್ದನಂತೆ. ಆದರೆ ಉಚ್ಚಂಗಿ ಎಲ್ಲಮ್ಮ ದಯತೋರದೆ ಅಪಶಕುನವಾಗಿ ಸುಳಿದಳು. ಜನಪದರು ಅದನ್ನು,

ಗಾರೆಯ ಬಾಗಿಲ ಬಿಟ್ಟು ಹೊರಡುವಾಗ ಉಚ್ಚೆಂಗೆಮ್ಮ
ಕಾಗೆಯಾಗಿ ಅಡ್ಡಸುಳಿದಾಳೋ।
ಕಾಗೆಯ ಶಕುನಾವು ನಮಗ್ಯಾತಕ್ಹತ್ತೇತು
ನಡಸಯ್ಯಾ ಮುಂದಕ್ಕಾನೆಯಾ।[೧೦೯]

ಎಂದು ಹಾಡುವರು. ಇದು ಅಪಶಕುನವನ್ನು ಧಿಕ್ಕರಿಸಿ ಮದಕರಿನಾಯಕನು ಮುನ್ನಡೆದುದ್ದನ್ನು ಸೂಚಿಸುತ್ತದೆ.

ಉಚ್ಚಂಗಿ ಎಲ್ಲಮ್ಮನ ಜಾತ್ರೆಯು ವೈಶಾಖ ಮಾಸದಲ್ಲಿ ಅಮವಾಸ್ಯೆಯ ನಂತರದ ಶನಿವಾರದಂದು ಪ್ರಾರಂಭವಾಗುತ್ತದೆ. ದೇವಿಗೆ ಮದುವಣಗಿತ್ತಿಯಾಗಿ ಕಂಕಣಧಾರಣೆ ಮಾಡುವುದು ಜಾತ್ರೆಗೆ ನಾಂದಿ ಹಾಡಿದಂತೆ. ಒಟ್ಟು ಹತ್ತು ದಿನಗಳ ಕಾಲ ನಡೆಯುವ ಈ ಜಾತ್ರೆ ಆಚರಣೆಯ ವಿಧಾನಗಳು ಏಕನಾಥೇಶ್ವರಿಯ ಜಾತ್ರಾ ಮಹೋತ್ಸವದ ಯಥಾ ಪ್ರಕಾರವಾಗಿಯೇ ನೆರವೇರುತ್ತವೆ. ನವರಾತ್ರಿಯ ಸಮಯದಲ್ಲಿ ಹಬ್ಬಗಳ ಸಮಯದಲ್ಲಿ ದೇವಿಗೆ ವಿಶೇಷ ಪೂಜೆಗಳು ಜರುಗುತ್ತವೆ.

೨) ತಿಪ್ಪನಘಟ್ಟಮ್ಮ ದೇವಾಲಯ

ಚಿತ್ರದುರ್ಗ ನಗರದ ಜೋಗಿಮಟ್ಟಿ ರಸ್ತೆಯ ಎಡಬದಿಯಲ್ಲಿ ಪೂರ್ವಾಭಿಮುಖವಾಗಿ ಈ ದೇವಾಲಯವಿದೆ. ಮೂಲತಃ ಚೌಕಾಕಾರದ ಗರ್ಭಗೃಹ ಮಾತ್ರವಿರುವ ಈ ದೇವಾಲಯಕ್ಕೆ ಇತ್ತೀಚೆಗೆ ಸಭಾಮಂಟಪ ನಿರ್ಮಿಸಿರುವರು. ಗರ್ಭಗೃಹದಲ್ಲಿ ಇತ್ತೀಚೆಗೆ ಸ್ಥಾಪಿಸಲಾದ ತಿಪ್ಪನಘಟ್ಟಮ್ಮ ದೇವಿಯ ಶಿಲ್ಪವಿದೆ. ಬಾಗಿಲುವಾಡವು ಸರಳವಾಗಿದ್ದು, ಶೈವದ್ವಾರಪಾಲಕರನ್ನು, ದ್ವಾರಬಂದದಲ್ಲಿ ಪದ್ಮದ

ಕೆತ್ತನೆಯನ್ನು ಒಳಗೊಂಡಿದೆ. ದೇವಾಲಯದ ಮುಂಬದಿಯಲ್ಲಿ ಸುಮಾರು ಎಂಟು ಅಡಿ ಎತ್ತರದ ದೀಪಸ್ತಂಭವಿದ್ದು, ಅದರಲ್ಲಿ ಕೈಮುಗಿದು ನಿಂತಿರುವ ಭಕ್ತನ ಶಿಲ್ಪ ಕಡೆಯಲಾಗಿದೆ. ಇದರ ಬಳಿಯ ಜೋಡಿ ಪಾದಗಳಿಗೆ ನಾಗಸರ್ಪವೊಂದು ಸುತ್ತುವರೆದಿದ್ದು, ಸುತ್ತಲೂ ನಾಗರಕಲ್ಲುಗಳಿವೆ. ಈ ದೇವಿಯ ಮತ್ತೊಂದು ದೇಗುಲವನ್ನು ಇತ್ತೀಚೆಗೆ ಕರುವಿನಕಟ್ಟೆ ವೃತ್ತದ ಬಳಿ ನಿರ್ಮಿಸಿರುವರು.

ತಿಪ್ಪನಘಟ್ಟಮ್ಮ ದೇವಿಯ ಉತ್ಸವಗಳಲ್ಲಿ ಬೇಟಿ ಉತ್ಸವವು ಪ್ರಮುಖವಾಗಿದ್ದು, ಇದು ಸಿಡಿ ಉತ್ಸವದಷ್ಟೇ ಮಹತ್ವ ಪಡೆದಿದೆ. ಇದು ಏಕನಾಥೇಶ್ವರಿ ದೇವಿಯ ಸಿಡಿ ಉತ್ಸವದ ನಂತರ ಬರುವ ಮಂಗಳವಾರದಂದು ಜರುಗುತ್ತದೆ. ಬೇಟಿ ಉತ್ಸವ ಕೇವಲ ಕೆಲವೇ ನಿಮಿಷಗಳ ಕಾಲ ಸಂಧಿಸುವಿಕೆ ಇದರ ವಿಶೇಷತೆ. ಈ ದೇವತೆಯರು ಅಕ್ಕತಂಗಿಯರಾಗಿದ್ದು, ತಿಪ್ಪನಘಟ್ಟಮ್ಮ ಶಾಂತಿ ಮತ್ತು ಸೌಮ್ಯತೆಯ ದೇವತೆಯಾದರೆ, ಬರಗೇರಮ್ಮ ಶಕ್ತಿ ಮತ್ತು ಕ್ರೌರ್ಯದ ದೇವತೆಯಾಗಿರುವಳು. ಕೆಂಪು ಸೋಮಗಳಿಂದ ಕೂಡಿದ ಉತ್ಸವದಲ್ಲಿ ಭಾಗವಹಿಸುವ ಈ ಭೂತ ಕುಣಿತವೇ ಬೇಟಿಯ ಪ್ರಮುಖ ಆಕರ್ಷಣೆ. ಈ ದೇವಿಯರ ಮೂರ್ತಿಗಳನ್ನು ತಲೆಯ ಮೇಲೆ ಹೊತ್ತು ತಿರುಗುವ, ದೇವಿಯರ ಇಕ್ಕೆಲಗಳಲ್ಲಿ ಛತ್ರಿಚಾಮಾರ, ಪಂಜು, ಕಹಳೆ, ಡೋಲು, ವಾದ್ಯಗಳನ್ನು ಮಾತ್ರ ಬಳಸುವ ವಾಡಿಕೆ ಉಂಟು. ನಾಯಕ ಅರಸರ ಅವಧಿಯಲ್ಲಿ ರಾಜಬೀದಿಯೆಂದೇ ಕರೆಯಿಸಿಕೊಂಡಿರುವ ಇಂದಿನ ನಗರದ ದೊಡ್ಡಪೇಟೆಯ ನಿಗಧಿತ ಸ್ಥಳದಲ್ಲಿ ಈ ಬೇಟಿ ಉತ್ಸವ ನಡೆಯುತ್ತದೆ. ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಿಂದ ಎದುರು ಬದುರಾಗಿ ಬಂದು ಮುಖಕ್ಕೆ ಮುಖ ತಾಕಿಸಿ ಕೂಡಿಕೊಳ್ಳುವುದರ ಮೂಲಕ ವರ್ಷಕೊಮ್ಮೆ ಈ ದೇವತೆಗಳು ಸಂಧಿಸುವ ಬೇಟಿ ಉತ್ಸವ ಸೊಗಸಾಗಿರುತ್ತದೆ.

೩. ಬರಗೇರಮ್ಮನ ದೇವಾಲಯ

ಚಿತ್ರದುರ್ಗದ ಹೊಳಲ್ಕೆರೆ ರಸ್ತೆಯಲ್ಲಿರುವ ಸುಂಕದಕಟ್ಟೆ ಬಳಿ ಈ ದೇವಾಲಯವಿದೆ. ಗರ್ಭಗೃಹ ಮತ್ತು ಸಭಾಮಂಟಪಗಳಿರುವ ಈ ದೇವಾಲಯವನ್ನು ಇತ್ತೀಚೆಗೆ ನವೀಕರಣಗೊಳಿಸಿರುವರು. ಗರ್ಭಗೃಹದ ಕಣಶಿಲೆಯ ಶಿಲಾ ಫಲಕದ ಮೇಲೆ ಕೀರ್ತಿಮುಖದ ಪ್ರಭಾವಳಿ ಸಹಿತ ದೇವಿಯ ಶಿಲ್ಪವಿದ್ದು, ಲೋಹದ ಕವಚ ಹೊದಿಸಲಾಗಿದೆ. ಹಿತ್ತಾಳೆಯ ಕವಚ ಹೊದಿಸಿರುವ ಬಾಗಿಲುವಾಡದಲ್ಲಿ ಶೈವ ದ್ವಾರಪಾಲಕ ಶಿಲ್ಪಗಳಿವೆ. ಸಭಾಮಂಟಪದಲ್ಲಿನ ಸ್ತಂಭಗಳಿಗೆ ಮಾರ್ಬಲ್ ಶಿಲೆಯನ್ನು ಅಳವಡಿಸಲಾಗಿದೆ. ದೇವಾಲಯದ ಮುಂಬದಿಯ ಆರು ಅಡಿ ಎತ್ತರದ ದೀಪಸ್ತಂಭದಲ್ಲಿ ದೇವಿಗೆ ಎದುರಾಗಿ ಪತ್ನಿ ಸಮೇತರಾಗಿ ಕೈಮುಗಿದು ನಿಂತ ಭಕ್ತರ ಶಿಲ್ಪಗಳಿವೆ. ದೇವಾಲಯದ ಮುಂದೆ ಮತ್ತು ಹಿಂದೆ ನಾಗದೇವತೆಯ ಶಿಲ್ಪಗಳಿದ್ದು, ತಮ್ಮ ಕೈಗಳಲ್ಲಿ ಖಡ್ಗ, ಗುರಾಣಿ, ಹಿಡಿದಿರುವರು. ದೇವಾಲಯದ ಮುಂಬದಿಯ ಬನ್ನಿಮರದ ಕೆಳಗೆ ಉತ್ತರಾಭಿಮುಖವಾಗಿ ಪ್ರಣಾಮ ಮುದ್ರೆಯಲ್ಲಿ ನಿಂತಿರುವ ಸ್ತ್ರೀಯೋರ್ವಳ ಶಿಲ್ಪವಿದೆ. ಮೇಲಿನ ನಾಗರ ಎಡೆಸಹಿತ ೧.೬ ಅಡಿ ಎತ್ತರವಿರುವ ಈ ಶಿಲ್ಪವನ್ನು ಕಣಶಿಲೆಯಲ್ಲಿ ಕಡೆದಿರುವರು. ಏಳುಹೆಡೆಯ ನಾಗರಹಾವಿನ ನೆರಳಿನಲ್ಲಿರುವ ಸ್ತ್ರೀ ತನ್ನ ಕೇಶರಾಶಿಯನ್ನು ಮುಡಿಗಟ್ಟಿರುವಳು. ಕೊರಳಿನಲ್ಲಿ ನಾಗಾಭರಣ ಕರ್ಣಕುಂಡಲ, ಕೈಬಳೆ, ಕಾಲ್ಗಡಗ ಧರಿಸಿರುವಳು. ಉಡುಗೆಯು ನರಿಗೆನರಿಗೆಯಾಗಿ ಚಿತ್ರಿತವಾಗಿದ್ದು, ರಾಜಪೋಷಾಕಿನಂತೆ ತೋರುತ್ತದೆ. ಇವಳ ಬಲಬದಿಯಲ್ಲಿ ಸೂರ್ಯ, ಚಂದ್ರ, ನಂದಿಯ ಉಬ್ಬು ಕೆತ್ತನೆಗಳಿವೆ. ಈ ಶಿಲ್ಪದ ಬದಿಯಲ್ಲಿ 'ಬರಗೇರಮ್ಮನ ಸೇವೆ, ಕೊಳದ ನಿಂಗಮ್ಮನ ಸೇವೆ' ಎಂಬ ಚಿಕ್ಕ ಬರಹವಿದೆ.[೧೧೦] ಪ್ರಾಯಶಃ ಈ ಸ್ತ್ರೀ ನಾಯಕ ಅರಸರ ರಾಣಿಯಾಗಿದ್ದು, ಮೂಲತಃ ಕೊಳ ಅಥವಾ ಕೊಳಾಲು ಮೂಲದವಳಿರಬಹುದು.

೪) ಕಾಳಿಕಾ ಮಹೇಶ್ವರಿ ದೇವಾಲಯ

ಚಿತ್ರದುರ್ಗದ ಕಾಮನ ಬಾಗಿಲು ಮುಂಬದಿಯಲ್ಲಿ ಕಾಳಿಕಾ ಮಹೇಶ್ವರಿ ದೇವಾಲಯವಿದೆ. ಪೂರ್ವಾಭಿಮುಖವಾಗಿರುವ ಈ ದೇಗುಲವನ್ನು ಕಣಶಿಲೆಯಲ್ಲಿ ಕಟ್ಟಿರುವರು. ಇದರ ವಾಸ್ತುವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ಪ್ರದಕ್ಷಿಣಾಪಥ, ಸಭಾಮಂಟಪ ಮತ್ತು ಮುಖಮಂಟಪಗಳನ್ನು ಕಾಣಬಹುದು. ಗರ್ಭಗೃಹದಲ್ಲಿ ಸುಮಾರು ಮೂರು ಅಡಿ ಎತ್ತರದ ಕಾಳಿಕಾದೇವಿಯ ಶಿಲಾಮೂರ್ತಿ ಇದೆ. ಇದನ್ನು

ಪಾಳೆಯಗಾರರ ಅವಧಿಯ ಶಿಲಾಮೂರ್ತಿ ಎಂದು ಅಭಿಪ್ರಾಯಪಟ್ಟಿರುವರು.[೧೧೧] ಆದರೆ ಅದು ಸಮಂಜಸವಲ್ಲ. ಶಿಲಾಪೀಠವೊಂದರ ಮೇಲೆ ಸಾಲಿಗ್ರಾಮವನ್ನಿಟ್ಟು ಪೂಜಿಸಲಾಗುತ್ತಿದ್ದ ಈ ದೇವಾಲಯದಲ್ಲಿ ಕ್ರಿ.ಶ.೧೯೬೦ರ ದಶಕದಲ್ಲಿ ಕಾಳಿಕಾದೇವಿಯ ಶಿಲಾಮೂರ್ತಿ ಸ್ಥಾಪಿಸಲಾಯಿತು.[೧೧೨] ಗರ್ಭಗೃಹದ ದ್ವಾರದಲ್ಲಿ ಪೂರ್ಣಕುಂಭದ ಕೆತ್ತನೆಗಳಿವೆ. ಗರ್ಭಗೃಹ ಗೋಡೆಯಲ್ಲಿ ವಿಷ್ಣು, ಉಮೆ, ಲಜ್ಜಾಗೌರಿ ಮತ್ತು ಮಿಥುನ ಶಿಲ್ಪಗಳನ್ನು ಕಂಡರಿಸಿರುವರು. ಅಂತರಾಳದ ಬಾಗಿಲುವಾಡವು ಶೈವ ದ್ವಾರಪಾಲಕರ ಶಿಲ್ಪಗಳನ್ನು, ಲಲಾಟದಲ್ಲಿ ಲಕ್ಷ್ಮಿಸಮೇತರಾಗಿ ಕುಳಿತಿರುವ ನರಸಿಂಹನನ್ನು ಕಡೆಯಲಾಗಿದೆ. ಸಾಂಧಾರ ಪ್ರಕಾರದ ಈ ದೇಗುಲಕ್ಕೆ ಅಂತರಾಳ ಮತ್ತು ಗರ್ಭಗೃಹಗಳಿಗೆ ಪ್ರದಕ್ಷಿಣಾ ಪಥವಿದೆ. ಸಭಾಮಂಟಪದಲ್ಲಿ ನಾಲ್ಕು ಸ್ವತಂತ್ರವಾದ ಕಂಬಗಳಿವೆ. ಈ ಕಂಬಗಳ ರಚನೆಯಲ್ಲಿ ಪೀಠ, ಕಾಂಡಭಾಗದಲ್ಲಿ ಚೌಕಾಕಾರದ ಎರಡು ರಚನೆಗಳಿದ್ದು, ಮಧ್ಯದಲ್ಲಿ ಎಂಟು, ಹದಿನಾರು, ಎಂಟು ಕೋನಗಳ ಕೆತ್ತನೆಗಳಿವೆ. ಮೇಲ್ಭಾಗದಲ್ಲಿ ಘಟ, ಫಲಕ ಮತ್ತು ಸುರುಳಿ ಬೋದಿಗೆಗಳಿವೆ. ಸ್ತಂಭಗಳ ಮೇಲೆ, ನಾಟ್ಯಗಣಪ, ಪುರುಷಾಮೃಗ, ಹನುಮಂತ, ಜಟಾಧರ ಭೈರವ, ವಿಷ್ಣುವಿನ ಕೂರ್ಮಾವತಾರ, ಕಾಳಿಂಗಮರ್ಧನ ಯೋಗಪಟ್ಟದಲ್ಲಿ ಆಸೀನನಾಗಿರುವ ಉಗ್ರನರಸಿಂಹ, ವ್ಯಾಳ, ಕೈಮುಗಿದು ನಿಂತ ಭಕ್ತ ಶಿಲ್ಪ, ವೀರಾಸನದಲ್ಲಿ ಕುಳಿತ ಗರುಡ ಶಿಲ್ಪಗಳಿದ್ದು, ಇವು ಶೈವ ಮತ್ತು ವೈಷ್ಣವ ಧರ್ಮಗಳ ಸಮಾಗಮದಂತಿವೆ. ಮುಖಮಂಟಪದ ಕಂಬಗಳನ್ನು ಚೌಕ ಮತ್ತು ಅಷ್ಟಮುಖ, ಹದಿನಾರುಮುಖ, ಅಷ್ಟಮುಖಗಳಲ್ಲಿ ಕಡೆದಿದ್ದು, ಫಲಕ ಮತ್ತು ಪುಷ್ಪ ಬೋದಿಗೆಗಳಿವೆ. ಕಂಬಗಳ ಚೌಕಭಾಗದಲ್ಲಿ ವಾದ್ಯಗಾರರು, ನೃತ್ಯಗಾರ್ತಿಯರು, ರಥ, ಸ್ತ್ರೀಯರೊಡನೆ ಇರುವ ಗೋಪಾಲಕೃಷ್ಣ, ವೇಣುನುಡಿಸುತ್ತಿರುವ ವೇಣುಗೋಪಾಲ, ಜಟಾಧರಭೈರವ, ಶಿಲ್ಪಗಳನ್ನು ಕಡೆಯಲಾಗಿದೆ. ಮುಖಮಂಟಪದ ಎರಡು ಬದಿಯ ವೇದಿಕೆಗಳ ಮೇಲೆ ನವಗ್ರಹ ಮತ್ತು ಗಣೇಶನನ್ನು ಈಚೆಗೆ ಸ್ಥಾಪಿಸಿರುವರು. ಮುಖಮಂಟಪದಲ್ಲಿ ಅಶ್ವಕಾಂತಸ್ತಂಭಗಳಿವೆ. ಈ ಸ್ತಂಭವೊಂದರ ಮೇಲೆ 'ಅಮ್ಮಗೆ ನಿಂಗಪ್ಪನ ಜನ' ಎಂಬ ೧೮ನೇ ಶತಮಾನದ ಕನ್ನಡ ಲಿಪಿಯ ಸಣ್ಣ ಅಪ್ರಕಟಿತ ಬರಹವಿದೆ. ದೇವಾಲಯದ ಸಭಾಮಂಟಪದ ಪ್ರವೇಶದ್ವಾರದ ಮೇಲೆ ಗಾರೆಯಿಂದ ರಚಿಸಿದ ಅನಂತಶಯನನ ಶಿಲ್ಪವಿದೆ. ದೇವಾಲಯದ ಹೊರಗೋಡೆಯಲ್ಲಿ ಪರಸ್ಪರ ಅಭಿಮುಖವಾದ ಮೀನಿನ ಕೆತ್ತನೆಗಳಿವೆ. ಗರ್ಭಗೃಹದ ಮೇಲೆ ಗಾರೆಯಿಂದ ನಿರ್ಮಿಸಿದ ದ್ರಾವಿಡ ಶೈಲಿಯ ದ್ವಿತಲ ಶಿಖರವಿದೆ. ಇದರಲ್ಲಿ ಕೂಡುಗಳಿದ್ದು, ಯಾವುದೇ ದೇವತಾ ಶಿಲ್ಪಗಳಿಲ್ಲ. ಈ ದೇವಾಲಯವನ್ನು ಹಿರೇ ಮದಕರಿನಾಯಕ ಕಟ್ಟಿಸಿದನೆಂದು ನಾಯಕ ಅರಸರ ದಾಖಲೆಗಳಲ್ಲಿ ಪ್ರಸ್ತಾಪಿಸಲಾಗಿದೆ.[೧೧೩]

ಪ್ರಾಕೃತಿಕವಾಗಿ ಬೆಟ್ಟಗುಡ್ಡಗಳು ಕೋಟೆಯಂತೆ ಮೈದಳೆದಿರುವ ಚಿತ್ರದುರ್ಗದಲ್ಲಿ ದೇವಾಲಯ ಸಂಸ್ಕೃತಿ ಸಂಮೃದ್ಧವಾಗಿದ್ದುದು ಇಲ್ಲಿನ ಶಾಸನಗಳ ಅಧ್ಯಯನದಿಂದ ತಿಳಿಯುತ್ತದೆ. ಕಲ್ಯಾಣದ ಚಾಲುಕ್ಯರಿಂದ ಚಿತ್ರದುರ್ಗ ನಾಯಕ ಅರಸರ ಅವಧಿಯವರೆಗೆ ಚಿತ್ರದುರ್ಗ ಪರಿಸರದಲ್ಲಿ ದೇವಾಲಯ ನಿರ್ಮಾಣ ಕಾರ್ಯದಲ್ಲಿ ಕೃಷಿ ನಡೆದಿದೆ. ಇಲ್ಲಿನ ದೇವಾಲಯಗಳ ವಾಸ್ತುಶಿಲ್ಪವೇ ಇದನ್ನು ಸ್ಪಷ್ಟವಾಗಿ ದೃಢಪಡಿಸುತ್ತದೆ. ಪ್ರಾರಂಭದಲ್ಲಿ ಚಿಕ್ಕದಾದ ಕಲ್ಲಾಸರೆಯ ಗುಹೆಗೆ ಮಾತ್ರ ಸೀಮಿತವಾಗಿದ್ದ ಈ ದೇವಾಲಯಗಳಿಗೆ, ಬೇರೆ ಬೇರೆ ಭಾಗಗಳು ವಿಭಿನ್ನ ಕಾಲಘಟ್ಟಗಳಲ್ಲಿ ಸೇರ್ಪಡೆಯಾಗಿರುವುದು ಸ್ಪಷ್ಟ. ಚಿತ್ರದುರ್ಗ ಪರಿಸರದಲ್ಲಿ ಶೈವ ದೇವಾಲಯಗಳದ್ದೇ ಸಿಂಹಪಾಲು. ಇವುಗಳ ಸಂಖ್ಯೆ ೩೫ಕ್ಕೂ ಅಧಿಕವಿದ್ದು, ಇಲ್ಲಿ ಸಾಂಸ್ಕೃತಿಕವಾಗಿ ಮತ್ತು ಭಾವನಾತ್ಮಕವಾಗಿ ಶೈವಾರಾಧನೆ ಬೆಸೆದುಕೊಂಡಿದೆ.

ಟಿಪ್ಪಣಿಗಳು

೧. ಚಿದಾನಂದಮೂರ್ತಿ ಎಂ., ೨೦೦೨, ಕ.ಶಾ.ಸಾ.ಅ., ಪು. ೧೯೨

೨. ರಾಮಚಂದ್ರರಾವ್ ಎಸ್.ಕೆ., ೧೯೮೦, ಭಾರತದ ದೇವಾಲಯಗಳು ನೆಲೆ: ಹಿನ್ನೆಲೆ, ಪು. ೧೩

೩. ಅದೇ,

೪. ದತ್ತಾತ್ರೇಯ ಜಿ. ಕುಲಕರ್ಣಿ, ೨೦೦೬, ಹಾವೇರಿ ಜಿಲ್ಲೆಯ ತ್ರಿಕೂಟ ದೇವಾಲಯಗಳು (ಅಪ್ರಕಟಿತ ಪಿಎಚ್.ಡಿ. ಪ್ರಬಂಧ), ಪು. ೫೭

೫. ಸತೀಶ ಕೆ., ೨೦೦೪, ವಿಜಯನಗರ ಕಾಲದ ಶೈವ ದೇವಾಲಯಗಳು (ಅಪ್ರಕಟಿತ ಪಿಎಚ್.ಡಿ. ಪ್ರಬಂಧ), ಪು. ೮೦

೬. ಗೋಪಾಲ್ ಬಾ.ರಾ., ೧೯೯೩, ಕರ್ನಾಟಕದ ಕಲೆಗಳು, ಸಂ-೪, ಪು. ೨೧

೭. ತಿಪ್ಪೇರುದ್ರಸ್ವಾಮಿ ಹೆಚ್., ೧೯೯೭, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪು. ೫೨೭

೮. ಜ್ಞಾನಾನಂದ ಜಿ., ೨೦೦೨, ಶಿಲ್ಪಾದರ್ಶ, ಸಂ-೨, ಪು. ೭

೯. ಸತೀಶ್ ಕೆ., ಪೂರ್ವೋಕ್ತ, ಪು. ೮೪

೧೦. ಲಕ್ಷ್ಮಣ್ ತೆಲಗಾವಿ, ೨೦೦೪, ಮೌರ್ಯ ಮತ್ತು ಶಾತವಾಹನ ಯುಗ, ಪು. ೧೨೭

೧೧. ಎ.ಕ., ಸಂ-೮ (ಹಳೆಯದು), ಶಿಕಾರಿಪುರ ೨೬೩.

೧೨. ಸುಂದರ ಅ., ೧೯೯೭, ಕ.ಚ., ಸಂ-೧, ಪು. ೪೧೪

೧೩. ಎ.ಕ., ಸಂ-೮, ಪೂರ್ವೋಕ್ತ, ೨೬೭

೧೪. ದತ್ತಾತ್ರೇಯ ಜಿ. ಕುಲಕರ್ಣಿ, ೨೦೦೬, ಪೂರ್ವೋಕ್ತ, ಪು. ೧೫

೧೫. ಚಿದಾನಂದಮೂರ್ತಿ ಎಂ., ೨೦೦೨, ಕ.ಶಾ.ಸಾ.ಅ., ಪು. ೧೨೪

೧೬. ಸುಂದರ ಅ., ೧೯೭೮, 'ಚಿತ್ರದುರ್ಗ ಪರಿಸರ: ಇತ್ತೀಚಿನ ಪುರಾತತ್ವ ಶೋಧನೆಗಳು', ಮಾ.ಭಾ., ಸಂ-೨:೧, ಪು. ೪೦-೪೪

೧೭. ಎ.ಕ., ಸಂ-೧೧, ಚಿತ್ರದುರ್ಗ ೨೨

೧೮. ವಿಶಾಲ ಚಿತ್ರದುರ್ಗ (ತ್ರೈಮಾಸಿಕ ಸಂಶೋಧನಾ ಪತ್ರಿಕೆ), ೧೩ ಆಗಸ್ಟ್ ೨೦೦೬, ಪು. ೪

೧೯. ಸೋಮಶೇಖರ್ ಎಸ್.ವೈ., ೨೦೦೪, ಜಟ್ಟಂಗಿ ರಾಮೇಶ್ವರ: ಸಾಂಸ್ಕೃತಿಕ ದರ್ಶನ, ಪು. ೯- ೧೦

೨೦. ವಸಂತಲಕ್ಷ್ಮಿ ಕೋ., ೨೦೦೫, 'ಚಿತ್ರದುರ್ಗ ಜಿಲ್ಲೆಯ ಕಲ್ಯಾಣಿ ಚಾಲುಕ್ಯ ದೇವಾಲಯಗಳು', ಚಿ.ಜಿ.ಇ.ಪು., ಪು. ೧೮೩

೨೧. ಶ್ರೀನಿವಾಸ ಎಂ.ವಿ., ಲಕ್ಷ್ಮಣ್ ತೆಲಗಾವಿ, (ಸಂ), ೧೯೭೬, ಹು.ಶ್ರೀ.ಜೋ.ಐ.ಲೇ., ಪು. ೨೫

೨೨. ರಾಜಶೇಖರಪ್ಪ ಬಿ., ೨೦೦೬, 'ಚಿತ್ರದುರ್ಗದ ಒಂದು ಅಪ್ರಕಟಿತ ತಾಮ್ರ ಶಾಸನ', ಇ.ದ., ಸಂ-೨೧, ಪು. ೫೪

೨೩. ರಾಜಶೇಖರಪ್ಪ ಬಿ., ೧೯೯೮, 'ಚಿತ್ರದುರ್ಗ ಜಿಲ್ಲೆಯ ಶಾಸನಗಳು: ಇತ್ತೀಚಿನ ಶೋಧನೆಗಳು', ತರಳುಬಾಳು ಹುಣ್ಣಿಮೆ ಸ್ಮರಣ ಸಂಚಿಕೆ, ಪು. ೧೯

೨೪. ಎ.ಕ., ಸಂ-೧೧, ಪೂರ್ವೋಕ್ತ, ೩೨

೨೫. ಅದೇ, ೬

೨೬. ಅದೇ, ೧೪

೨೭. ಅದೇ,

೨೮. ಅದೇ, ೧೨ ಮತ್ತು ೮೨

೨೯. ಎಸ್.ಐ.ಐ., ಸಂ–IX, ಭಾಗ–I, ೧೨೬

೩೦. ಸುಂದರ ಅ., ೧೯೯೨, 'ಹಿಡಿಂಬಪಟ್ಟಣ: ಒಂದು ವಿಮರ್ಶಾತ್ಮಕ ಟಿಪ್ಪಣಿ', ಇ.ದ., ಸಂ–೭, ಪು. ೮೧

೩೧. ಸುಂದರ ಅ., ೨೦೦೫, 'ಚಿತ್ರದುರ್ಗ ಜಿಲ್ಲೆಯ ಪುರಾತತ್ವ ಸಂಶೋಧನೆ ಮುಂದೇನು,' ಚಿ.ಜಿ.ಇ.ಪು., ಪು. ೧೭

೩೨. ಮಹಂತೇಶ ಎನ್.ಎಸ್., ೨೦೦೮, ಚಿತ್ರದುರ್ಗ ಕೋಟೆ ಪರಿಸರದ ದೇವಾಲಯಗಳು ಒಂದು ಸಾಂಸ್ಕೃತಿಕ ಅಧ್ಯಯನ, ಪು. ೫೯

೩೩. ರಾಜಶೇಖರಪ್ಪ ಬಿ., ೧೯೮೧, ಕೆಲವು ಹೊಸ ಶೂಲಬ್ರಹ್ಮ ಶಿಲ್ಪಗಳು, ಕ.ಭಾ., ಸಂ-೪:೨, ಪು. ೧೩೩

೩೪. ರಾಜಶೇಖರಪ್ಪ ಬಿ., ೨೦೦೩, ಪ್ರಾಚೀನ ಚಿತ್ರದುರ್ಗ (ಅಪ್ರಕಟಿತ ಪಿಎಚ್.ಡಿ. ಪ್ರಬಂಧ), ಪು. ೨೦೩

೩೫. ಅದೇ,

೩೬. ಅದೇ,

೩೭. ಅದೇ, ಪು. ೨೧೪

೩೮. ದಾನಗಳನ್ನು ಪ್ರಸ್ತಾಪಿಸುವ ಶಾಸನ ಸಂಖ್ಯೆ ನೀಡಲಾಗಿದೆ
(i) ಎ.ಕ., ಸಂ–೧೧, ಪೂರ್ವೋಕ್ತ, ೮೨, ೧೨, ೧೪
(ii) ರಾಜಶೇಖರಪ್ಪ ಬಿ., ೨೦೦೬, ಪೂರ್ವೋಕ್ತ, ಪು. ೫೦

೩೯. ಎ.ಕ., ಸಂ–೧೧, ಪೂರ್ವೋಕ್ತ, ೩೨

೪೦. ಶ್ರೀನಿವಾಸ ಎಂ.ವಿ., ಲಕ್ಷ್ಮಣ್ ತೆಲಗಾವಿ, (ಸಂ), ೧೯೭೬, ಪೂರ್ವೋಕ್ತ, ಪು. ೨೪

೪೧. ಅದೇ, ೮೨ ಮತ್ತು ೨೯

೪೨. ಈ ವಿಷಯವನ್ನು ತಿಳಿಸಿದ ಲಕ್ಷ್ಮಣ್ ತೆಲಗಾವಿಯವರಿಗೆ ಧನ್ಯವಾದಗಳು.

೪೩. ರಾಜಶೇಖರಪ್ಪ ಬಿ., ೨೦೦೧, ದುರ್ಗಶೋಧನ, ಪು. ೪೦–೪೯

೪೪. ಪುಟ್ಟಣ್ಣ ಎಂ.ಎಸ್., ೧೯೯೭, ಚಿತ್ರದುರ್ಗದ ಪಾಳೆಯಗಾರರು, ಪು. ೨೬–೨೭

೪೫. ಎ.ಕ., ಸಂ–೧೧, ಪೂರ್ವೋಕ್ತ, ೪

೪೬. ಲಕ್ಷ್ಮಣ್ ತೆಲಗಾವಿ., ೧೯೯೫, 'ಚಿತ್ರದುರ್ಗ ಬೆಟ್ಟದ ಸಂಪಿಗೆ ಸಿದ್ದೇಶ್ವರ ದೇವಾಲಯ', ಸಾತ್ವಿಕ, ಪು. ೩೯

೪೭. ಲಕ್ಷ್ಮಣ್ ತೆಲಗಾವಿ, ೨೦೦೬, 'ಒಂದನೇ ಬುಕ್ಕರಾಯನ ನಾಣ್ಯದ ಮರುಪರಿಶೀಲನೆಯ ನೆಲೆಯಲ್ಲಿ ಆತನ ಶಿಲ್ಪದ ಶೋಧ', ಚ.ಅ., ಸಂ–೧:೨, ಪು. ೧೧೩–೧೪೩

೪೮. ಕಲಬುರ್ಗಿ ಎಂ.ಎಂ., 'ಚಿತ್ರದುರ್ಗದ ಶೂಲಬ್ರಹ್ಮಶಿಲ್ಪ', ಕ.ಭಾ., ಸಂ– ೬:೪, ಪು. ೧೫೭

೪೯. ರಾಜಶೇಖರಪ್ಪ ಬಿ., ೨೦೦೩, ಪೂರ್ವೋಕ್ತ, ಪು. ೨೧೪

೫೦. ಲಕ್ಷ್ಮಣ್ ತೆಲಗಾವಿ, ೨೦೦೬, ಪೂರ್ವೋಕ್ತ, ಪು. ೧೩೧–೧೩೨

೫೧. ಅದೇ, ಪು. ೧೩೩

೫೨. ಎಂ.ಎ.ಆರ್., ೧೯೨೯, ಪು. ೧೭೫

೫೩. ಲಕ್ಷ್ಮಣ್ ತೆಲಗಾವಿ, ೧೯೯೫, ಪೂರ್ವೋಕ್ತ, ಪು. ೩೯

೫೪. ಎ.ಕ., ಸಂ– ೧೧, ಪೂರ್ವೋಕ್ತ, ೨ ಮತ್ತು ೩

೫೫. ಲಕ್ಷ್ಮಣ್ ತೆಲಗಾವಿ, ೧೯೯೫, ಪೂರ್ವೋಕ್ತ, ಪು. ೩೯

೫೬. ಅದೇ,

೫೭. ಅದೇ,

೫೮. ಎ.ಕ., ಸಂ-೧೧, ಪೂರ್ವೋಕ್ತ, ೨.೩ ಮತ್ತು ೪

೫೯. ತಿಪ್ಪೇಸ್ವಾಮಿ ಎಸ್., ೨೦೦೪, ರಕ್ಷಣಾ ವಾಸ್ತುಶಿಲ್ಪ: ಚಿತ್ರದುರ್ಗ ಜಿಲ್ಲೆ (ಅಪ್ರಕಟಿತ ಪಿಎಚ್.ಡಿ ಪ್ರಬಂಧ), ಪು. ೨೯೫

೬೦. ಕೃಷ್ಣಮೂರ್ತಿ ಹನೂರು, ೧೯೭೯, 'ಜನಪದ ಸಾಹಿತ್ಯದಲ್ಲಿ ಚಿತ್ರದುರ್ಗ', ಐತಿಹಾಸಿಕ ಚಿತ್ರದುರ್ಗ, ಪು. ೨೫

೬೧. ಅದೇ, ಪು. ೨೬

೬೨. ಅದೇ, ೧೧

೬೩. ರಹಮತ್ ತರೀಕೆರೆ, ೨೦೦೬, ಕರ್ನಾಟಕದ ನಾಥಪಂಥ, ಪು. ೧೪೬

೬೪. ಕೃಷ್ಣ ಎಂ.ಎಚ್., ೧೯೩೧, ಎಕ್ಸ್‌ಕವೇಷನ್ ಅಟ್ ಚಂದ್ರವಳ್ಳಿ, ಪು. ೭

೬೫. ಎ.ಕ., ಸಂ-೧೧, ಪೂರ್ವೋಕ್ತ, ೩೪

೬೬. ರಾಮಚಂದ್ರರಾವ್ ಎಸ್.ಕೆ., ೧೯೭೬, ಮೂರ್ತಿಶಿಲ್ಪ: ನೆಲೆ-ಹಿನ್ನೆಲೆ, ಪು. ೯೦-೯೨

೬೭. ಎ.ಕ., ಸಂ-೧೧, ಪೂರ್ವೋಕ್ತ, ೩೪

೬೮. ಅದೇ, ೧೨

೬೯. ಅದೇ, ೩೩

೭೦. ಅದೇ, ೧೩

೭೧. ಎಂ.ಎ.ಆರ್., ೧೯೨೯, ಪು. ೨೧

೭೨. ಲಕ್ಷ್ಮಣ್ ತೆಲಗಾವಿ, ೧೯೯೦, 'ಚಿತ್ರದುರ್ಗ ಬೆಟ್ಟದ ಪೆರುಮಾಳೆಪುರ: ಮರುಶೋಧನೆ,' ಇ.ದ., ಸಂ-೫, ಪು. ೧೨೫

೭೩. ಲಕ್ಷ್ಮಣ್ ತೆಲಗಾವಿ, ೧೯೯೧, 'ಚಿತ್ರದುರ್ಗದ ಒನಕೆ ಓಬವ್ವೆಯ ಘಟನೆ: ಚಾರಿತ್ರಿಕ ವಿಮರ್ಶೆ,' ಇ.ದ., ಸಂ- ೬, ಪು. ೨೫೭-೨೫೮

೭೪. ಲಕ್ಷ್ಮಣ್ ತೆಲಗಾವಿ, (ಸಂ), ೨೦೦೮, ಕರ್ನಾಟಕ ಪಾಳೆಯಗಾರರ ನ್ಯಾಯಾಡಳಿತ, ಪು. ೧೭೧

೭೫. ರಾಜಶೇಖರಪ್ಪ ಬಿ., ೨೦೦೩, ಪೂರ್ವೋಕ್ತ, ಪು. ೧೬೭

೭೬. ಇದನ್ನು ಹೊಯ್ಸಳರ ಅವಧಿಯದೆಂದು ಎನ್.ಎಸ್.ಮಹಂತೇಶರವರು ಉಲ್ಲೇಖಿಸಿರುವರು. ನೋಡಿ: ಮಹಂತೇಶ ಎನ್.ಎಸ್., ೨೦೦೮, ಪೂರ್ವೋಕ್ತ, ಪು. ೮೦

೭೭. ಎಂ.ಎ.ಆರ್., ೧೯೨೯, ಪು. ೨೧೧

೭೮. ಶಂಕರ್ ಎಸ್. ಅಥಣಿ, ಹು.ಶೀ.ಪಾಂಡುರಂಗ ಜೋಯಿಸ್, ೨೦೦೫, 'ಚಿತ್ರದುರ್ಗದ ದೇವಮಂದಿರಗಳು,' ನೀಲಕಂಠಸಿರಿ, ಪು. ೮೨

೭೯. ಪುಟ್ಟಣ್ಣ ಎಂ.ಎಸ್., ಪೂರ್ವೋಕ್ತ, ಪು. ೭೨

೮೦. ಈ ವಿಷಯವನ್ನು ತಿಳಿಸಿದ ಲಕ್ಷ್ಮಣ್ ತೆಲಗಾವಿಯವರಿಗೆ ಕೃತಜ್ಞತೆಗಳು

೮೧. ಎ.ಕ., ಸಂ-೧೧, ಪೂರ್ವೋಕ್ತ, ೬

೮೨. ಲಕ್ಷ್ಮಣ್ ತೆಲಗಾವಿ, ೧೯೯೦, ಪೂರ್ವೋಕ್ತ, ಪು.೧೨೩

೮೩. ಎ.ಕ., ಸಂ-೧೧, ಪೂರ್ವೋಕ್ತ, ೩೧

೮೪. ಎಂ.ಎ.ಆರ್., ೧೯೪೭-೫೬, ಪು. ೬೬

೮೫. ಲಕ್ಷ್ಮಣ್ ತೆಲಗಾವಿ, ೧೯೭೮, 'ಕಾಮಗೇತಿ ಅರಸರು – ಕೆಲವು ವಿಚಾರಗಳು: ಪ್ರತಿಕ್ರಿಯೆ', ಮಾ.ಕ., ಸಂ-೧೭:೪, ಪು. ೭೭-೭೮

೮೬. ಬ್ರಹ್ಮಗಿರಿ ದಿನಪತ್ರಿಕೆ, ೨೪-೯-೧೯೮೯

೮೭. ಲಕ್ಷ್ಮಣ್ ತೆಲಗಾವಿ, (ಸಂ), ೨೦೦೮, ಪೂರ್ವೋಕ್ತ, ಪು. ೧೪೫-೧೫೦

೮೮. ಎ.ಕ., ಸಂ-೧೧, ಪೂರ್ವೋಕ್ತ, ೧೬

೮೯. ಶಂಕರ್ ಎಸ್. ಅಥಣಿ, ಹು.ಶ್ರೀ.ಪಾಂಡುರಂಗ ಜೋಯಿಸ್, ಪೂರ್ವೋಕ್ತ, ಪು. ೯೯

೯೦. ಎಂ.ಎ.ಆರ್., ೧೯೪೭, ಪು. ೬೭

೯೧. ರಾಜಶೇಖರಪ್ಪ ಬಿ., ೨೦೦೩, ಪೂರ್ವೋಕ್ತ, ಪು. ೧೫೫

೯೨. ಅದೇ, ಪು. ೧೫೫-೧೫೮

೯೩. ಅದೇ, ಪು. ೧೫೬

೯೪. ಅದೇ, ಪು. ೧೭೫

೯೫. ಎಂ.ಎ.ಆರ್., ೧೯೨೯, ಪು. ೧೮

೯೬. (i) ಪುಟ್ಟಣ್ಣ ಎಂ.ಎಸ್., ಪೂರ್ವೋಕ್ತ, ಪು. ೧೭

(ii) ಲಕ್ಷ್ಮಣ್ ತೆಲಗಾವಿ, ೧೯೮೯, 'ಚಿತ್ರದುರ್ಗಕೋಟೆ ಮತ್ತು ಬೆಟ್ಟ ಪರಿಸರದ ಮೂರು ವ್ಯಕ್ತಿ ಶಿಲ್ಪಗಳು,' ಇ.ದ., ಸಂ-೪, ಪು. ೧೪೦

೯೭. ಲಕ್ಷ್ಮಣ್ ತೆಲಗಾವಿ, ೧೯೮೯ ಪೂರ್ವೋಕ್ತ, ಪು. ೧೪೦

೯೮. ರಾಜಶೇಖರಪ್ಪ ಬಿ., ೨೦೦೩, ಪೂರ್ವೋಕ್ತ, ಪು. ೨೦೪

೯೯. ಲಕ್ಷ್ಮಣ್ ತೆಲಗಾವಿ, ವೆಂಕಣ್ಣಚಾರ್ ಕೆ., ಹು.ಶ್ರೀ.ಪಾಂಡುರಂಗ ಜೋಯಿಸ್, ೧೯೮೦, ಚಿತ್ರದುರ್ಗ ದರ್ಶಿನಿ, ಪು. ೨೪

೧೦೦. ರಾಜಶೇಖರಪ್ಪ ಬಿ., ೨೦೦೧, ಪೂರ್ವೋಕ್ತ, ಪು. ೨೪೭

೧೦೧. ಕೃಷ್ಣಮೂರ್ತಿ ಹನೂರ, ಪೂರ್ವೋಕ್ತ, ಪು. ೨೫

೧೦೨. ಕೃಷ್ಣಮೂರ್ತಿ ಕ.ರಾ., ಪಾಳೆಯಗಾರರ ಪದಗಳು, ಪು. ೮-೯

೧೦೩. ಅದೇ, ಪು. ೯

೧೦೪. ಎಂ.ಎ.ಆರ್., ೧೯೪೭-೧೯೫೬, ಪು. ೬೪

೧೦೫. ಮಹಂತೇಶ ಎನ್.ಎಸ್., ಪೂರ್ವೋಕ್ತ, ಪು. ೭೬

೧೦೬. ರಾಜಶೇಖರಪ್ಪ ಬಿ., ೨೦೦೩, ಪೂರ್ವೋಕ್ತ, ಪು. ೨೦೪

೧೦೭. ಲಕ್ಷ್ಮಣ್ ತೆಲಗಾವಿ, ಶ್ರೀನಿವಾಸ ಎಂ.ವಿ., (ಸಂ), ೧೯೯೫, ಹು.ಶ್ರೀ.ಜೋ.ಸಂ.ಲೇ., ಪು. ೩೯೫

೧೦೮. ಅದೇ, ಪು. ೩೯೬

೧೦೯. ಕೃಷ್ಣಮೂರ್ತಿ ಹನೂರ, ಪೂರ್ವೋಕ್ತ, ಪು. ೨೬

೧೧೦. ಎಂ.ಎ.ಆರ್., ೧೯೨೯, ಪು. ೬೧

೧೧೧. ಮಹಂತೇಶ ಎನ್.ಎಸ್., ಪೂರ್ವೋಕ್ತ, ಪು. ೧೦೨

೧೧೨. ಈ ವಿವರವನ್ನು ಕಾಳಿಕಾಮತೇಶ್ವರಿ ದೇವಾಲಯದ ಅರ್ಚಕರಾದ ರಾಮಚಂದ್ರ ಆಚಾರ್ಯ ಅವರಿಂದ ಸಂಗ್ರಹಿಸಲಾಯಿತು. ಅವರಿಗೆ ಈಗ ೬೨ ವರ್ಷ. ಈ ಮಾಹಿತಿ ಒದಗಿಸಿದ ರಾಮಚಂದ್ರ ಆಚಾರ್ಯ ಅವರಿಗೆ ಧನ್ಯವಾದಗಳು.

೧೧೩. ರಾಜಶೇಖರಪ್ಪ ಬಿ., ೨೦೦೩, ಪೂರ್ವೋಕ್ತ, ಪು. ೧೭೭

ಅಧ್ಯಾಯ – ೪

ಮೂರ್ತಿ ಶಿಲ್ಪ

೪.೧ ಉಬ್ಬು ಶಿಲ್ಪಗಳು
೪.೨ ಪೂರ್ಣ ಶಿಲ್ಪಗಳು

ಮೂರ್ತಿಶಿಲ್ಪ

ಭಾರತದಲ್ಲಿ ದೇವತಾರಾಧನೆ ಮತ್ತು ದೇವಾಲಯಗಳ ನಿರ್ಮಾಣ ಎಂದು ಆರಂಭವಾಯಿತೋ ಅಂದಿನಿಂದಲೇ ದೇವತಾ ಮೂರ್ತಿಗಳ ಪ್ರತಿಷ್ಠಾಪನೆ ಮತ್ತು ಆರಾಧನೆ ನಡೆಯುತ್ತ ಬಂದಿರುವುದು ತಿಳಿದಸಂಗತಿ. ಯಾವುದೇ ಮತಪಂಥಗಳ ದೇವಾಲಯವನ್ನು ಅವಲೋಕಿಸಿದರೆ ಆ ದೇವಾಲಯಕ್ಕೊಂದು ಸಾಂಕೇತಿಕ ದೇವತಾಮೂರ್ತಿ ಇದ್ದೇ ಇರುತ್ತದೆ. ಈ ಮೂರ್ತಿ ಅಥವಾ ಶಿಲ್ಪಗಳನ್ನು ಕುರಿತ ಶಾಸ್ತ್ರೀಯ ಅಧ್ಯಯನವೇ ಶಿಲ್ಪಶಾಸ್ತ್ರವಾಗಿದೆ.

ಮೂರ್ತಿ ಎಂಬುದನ್ನು ಭೌತಿಕವಸ್ತು ಎಂದು ಗ್ರಹಿಸಲಾಗುತ್ತದೆ. ಮೂರ್ತಿ ಎಂಬ ಪದಕ್ಕೆ ಸಮಾನಾರ್ಥವಾಗಿ 'ಪ್ರತಿಮೆ' ಎಂಬ ಪದ ಪ್ರಯೋಗದಲ್ಲಿದೆ. ಅಲ್ಲದೆ ಮೂರ್ತಿಶಾಸ್ತ್ರವನ್ನು ಪ್ರತಿಮಾಶಾಸ್ತ್ರ ಎಂದೂ ಕರೆಯುವರು. ಪ್ರತಿಮಾಲಕ್ಷಣವೆಂದರೆ ಒಂದು ದೇವತೆಯ ಲಕ್ಷಣವನ್ನು ಮೂರ್ತಿರೂಪದಲ್ಲಿ ಪ್ರಮಾಣಬದ್ಧವಾಗಿ ಹೇಗೆ ಹಿಡಿಯಬೇಕೆಂಬುದನ್ನು ನಿರೂಪಿಸುವ ಶಾಸ್ತ್ರ. ಶಾಸ್ತ್ರೀಯ ನಿರೂಪಣೆಗಳ ಪ್ರಕಾರ ಮೂರ್ತಿಯ ಒಂದು ರೂಪವು ನ್ಯಾಸ (ರೂಪ, ಸಂಯೋಜನೆ), ಅಲಂಕಾರ (ಆಭರಣ, ವಸ್ತ್ರಕೇಶ ಮುಂತಾದವು), ಭಾಘಕಕ್ಷ (ಆಸನ), ಮುದ್ರಾ (ಹಸ್ತ ಮುದ್ರಿಕೆಗಳು, ಆಯುಧ ದೇವತೆಯ ಕೈಯಲ್ಲಿರುವ ಆಯುಧಗಳು), ವಾಹನ, ಉಪದೇವ (ಪ್ರಧಾನ ದೇವತೆಯ ಜೊತೆ ತೋರಿಸಲ್ಪಡುವ ಇತರ ಕಡಿಮೆ ಮಹತ್ವದ ದೇವತೆಗಳು, ಪುರುಷ ದೇವತೆಗಳ ಸಂದರ್ಭದಲ್ಲಿ ಅನ್ಯ ಸ್ತ್ರೀದೇವತೆಗಳು), ಅರಿ (ದೇವತೆಯ ವೈರಿ) ಹಾಗೂ ಸ್ತುವಕ (ಭಕ್ತರು ಹಾಗೂ ಇತರ ಪರಿಚಾರಕರು) ಎಂಬ ೯ ಬಗೆಯ ಅಂಗಾಂಗಗಳನ್ನು ಒಳಗೊಂಡಿದೆ.

ಪ್ರಸ್ತುತ ಅಧ್ಯಯನ ಕ್ಷೇತ್ರವಾದ ಚಿತ್ರದುರ್ಗ ಪರಿಸರದಲ್ಲಿಯೂ ಅನೇಕ ಬಗೆಯ ಶಿಲ್ಪಗಳು ಕಂಡುಬಂದಿವೆ. ಇಲ್ಲಿ ಅಗತ್ಯವಾಗಿ ನಮೂದಿಸುವ ಮಾತೊಂದಿದೆ. ಪ್ರತಿ ದೇವಾಲಯದಲ್ಲಿನ ವಿವಿಧ ಮೂರ್ತಿಗಳನ್ನು ಆಯಾ ದೇವಾಲಯದ ವಾಸ್ತುಶಿಲ್ಪವನ್ನು ವಿವರಿಸುವಾಗಲೇ ಸವಿವರವಾಗಿ ಅಧ್ಯಯನ ನಡೆಸಲಾಗಿದೆ. ಪ್ರಸ್ತುತ ಅಧ್ಯಾಯವು ದೇವಾಲಯಕ್ಕೆ ಹೊರತಾಗಿರುವ ಶಿಲ್ಪಗಳ ವಿವರಣೆಗಳನ್ನು ಒಳಗೊಂಡಿದೆ. ಅಂದರೆ ಕೋಟೆ ಪ್ರಾಕಾರ, ಬೆಟ್ಟದ ಬಂಡೆಗಳ ಮೇಲಿನ ಶಿಲ್ಪ, ಹಾಗೂ ಪ್ರಸ್ತುತ ಅಧ್ಯಯನ ಪರಿಸರದಿಂದ ಸಂಗ್ರಹಿಸಿ, ಸ್ಥಳೀಯ ಪ್ರಾಚ್ಯವಸ್ತು ಇಲಾಖೆಯಲ್ಲಿ ಸಂಗ್ರಹಿಸಲ್ಪಟ್ಟ ವಿವಿಧ ಪ್ರಭೇದದ ಶಿಲ್ಪಗಳಿಂದ ಕೂಡಿದೆ. ಅಧ್ಯಯನದ ಉದ್ದೇಶದಿಂದ ಮೂರ್ತಿಶಿಲ್ಪಗಳನ್ನು ಉಬ್ಬುಶಿಲ್ಪಗಳು ಮತ್ತು ಪೂರ್ಣ ಶಿಲ್ಪಗಳು ಎಂದು ವಿಂಗಡಿಸಲಾಗಿದೆ.

೪.೧ ಉಬ್ಬುಶಿಲ್ಪ

ಉಬ್ಬುಶಿಲ್ಪಗಳು ಶಿಲ್ಪ ಪ್ರಕಾರದ ಬಹುಮುಖ್ಯ ರೂಪಗಳಲ್ಲೊಂದು. ಇದು ಪೂರ್ಣಶಿಲ್ಪಕ್ಕೆ ಹೊರತಾದದ್ದು. ಒಂದು ಶಿಲ್ಪದ ಕೃತಿಯನ್ನು ಅದರ ಹಿಂದೆ, ಮುಂದೆ ಮತ್ತು ಮಗ್ಗುಲಲ್ಲಿ ನಿಂತು ನೋಡಲು ಸಾಧ್ಯವಾದರೆ ಇದನ್ನು ಒಂದು ಚಿತ್ರವನ್ನು ನೋಡುವಂತೆ ಕೇವಲ ಇದಿರಿನಿಂದ ಮಾತ್ರ ನೋಡಬಹುದಾಗಿದೆ.[೧] ಉಬುಶಿಲ್ಪಕ್ಕೆ ಸ್ವತಂತ್ರವಾದ ಮೈ ಇರುವುದಿಲ್ಲ. ಇದನ್ನು ಶೀರಾ ಮುಂಚಾಚಿರುವಂತೆ ಕೆತ್ತಲಾಗುವುದಿಲ್ಲ. ಇಲ್ಲಿ ದೇಹದ ಪ್ರತಿ ಭಾಗವು ಹಿನ್ನೆಲೆಗೆ ಅಂಟಿಕೊಂಡಿರುತ್ತದೆ. ಶಿಲ್ಪಿಯು ತನ್ನ ಕಂಡರಣೆಯ ಮಾಧ್ಯಮದ ಮೇಲೆ ಸಣ್ಣ ಮತ್ತು ದಪ್ಪ ಎಂಬ ಮಾನದಂಡದಿಂದ ಕಡೆಯುತ್ತಾನೆ. ಮೈ ಮುಖಗಳನ್ನು ಒಂದು ದಪ್ಪದಲ್ಲಿಯೂ, ಉಡುಪು ಆಭರಣಗಳನ್ನು ಒಂದು ದಪ್ಪದಲ್ಲಿಯೂ, ಹಿನ್ನೆಲೆಯ ವಿವರಗಳನ್ನು ಮತ್ತೊಂದು ದಪ್ಪದಲ್ಲಿಯೂ ಕೆತ್ತಬೇಕು. ಶಿಲ್ಪ ಈ ತಂತ್ರದಲ್ಲಿ ಕೆತ್ತಿದ್ದು, ಹಿನ್ನೆಲೆಗೆ ಅಂಟಿಕೊಂಡಿರುತ್ತದೆ ಎಂಬುದು ಗಮನಿಸಬೇಕಾದ ಸಂಗತಿ.

ಭಾರತೀಯ ಶಿಲ್ಪದ ಇತಿಹಾಸವೆಂದರೆ ಒಂದು ರೀತಿಯಲ್ಲಿ ಉಬ್ಬುಶಿಲ್ಪದ ಇತಿಹಾಸವೇ ಆಗಿದೆ. ಇವೆರಡೂ ಒಂದರೊಂದಲ್ಲಿ ಬೆರೆತುಹೋಗಿವೆ. ಕ್ರಿ.ಪೂ.೩೦೦೦ದಷ್ಟು ಹಳೆಯದಾದ ಸಿಂಧೂ ನಾಗರಿಕತೆಯಲ್ಲಿ ದೊರೆತ ಮುದ್ರೆಗಳ ಮೇಲಿನ ಉಬ್ಬುಚಿಹ್ನೆಗಳು ಈ ನಿಟ್ಟಿನಲ್ಲಿ ಗಮನಾರ್ಹವಾದವು.[೨] ಇದರಿಂದ ಕ್ರಿಸ್ತಪೂರ್ವದಲ್ಲಿಯೇ ಉಬ್ಬುರಚನೆಯ ತಂತ್ರ ಉತ್ಪನ್ನವಾಗಿದ್ದು ಮುಂದೆ ಮೌರ್ಯರ ಹಾಗೂ ಶಾತವಾಹನರ ಅಮರಾವತಿ, ಕಾರ್ಲೆಗಳ ಉಬ್ಬು ಕೆತ್ತನೆಗಳು ಕಲಾತ್ಮಕತೆಯನ್ನು ಶೃತಪಡಿಸುತ್ತವೆ. ಇವು ತರುವಾಯದ ಅವಧಿಯಲ್ಲಿ ದೇವಾಲಯದ ಗೋಡೆ, ಮತ್ತು ಕಂಬಗಳನ್ನು ಸೇರಿ ಅಲಂಕರಿಸಲ್ಪಟ್ಟವು. ಇವುಗಳನ್ನು ಅಧ್ಯಯನದ ಅನುಕೂಲಕ್ಕಾಗಿ ದೇವತಾ ಶಿಲ್ಪ, ವ್ಯಕ್ತಿಗತ ಶಿಲ್ಪ ಮತ್ತು ಇತರ ಶಿಲ್ಪಗಳೆಂದು ವಿಂಗಡಿಸಬಹುದು.

೪.೧.೧ ದೇವತಾ ಶಿಲ್ಪಗಳು

ದೇವತಾ ಶಿಲ್ಪಗಳನ್ನು ಪುನಃ ಶೈವ, ಶಾಕ್ತ ಎಂದು ವಿಂಗಡಿಸಿ ಅಧ್ಯಯನ ನಡೆಸುವುದು ಸೂಕ್ತವಾಗಿದೆ.

೪.೧.೧.೧ ಶೈವ ಶಿಲ್ಪಗಳು

ಗಣೇಶ ವಿಗ್ರಹಗಳು

ಗಣೇಶನ ವಿಗ್ರಹಗಳಲ್ಲಿ ಸಾಧಾರಣವಾಗಿ ಚತುರ್ಭಾಹುಗಳಿರುವುದು ಹೆಚ್ಚು. ಆದರೆ ತೀರಾ ವಿರಳವಾಗಿರುವ ದ್ವಿಬಾಹು ಗಣೇಶನ ಎರಡು ವಿಗ್ರಹಗಳು ಚಿತ್ರದುರ್ಗ ಪರಿಸರದಲ್ಲಿ ಲಭ್ಯವಾಗಿವೆ.

ಮೊದಲ ದ್ವಿಬಾಹು ಗಣೇಶನ ವಿಗ್ರಹ ಪ್ರಸ್ತುತ ಗಂಡುಗಲಿಯ ವಂಶಸ್ಥರು ನಡೆಸುತ್ತಿರುವ ಖಾಸಗಿ ವಸ್ತು ಸಂಗ್ರಹಾಲಯದಲ್ಲಿದೆ.[೩] ಸುಮಾರು ೪೦ ರಿಂದ ೪೫ ಸೆಂ.ಮೀ. ಎತ್ತರವಿದ್ದು, ನಿಂತ ಭಂಗಿಯಲ್ಲಿರುವ ಒಂದು ಉಬ್ಬುಶಿಲ್ಪವಿದು. ದುರಾದೃಷ್ಟವಶಾತ್ ಬಲಕಿವಿಯ ಸ್ವಲ್ಪಭಾಗ, ಎರಡೂ ಕೈಗಳು ಮತ್ತು ಮೋದಕ ಪಾತ್ರೆಯ ಮೇಲಿಟ್ಟ ಸೊಂಡಿಲಿನ ಭಾಗಮುರಿದು ಹೋಗಿವೆ. ಗಿಡ್ಡಾಕೃತಿಯ ಸ್ಥೂಲಕಾಯ, ನೆತ್ತಿಯ ಮೇಲೆ ಹೂವು, ಸ್ವಲ್ಪ ಜೋಲುಬಿದ್ದ ಎದೆ, ದಪ್ಪ ತೋಳುಗಳು, ಕಾಣದಷ್ಟು ಎದ್ದುಕಾಣುವ ಡೊಳ್ಳು ಹೊಟ್ಟೆ, ಮಧ್ಯದಲ್ಲಿ ಸರಳವಾದ ಹಿಡಿಕೆಯುಳ್ಳ ಉಬ್ಬಿದ ಕಿಬ್ಬೊಟ್ಟೆಯನ್ನು ಬಳಸಿ ಮಾಲಾಕಾರದಲ್ಲಿರುವ ಎರಡೆಳೆಯ ಸೊಂಟಪಟ್ಟಿ, ಎರಡು ಬದಿಗಳಲ್ಲಿ ಸೊಂಟದಿಂದ ಅಸ್ಪಷ್ಟವಾಗಿ ಇಳಿಬಿದ್ದ ಸುರುಳಿ ವಸ್ತ್ರವಿದೆ. ದಪ್ಪ ಉಪವೀತಧಾರಿಯಾಗಿದೆ. ಪಾದಗಳನ್ನು ಒಂದು ಸಾಧಾರಣ ಮಣೆಯ ಮೇಲಿಟ್ಟಿದೆ. ಗಜಮುಖದ ಕುಂಭಸ್ಥಳವು ಸಹಜವಾಗಿದೆ. ಕೆಳಭಾಗವು ಹೆಚ್ಚು ಅಗಲವಾಗಿರುವಂತೆ ವಿಶಿಷ್ಟ ರೀತಿಯ ಕಿವಿಗಳನ್ನು ಬಿಡಿಸಲಾಗಿದೆ. ದೇಹವು ಸ್ಥೂಲವಾಗಿದ್ದರೂ ಪ್ರಮಾಣಬದ್ಧವಾದ, ಆಕರ್ಷಕ ಮೈಕಟ್ಟನ್ನು ಕಡೆದಿರುವರು. ಹೀಗೆ ಇದು ಒಂದು ಉತ್ತಮ ಶಿಲ್ಪಕಲಾಕೃತಿಯಾಗಿ ಕಾಣುವುದು. ಕಿವಿಯ ಮಾದರಿ, ಸ್ಪಷ್ಟವಾಗಿ ತೋರಿಸಿದ ಜೋಲುಬಿದ್ದ ಎದೆ, ನಿಂತರೀತಿ, ದಪ್ಪನೆಯ ಒಂದೆಳೆಯ ಸರಳ ಉಪವೀತ, ಕಟ್ಟುನಿಟ್ಟಾದ ನಿರಾಭರಣ ರೂಪ ಒಂದೊಂದೂ ಇದರ ವಿಶಿಷ್ಟ ಶೈಲಿಯ ಲಕ್ಷಣವೆನ್ನಬಹುದು. ಬಹುಶಃ ಗೋಕರ್ಣ ಇಡುಗುಂಜಿಯ ಶಿಲಾಮೂರ್ತಿಗಳಲ್ಲಿರುವಂತೆ ಇದರ ಬಲ, ಎಡಗೈಗಳಲ್ಲಿ ಅನುಕ್ರಮವಾಗಿ ಮೂಲಂಗಿ ಮತ್ತು ಮೋದಕ ಪಾತ್ರೆಗಳಿದ್ದಿರಬೇಕು.

ಕೆಲವರ್ಷಗಳ ಹಿಂದೆ ಕರ್ನಾಟಕದ ಬೇರೆಬೇರೆ ಸ್ಥಳಗಳಲ್ಲಿ ದ್ವಿಬಾಹು ಗಣೇಶನ ಮೂರ್ತಿಗಳು ಶೋಧವಾಗಿವೆ. ಇವುಗಳಲ್ಲಿ ಸುಪ್ರಸಿದ್ಧ ಯಾತ್ರಾಸ್ಥಳ ಗೋಕರ್ಣದಲ್ಲಿಯ ಕ್ರಿ.ಶ.೩-೪ನೇ ಶತಮಾನದ ಮಹಾಸಿದ್ಧಿ ವಿನಾಯಕ ಮತ್ತು ಬನವಾಸಿಯ ಗಣೇಶನ ಶಿಲಾಮೂರ್ತಿಗಳನ್ನು ಇದು ನೆನಪಿಗೆ ತರುತ್ತದೆಯಾದರೂ, ಶೈಲಿಯಲ್ಲಿ ಅವುಗಳಿಗಿಂತ ಸ್ವಲ್ಪ ಭಿನ್ನವಾಗಿದೆ.

ವಿಗ್ರಹದ ಸರಳತೆ, ನಿಂತರೀತಿ ಹಾಗೂ ಮೇಲೆಹೇಳಿದ ಇತರ ವಿಗ್ರಹಗಳೊಡನೆ ಅಲ್ಪಸ್ವಲ್ಪ ಮಟ್ಟಿನ ಹೋಲಿಕೆ, ನೆತ್ತಿಯ ಮೇಲಿನ ಅಸ್ಪಷ್ಟ ಕಮಲದ ಪುಷ್ಪ, ಹಾಗೂ ಉಪವೀತ, ಇವುಗಳ ಹಿನ್ನೆಲೆಯಲ್ಲಿ ಈ ವಿಗ್ರಹ ಪ್ರಾಯಶಃ ಕ್ರಿ.ಶ. ೪ನೇ ಶತಮಾನದ್ದು ಎನ್ನಬಹುದು.[೪]

ದ್ವಿಬಾಹು ಗಣೇಶನ ಮತ್ತೊಂದು ಉಬ್ಬುಶಿಲ್ಪವು ಚಿತ್ರದುರ್ಗದ ಗಾರೆಹಟ್ಟಿಯ ಸಿದ್ಧಿ ವಿನಾಯಕನ ಗುಡಿಯಲ್ಲಿದೆ. ಈ ಗಣೇಶನ ಶಿಲ್ಪಕ್ಕೆ ಇತ್ತೀಚೆಗೆ ಗುಡಿಕಟ್ಟಿರುವರು. ಕಣಶಿಲೆಯಲ್ಲಿ ಕಡೆದ ಗಣೇಶನ ಉಬ್ಬುಶಿಲ್ಪವು ಸರಿಸುಮಾರು ಮೂರು ಅಡಿ ಎತ್ತರವಿರುವುದು. ಸರಳ ಆಲಂಕರಣದಿಂದ ಕೂಡಿದ ಗಣೇಶನು, ಅಗಲವಾದ ಕಿವಿ, ಇಳಿಬಿದ್ದ ಹೊಟ್ಟೆ ಹೊಂದಿದ್ದು, ಸುಖಾಸೀನ ಭಂಗಿಯಲ್ಲಿ ಕುಳಿತಿರುವನು. ಕಾಲ್ಕಡಗ, ಒಂದೆಳೆಯ ಉಪವೀತ, ಕಂಠಿಹಾರ ಧರಿಸಿದ್ದು, ತಲೆಯಲ್ಲಿ ಯಾವುದೇ ಬಗೆಯ ಕಿರೀಟವಿಲ್ಲ. ಸರ್ಪವು ಹೊಟ್ಟೆಯನ್ನು ಸುತ್ತುವರಿದಿದೆ. ಗಣೇಶನು ತನ್ನ ಬಲ, ಎಡ ಕೈಗಳಲ್ಲಿ ಅನುಕ್ರಮವಾಗಿ ಮೋದಕ ಮತ್ತು ಲೇಖನಿ ಹಿಡಿದಿರುವನು. ಶಿಲ್ಪವು ಹೊಟ್ಟೆ ಭಾಗದಲ್ಲಿ ಭಗ್ನಗೊಂಡಿದ್ದು, ಪುನಃ ಜೋಡಿಸಿ ಪ್ರತಿಷ್ಠಾಪಿಸಲಾಗಿದೆ. ಶಿಲ್ಪದ ಕೆತ್ತನೆಯನ್ನು ಗಮನಿಸಿದರೆ ಕ್ರಿ.ಶ. ೧೩-೧೪ನೇ ಶತಮಾನದ ಶಿಲ್ಪದಂತೆ ಕಾಣಬರುತ್ತದೆ.

ಬೆಟ್ಟವನ್ನೇರುವ ಹಾದಿಯಲ್ಲಿ ಈಗ ಮೊದಲನೆಯದೆನಿಸಿರುವ ಕೋಟೆಯು ಇಲ್ಲಿನ ಏಳುಸುತ್ತುಗಳಲ್ಲಿ ಮೂರನೆಯ ಸುತ್ತಿನದು. ಇದರ ಮಹಾದ್ವಾರದ ಕೋಟೆ ಗೋಡೆಯ ಮೇಲೆ ಸುಮಾರು ಎರಡು ಅಡಿ ಎತ್ತರದ ಗಣೇಶನ ಶಿಲ್ಪವನ್ನು ಕಡೆಯಲಾಗಿದೆ. ಪೂರ್ವಾಭಿಮುಖವಾಗಿರುವ ಈ ಶಿಲ್ಪ ಸುಖಾಸೀನ ಭಂಗಿಯಲ್ಲಿದ್ದು, ತನ್ನ ಕೈಯಲ್ಲಿ ಅಂಕುಶ ಪಾಶ, ಮೋದಕ ಮತ್ತು ಲೇಖನಿ ಹಿಡಿದಿದೆ. ತಲೆಗೆ ಕರಂಡ ಮುಕುಟವನ್ನು ಧರಿಸಿದ್ದು, ಕೊರಳಲ್ಲಿ ಹಾರ, ಕೈಕಂಕಣ, ಕಾಲ್ಕಡಗ, ಉದರದಲ್ಲಿ ನಾಗಬಂಧ ಧರಿಸಿದೆ. ಶಿಲ್ಪದ ಪಕ್ಕದಲ್ಲಿ ಪೂರ್ಣಕುಂಭವಿದೆ. ಇದು ಶೈಲಿಯ ದೃಷ್ಟಿಯಿಂದ ಪಾಳೆಯಗಾರರ ಅವಧಿಯದ್ದಾಗಿದೆ. ಇದೇ ಬಗೆಯ ಮತ್ತೊಂದು ಶಿಲ್ಪವನ್ನು ಇದೇ ಕೋಟೆ ಪ್ರಾಕಾರದ ಮೇಲೆ ಕಾಮನಬಾವಿಯ ಬಳಿ ಉತ್ತರಾಭಿಮುಖವಾಗಿ ಕಡೆದಿರುವರು.

ಭೈರವ

ಮೂರನೇ ಸುತ್ತಿನ ಕೋಟೆ ಪ್ರಾಕಾರದ ಮೇಲೆ ಈ ಹಿಂದೆ ವಿವರಿಸಿದ ಗಣೇಶನ ಶಿಲ್ಪದ ಎಡಬದಿಯಲ್ಲಿ ನಗ್ನಭೈರವನ ಶಿಲ್ಪವಿದೆ. ಒಂದು ಅಡಿ ಎತ್ತರವಿರುವ ಭೈರವನ ಶಿಲ್ಪವು ಪೂರ್ವಾಭಿಮುಖವಾಗಿದೆ. ತನ್ನ ನಾಲ್ಕು ಕೈಗಳಲ್ಲಿ ಖಡ್ಗ, ತ್ರಿಶೂಲ, ಕಪಾಲ ಮತ್ತು ರುಂಡಗಳನ್ನು ಭೈರವನು ಹಿಡಿದಿರುವನು. ಶಿಲ್ಪವು ಕಿರೀಟಮುಕುಟ ಧಾರಿಯಾಗಿದ್ದು, ಉಳಿದಂತೆ ಧರಿಸಿರುವ ಆಭರಣಗಳು ಗೋಚರವಾಗುತ್ತಿಲ್ಲ.

ವೀರಭದ್ರ

ಈ ಹಿಂದೆ ವಿವರಿಸಿದ ಕಾಮನ ಸುತ್ತಿನ ಕೋಟೆಯ ಪ್ರವೇಶದ್ವಾರದ ಮುಂದಿನ ಕೋಟೆ ಗೋಡೆಯಲ್ಲಿ ಉತ್ತರಾಭಿಮುಖವಾದ ಎರಡು ಸ್ತಂಭಗಳ ಚೌಕಟ್ಟಿನ ಮೇಲಿನ ಕಮಾನಿನಾಕಾರದ ರಚನೆಯಲ್ಲಿ ವೀರಭದ್ರನ ಶಿಲ್ಪವನ್ನು ಕೆತ್ತಿರುವರು. ಸರಿಸುಮಾರು ಒಂದು ಅಡಿ ಎತ್ತರದ ವೀರಭದ್ರನು ತನ್ನ ನಾಲ್ಕು ಕೈಗಳಲ್ಲಿ ಬಿಲ್ಲು, ಬಾಣ, ಖಡ್ಗ ಮತ್ತು ಗುರಾಣಿಯನ್ನು ಹಿಡಿದು ತ್ರಿಭಂಗಿಯಲ್ಲಿ ನಿಂತಿರುವನು. ವೀರಭದ್ರನು ಗುರಾಣಿಯನ್ನು ವ್ಯಕ್ತಿಯ ರುಂಡವೊಂದರ ಮೇಲಿಟ್ಟಿರುವುದು ಇದರ ವೈಶಿಷ್ಟ್ಯ. ಕಿರೀಟಮುಕುಟ, ಕರ್ಣಕುಂಡಲ, ಯಜ್ಞೋಪವೀತ, ಭುಜವಲ್ಯ, ಕೆಯೂರ, ಕಾಲಿಗೆ ದಪ್ಪನೆಯ ಕಡಗ ಧರಿಸಿರುವನು. ಈ ಶಿಲ್ಪದ ಬಲಬದಿಯಲ್ಲಿ ಕೈಮುಗಿದು ನಿಂತ ದಕ್ಷಬ್ರಹ್ಮನ ವಿಗ್ರಹವಿದೆ.

ಶಿವಲಿಂಗ ಮತ್ತು ನಂದಿ

ಈ ಪೂರ್ವದಲ್ಲಿ ವಿವರಿಸಿದ ಕೋಟೆ ಗೋಡೆಯ ಮೇಲೆ ದಕ್ಷಿಣಾಭಿಮುಖವಾಗಿ ಎರಡು ಸ್ತಂಭಗಳ ಮೇಲೆ ಕಮಾನಿನಾಕಾರದ ಕತ್ತನೆಗಳ ಮಧ್ಯೆ ಶಿವಲಿಂಗ ಮತ್ತು ಲಿಂಗಕ್ಕೆ ಎದುರಾಗಿರುವಂತೆ ಬಲಬದಿಯಲ್ಲಿ ನಂದಿಯ ಶಿಲ್ಪವನ್ನು ಕಡೆದಿರುವರು. ಶಿವಲಿಂಗವು ಸರಿಸುಮಾರು ಒಂದು ಅಡಿ ಎತ್ತರವಿದ್ದು, ಲಿಂಗದ ಜಲಹರಿಯು ಎಡಕ್ಕಿದೆ. ನಂದಿಯ ಶಿಲ್ಪವು ಎರಡು ಅಡಿ ಎತ್ತರವಿದ್ದು, ಇದರ ಮುಖಭಾಗ ಭಗ್ನವಾಗಿದೆ. ಕಮಾನಿನಾಕಾರದ ರಚನೆಯ ಒಳಭಾಗದಲ್ಲಿ ಹೂಬಳ್ಳಿಗಳ ಅಲಂಕರಣೆಗಳಿರುವುದರಿಂದ ಆಕರ್ಷಕವಾಗಿ ಗೋಚರಿಸುತ್ತವೆ.

ಕಾಮನಬಾಗಿಲ ಪ್ರಾಕಾರದ ಮೇಲಿನ ಮನ್ಮಥ ಶಿಲ್ಪ

ಚಿತ್ರದುರ್ಗದ ಕೋಟೆಯಲ್ಲಿಯೇ ಕಾಮನಬಾಗಿಲ ಅತ್ಯಂತ ಸುಂದರವಾದದ್ದು. ವಿಜಯನಗರ ಕಾಲದ ರಚನೆಯ ಎರಡು ಗೋಡೆಗಳ ನಡುವಣ ಮೂರು ತಿರುವುಗಳ ಡೊಂಕು ಮಾರ್ಗವನ್ನು ಬಳಸಿ ಈ ಮಹಾದ್ವಾರ ತಲುಪಬೇಕು. ಈ ದ್ವಾರ ಪ್ರಾಕಾರದ ಗೋಡೆಮೇಲೆ ಪೂರ್ವಾಭಿಮುಖವಾಗಿ ರಾಜಠೀವಿಯಲ್ಲಿ ಕುಳಿತ ಅಪರೂಪದ ಶಿಲ್ಪವಿದು. ಸುಮಾರು ಎರಡು ಅಡಿ ಎತ್ತರ ಇದೆ. ರಾಜಾಸನದಲ್ಲಿ ಕುಳಿತ ವ್ಯಕ್ತಿ ದೃಢಕಾಯ ಶರೀರ ಹೊಂದಿದ್ದು, ಸರ್ವಾಭರಣ ಭೂಷಿತನಾಗಿರುವನು. ಕಂಠಿಹಾರ, ಮುತ್ತಿನಸರ, ಮುತ್ತಿನ ಯಜ್ಞೋಪವೀತ, ಸೊಂಟಪಟ್ಟಿ, ಭುಜಾಭರಣ, ತೋಳಬಂದಿ, ಕೈಕಾಲುಗಳಲ್ಲಿ ಕಡಗ, ಕಿವಿಯಲ್ಲಿ ಕುಂಡಲಗಳಿದ್ದು, ದೋತಿ ತೊಟ್ಟಿದ್ದಾನೆ. ಹಣೆಯ ಮೇಲೆ ಬೊಟ್ಟಿನ ಗುರುತಿದೆ. ಬಲಗೈಯಿಂದ ಕೊರಳ ಹಾರವನ್ನು ನವಿರಾಗಿ ನೀವುತ್ತ ಕುಳಿತಿರುವ ಈತ ತನ್ನ ಎಡಹಸ್ತದಲ್ಲಿ ಮಧುಪಾತ್ರೆಯಂತೆ ತೋರುವ ಕುಂಡಿಕೆಯನ್ನು ಹಿಡಿದಿರುವನು. ಈ ವ್ಯಕ್ತಿ ಧರಿಸಿರುವ ಅಲಂಕಾರಿಕ ಟೋಪಿಯನ್ನು ಹೋಲುವ ತಲೆಯುಡಿಗೆ ವಿಶಿಷ್ಟವಾದದ್ದು. ಎಡ ಮತ್ತು ಬಲ ಈ ಎರಡೂ ಬದಿಗಳಲ್ಲಿ ಭುಜದಿಂದ ಕೆಳಕ್ಕೆ ಮೊಳಕೈವರೆಗೂ ಬಾಗಿರುವ ಟೋಪಿಯ ಎರಡೂ ತುದಿಗಳಲ್ಲಿ ಪರಸ್ಪರ ವಿರುದ್ಧ ದಿಕ್ಕಿಗೆ ತಲೆ ತಿರುಗಿಸಿ ನೋಡುತ್ತಿರುವ ಎರಡು ಗಿಳಿಗಳು ಕುಳಿತಿರುವಂತೆ ಬಿಡಿಸಲಾಗಿದೆ. ಈ ಎರಡೂ ಗಿಳಿಗಳು ತಮ್ಮ ಕೊರಳುಗಳಲ್ಲಿ ಬಳೆಗಳನ್ನು ಹೊಂದಿವೆ. ಈ ಶಿಲ್ಪದ ಎಡ ಬಲಗಳಲ್ಲಿ ಆಕರ್ಷಕವಾಗಿ ಬಿಡಿಸಲಾಗಿರುವ ಬಳ್ಳಿಯ ವಿನ್ಯಾಸಗಳು ಕಲಾತ್ಮಕ ಮೆರುಗನ್ನು ಒದಗಿಸಿವೆ. ಪ್ರಸ್ತುತ ಶಿಲ್ಪದ ಬಲಬದಿಯ ಕಾಮನಬಾವಿಯ ಹಿನ್ನೆಲೆಯಲ್ಲಿ ಇದು ಕಾಮ ಅಥವಾ ಮನ್ಮಥನ ಶಿಲ್ಪವೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.[೫] ಇದೇ ಕೋಟೆಯ ಗೋಡೆಯಮೇಲೆ ಮೂರು ಮೀಟರ್ ಉದ್ದದ ಆದಿಶೇಷ, ಪುಟ್ಟನಂದಿ, ಗಂಡಭೇರುಂಡ, ಕಮಲ, ಹಂಸ, ಮಿಥುನ ಶಿಲ್ಪಗಳು ಕಾಣಬರುತ್ತವೆ.

೪.೧.೧.೨. ಶಾಕ್ತ ಶಿಲ್ಪಗಳು

ಚಿತ್ರದುರ್ಗ ಪರಿಸರದಲ್ಲಿನ ಸ್ತ್ರೀ ಉಬ್ಬು ಶಿಲ್ಪಗಳು ತೀರಾ ವಿರಳವಾಗಿದ್ದು, ಪ್ರಸ್ತುತ ಅಧ್ಯಯನದಲ್ಲಿ ಏಕೈಕ ಶಿಲ್ಪ ದೊರೆತಿದೆ. ಈ ಹಿಂದೆ ವಿವರಿಸಿರುವಂತೆ ಈ ಶಿಲ್ಪವೂ ಕಾಮನ ಬಾಗಿಲ ಸುತ್ತಿನ ಕೋಟೆಗೋಡೆಯ ಮೇಲೆ ದಕ್ಷಿಣಾಭಿಮುಖವಾಗಿ ಲಕ್ಷ್ಮಿಯ ಶಿಲ್ಪವಿದೆ. ಇದು ಎರಡು ಸ್ತಂಭಗಳು ಮತ್ತು ಕಮಾನುಗಳ ರಚನೆಯ ಮಧ್ಯದಲ್ಲಿ ಅರ್ಧ ಅಡಿ ಎತ್ತರದ ಪೀಠದ ಮೇಲೆ ಒಂದು ಅಡಿ ಎತ್ತರದ ಲಕ್ಷ್ಮಿ ವಿಗ್ರಹವನ್ನು ಕಡೆಯಲಾಗಿದೆ. ಮುಖಸಹಿತ ಮುಂದಿನ ಎರಡು ಕೈಗಳು ಭಗ್ನಗೊಂಡಿರುವ ಶಿಲ್ಪದ ಎರಡು ಕೈಗಳಲ್ಲಿ ಪದ್ಮಗಳಿವೆ. ಸುಖಾಸೀನ ಭಂಗಿಯನ್ನು ಕುಳಿತಿರುವ ಲಕ್ಷ್ಮಿಯು ಕರಂಡಮುಕುಟ ಧರಿಸಿದ್ದು, ಕರ್ಣಕುಂಡಲ, ಕಾಲ್ಕಡಗ, ಹಾರ, ಕೆಯೂರ ಧರಿಸಿರುವಳು.

೧.೧.೨. ವ್ಯಕ್ತಿಗತ ಶಿಲ್ಪಗಳು

ಕಟ್ಟಿಗೆ ಸಂಗಣ್ಣನ ವಿಗ್ರಹ

ಚಿತ್ರದುರ್ಗ ಬೆಟ್ಟದ ಪಶ್ಚಿಮಕ್ಕಿರುವ ಚಂದ್ರವಳ್ಳಿಯಲ್ಲಿ ಧವಳಪ್ಪನಗುಡ್ಡವಿದ್ದು, ನಗರದಿಂದ ೪ ಕಿ.ಮೀ. ದೂರದಲ್ಲಿದೆ. ಈ ಗುಡ್ಡವನ್ನೇರುವ ಹಳೆಯ ಮಾರ್ಗದ ಎಡಬದಿಯಲ್ಲಿನ ಕಡಿದಾದ ಭಾರೀ ಬಂಡೆಯಲ್ಲಿ ನೈಸರ್ಗಿಕವಾಗಿ ರೂಪಗೊಂಡಿರುವ ದೊಡ್ಡ ಕುಳಿಯೊಂದರ ಬಳಿ ಈ ಶಿಲ್ಪವಿದೆ. ಇಲ್ಲಿಯ ಬೃಹತ್ ಬಂಡೆಗೆ ಒರಗಿಕೊಂಡಂತೆ ಕಡೆಯಲಾಗಿರುವ ಪ್ರಸ್ತುತ ಶಿಲ್ಪವನ್ನು ಭಕ್ತರು ಕಟ್ಟಿಗೆ ಸಂಗಣ್ಣ ಎಂಬ ಹೆಸರಿನಿಂದ ಸಂಬೋಧಿಸುತ್ತಾರೆ. ನಿಗೂಢ ಎಡೆಯಲ್ಲಿರುವ ಈ ಶಿಲ್ಪಕ್ಕೆ ಪ್ರಸ್ತುತ ಪೂಜೆಯೂ ಸಲ್ಲುತ್ತಿದೆ.

ಉತ್ತರದಿಕ್ಕಿಗೆ ಮುಖಮಾಡಿರುವ ಕಟ್ಟಿಗೆ ಸಂಗಣ್ಣನ ಶಿಲ್ಪವನ್ನು ಹಸಿರುಶಿಲೆಯಲ್ಲಿ ಕಡೆಯಲಾಗಿದ್ದು, ೧.೧೭ ಮೀಟರ್ ಎತ್ತರ, ೪೨ ಸೆಂ.ಮೀ. ಅಗಲ, ಹಾಗೂ ೩೧.ಸೆಂ.ಮೀ. ದಪ್ಪ ಇದೆ. ಶಿಲ್ಪಲಕ್ಷಣದಲ್ಲಿ ಈ ವ್ಯಕ್ತಿಯು ಕೊರಳಲ್ಲಿ ದೊಡ್ಡದಾದ ಲಿಂಗದಕಾಯಿ ಅಥವಾ ಕರಂಡಿಕೆ ಧರಿಸಿರುವನು. ಮೊಣಕಾಲಿನ ಕೆಳಭಾಗದವರೆಗೆ ಉದ್ದನೆಯ ನಿಲುವಂಗಿಯನ್ನು ಧರಿಸಿದ್ದು,

ಸಮಭಂಗಿಯಲ್ಲಿ ನಿಂತು ವಿನಮ್ರತೆಯಿಂದ ಕೈಮುಗಿಯುತ್ತಿರುವಂತೆ ಶಿಲ್ಪಿತವಾಗಿದ್ದಾನೆ. ಇದರ ಮುಖವನ್ನು ಇತ್ತೀಚಿಗೆ ಕಿಡಿಗೇಡಿಗಳು ಸ್ವಲ್ಪ ಜೆಜ್ಜಿ ವಿರೂಪಗೊಳಿಸಿದ್ದರೂ ಅದರಿಂದ ಗಂಭೀರತೆ ಉಕ್ತವಾಗುತ್ತದೆ. ಮಡಚಿರುವ ತನ್ನ ಎಡಗೈಯಲ್ಲಿ ಸ್ಯಾಚೆಟ್‌ನಂತ ಚೀಲವಿದೆ. ಈ ವ್ಯಕ್ತಿ ತನ್ನ ಎಡ ಕಂಕುಳಲ್ಲಿ ಇರಿಸಿಕೊಂಡಿರುವ ಬೆತ್ತ ಅಥವಾ ದಂಡ ಈ ಶಿಲ್ಪದ ವೈಶಿಷ್ಟ್ಯತೆ. ಈ ಶಿಲ್ಪದಲ್ಲಿ ಬೆತ್ತ ಪ್ರಧಾನವಾಗಿ ಗೋಚರಿಸುತ್ತದೆ. ಇವನು ತನ್ನ ಕೂದಲನ್ನು ಹಿಂದಕ್ಕೆ ಬಾಚಿದಂತಿದ್ದು, ೧೦ ನೆರಿಗೆಗಳುಳ್ಳ ಕೇಶರಾಶಿಯನ್ನು ವ್ಯಕ್ತಿಯೋರ್ವನ ಬೋಳುತಲೆಗೆ ಟೋಫನ್ ಹಾಕಿದಂತೆ ಭಾಸವಾಗುತ್ತದೆ. ಎರಡೂ ಭುಜಗಳಮೇಲೆ ಬಾಚಿದ ನೀಳಕೇಶ ಇಳಿಬಿದ್ದಿದೆ. ಕೈಕಡಗ ಕಾಲುಕಡಗ, ರುದ್ರಾಕ್ಷಿಗಳಿಂದ ಕೂಡಿದ ಕರ್ಣಕುಂಡಲಗಳಿಂದ ದೇಹದ ಸೌಂದರ್ಯ ಹೆಚ್ಚಿದೆ. ಹಣೆಯಲ್ಲಿ ರುದ್ರನೇತ್ರವಿದೆ. ಒಟ್ಟಾರೆ ಈ ಶಿಲ್ಪವು ಅತ್ಯಂತ ಆಕರ್ಷಕವಾಗಿದ್ದು ವಿಶಿಷ್ಟವಾಗಿದೆ.

ಈ ಹಿಂದೆ ಹೇಳಿದಂತೆ ಈ ಶಿಲ್ಪವಿರುವುದು ಧವಳಪ್ಪನಗುಡ್ಡದ ಹಳೆಯ ಪ್ರವೇಶದ್ವಾರ ಬದಿಯಲ್ಲಿ. ಈ ಗುಡ್ಡದ ಬುಡದಲ್ಲಿನ ಶಾಸನವೊಂದು ಶಿವಭಕ್ತರಲ್ಲದವರು ಮೇಲಕ್ಕೆ ಹೋಗುವುದನ್ನು ನಿರ್ಬಂಧಿಸಿದ್ದ ಸಂಗತಿಯನ್ನು ತಿಳಿಸುವುದರೊಡನೆ ಇದೊಂದು ಕಟ್ಟಾ ಶೈವ ಪೀಠವಾಗಿತ್ತೆಂಬುದನ್ನು ಸೂಚಿಸುತ್ತದೆ. ಇದರೊಡನೆ ಇಲ್ಲಿನ ಲಿಂಗಗಳು, ಅಂಕಲಿಮಠ, ಹಿಮವತ್ ಕೇದಾರ ಪರಿಸರಗಳು ಕಟ್ಟಾ ಶೈವಪೀಠಗಳಾಗಿದ್ದವು. ಈ ವ್ಯಕ್ತಿಯು ತನ್ನ ಕೈಯಲ್ಲಿ ಹಿಡಿದಿರುವ ದಂಡವು ಅಧಿಕಾರದ ಸಂಕೇತವಾಗಿದ್ದು, ಇವನು ಈ ಶೈವಕ್ಷೇತ್ರದ ರಕ್ಷಕನಾಗಿ ಕಾರ್ಯ ನಿರ್ವಹಿಸುತ್ತಿದ್ದಂತೆ ತೋರುತ್ತದೆ. ಕಾಲಮಾನದ ದೃಷ್ಟಿಯಿಂದ ಕಲ್ಯಾಣದ ಚಾಲುಕ್ಯ ಅವಧಿಗೆ ಸೇರಬಹುದಾದ ಈ ಶಿಲ್ಪವು ಶಿವಭಕ್ತನದಾಗಿದ್ದು, ಕಲ್ಯಾಣ ಚಾಲುಕ್ಯರ ಅವಧಿಯಲ್ಲಿ ಈ ಕ್ಷೇತ್ರದಲ್ಲಿದ್ದ ಅಧಿಕಾರಿಯದ್ದಾಗಿರಬಹುದು.[೬] ಈಗ ಈ ಶಿಲ್ಪವಿರುವ ಎಡೆಯಲ್ಲಿ ಹಿಂದೊಮ್ಮೆ ಕಲ್ಲುಪೌಳಿಗಳ ಕುರುಹುಗಳಿದ್ದು, ಗುಡ್ಡದ ಬುಡದಿಂದ ಶಿಲ್ಪದವರೆಗೆ ಏರಲು ಪಾವಟಿಗೆಗಳಿರುವುದನ್ನು ಗಮನಿಸಿದರೆ ಇದೊಂದು ಪ್ರಾಮುಖ್ಯತೆ ಪಡೆದ ಎಡೆಯಾಗಿತ್ತೆಂಬುದು ವೇದ್ಯವಾಗುತ್ತದೆ. ಕಟ್ಟಿಗೆ ಸಂಗಣ್ಣ ತಮ್ಮ ಹಿರಿಯನೆಂದು ಭಾವಿಸಿ, ಇಂದಿಗೂ ಪೂಜಿಸುತ್ತಾ ಬಂದಿರುವ ಕುಟುಂಬಗಳು ಚಿತ್ರದುರ್ಗದ ಪಕ್ಕದಲ್ಲಿರುವ ಸೊಂಡೆಕೊಳ ಮತ್ತು ಅದರ ಆಸುಪಾಸಿನ ಗ್ರಾಮಗಳಲ್ಲಿ ಇರುವುದು ಗಮನಾರ್ಹ.

ನಯನ ಕ್ಷತ್ರಿಯರ ಶಿಲ್ಪಗಳು

ಚಿತ್ರದುರ್ಗದ ಪಶ್ಚಿಮಕ್ಕಿರುವ ಚಂದ್ರವಳ್ಳಿಗೆ ಹೋಗುವ ಮಾರ್ಗ ಮಧ್ಯ ನೆಲೆಗೊಂಡಿರುವ ಆಂಜನೇಯನ ಪುಟ್ಟ ದೇಗುಲದ ದಕ್ಷಿಣಕ್ಕೆ ನಡೆದರೆ ಸಿಗುವ ಬೆಟ್ಟದ ಪಶ್ಚಿಮಕ್ಕೆ ಈ ಶಿಲ್ಪಗಳಿವೆ. ಈ ಪ್ರದೇಶಕ್ಕೆ ಹಿಂದೆ ನೇರಲಗೊಂದಿ ಎಂಬ ಹೆಸರಿದ್ದು, ಈಗ ಇಲ್ಲಿ ಆರಕ್ಷಕ ದಳದವರು ಗುಂಡು ಹಾರಿಸುವ ತರಬೇತಿಗೆ ಈ ಸ್ಥಳವನ್ನು ಬಳಸುತ್ತಿರುವುದರಿಂದ ಇದನ್ನು ಪ್ರಸ್ತುತ 'ಶೂಟಿಂಗ್ ಬೈಲು' ಎಂದು ಸಂಬೋಧಿಸುತ್ತಾರೆ.

ಹುಟ್ಟು ಬಂಡೆಯೊಂದರ ಪೂರ್ವಪಾರ್ಶ್ವದಲ್ಲಿ ಒಂದರ ಪಕ್ಕ ಒಂದರಂತೆ ಕಮಾನುಗಳುಳ್ಳ ಎರಡೂ ಚೌಕಟ್ಟುಗಳಲ್ಲಿ ಒಂದೊಂದರಲ್ಲಿ ನಿಂತಿರುವ ಒಬ್ಬೊಬ್ಬ ಪುರುಷನ ಶಿಲ್ಪಗಳನ್ನು ಕಡೆಯಲಾಗಿದೆ. ದುಂಡು ಮುಖ ಹೊಂದಿರುವ ಈ ಶಿಲ್ಪಗಳು ಸುಮಾರು ಎರಡು ಅಡಿ ಎತ್ತರ ಇವೆ. ತಲೆಯ ಮೇಲೆ ದುಂಡನೆಯ ಟೋಪಿಯಂತಹ ತಲೆಯುಡಿಗೆ ಧರಿಸಿದ್ದು, ಇವರ ಕೇಶಗಳು ಭುಜದವರೆಗೂ ಇಳಿಬಿದ್ದಿವೆ. ಭುಜದಿಂದ ಮೊಣಕಾಲವರೆಗೂ ಇಳಿಬಿದ್ದ ಉತ್ತರೀಯವಿದೆ. ಕೊರಳಲ್ಲಿ ಹಾರವನ್ನು, ಉದ್ದನೆಯ ತೋಳಿನ ಅಂಗಿ ತೊಟ್ಟಿದ್ದು, ನೋಡಿದ ತಕ್ಷಣ ಮಧ್ಯಕಾಲದ ಯೂರೋಪಿಯನ್ನರನ್ನು ಹೋಲುವಂತೆ ಈ ಶಿಲ್ಪಗಳನ್ನು ಕೆತ್ತಿರುವರು.

ಆದರೆ ಈ ಶಿಲ್ಪಿತ ವ್ಯಕ್ತಿಗಳ ಹಣೆಯಲ್ಲಿ ಇಂಗ್ಲೀಷಿನ 'U' ಅಕ್ಷರ ಹೋಲುವ ಸರಳ ಗೆರೆಗಳಿಂದ ಮೂಡಿಸಿದ ನಾಮವಿದೆ. ಇದು ಇವರು ವೈಷ್ಣವ ಪಂಥೀಯರೆಂಬುದನ್ನು ಸೂಚಿಸುತ್ತದೆ. ಈ ನಾಮ ಮತ್ತು ಶಿಲ್ಪದ ಬಳಿಯ ಶಾಸನದಿಂದ ಈ ವ್ಯಕ್ತಿಗಳು ಕೊಂಡೋಜಿ ಮತ್ತು ತಿಮ್ಮೋಜಿ ಎಂದೂ, ಇವರು

ನಯನ ಕ್ಷತ್ರಿಯರ ದೇವರು ಎಂದೂ ತಿಳಿದುಬರುತ್ತದೆ.[೭] ಶಿಲ್ಪಿತ ವ್ಯಕ್ತಿಗಳ ಇಕ್ಕೆಲಗಳಲ್ಲಿ ಮತ್ತು ಕಾಲಬಳಿ ಕ್ಷೌರಿಕ ಕಾಯಕದವರು ಬಳಸುವ ಸಲಕರಣೆಗಳಾದ ಕನ್ನಡಿ, ಕ್ಷತ್ರಿಯ ಹಲಗು, ಕತ್ತರಿ, ಮತ್ತು ಮಸೆಗಲ್ಲುಗಳನ್ನು ಸರಳ ರೇಖೆಗಳಲ್ಲಿ ಮೂಡಿಸಲಾಗಿದೆ.

ನಯನ ಕ್ಷತ್ರಿಯರು ಎಂದರೆ ನಾಯಿಂದರು ಅಥವಾ ಕ್ಷೌರಿಕರು ಎಂಬುದು ಸ್ಪಷ್ಟ. ಕ್ರಿ.ಶ.೧೬ನೇ ಶತಮಾನದ ಅವಧಿಯಲ್ಲಿ ತಮ್ಮ ಸೇವೆಯಿಂದ ಅರಸರ ಪ್ರೀತಿಗೆ ಪಾತ್ರರಾಗಿ ಅವರಿಂದ ತೆರಿಗೆ ವಿನಾಯಿತಿ ಪಡೆದ ಈ ತಿಮ್ಮೋಜ ಮತ್ತು ಕೊಂಡೋಜರು ತರುವಾಯದಲ್ಲಿ ಅಂದರೆ ಕ್ರಿ.ಶ.೧೮ನೇ ಶತಮಾನದ ವೇಳೆಗೆ ಆ ಜನಾಂಗದ ದೃಷ್ಟಿಯಲ್ಲಿ ಕುಲ ದೇವತೆಗಳಾಗಿ ಮಾರ್ಪಟ್ಟಿರಬಹುದು.[೮] ಈ ಅಭಿಪ್ರಾಯಕ್ಕೆ ಪ್ರಸ್ತುತ ಶಿಲ್ಪದ ಬಳಿ ದೊರೆತ ಶಾಸನವೂ ಸಹ ಪುಷ್ಟಿನೀಡುತ್ತದೆ ಎನ್ನಲಡ್ಡಿಯಿಲ್ಲ. ಶಿಲ್ಪಿತ ವ್ಯಕ್ತಿಗಳ ಹಣೆಯಲ್ಲಿ ನಾಮವಿದ್ದು, ಅವರು ವೈಷ್ಣವರಾಗಿದ್ದರೆಂಬುದನ್ನು ತಿಳಿಸುತ್ತದೆ. ಈ ವ್ಯಕ್ತಿಗಳ ಹಣೆಯಲ್ಲಿನ ನಾಮ ಮತ್ತು ಶಿಲ್ಪದ ಬಳಿ ಶಾಸನಗಳಿರದಿದ್ದರೆ ಇವರು ಭಾರತೀಯ ಪುರುಷರು ಎಂದು ಗುರುತಿಸುವುದು ಕಷ್ಟವಾಗುತ್ತಿತ್ತೆಂದು ಹೇಳಬಹುದು.

೧.೧.೩ ಇತರೆ ಶಿಲ್ಪಗಳು

ವೀರಗಲ್ಲು, ಮಾಸ್ತಿಕಲ್ಲು, ವೀರಮಾಸ್ತಿಕಲ್ಲು ಮತ್ತು ಪ್ರಾಣಿಗಳೊಡನೆ ಹೋರಾಟ ಭಂಗಿಯಲ್ಲಿರುವ ಸೈನಿಕ ಶಿಲ್ಪಗಳನ್ನು ಇದರಲ್ಲಿ ವಿವರಿಸಲಾಗಿದೆ.

ವೀರಗಲ್ಲುಗಳು

ವೀರನೊಬ್ಬನ ಸ್ಮಾರಕವಾಗಿ ನಿಲ್ಲಿಸಿದ ಶಿಲೆಯೇ ವೀರಗಲ್ಲು. ವ್ಯಕ್ತಿಯೊಬ್ಬ ತನ್ನ ಪ್ರಾಣರಕ್ಷಣೆಗಾಗಿ ಅಥವಾ ಆಸ್ತಿ, ಸ್ತ್ರೀ, ದನಕರುಗಳ ರಕ್ಷಣೆಗಾಗಿ ಶತೃಗಳೊಡನೆ ಹೋರಾಡುತ್ತಿರುವುದನ್ನು ಸೂಚಿಸುವ ಶಿಲ್ಪಗಳು ಇವಾಗಿವೆ. ಇವುಗಳಲ್ಲಿ ತುರುಗೋಳ್ ಶಿಲ್ಪ, ಪೆಣ್ಬುಯಲ್ ಶಿಲ್ಪ, ಊರಳಿವು, ಗಡಿಕಾಳಗ ಶಿಲ್ಪ, ಮತ್ತು ಕಳ್ಳರೊಡನೆ ಹೋರಾಡುವ ಶಿಲ್ಪ ಎಂಬ ವಿವಿಧ ಬಗೆಗಳಿವೆ.

ಹತ್ತನೇ ಶತಮಾನದ ಕವಿಯಾದ ರನ್ನನು ತನ್ನ ಗದಾಯುದ್ಧ ಅಥವಾ ಸಾಹಸಭೀಮ ವಿಜಯ ಕೃತಿಯಲ್ಲಿ ಈ ಕೆಳಗಿನಂತೆ ಹೇಳುತ್ತಾನೆ.

ತುರುಗಳೋಳ್ ಪೆಣ್ಬುಯ್ಯಲೊ
ಳೆರೆವೆಸದೋಳ್ ನಂಟರನೆರಡೋಳ್ ಊರಳಿವಿನೊಳಂ।
ತರಿಸಂದು ಗಂಡುತನಮನೆ
ನೆರಪದವಂ ಗಂಡನಲ್ಲ ನೆಂತುಂ ಷಂಡಂ॥[೯]

ಈ ಮೇಲಿನ ಪದ್ಯದಿಂದ ಅಂದಿನ ಕಾಲದಲ್ಲಿ ತುರುಗಳನ್ನು ರಕ್ಷಿಸುವುದು, ಸ್ತ್ರೀಯರ ಮಾನ ಕಾಪಾಡುವುದು, ಊರುಗಳನ್ನು ರಕ್ಷಿಸುವುದು ಗಂಡಸರ ಪರಮ ಕರ್ತವ್ಯವಾಗಿತ್ತೆಂಬುದು ತಿಳಿದುಬರುತ್ತದೆ.

ಚಿತ್ರದುರ್ಗದ ಸ್ಥಳೀಯ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಚಿತ್ರದುರ್ಗ ಪರಿಸರದಲ್ಲಿ ದೊರೆತ ವೀರಗಲ್ಲುಗಳನ್ನು ಸಂಗ್ರಹಿಸಿಡಲಾಗಿದೆ. ಅದರಲ್ಲಿ ೧೫೬, ೧೫೭, ೧೫೮ ಮತ್ತು ೧೫೯ನೇ ಸಂಖ್ಯೆಯ ವೀರಗಲ್ಲುಗಳು ಮಲ್ಲಾಪುರ ಗ್ರಾಮದಿಂದ ತಂದವುಗಳಾಗಿವೆ. ೧೫೬ನೇ ಸಂಖ್ಯೆಯ ವೀರಗಲ್ಲು ಪೆಣ್ಬುಯಲ್ ಪ್ರಕಾರಕ್ಕೆ ಸಂಬಂಧಪಟ್ಟದ್ದು. ನೆರೆ ರಾಜ್ಯದವರು ಅಥವಾ ಕಳ್ಳರು ಒಂದು ಊರನ್ನು ದೋಚಿದಾಗ ಸ್ತ್ರೀಯರನ್ನು ಅಪಹರಿಸುತ್ತಿದ್ದರು. ಅಲ್ಲದೆ ಅವರ ಮಾನಭಂಗಕ್ಕೂ ಪ್ರಯತ್ನಿಸುತ್ತಿದ್ದರು ಅಥವಾ ಸೀರೆ ಸೆಳೆಯುವುದರ ಮೂಲಕ ಯುದ್ಧ ಸಾರುತ್ತಿದ್ದರು.[೧೦] ಇಂತಹ ವೇಳೆಯಲ್ಲಿ ಅವರ ಹುಯ್ಯಲನ್ನು ಕೇಳಿ ಅವಳನ್ನು ರಕ್ಷಿಸಲು ಹೋರಾಡಿ ಮಡಿದ ವೀರರ ವಿಷಯವನ್ನು ದಾಖಲಿಸಿರುವ ಅನೇಕ ವೀರಗಲ್ಲುಗಳು ನಮಗೆ ದೊರೆಯುತ್ತವೆ. ಪ್ರಸ್ತುತ ೧೫೬ನೇ ಸಂಖ್ಯೆಯ ವೀರಗಲ್ಲು ಮೂರು ಹಂತಗಳನ್ನು ಒಳಗೊಂಡಿದ್ದು, ಕ್ರಿ.ಶ.೧೦-೧೧ನೇ ಶತಮಾನದ್ದಾಗಿದೆ. ಕೆಳಗಿನಹಂತದಲ್ಲಿ ವೀರನು ಕಳ್ಳರೊಡನೆ ಹೋರಾಡುತ್ತಿದ್ದಾನೆ. ಈ ಹಂತದ ಬಲಬದಿಯ ಮೂಲೆಯಲ್ಲಿ ಸ್ತ್ರೀಯೊಬ್ಬಳು

ನಿಂತಿರುವಂತೆ ಕಡೆಯಲಾಗಿದೆ. ಮಧ್ಯಹಂತದಲ್ಲಿ ವೀರನು ಮಂಟಪದೊಳಗೆ ಕೈಮುಗಿದು ಪದ್ಮಾಸನದಲ್ಲಿ ಕುಳಿತಿದ್ದರೆ, ಅಪ್ಸರೆಯರು ಮಂಟಪದ ಪಕ್ಕದಲ್ಲಿ ಚಾಮರ ಜೀಸುತ್ತ ನಿಂತಿರುವರು. ಇದು ವೀರನನ್ನು ಸ್ವರ್ಗಕ್ಕೆ ಕರೆದೊಯ್ಯುತ್ತಿರುವುದರ ಸಂಕೇತವಾಗಿದೆ. ಮೂರನೇ ಹಂತದಲ್ಲಿ ವೀರನು ಶಿವಲಿಂಗದ ಮುಂದೆ ಧ್ಯಾನಾಸಕ್ತನಾಗಿ ಕುಳಿತಿರುವನು ಹಾಗೂ ಯುತಿಯೊಬ್ಬನು ಲಿಂಗಕ್ಕೆ ಪೂಜೆ ಸಲ್ಲಿಸುತ್ತಿರುವಂತೆ ಚಿತ್ರಿತವಾಗಿದೆ. ೧೫೭ ಮತ್ತು ೧೫೮ ನೇ ಸಂಖ್ಯೆಯ ವೀರಗಲ್ಲುಗಳು ಮೂರು ಹಂತಗಳನ್ನು ಒಳಗೊಂಡಿವೆ. ಇವುಗಳ ಕೆಳಗಿನ ಹಂತದಲ್ಲಿ ವೀರರು ಹೋರಾಡುತಿದ್ದರೆ, ಮಧ್ಯದ ಹಂತದಲ್ಲಿ ಸುರಕನ್ಯೆಯರು ಮಡಿದ ವೀರರನ್ನು ಕರೆದೊಯ್ಯುತ್ತಿರುವಂತೆ, ಮೇಲಿನ ಹಂತದಲ್ಲಿ ಶಿವಲಿಂಗವನ್ನು ಪೂಜಿಸುತ್ತಿರುವಂತೆ ಚಿತ್ರತವಾಗಿದೆ. ೧೫೯ ನೇ ಸಂಖ್ಯೆಯ ವೀರಗಲ್ಲು ಇವುಗಳಗಿಂತ ಸ್ವಲ್ಪ ಭಿನ್ನವಾಗಿದೆ. ಇದರಲ್ಲಿ ವೀರನು ಬಿಲ್ಲುಧಾರಿಯಾಗಿದ್ದು, ಹೋರಾಟ ಭಂಗಿಯಲ್ಲಿ ನಿಂತಿರುವನು. ವೀರನು ತನ್ನ ಮುಡಿಯನ್ನು ಕಟ್ಟಿದ್ದು ಕರ್ಣಕುಂಡಲ, ತೋಳ್ಬಂದಿ ಸೊಂಟಪಟ್ಟಿ, ಕಾಲುಕಡಗ ಧರಿಸಿರುವವನು. ಸೊಂಟ ಪಟ್ಟಿಯಲ್ಲಿ ಗುದ್ದುಬಾಕು ಇರುವುದು. ಶಿಲ್ಪದ ಮೇಲೆ ಉದ್ದನೆಯ ಕೋಡಿನ ಹಸುವನ್ನು ಕೆತ್ತುವುದರಿಂದ ಇದು ತುರುಗೋಳ್ ಶಿಲ್ಪವೆಂಬುದು ವೇದ್ಯವಾಗುತ್ತದೆ.

ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿನ ೬೬ನೇ ಸಂಖ್ಯೆಯ ವೀರಗಲ್ಲು ಮೂಲತಃ ಚಂದ್ರವಳ್ಳಿ ಪರಿಸರದ ನೇರಲಗೊಂದಿಯಲ್ಲಿ ದೊರೆತದ್ದು. ಹಸಿರು ಮಿಶ್ರಿತ ಕಪ್ಪುಶಿಲೆಯಲ್ಲಿ ಕಡೆದ ಈ ವೀರಗಲ್ಲಿನಲ್ಲಿ ಮೂರು ಹಂತಗಳಿವೆ. ಕೆಳಗಿನ ಹಂತದಲ್ಲಿ ವೀರನು ಅಶ್ವಧಾರಿ ಶತೃಗಳೊಡನೆ ಹೋರಾಡುತ್ತಿರುವಂತೆ ಚಿತ್ರಿತವಾಗಿದೆ. ಮಧ್ಯದ ಹಂತದಲ್ಲಿ ಮೂರುಜನ ವೀರರು ಮಂಟಪದಲ್ಲಿ ಕೈಮುಗಿದು ಕುಳಿತಿರುವರು. ಇದರ ಇಕ್ಕೆಲದಲ್ಲಿ ಅಪ್ಸರೆಯರು ನಿಂತು ಚಾಮರ ಬೀಸುತ್ತಿರುವರು. ಮೇಲಿನ ಹಂತದಲ್ಲಿ ಯತಿಯೊಬ್ಬ ಶಿವಲಿಂಗವನ್ನು ಪ್ರಜಿಸುತ್ತಿದ್ದರೆ, ಅದರ ಎರಡೂ ಬದಿಗಳಲ್ಲಿ ತಲಾ ಮೂರು ಜನರಂತೆ ಒಟ್ಟು ೬ ಜನ ವೀರರು ಕೈಮುಗಿದು ಕುಳಿತಿದ್ದಾರೆ. ಶಿವಲಿಂಗಕ್ಕೂ ಕಿರೀಟ ತೊಡಿಸಿದ್ದು, ಮೇಲ್ಬದಿಯಲ್ಲಿ ಸೂರ್ಯಚಂದ್ರರ ರಚನೆಗಳಿವೆ.

ಪ್ರಾಚ್ಯವಸ್ತು ಸಂಗ್ರಹಾಲಯದ ೬೯ನೇ ಸಂಖ್ಯೆಯ ವೀರಗಲ್ಲು ಗೋಪಾಲಪುರದಲ್ಲಿ ಲಭ್ಯವಾಗಿದ್ದು, ಮೂರು ಅಡಿ ಎತ್ತರವಿದೆ. ವೀರನು ತನ್ನ ಕೈಗಳಲ್ಲಿ ಬಿಲ್ಲು ಬಾಣ ಹಿಡಿದು ಹೋರಾಡುವ ಬಂಗಿಯಲ್ಲಿ ನಿಂತಿರುವಂತೆ ಚಿತ್ರಿಸಿರುವರು. ಈ ಶಿಲ್ಪಿತವ್ಯಕ್ತಿ ತೊಟ್ಟಿರುವ ತಲೆದೊಡವು ನಾಯಕ ಅರಸರ ಅವಧಿಯದ್ದಾಗಿದೆ. ಕಿವಿಯಲ್ಲಿ ಕರ್ಣಕುಂಡಲ, ಹಾರ, ಸರ, ಕಾಲ್ಕಡಗ, ನಡುಪಟ್ಟಿ ಧರಿಸಿ ವೀರಗಚ್ಚೆ ಹಾಕಿರುವನು. ನಡುಪಟ್ಟಿಯಲ್ಲಿ ಕಠಾರಿ ಸಿಕ್ಕಿಸಿಕೊಂಡಿರುವನು. ಈ ವೀರಗಲ್ಲು ಶೈಲಿಯ ದೃಷ್ಟಿಯಿಂದ ನಾಯಕ ಅರಸರ ಅವಧಿಯಲ್ಲಿ ಕೆತ್ತಿರುವುದಾಗಿದೆ.

ಮಾಸ್ತಿಕಲ್ಲು ಅಥವಾ ಮಹಾಸತಿ ಶಿಲ್ಪ

ಮಾಸ್ತಿ ಎಂಬುದು ಮಹಾಸತಿ ಎಂಬುದರ ಸಂಕ್ಷಿಪ್ತರೂಪ. ಪತಿಯು ಕಾರಣಾಂತರಗಳಿಂದ ಮಡಿದಾಗ ಅವನ ಸತಿಯೂ ಕೂಡ, ಬೆಂಕಿಗೆ ಹಾರಿ ಪ್ರಾಣತ್ಯಾಗ ಮಾಡುತ್ತಿದ್ದಳು. ಅವಳನ್ನು ಮಹಾಸತಿ ಎಂದು, ಅವಳ ನೆನಪಿಗಾಗಿ ಮಹಾಸತಿ ಕಲ್ಲನ್ನು ನೆಡುತ್ತಿದ್ದರು. ಇದು ಅವಳ ಪತಿ ಭಕ್ತಿ ವ್ಯಕ್ತಪಡಿಸುವ ಆಚರಣೆಯಾದರೂ ಇದಕ್ಕೆ ಸಾಮಾಜಿಕ ಕಟ್ಟಳೆಗಳಲ್ಲಿ ಸಂಪ್ರದಾಯಗಳು ಮತ್ತು ಶೋಷಣೆಯ ಅಂಶಗಳು ಪ್ರೇರಕ ಶಕ್ತಿಗಳಾಗಿದ್ದವು. ಪತಿಯ ಮರಣ ನಂತರ ಸತಿ ಹೋಗದವಳಿಗೆ ಸಮಾಜದಲ್ಲಿ ಗೌರವದ ಸ್ಥಾನಗಳಿರಲಿಲ್ಲ. ಹಾಗಾಗಿ ಪತಿ ಇಲ್ಲದೆ ಪ್ರಾಚೀನ ಮತ್ತು ಮಧ್ಯಕಾಲೀನ ಕಾಲದಲ್ಲಿ ಸತಿಗೆ ಬದುಕು ಮತ್ತು ರಕ್ಷಣೆಗೆ ಬೇರೆದಾರಿ ಇಲ್ಲದೆ ಈ ರೀತಿಯ ಆಚರಣೆಗಳನ್ನು ಅನುಸರಿಸಬೇಕಾಗಿತ್ತು.

ಚಿತ್ರದುರ್ಗದ ಜೋಗಿಮಟ್ಟಿ ರಸ್ತೆಯ ಎಡಬದಿಯಲ್ಲಿರುವ ಕೆಂಚಪ್ಪನ ಬಾವಿಯ ಬಳಿಯ ಬಯಲಲ್ಲಿ ಮಹಾಸತಿ ಶಿಲ್ಪವೊಂದಿದೆ. ೫ ಅಡಿ ಎತ್ತರದ ಮಹಾಸತಿ ಶಿಲ್ಪವನ್ನು ಕಣಶಿಲೆಯಲ್ಲಿ ಕಡೆಯಲಾಗಿದೆ. ಮಹಾಸತಿಯು ತನ್ನ ಬಲಗೈಯನ್ನು ಮೇಲೆತ್ತಿ ಹರಸುತ್ತಿದ್ದಾಳೆ. ಬಲಗೈಯ ಹೆಬ್ಬೆರಳ

ನಡುವೆ ನಿಂಬೇಹಣ್ಣನ್ನು ಹಿಡಿದಿದ್ದಾಳೆ. ಎಡಗೈ ಕೆಳಗೆ ಇಳಿಬಿಟ್ಟು ವಸ್ತುವೊಂದನ್ನು ಹಿಡಿದಿರುವಳು. ಬಹುಶಃ ಇದು ಕನ್ನಡಿ ಇರಬಹುದು. ಇದರ ಕೆಳಭಾಗದಲ್ಲಿಯೇ ಕುಂಡಲವನ್ನು ಚಿತ್ರಿಸಲಾಗಿದೆ. ಕುತ್ತಿಗೆಗೆ ಕಂಠಿಹಾರ ಮತ್ತು ಪದಕದ ಹಾರವನ್ನು ಧರಿಸಿದ್ದು, ಕಿವಿಯಲ್ಲಿ ದೊಡ್ಡ ರಿಂಗುಗಳನ್ನು ಧರಿಸಿರುವಳು. ತಲೆಯಕೂದಲನ್ನು ಮುಡಿ ಕಟ್ಟಿದ್ದು, ಕೇದಗೆ ಗರಿಗಳನ್ನು ಮುಡಿಸಿರುವಂತೆ ಚಿತ್ರಿಸಲಾಗಿದೆ. ಸಣ್ಣ ನಡುವನ್ನು ಹೊಂದಿದ ಮಹಾಸತಿಯ ಸೀರೆಯನ್ನು ನೆರಿಗೆನೆರಿಗೆಯಾಗಿ ಬಿಡಿಸಲಾಗಿದೆ. ಕೈಕಡಗ ತೋಳ್ಬಂದಿ ಕಾಲ್ಕಡಗ ಧರಿಸಿರುವ ಸತಿಯ ಎಡಬದಿಯಲ್ಲಿ ಹಸುವನ್ನು ಕಡೆಯಲಾಗಿದೆ. ಶಿಲ್ಪದ ಭುಜದಬಳಿ ನಂದಿ, ಮೇಲೆ ಸೂರ್ಯ, ಚಂದ್ರರ ರಚನೆಗಳಿವೆ. ಪ್ರಸ್ತುತದಲ್ಲಿ ಮಹಾಸತಿ ಶಿಲ್ಪವನ್ನು ಮಾಸ್ತಮ್ಮ ಎಂಬ ಹೆಸರಿನಿಂದ ಪೂಜಿಸುತ್ತಿರುವುದು ಗಮನಾರ್ಹ.

ಚಿತ್ರದುರ್ಗದ ಸ್ಥಳೀಯ ಪ್ರಾಚ್ಯವಸ್ತು ಸಂಗ್ರಹಾಲಯದ ೬೫ನೇ ಸಂಖ್ಯೆಯ ಮಾಸ್ತಿಶಿಲ್ಪವು ಚಿತ್ರದುರ್ಗ ಬೆಟ್ಟ ಪರಿಸರದಲ್ಲಿ ದೊರೆತಿದ್ದು ಪ್ರಸ್ತುತ ಸಂರಕ್ಷಿಸಲ್ಪಟ್ಟಿದೆ. ಹಸಿರು ಮಿಶ್ರಿತ ಕಪ್ಪುಶಿಲೆಯಲ್ಲಿ ಕಡೆದ ಈ ಸತಿ ಶಿಲ್ಪವು ಸುಮಾರು ಒಂದೂವರೆ ಅಡಿ ಎತ್ತರವಿದೆ. ಸತಿಯ ಶಿಲ್ಪದ ಮುಖ, ಎಡಮುಂಗೈ ಮತ್ತು ಕುಚಗಳು ಭಗ್ನವಾಗಿವೆ. ತಲೆಯ ಹಿಂದೆ ಕೇದಗೆ ಗರಿಗಳನ್ನು ಮುಡಿದ ಸತಿಯು, ಕೈಬಳೆ, ಕಾಲ್ಕಡಗ, ಹಾರ, ಕಿವಿಯೋಲೆ, ಧರಿಸಿರುವಳು. ಸತಿಯ ಉಡುಗೆಯು ಮೊಣಕಾಲ ಕೆಳಭಾಗದವರೆಗೆ ಇದ್ದು, ನೆರಿಗೆ ನೆರಿಗೆಯಾಗಿರುವಂತೆ ಚಿತ್ರಿತವಾಗಿದೆ. ಸತಿಯು ತನ್ನ ಬಲಗೈಯನ್ನು ಮೇಲೆತ್ತಿದ್ದು ಹರಸುತ್ತಿರುವಳು.

ವೀರಮಾಸ್ತಿ ಶಿಲ್ಪ

ಕೆಲವು ಮಾಸ್ತಿಶಿಲ್ಪಗಳೊಡನೆ ವೀರರನ್ನು ಚಿತ್ರಿಸಲಾಗಿದ್ದರೆ, ಅದನ್ನು ವೀರಮಾಸ್ತಿಶಿಲ್ಪ ಎಂದು ಕರೆಯುತ್ತಾರೆ. ಕೆಲವು ಮಹಾಸತಿ ಶಿಲ್ಪಗಳಲ್ಲಿ ವೀರನಿಗೆ ಹೆಚ್ಚು ಪ್ರಾಧಾನ್ಯವಿದ್ದು, ಮಹಾಸತಿಯ ಶಿಲ್ಪಕ್ಕೆ ಕಡೆಮೆ ಪ್ರಾಧಾನ್ಯತೆ ಇರುತ್ತದೆ ಅಥವಾ ಇಬ್ಬರನ್ನೂ ಸರಿಸಮನಾಗಿ ಚಿತ್ರಿಸಲಾಗಿರುತ್ತದೆ. ಚಿತ್ರದುರ್ಗದ ಜೋಗಿಮಟ್ಟಿ ರಸ್ತೆಯ ಕೆಂಚಪ್ಪನಬಾವಿಯ ಬಳಿಯಲ್ಲಿ ಎರಡು ವೀರಮಾಸ್ತಿ ಶಿಲ್ಪಗಳಿವೆ. ಒಂದು ವೀರ ಮಾಸ್ತಿಶಿಲ್ಪವು ಸುಮಾರು ಮೂರು ಅಡಿ ಎತ್ತರವಿದೆ. ಇದರಲ್ಲಿ ವೀರನು ಬಲಗೈಯಲ್ಲಿ ಖಡ್ಗವನ್ನು ಮೇಲೆತ್ತಿ ಹಿಡಿದರೆ ಎಡಗೈಯಲ್ಲಿ ಕಮಂಡಲ ಹಿಡಿದಿರುವನು. ಮುಖ ಭಗ್ನಗೊಂಡ ವೀರನು ಕೈಕಡಗ, ಸೊಂಟಪಟ್ಟಿ, ಕಾಲ್ಕಡಗ ಧರಿಸಿದ್ದು ವೀರಗಚ್ಚೆ ಹಾಕಿರುವನು. ಇವನ ಪಕ್ಕದಲ್ಲಿಯೇ ನಿಂತಿರುವ ಸತಿಯು ತನ್ನ ಬಲಗೈಯನ್ನು ಮೇಲೆತ್ತಿ ಹರಸುತ್ತಿರುವಳು. ಎಡಗೈಯಲ್ಲಿ ಖಡ್ಗವನ್ನು ಹಿಡಿದಿರುವಳು. ಕೇಶರಾಶಿಯನ್ನು ತುರುಬುಕಟ್ಟಿದ್ದು, ಹಿಂದೆ ಕೇದಗೆಗರಿ ಮುಡಿದಿರುವಳು. ಇವಳ ಉಡುಗೆಯು ನೆರಿಗೆನೆರಿಗೆಯಾಗಿದೆ. ಕೈಕಡಗ, ಕಾಲ್ಕಡಗ, ಹಾರಗಳನ್ನು ಧರಿಸಿರುವಳು. ವೀರಮಾಸ್ತಿ ಶಿಲ್ಪದ ಮೇಲ್ಬದಿಯಲ್ಲಿ ಕೀರ್ತಿಮುಖವನ್ನು ಚಿತ್ರಿಸಲಾಗಿದೆ.

ಪ್ರಸ್ತುತ ವಿವರಿಸಿದ ಶಿಲ್ಪದ ಎಡ ಬದಿಯಲ್ಲಿರುವ ಇನ್ನೊಂದು ವೀರಮಾಸ್ತಿ ಶಿಲ್ಪವನ್ನು ಮೂರುವರೆ ಅಡಿ ಉದ್ದ, ಎರಡು ಅಡಿ ಎತ್ತರದ ಫಲಕವೊಂದರಲ್ಲಿ ಕಡೆಯಲಾಗಿದೆ. ಈ ಶಿಲ್ಪದಲ್ಲಿ ಇಬ್ಬರು ವೀರರು ಅಶ್ವವನ್ನೇರಿ ಎಡಗೈಯಲ್ಲಿ ಕುದುರೆಯ ಲಗಾಮನ್ನೂ, ಬಲಗೈಯಲ್ಲಿ ಖಡ್ಗವನ್ನೂ ಹಿಡಿದಿರುವರು. ವೀರರು ಅಲಂಕೃತವಾಗಿ ಚಿತ್ರಿತವಾಗಿದ್ದಾರೆ. ಅಶ್ವಗಳು ತಮ್ಮ ಎಡಮುಂಗಾಲನ್ನು ಮೇಲೆತ್ತಿ ಮುನ್ನಡೆಯುವಂತಿದ್ದು, ಮುಖಗಳನ್ನು ಬಲಗಡೆಗೆ ತಿರುಗಿಸಿ ನೋಡುತ್ತಿವೆ. ಇವುಗಳ ಮುಂಬದಿಯಲ್ಲಿ ಮಹಾಸತಿಯ ಶಿಲ್ಪವಿದೆ. ಮಹಾಸತಿಯು ಬಲಗೈಯನ್ನು ಮೇಲೆತ್ತಿ ಹರಸುತ್ತಿದ್ದು, ಅದರಲ್ಲಿ ನಿಂಬೆಹಣ್ಣನ್ನು, ಎಡಗೈಯಲ್ಲಿ ಕನ್ನಡಿಯನ್ನು ಹಿಡಿದಿರುವಳು. ಕೊರಳಹಾರ, ಕಿವಿಯೋಲೆ, ಸೊಂಟಪಟ್ಟಿ, ಕೈಕಡಗ, ಕಾಲ್ಕಡಗ ಧರಿಸಿದ್ದು, ಕೇಶರಾಶಿಯನ್ನು ಮುಡಿಕಟ್ಟಿರುವಳು. ಇವಳ ಎಡಬದಿಯಲ್ಲಿರುವ ಹಸುವಿನ ಕೆತ್ತನೆ ಗಮನಿಸಿದರೆ, ಸತಿಯ ಪತಿಯು ಗೋಸಂಬಂಧಿತ ಹೋರಾಟದಲ್ಲಿ ಮರಣಿಸಿದಂತೆ ತೋರುತ್ತದೆ.

ಚಿತ್ರದುರ್ಗ ಪರಿಸರದಲ್ಲಿ ಕೋಟೆ ಪ್ರಾಕಾರದ ಮೇಲೆ ಆನೆಗಳ ಹೋರಾಟ, ಆಸ್ತ್ರಧಾರಿ ವೀರರ ಸೈನ್ಯಪದ್ಧತಿಗೆ ಸಂಬಂಧಿಸಿದ ಅನೇಕ ಶಿಲ್ಪಗಳೂ ಇವೆ. ಕಾಮನ ಬಾಗಿಲನ್ನು ದಾಟ ಸುಮಾರು ೧೫ ಮೀಟರ್ ಮುನ್ನಡೆದರೆ ಬಲಬದಿಯ ಆಳೆತ್ತರದ ಪೌಳಿಗೋಡೆಯ ಮೇಲೆ ಆನೆಯ ಮೇಲೆ ಆಸೀನನಾದ ವೀರನ ಶಿಲ್ಪವಿದೆ. ದೃಢಕಾಯ ಶರೀರವುಳ್ಳ ಆನೆಯು ವೀರಾವೇಶದಿಂದ ಮುನ್ನುಗ್ಗುತ್ತಿದ್ದರೆ, ಇದರ ಮೇಲೆ ವೀರನು ಆಯುಧವನ್ನು ಹಿಡಿದು ಕುಳಿತಿರುವನು.

ಕಸ್ತೂರಿ ರಂಗಪ್ಪ ಬಾಗಿಲ ಒಳಮಗ್ಗುಲ ಎಡಬದಿಯ ಗೋಡೆಯಲ್ಲಿ ಎರಡು ಆನೆಗಳು ಅಭಿಮುಖವಾಗಿ ನಿಂತು ಕಾದಾಡುತ್ತಿರುವ ಉಬ್ಬು ಶಿಲ್ಪಗಳಿವೆ. ಈ ಆನೆಗಳು ಒಂದರ ಸೊಂಡಿಲನ್ನು ಮತ್ತೊಂದು ಹಿಡಿದಿವೆ. ಇವುಗಳ ಬಾಲ ಮೇಲೆ ಹೋಗಿ ಸುರಳಿ ಆಕಾರವಾಗಿ ಸುತ್ತಿಕೊಂಡಿವೆ. ಇದು ಎರಡೂ ಆನೆಗಳು ಕಾಳಗಕ್ಕೆ ಸನ್ನದ್ಧವಾಗಿರುವುದನ್ನು ಸೂಚಿಸುತ್ತವೆ. ಇದೇ ದ್ವಾರದ ಬಲಬದಿಯ ಸ್ತಂಭವೊಂದರ ಮೇಲೆ ಆನೆಯೊಂದರ ಉಬ್ಬುಶಿಲ್ಪವಿದೆ. ಆ ಆನೆಯು ತನ್ನ ಸೊಂಡಿಲಲ್ಲಿ ವ್ಯಕ್ತಿಯೋರ್ವನನ್ನು ಬಂಧಿಸಿ ಮೇಲೆತ್ತಿದೆ. ಮುನ್ನುಗ್ಗುವಂತಿರುವ ಆನೆಯ ಮೇಲೆ ಮಂಡಿಯೂರಿ ಕುಳಿತ ವೀರನು ಒಂದು ಕೈಯನ್ನು ಮೇಲೆತ್ತಿ, ಮತ್ತೊಂದು ಕೈಯಲ್ಲಿ ಈಟಿಯನ್ನು ಹಿಡಿದಿದ್ದಾನೆ.

ಲಾಲ್ ಕೋಟೆಯ ಜೋಡುಬತೇರಿಯ ಗೋಡೆಯಲ್ಲಿ ಅಂಬಾರಿಯನ್ನೊತ್ತ ಎರಡು ಆನೆಗಳು ಪರಸ್ಪರ ಅಭಿಮುಖವಾಗಿ ನಿಂತಿವೆ. ಈ ಅಂಬಾರಿಗಳಲ್ಲಿ ಇಬ್ಬರು ವ್ಯಕ್ತಿಗಳು ನಿಂತಿದ್ದು, ಕೈಯಲ್ಲಿ ಆಯುಧಗಳನ್ನು ಹಿಡಿದಿರುವರು. ಆನೆಗಳನ್ನು ಮುನ್ನಡೆಸಲು ಮಾವಟಿಗರು ಕುಳಿತಿರುವರು. ಹುಲ್ಲೂರು ಶ್ರೀನಿವಾಸ ಜೋಯಿಸರು ಇವುಗಳನ್ನು ಮಾಯಕೊಂಡ ಕಾಳಗದಲ್ಲಿ ಹೋರಾಡಿದ ಚಿತ್ರದುರ್ಗ ನಾಯಕ ಅರಸ ಹಿರೇ ಮದಕರಿನಾಯಕ ಮತ್ತು ಹರಪನಹಳ್ಳಿ ಸೋಮಶೇಖರನಾಯಕರ ಶಿಲ್ಪಗಳೆಂದು ಅಭಿಪ್ರಾಯಪಟ್ಟಿರುವರು.[೧೧]

ಬಸವನ ಬತೇರಿಯ ಬಾಗಿಲುವಾಡದ ಎರಡೂ ಬದಿಗಳಲ್ಲಿರುವ ಚಾವಡಿಗಳ ಮೇಲಿರುವ ನಾಲ್ಕು ಸ್ತಂಭಗಳ ಮೇಲೆ ಸೈನಿಕ ಶಿಲ್ಪಗಳಿವೆ. ಇವುಗಳು ಕೋವಿ ಮತ್ತು ಖಡ್ಗಗಳನ್ನು ಹಿಡಿದಿರುವಂತೆ ಶಿಲ್ಪಿತವಾಗಿವೆ. ಉದ್ದನೆಯ ನಿಲುವಂಗಿ ಮತ್ತು ಪ್ಯಾಂಟನ್ನು ಧರಿಸಿದ್ದು ಕಾಲಿಗೆ ಬೂಟನ್ನು ಹಾಕಿರುವರು. ಸೊಂಟದಲ್ಲಿ ಗುದ್ದುಬಾಕು ಸಿಕ್ಕಿಸಿಕೊಂಡಿರುವರು. ಈ ವ್ಯಕ್ತಿಯು ಧರಿಸಿದ ದುಂಡನೆಯ ಯೂರೋಪಿಯನ್ ಶೈಲಿಯ ಟೋಪಿ ಆಕರ್ಷಕವಾಗಿದೆ. ಈ ಶಿಲ್ಪಗಳು ಯೂರೋಪಿಯನ್ನರ ಶಿಲ್ಪದಂತೆ ತೋರುತ್ತವೆ.

೪.೨ ಪೂರ್ಣ ಶಿಲ್ಪಗಳು

ಪೂರ್ಣಶಿಲ್ಪವು ಸ್ವತಂತ್ರ ಕೃತಿಯಾಗಿದ್ದು, ಅದಕ್ಕೆ ತನ್ನದೇ ಆದ ಮೈ ಇರುತ್ತದೆ. "ಶಿಲ್ಪ ಎಂಬುದು ನಾಲ್ಕು ದಿಕ್ಕುಗಳಿಂದಲೂ ನಿಂತು ನೋಡಬಹುದಾದ ನಿರ್ಮಾಣಕ್ಕೆ ಹೇಳುವ ಮಾತು"[೧೨] ಇದನ್ನು ಶಿಲ್ಪದ ಯಾವ ಬದಿಯಲ್ಲಿ ಬೇಕಾದರೂ ನಿಂತು ವೀಕ್ಷಿಸಬಹುದು ಅಥವಾ ಅದನ್ನೇ ಯಾವ ಕಡೆಗೆ ಬೇಕಾದರೂ ತಿರುಗಿಸಿ ನೋಡಬಹುದು. ಇದನ್ನೇ ದುಂಡುಶಿಲ್ಪ ಅಥವಾ ಪೂರ್ಣಶಿಲ್ಪ ಎನ್ನುವರು. ಇದರ ಕೆತ್ತನೆ ಬಹು ನಾಜೂಕಾದದ್ದು. ಈ ಶಿಲ್ಪದ ಒಂದೊಂದು ಅಂಗ, ಭಂಗಿ, ವಿನ್ಯಾಸಗಳನ್ನು ಶಾಸ್ತ್ರೀಯವಾಗಿ ಕೆತ್ತಲಾಗುತ್ತದೆ. ಚಿತ್ರದುರ್ಗ ಪರಿಸರದಲ್ಲಿ ದೊರೆತ ಪೂರ್ಣ ಅಥವಾ ದುಂಡುಶಿಲ್ಪಗಳನ್ನು ಲೋಹಶಿಲ್ಪ ಹಾಗೂ ಶಿಲಾಶಿಲ್ಪಗಳೆಂದು ವಿಂಗಡಿಸುವುದು ಉಚಿತವೆನಿಸುವುದು.

೪.೨.೧ ಲೋಹ ಶಿಲ್ಪಗಳು

ಪ್ರಾಚೀನ ಕಾಲದಿಂದಲೂ ಮಾನವನಿಗೆ ಲೋಹದ ಪರಿಚಯವಿದುದು ದೃಢಪಟ್ಟ ಸಂಗತಿ. ಪ್ರಾರಂಭದಲ್ಲಿ ಮಾನವ ತನ್ನ ಆಯುಧಗಳಿಗಾಗಿ ಲೋಹ ಬಳಸಿದರೆ ಕಾಲಾಂತರದಲ್ಲಿ ದಿನಬಳಕೆಯ ವಸ್ತುಗಳಲ್ಲದೆ ದೇವತೆ ಮತ್ತು ಮಾನವ ಶಿಲ್ಪಗಳ ತಯಾರಿಕೆಗೂ ಬಳಸತೊಡಗಿದ. ಚಿತ್ರದುರ್ಗ ಪರಿಸರದ ಚಂದ್ರವಳ್ಳಿ ಬಳಿಯ ಚಿರತೆಕಲ್ಲು ಎಂಬ ಬೆಟ್ಟದ ಬುಡದಲ್ಲಿ ಕಂಚಿನ ಶಿಲ್ಪವೊಂದು ಲಭ್ಯವಾಗಿದೆ. ವಿದ್ವಾಂಸರು ಗುರುತಿಸುವಂತೆ ಈ ಶಿಲ್ಪ ಸಾಲಭಂಜಿಕೆಯದು.

ಶಿಲ್ಪದ ಆಕರ್ಷಕ ತ್ರಿಭಂಗಿಯ ನಿಲುವು, ಕೇಶವಿನ್ಯಾಸ, ಮಿತ ಆಭರಣ, ಸೂಕ್ಷ್ಮನೆರಿಗೆಯುಳ್ಳ ಉಡುಪು, ಸ್ವಲ್ಪ ಸ್ಥೂಲವಾಗಿದ್ದರೂ ಪ್ರಮಾಣಬದ್ಧ ಆಕರ್ಷಕ ಮೈಕಟ್ಟು, ಹೀಗೆ ಒಂದೊಂದು ಭಾಗವೂ ಸೌಂದರ್ಯ ಪೂರಕವಾಗಿದೆ. ತ್ರಿಭಂಗಿಯಲ್ಲಿ ಬಲಕ್ಕೆ ವಾಲಿದ ನಡುವಿನ ಮೇಲೆ ಎಡಗೈಯನ್ನಿಟ್ಟು ಬೆರಳುಗಳಿಂದ ಮಂಡಿಯನ್ನು ಮುಟ್ಟುವ ಹಾಗೆ ಹಸ್ತವನ್ನು ಬಾಗಿಸಿ, ಬಲಕ್ಕೆ ವಾಲಿದ ಮುಂಡಕ್ಕೆ ಹೋಲುವಂತೆ ಸ್ವಲ್ಪ ಡೊಂಕಾಗಿ ಇಳಿಬಿಟ್ಟ ಬಲಗೈಯು ದೇಹದ ವಿನ್ಯಾಸದ ಸೊಬಗನ್ನು ಹೆಚ್ಚಿಸಿದೆ. ಬಿಗಿಯಾಗಿ ಉಬ್ಬಿದ ದುಂಡು ಕುಚಗಳು, ಪುಷ್ಟ ಮೈಕಟ್ಟು ಇವು ತುಂಬಿದ ಯೌವನವನ್ನು ಸೂಚಿಸುತ್ತವೆ. ಒಪ್ಪಾಗಿ ಬಾಚಿದ ತಲೆ, ಬೈತಲೆ, ಕಚ್ಚು ಸಹಿತವಾದ ಚಕ್ರಕುಂಡಲ ಸರಳ ತೋಳ್ಬಂದಿ ಎರಡು ಕಡೆಗಳಲ್ಲಿ ಕಡಗ ಸಹಿತ ಕೈತುಂಬ ಬಳೆಗಳು ಮಣಿಖಚಿತ ಓಡಿಕೆಯ ಸೊಂಡಪಟ್ಟಿ, ಬಹುಸುತ್ತಿನ ಕಾಲ್ಬಳೆ ಇವುಗಳಿಂದ ಅಲಂಕೃತವಾಗಿದ್ದಾಳೆ. ಸೀರೆಯ ನೆರಿಗೆಗಳನ್ನು ತೆಳ್ಳನೆಯ ಗೆರೆಗಳಿಂದ ಸೂಕ್ಷ್ಮವಾಗಿ ಬಿಡಿಸಲಾಗಿದೆ. ಸರಳಪೀಠದ ಮೇಲೆ ನಿಂತು ಬಲಗೈಯಿಂದ ಪಕ್ಕದಲ್ಲಿಯ ಒಂದು ಗಿಡವನ್ನು ಹಗುರವಾಗಿ ಹಿಡಿದು ನಿಂತಿರುವಳು. ಹಿಡಿದ ಒಂದು ರಂಬೆ ತಲೆಯ ಹಿಂಬದಿಗೆ ಅಡ್ಡವಾಗಿ ಬಾಗಿದೆ. ಗಿಡ ಮತ್ತು ಎಡತೋಳುಗಳು ಮುರಿದು ಹೋಗಿವೆ. "ಬೈತಲೆ ಬೊಟ್ಟು, ಕರ್ಣಕುಂಡಲ, ಕೈಕಾಲುಗಳಲ್ಲಿಯ ಬಹುಸುತ್ತಿನ ಬಳೆಗಳ ಮಾದರಿ ಸೀರೆಯ ನೆರಿಗೆಗಳನ್ನು ಸೂಕ್ಷ್ಮಗೆರೆಗಳಿಂದ ಸೂಚಿಸಿದ ರೀತಿ, ಆಕರ್ಷಕ ಮೈಕಟ್ಟು ಶೈಲಿ ಮೊದಲಾದವುಗಳನ್ನು ಗಮನಿಸಿದರೆ ಈ ಮೂರ್ತಿಯು ಸುಮಾರು ಕ್ರಿ.ಶ.೧-೨ನೇ ಶತಮಾನದ ಅಮರಾವತಿ ಬೌದ್ಧ ಸ್ತೂಪದ ಕೆಲವು ಶಿಲ್ಪಗಳಲ್ಲಿಯ ಅಲಂಕೃತ ಸ್ತ್ರೀ ಉಬ್ಬುಶಿಲ್ಪಗಳ ಶೈಲಿ ಮತ್ತು ಲಕ್ಷಣಗಳನ್ನು ಹೋಲುವ ಉತ್ಕೃಷ್ಟ ಕಲಾಕೃತಿ. ಅಲ್ಲದೆ ಕ್ರಿ.ಶ.೧-೨ನೇ ಶತಮಾನದ ಕಾರ್ಲೆಯ ದಂಪತಿ ಮೂರ್ತಿಗಳನ್ನು ನೆನಪಿಗೆ ತರುತ್ತದೆ. ಕರ್ನಾಟಕದಲ್ಲಿ ಇಂಥ ಕಂಚಿನ ಕಲಾಕೃತಿ ಸಿಕ್ಕಿರುವುದು ಇದೇ ಪ್ರಥಮ."[೧೩]

೪.೨.೨ ಶಿಲಾ ಶಿಲ್ಪಗಳು

ಪ್ರಾಚೀನ ಕಾಲದಿಂದಲೂ ಶಿಲ್ಪಕಲೆಗೆ ಪ್ರಧಾನ ಮಾಧ್ಯಮವಾಗಿ ಶಿಲೆ ಬಳಕೆಗೊಂಡಿದೆ. ಇದರಲ್ಲಿ ವಿವಿಧ ಕಾಲಘಟ್ಟದಲ್ಲಿ ವಿವಿಧ ಬಗೆಯ ಶಿಲೆಯನ್ನು ಬಳಸಿರುವರು. ಅವುಗಳನ್ನು ಸಾಮಾನ್ಯಶಿಲೆ, ಮರಳುಶಿಲೆ, ಬಳಪದಶಿಲೆ, ಅಮೃತಶಿಲೆ, ಮತ್ತು ಕಪ್ಪುಶಿಲೆ, ಕಣಶಿಲೆ ಎಂದು ವಿಂಗಡಿಸಬಹುದು. ಪ್ರಸ್ತುತ ಅಧ್ಯಯನ ಪ್ರದೇಶ ಚಿತ್ರದುರ್ಗ ಪರಿಸರದಲ್ಲಿ ದೊರೆತಿರುವ ಪೂರ್ಣ ಪ್ರಮಾಣದ ಶಿಲ್ಪಗಳೆಲ್ಲವೂ ದೇವತಾ ಶಿಲ್ಪಗಳಾಗಿರುವುದರಿಂದ ಅವುಗಳನ್ನು ಶೈವ, ಶಾಕ್ತ ಶಿಲ್ಪಗಳೆಂದು ವಿಂಗಡಿಸಲಾಗಿದೆ.

೪.೨.೨.೧ ಶೈವ ಶಿಲ್ಪಗಳು

ಚಂದ್ರವಳ್ಳಿಯ ಶಿವಲಿಂಗ

ಚಂದ್ರವಳ್ಳಿಯ ಶಿವಲಿಂಗವು ಮಯೂರವರ್ಮನ ಶಾಸನದ ಕೆಳಭಾಗದಲ್ಲಿ ಲಭ್ಯವಾದುದಾಗಿದೆ. ಕರ್ನಾಟಕದ ಶಿವಲಿಂಗಗಳಲ್ಲಿ ಇದು ಅಪರೂಪವಾದದ್ದು. ಸುಮಾರು ೧.೪೦ ಮೀಟರ್ ಎತ್ತರವಿದ್ದು, ಕಣಶಿಲೆಯಲ್ಲಿ ಕಡೆಯಲಾಗಿದೆ. ಶಿವಲಿಂಗದ ಕೆಳಭಾಗ ಚೌಕೋನ, ಮಧ್ಯಭಾಗ ಅಷ್ಟಕೋನ, ಮತ್ತು ಮೇಲ್ಭಾಗ ವರ್ತುಳಾಕಾರವಾಗಿದ್ದು, ಹೆಚ್ಚುಕಡಿಮೆ ಮೂರುಭಾಗಗಳು ಒಂದಕ್ಕೊಂದು ಅಳತೆಯಲ್ಲಿ ಸಮವಾಗಿರುತ್ತವೆ. ಈ ಭಾಗಗಳಿಗೆ ಕ್ರಮವಾಗಿ ಬ್ರಹ್ಮ, ವಿಷ್ಣು ಮತ್ತು ಶಿವ ಭಾಗಗಳೆಂದು ಮೂರ್ತಿಶಿಲ್ಪಗಳಲ್ಲಿ ನಿರ್ದೇಶಿಸಲಾಗಿದೆ. ಆದರೆ ಈ ಲಿಂಗದಲ್ಲಿ ಎರಡೇ ಭಾಗಗಳಿರುವುದು ವೈಶಿಷ್ಟ್ಯ. ಕೆಳಭಾಗ ಆಯತಾಕಾರವಾಗಿದ್ದು, ೦.೯೨ ಸೆಂ.ಮೀ. ಎತ್ತರವಿದೆ. ೫೦ ಸೆಂ.ಮೀ. ಎತ್ತರವಿರುವ ಮೇಲ್ಭಾಗವು ಅಂಡಾಕೃತಿಯಲ್ಲಿದ್ದು, ಮೇಲಕ್ಕೆ ಸಪೂರವಾಗುತ್ತ ಹೋಗುತ್ತದೆ. ಕೆಳಗೆ ಮತ್ತು ಮಧ್ಯದಲ್ಲಿ ಸ್ವಲ್ಪ ಉಬ್ಬಿದೆ. ಇವೆರಡರ ಮಧ್ಯಭಾಗವು ೮ ಸೆಂ.ಮೀ. ಅಗಲದಷ್ಟು ಕೊರೆಯಲ್ಪಟ್ಟಿದ್ದು, ಕಂಠದಹಾಗೆ ಕಿರಿದಾಗಿದ್ದು ಸುಮಾರು ೨೫ ಸೆಂ.ಮೀ. ಅಗಲವಿರುವುದು ಮತ್ತೊಂದು ವೈಶಿಷ್ಟ್ಯ. ಈ ಅಂಡಾಕೃತಿಯ ಒಂದು ಮುಖದ ಎರಡು ಅಂಚುಗಳುದ್ದಕ್ಕೂ ಮತ್ತು ಮಧ್ಯದಲ್ಲಿ ಊರ್ಧ್ವ ಉಬ್ಬಿದ

ರೇಖೆಗಳಿವೆ. ಊರ್ಧ್ವ ಉಬ್ಬಿದ ರೇಖೆಗಳಿಂದ ಪಾರ್ಶ್ವ ನಾಡಿಗಳು ಇಳಿಬಿದ್ದಿದ್ದು, ಕೆಳಗೆ ಸುತ್ತು ಹಾಕಿ ಒಂದಾಗಿವೆ. ಈ ಪಾರ್ಶ್ವನಾಡಿಗಳು ಕೊರೆದ ರೇಖೆಗಳು ಉಳಿದೆಲ್ಲೆಡೆಗಳಲ್ಲಿ ಮಧ್ಯ ಮತ್ತು ಪಾರ್ಶ್ವನಾಡಿಗಳುಳ್ಳ ಬ್ರಹ್ಮಸೂತ್ರವನ್ನು ಕೊರೆದ ರೇಖೆಗಳಿಂದಲೇ ಸೂಚಿಸಲಾಗಿದೆ. ಇಲ್ಲಿ ಮಾತ್ರ ಬದಿಯಲ್ಲಿ ಅಂಡಾಕೃತಿಯ ಉಬ್ಬಿದ ರೇಖೆಯಿರುವುದು. ಊರ್ಧ್ವ ಮಧ್ಯನಾಡಿಯನ್ನು ಉಬ್ಬಿದ ರೇಖೆಯಿಂದ ತೋರಿಸಿರುವುದು ಇನ್ನೊಂದು ವೈಶಿಷ್ಟ್ಯ. ಕೊನೆಯ ಎರಡು ವಿಶಿಷ್ಟ ಲಕ್ಷಣಗಳ ಹೊರತಾಗಿ ಈ ಲಿಂಗವು ಅಂಕೋಲದ ಬಳಿದೊರೆತ ಕ್ರಿ.ಶ.೧-೨ನೇ ಶತಮಾನದ ಬೋಳೆಲಿಂಗಕ್ಕೆ ಹೋಲುತ್ತದೆಯೆಂಬುದು[೧೪] ಅ. ಸುಂದರ ಅವರ ಅಭಿಮತ.

ವೀರಭದ್ರ

ಚಿತ್ರದುರ್ಗದ ಸ್ಥಳೀಯ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಚಂದ್ರವಳ್ಳಿಯಿಂದ ತಂದು ಸಂರಕ್ಷಿಸುತ್ತಿರುವ ಎರಡು ವೀರಭದ್ರನ ಶಿಲ್ಪಗಳಿವೆ. ೫೧ ನೇ ಸಂಖ್ಯೆಯ ವೀರಭದ್ರನ ಶಿಲ್ಪವು ಸುಮಾರು ಮೂರು ಅಡಿ ಎತ್ತರವಿದ್ದು, ಬಳಪದ ಶಿಲೆಯಲ್ಲಿ ಕಂಡರಿಸಲಾಗಿದೆ. ತ್ರಿಭಂಗಿಯಲ್ಲಿ ನಿಂತಿರುವ ವೀರಭದ್ರನು ತನ್ನ ಕೈಗಳಲ್ಲಿ ಬಿಲ್ಲು, ಬಾಣ, ಮತ್ತು ಖೇಟ ಹಿಡಿದಿದ್ದರೆ, ಮುಂದಿನ ಬಲಗೈ ಭಗ್ನವಾಗಿದೆ. ಬಾಣದ ತುದಿಯಲ್ಲಿ ವ್ಯಕ್ತಿಯ ರುಂಡ ಅಥವಾ ತಲೆಬುರುಡೆಯನ್ನು ಚಿತ್ರಿಸಲಾಗಿದೆ. ಕಿರೀಟಮುಕುಟಧಾರಿ ವೀರಭದ್ರನು ಕಿವಿಗಳಲ್ಲಿ ಸರ್ಪಕುಂಡಲವನ್ನು ಧರಿಸಿರುವವನು. ಕೊರಳಲ್ಲಿ ಹಾರ, ಸರ, ಉಪವೀತ, ಯಜ್ಞೋಪವೀತ ಧರಿಸಿರುವವನು. ಉಳಿದಂತೆ ಭುಜವಲ್ಯ ಕೆಯೂರ, ಕೈಕಡಗ, ಉಂಗುರ, ಕಾಲ್ಕಡಗ ಮತ್ತು ನೂಪುರ ಧಾರಿಯಾಗಿದ್ದು, ಪಾದುಕೆಗಳನ್ನು ಧರಿಸಿರುವವನು. ವೀರಭದ್ರನು ನಡುಪಟ್ಟಿ ಮತ್ತು ತೊಟ್ಟ ಉಡುಗೆಯು ನೆರಿಗೆನೆರಿಗೆಯಾಗಿದ್ದು, ಅಲಂಕೃತವಾಗಿದೆ. ಶಿಲ್ಪದ ಮೇಲ್ಬದಿಯಲ್ಲಿನ ಕೀರ್ತಿಮುಖದ ಪ್ರಭಾವಳಿಯಲ್ಲಿ ಕೀರ್ತಿಮುಖದಿಂದ ಹೊರಬಂದ ವಲ್ಲಿಯ ಅಲಂಕರಣಗಳಿವೆ. ಶಿಲ್ಪದ ಬಲಬದಿಯಲ್ಲಿ ಕೈಮುಗಿದು ಸಮಭಂಗಿಯಲ್ಲಿ ನಿಂತಿರುವ ದಕ್ಷಬ್ರಹ್ಮನ ಶಿಲ್ಪ ಮತ್ತು ವ್ಯಕ್ತಿ ರುಂಡವನ್ನು ಕಾಲಲ್ಲಿತುಳಿದ ನಂದಿಯ ಶಿಲ್ಪವಿದೆ. ಶೈಲಿಯ ದೃಷ್ಟಿಯಲ್ಲಿ ಈ ಶಿಲ್ಪವು ೧೧-೧೨ನೇ ಶತಮಾನದ್ದು.

ಇನ್ನೊಂದು ವೀರಭದ್ರನ ಶಿಲ್ಪವು ೫೫ನೇ ಸಂಖ್ಯೆಯದು. ಸರಿಸುಮಾರು ೫ಅಡಿ ಎತ್ತರವಿರುವ ಈ ಶಿಲ್ಪವು ಹಸಿರು ಮಿಶ್ರಿತ ಕಪ್ಪುಶಿಲೆಯಲ್ಲಿ ಕಡೆಯಲಾಗಿದೆ. ಶಿಲ್ಪದ ಎರಡೂ ಪಾದಗಳು ಭಗ್ನವಾಗಿದೆ. ಕರಂಡ ಮುಕುಟ ಧಾರಿಯಾದ ವೀರಭದ್ರನು ಸರ್ಪಕುಂಡಲ, ಹಾರ, ಸರ, ಭುಜವಲ್ಯ ಉಪವೀತ, ನಡುಪಟ್ಟಿ, ಧರಿಸಿರುವವನು. ತನ್ನ ನಾಲ್ಕು ಕೈಗಳಲ್ಲಿ ಬಾಣ, ಬಿಲ್ಲು, ಖಡ್ಗ ಮತ್ತು ಖೇಟ ಹಿಡಿದಿರುವವನು. ಶಿಲ್ಪದ ಮೇಲ್ಬದಿಯಲ್ಲಿ ಕೀರ್ತಿಮುಖದ ಪ್ರಭಾವಳಿಯಿದೆ. ವೀರಭದ್ರನ ಹಣೆಯಲ್ಲಿ ರುದ್ರನೇತ್ರವಿದೆ. ಶಿಲ್ಪ ಶೈಲಿಯ ದೃಷ್ಟಿಯಿಂದ ೧೫-೧೬ನೇ ಶತಮಾನದ ಅವಧಿಯದ್ದಾಗಿದೆ.

೬೨ನೇ ಸಂಖ್ಯೆಯ ನಂದಿಶಿಲ್ಪವು ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿದ್ದು, ಚಿತ್ರದುರ್ಗ ಬೆಟ್ಟ ಪರಿಸರದಲ್ಲಿ ದೊರೆತದ್ದಾಗಿದೆ. ೨ ಅಡಿ ಎತ್ತರ ಮತ್ತು ಎರಡು ಅಡಿ ಉದ್ದವಿರುವ ಈ ಶಿಲ್ಪವು ಬಳಪದ ಶಿಲೆಯದು. ಮುಖ ಭಗ್ನಗೊಂಡಿದ್ದು ಹಾರ, ಸರ, ಲೊಡಗ, ಗಂಟೆಸರಗಳ ಕೆತ್ತನೆಗಳಿವೆ.

ಈ ಮೇಲ್ಕಾಣಿಸಿದ ಶಿಲ್ಪಗಳೊಡನೆ, ಸರಿಸುಮಾರು ಆರು ಭೈರವ ಶಿಲ್ಪಗಳಿದ್ದು, ಅವುಗಳು ಸಂಪೂರ್ಣ ಭಗ್ನಗೊಂಡಿವೆ. ಇದರಿಂದ ಈ ಪರಿಸರದಲ್ಲಿ ಭೈರವನ ಆರಾಧಕರಾದ ಕಾಪಾಲಿಕನಾಥರು ಪ್ರಬಲರಾಗಿದ್ದುದನ್ನು ಸೂಚಿಸುತ್ತದೆ.

೪.೨.೨.೨ ಶಾಕ್ತ ಶಿಲ್ಪಗಳು

ಚಿತ್ರದುರ್ಗ ಪರಿಸರದಲ್ಲಿ ದೊರೆತ ಶಾಕ್ತ ಶಿಲ್ಪಗಳು ಚಿತ್ರದುರ್ಗದ ಸ್ಥಳೀಯ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿವೆ. ೧೬೮ನೇ ಸಂಖ್ಯೆಯ ದುರ್ಗಾದೇವಿಯ ಶಿಲ್ಪ ಚಂದ್ರವಳ್ಳಿಯಲ್ಲಿ ದೊರೆತದ್ದು. ಅರ್ಧ ಅಡಿ ಎತ್ತರದ ಪೀಠದ ಮೇಲೆ ಸುಖಾಸೀನ ಭಂಗಿಯಲ್ಲಿ ಕುಳಿತಿರುವ ದುರ್ಗಾದೇವಿಯ ಶಿಲ್ಪವು ಸುಮಾರು ನಾಲ್ಕು ಅಡಿ ಎತ್ತರವಿದೆ. ಕಪ್ಪುಶಿಲೆಯಲ್ಲಿ ಕಡೆದ ದೇವಿಯ ಶಿಲ್ಪದ ಮುಂದಿನ ಎರಡು

ಕೈಗಳು ಭಗ್ನವಾಗಿದೆ. ಹಿಂದಿನ ಎರಡು ಕೈಗಳಲ್ಲಿ ತ್ರಿಶೂಲ, ಡಮರುಗವನ್ನು ಹಿಡಿದಿರುವಳು. ಕರಂಡಮುಕುಟ ಧಾರಿಯಾಗಿರುವ ದೇವಿಯು ಕೊರಳಲ್ಲಿ ಹಾರ, ಸರ, ಕೆಯೂರ, ಭುಜವಲ್ಯ, ಕೈಕಡಗ, ಕಾಲ್ಕಡಗ ಧರಿಸಿರುವ ದೇವಿಯು ಸಣ್ಣ ನಡುವನ್ನು ಹೊಂದಿರುವಳು. ಶಿಲ್ಪದ ಮೇಲೆ ಕೀರ್ತಿಮುಖದ ಪ್ರಭಾವಳಿ ಇದೆ.

ಚಿತ್ರದುರ್ಗ ಪರಿಸರದಲ್ಲಿ ಶೈವ ದೇವಾಲಯಗಳು ಅಧಿಕವಾಗಿರುವಂತೆ ಶಿಲ್ಪಗಳಲ್ಲಿಯೂ ಶೈವ ಶಿಲ್ಪಗಳದ್ದೇ ಮೇಲುಗೈ. ಸ್ಥಳೀಯವಾಗಿ ಸಿಗುವ ಕಣಶಿಲೆಯನ್ನು ಮೂರ್ತಿಗಳನ್ನು ಕೆತ್ತಲು ಮಾಧ್ಯಮವಾಗಿ ಬಳಸಿರುವುದು ತೀರಾ ವಿರಳ. ಇದನ್ನು ಕೋಟೆ ಪ್ರಾಕಾರದ ಮೇಲೆ ಮತ್ತು ಪ್ರಾಕೃತಿಕವಾಗಿ ನಿರ್ಮಿತವಾಗಿರುವ ಕಣಶಿಲೆಯ ಗುಂಡುಗಳ ಮೇಲೆ ಮಾತ್ರ ನೋಡಲು ಸಾಧ್ಯ. ಆದರೆ ದೇವತಾ ಶಿಲ್ಪಗಳನ್ನು ಕೆತ್ತಲು ಹಸಿರು ಮಿಶ್ರಿತ ಕಪ್ಪುಶಿಲೆ, ಬಳಪದ ಶಿಲೆ ಹಾಗೂ ಕಪ್ಪು ಕಲ್ಲನ್ನೆ ಪ್ರಧಾನ ಮಾಧ್ಯಮವಾಗಿ ಬಳಸಿರುವರು. ಇಲ್ಲಿ ಲಭ್ಯವಿರದ ಈ ಕಲ್ಲುಗಳನ್ನು ಬೇರೆಡೆಯಿಂದ ತಂದಿರಬಹುದು. ಇಲ್ಲಿನ ಮೂರ್ತಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಶೈವ ಶಿಲ್ಪಗಳು ತೃಟಿತವಾಗಿದ್ದರೆ, ವೈಷ್ಣವ ಶಿಲ್ಪಗಳು ದೇವಾಲಯಗಳಲ್ಲಿ ಸುಸ್ಥಿತಿಯಲ್ಲಿವೆ. ಇದನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಶೈವ ಮತ್ತು ವೈಷ್ಣವರಲ್ಲಿ ಆಂತರಿಕ ಸಂಘರ್ಷಗಳು ನಡೆದಿರುವಂತೆ ತೋರುವುದು.

ಟಿಪ್ಪಣಿಗಳು

೧. ಶಿವರಾಮಕಾರಂತ, ೧೯೭೫, ಭಾರತೀಯ ಶಿಲ್ಪ, ಪು. ೮
೨. ಪರಮಶಿವಮೂರ್ತಿ ಡಿ.ವಿ., ೧೯೯೯, ಕನ್ನಡ ಶಾಸನ ಶಿಲ್ಪ, ಪು. ೧೭
೩. ಈ ವಿಗ್ರಹವು ಚಿತ್ರದುರ್ಗ ಬೆಟ್ಟ ಪರಿಸರದ ಗವಿಯೊಂದರಲ್ಲಿ ದೊರತದ್ದೆಂದು ಶ್ರೀ ಟಿ.ಎಸ್. ಗಂಡುಗಲಿಯವರು ನನಗೆ ತಿಳಿಸಿದರೆಂದು ಡಾ.ಅ. ಸುಂದರ ಅವರು ಉಲ್ಲೇಖಿಸಿರುವರು. ನೋಡಿ: ಸುಂದರ ಅ., ೧೯೯೦, 'ಚಿತ್ರದುರ್ಗದಲ್ಲಿಯ ಒಂದು ಅಪೂರ್ವ ದ್ವಿಬಾಹು ಗಣೇಶವಿಗ್ರಹ', ಸ.ಕಾ., ಸಂ- ೧:೨, ಪು. ೩೩
೪. ಅದೇ, ಪು. ೩೫
೫. ಲಕ್ಷ್ಮಣ್ ತೆಲಗಾವಿ, ೧೯೮೯, 'ಚಿತ್ರದುರ್ಗ ಕೋಟೆ ಮತ್ತು ಬೆಟ್ಟ ಪರಿಸರದ ಮೂರು ವ್ಯಕ್ತಿ ಶಿಲ್ಪಗಳು', ಇ.ದ., ಸಂ-೧೪, ಪು. ೧೩೬-೧೩೮
೬. ಅದೇ, ಪು. ೧೪೦-೧೪೩
೭. ರಾಜಶೇಖರಪ್ಪ ಬಿ., ೨೦೦೧(ಬಿ), ಇತಿಹಾಸ ಕಥನ, ಪು. ೧೬೪-೧೬೫
೮. ಅದೇ,
೯. ಚಿದಾನಂದಮೂರ್ತಿ ಎಂ., ೧೯೮೪, ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು, ಪು. ೭
೧೦. ಕಲಬುರ್ಗಿ ಎಂ.ಎಂ., ೧೯೮೦, ಸಮಾಧಿ ಬಲಿದಾನ ಮತ್ತು ವೀರಮರಣ ಸ್ಮಾರಕಗಳು, ಪು. ೭೮
೧೧. ಶಿವಪ್ಪ ಎಸ್., ೨೦೦೬, ಚಿತ್ರದುರ್ಗ ಪಾಳೆಯಗಾರರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧನೀತಿ(ಅಪ್ರಕಟಿತ ಪಿಎಚ್.ಡಿ. ಪ್ರಬಂಧ), ಪು. ೨೨೧
೧೨. ಪರಮಶಿವಮೂರ್ತಿ ಡಿ.ವಿ., ಪೂರ್ವೋಕ್ತ, ಪು. ೯
೧೩. ಸುಂದರ ಅ., ೧೯೯೧, 'ಚಿತ್ರದುರ್ಗದ ಎರಡು ಅಪೂರ್ವ ಕಂಚಿನ ಗೊಂಬೆಗಳು' ಸ.ಕಾ., ಸಂ-೧:೫, ಪು. ೨೪-೨೭
೧೪. ಸುಂದರ ಅ.,೧೯೭೮, 'ಚಿತ್ರದುರ್ಗ ಪರಿಸರ: ಇತ್ತೀಚಿನ ಪುರಾತತ್ವ ಶೋಧನೆಗಳು', ಮಾ.ಭಾ., ಸಂ-೨:೧, ಪು. ೪೨

ಅಧ್ಯಾಯ – ೫

ಧಾರ್ಮಿಕ ಪಂಥಗಳು

೫.೧ ಬೌದ್ಧ

೫.೨ ಶೈವ

೫.೩ ವೈಷ್ಣವ

೫.೪ ಶಾಕ್ತ

೫.೫ ಜೈನ

ಧಾರ್ಮಿಕ ಪಂಥಗಳು

ಸಾಂಸ್ಕೃತಿಕ ಕೇಂದ್ರಗಳಾಗಿದ್ದ ದೇವಾಲಯಗಳು ಮಾನವನ ಧಾರ್ಮಿಕ ಶ್ರದ್ಧೆ, ಭಕ್ತಿ ಹಾಗೂ ಮತಪಂಥಗಳ ಕೇಂದ್ರಬಿಂದುಗಳಾಗಿ ಬೆಳೆದದ್ದು ಸ್ವೀಕೃತವಾದ ಸಂಗತಿ. ದೇವಾಲಯಗಳು ಧಾರ್ಮಿಕ ಮತ ಪಂಥಗಳಿಗನುಗುಣವಾಗಿ ನಿರ್ದಿಷ್ಟ ಪರಿಧಿಯಲ್ಲಿ ಆಚರಣೆ, ನಂಬಿಕೆ ಹಾಗೂ ವಿಧಿವಿಧಾನಗಳನ್ನು ತನ್ನ ಸುತ್ತಲೂ ಹೆಣೆದುಕೊಂಡಿರುತ್ತದೆ. ಈ ಕುರುಹುಗಳು ನಾಡಿನ ಹಲವಾರು ದೇವಾಲಯಗಳಲ್ಲಿ ಪ್ರಸ್ತುತದ ದಿನಮಾನಗಳಲ್ಲಿಯೂ ಪ್ರಚಲಿತದಲ್ಲಿವೆ. ಪ್ರಸ್ತುತ ಚಿತ್ರದುರ್ಗ ಪರಿಸರವೂ ಇದಕ್ಕೆ ಹೊರತಾಗಿಲ್ಲ. ಇಲ್ಲಿನ ರಾಜಕೀಯ, ಧಾರ್ಮಿಕ, ಸಾಮಾಜಿಕ ಬದುಕಿನಲ್ಲಿ ಬೌದ್ಧ, ಶೈವ, ವೈಷ್ಣವ, ಶಾಕ್ತ ಪಂಥಗಳು ಆಳವಾದ ಪ್ರಭಾವವನ್ನು ಬೀರಿರುವುದು ಇಲ್ಲಿನ ದೇವಾಲಯಗಳು ಮತ್ತು ಆಚರಣೆಗಳ ಅಧ್ಯಯನದಿಂದ ವೇದ್ಯವಾಗುವುದು.

೫.೧ ಬೌದ್ಧ ಧರ್ಮ

ಕರ್ನಾಟಕದಲ್ಲಿ ಲಭ್ಯವಾದ ಅಶೋಕನ ಶಾಸನಗಳು ಮತ್ತು ಬೌದ್ಧ ಗ್ರಂಥಗಳಲ್ಲಿ ಬರುವ ಸಾಂಪ್ರದಾಯಿಕ ನಿರೂಪಣೆಗಳು ಕರ್ನಾಟಕ ಕ್ರಿ.ಪೂ.೩ನೇ ಶತಮಾನದ ವೇಳೆಗೆ ಬೌದ್ಧ ಧರ್ಮದ ಪ್ರಭಾವಕ್ಕೆ ಒಳಪಟ್ಟಿದ್ದನ್ನು ಶ್ರುತಪಡಿಸುತ್ತವೆ. ಬೌದ್ಧಮತ ಪ್ರಚಾರದಲ್ಲಿದ್ದ ಕರ್ನಾಟಕದ ಸನ್ನತಿ, ಬನವಾಸಿ, ಬ್ರಹ್ಮಗಿರಿ, ಹಂಪಿ, ಕದರಿ, ಇಂಡಿ, ಐಹೊಳೆ, ರಾಜಘಟ್ಟ ಮುಂತಾದ ನೆಲೆಗಳ ಸಾಲಿಗೆ ಚಿತ್ರದುರ್ಗ ಪರಿಸರದ ಚಂದ್ರವಳ್ಳಿಯೂ ಸೇರಿರುವುದು ಜನಜನಿತ. ಚಿತ್ರದುರ್ಗ ಪರಿಸರದಲ್ಲಿ ಅಸ್ತಿತ್ವದಲ್ಲಿದ್ದ ಅತ್ಯಂತ ಪ್ರಾಚೀನ ಧರ್ಮದಲ್ಲಿ ಬೌದ್ಧವೂ ಒಂದೆಂಬುದು ಗಮನಾರ್ಹ. ೧೮೮೮ರಲ್ಲಿ ಚಂದ್ರವಳ್ಳಿ ಪ್ರದೇಶದಲ್ಲಿ ದೊರೆತ ನಾಣ್ಯಗಳು ಬೌದ್ಧರ ನಾಣ್ಯಗಳಾಗಿದ್ದವು ಎಂದು ಬಿ.ಎಲ್.ರೈಸ್ ಉಲ್ಲೇಖಿಸಿರುವರು.[೧] ಬಹುಶಃ ಈ ಪರಿಸರದಲ್ಲಿ ಬೌದ್ಧಧರ್ಮದ ಅಸ್ತಿತ್ವದ ಬಗ್ಗೆ ದೊರೆತ ಮೊದಲ ಆಧಾರವಿದು ಎನ್ನಬಹುದು. ತರುವಾಯ ೧೯೦೮ರಲ್ಲಿ ಈ ಪ್ರದೇಶದ ಉತ್ಖನನ ಪೂರ್ವ ಪರೀಕ್ಷಾ ಗುಂಡಿಗಳಲ್ಲಿ ಸಿಕ್ಕ ಇಟ್ಟಿಗೆಗೋಡೆಗಳು ಆಂಧ್ರಭೃತ್ಯರ ಕಾಲದ ಯಾವುದೇ ಒಂದು ಮುಖ್ಯ ಕಟ್ಟಡ ಇಲ್ಲದೆ ಸ್ತೂಪದವು ಎಂದೂ, ಇಲ್ಲಿ ಸಿಕ್ಕ ದೊಡ್ಡ ನಾಣ್ಯಗಳ ಮೇಲೆ ಚೈತ್ಯ, ವೃಷಭದ ಚಿಹ್ನೆಗಳಿವೆಯೆಂದೂ ಆರ್.ನರಸಿಂಹಾಚಾರ್ ಬರೆದಿರುವರು.[೨] ೧೯೨೯ರ ಎಂ.ಎಚ್. ಕೃಷ್ಣ ನಡೆಸಿದ ಚಂದ್ರವಳ್ಳಿ ಉತ್ಖನನದಲ್ಲಿ ಯಕ್ಷಗಂಧರ್ವರು, ಬುದ್ಧನ ಶಿಲ್ಪ ದೊರೆತಿರುವುದು ಗಮನಾರ್ಹ. "ಶಿಲ್ಪವು ಬೌದ್ಧರ ಕಾಲದಲ್ಲಿ ಬಾರಹುತ್ ಅಮರಾವತಿ ಮೊದಲಾದ ಕಡೆಗಳಲ್ಲಿ ಕಾಣಬರುವಂತೆ ಸೌಂದರ್ಯದಿಂದಲೂ, ಲಾಲಿತ್ಯದಿಂದಲೂ ಕೂಡಿ ಸ್ಫೂರ್ತಿಯುಕ್ತವಾಗಿ ಉತ್ತಮ ತರಗತಿಯ ಕಲಾ ಕೌಶಲ್ಯವನ್ನು ತೋರ್ಪಡಿಸುತ್ತದೆ. ಇಲ್ಲಿ ಪೌರಾಣಿಕ ದೇವತೆಗಳಲ್ಲದೆ ಬುದ್ಧನ ಪೂಜೆಯೂ ನಡೆಯುತ್ತಿತ್ತು"[೩] ಎಂದು ಎಂ.ಎಚ್.ಕೃಷ್ಣ ಅಭಿಪ್ರಾಯಪಟ್ಟಿದ್ದಾರೆ. ಇವು ಈ ಪರಿಸರದಲ್ಲಿ ಬೌದ್ಧ ಧರ್ಮ ಊರ್ಜಿತಾವಸ್ಥೆಯಲ್ಲಿದ್ದುದನ್ನು ದೃಢಪಡಿಸುತ್ತವೆ. ಈ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ಸಂಗತಿಗಳನ್ನು ಗುರುತಿಸಲೆತ್ನಿಸಿದವರಲ್ಲಿ ಹುಲ್ಲೂರು ಶ್ರೀನಿವಾಸ ಜೋಯಿಸರು ಅಗ್ರಗಣ್ಯರೆನಿಸಿರುವರು. ಚಂದ್ರವಳ್ಳಿಯಲ್ಲಿ ದೊರೆತ ಹಲವು ನಾಣ್ಯಗಳಲ್ಲಿ ಕೆಲವು ನಾಣ್ಯಗಳ ಮೇಲಿನ ಗುರುತುಗಳು ಬೌದ್ಧ ಮತದ ಸಂಕೇತಗಳೇ ಆಗಿವೆ. ಇವುಗಳ ಮೇಲೆ ಆನೆ, ವೃಷಭ, ಬೋಧಿವೃಕ್ಷ, ನಂದಿಪಾದ, ಸ್ವಸ್ತಿಕ, ತ್ರಿರತ್ನ ಚೈತ್ಯ, ಶ್ರೀವತ್ಸ ಮುಂತಾದ ಅನೇಕ ಗುರುತುಗಳು ಮುದ್ರಿತವಾಗಿವೆ. ಈ ನಾಣ್ಯಗಳ ಮೇಲೆ ಬೌದ್ಧರು ಅತ್ಯಂತ ಪವಿತ್ರವೆಂದು ಭಾವಿಸುವ ಬುದ್ಧನಿಗೆ ಜ್ಞಾನೋದಯವಾದ ಬೋಧಿವೃಕ್ಷ, ಬುದ್ಧನ ಅವಶೇಷಗಳನ್ನು ನಿಕ್ಷಿಪ್ತಮಾಡಿದ ಚೈತ್ಯ ಅಥವಾ ಸ್ತೂಪ, ಬುದ್ಧನು ಜನ್ಮತಾಳಿದ ವೃಷಭಲಗ್ನದ ದ್ಯೋತಕವಾಗಿ ವೃಷಭ, ನಂದಿ, ಪಾದ, ದೇವದತ್ತನಿಂದ ಪ್ರೇರೇಪಿಸಲ್ಪಟ್ಟು ಬುದ್ಧನನ್ನು ಕೊಲ್ಲಲು

ಬಂದು ಬುದ್ಧನ ಸೌಮ್ಯಾಕಾರಕ್ಕೂ, ಸವಿನುಡಿಗೂ ಸಾಧುವಾದ ಮಾಲಾಗಿರಿ ಎಂಬ ಚಂಡ, ಮದಗಜ, ಅರಮನೆಯಿಂದ ಅರಣ್ಯಕ್ಕೆ ಕರೆದೊಯ್ದ ಕುದುರೆ, ಬುದ್ಧನ ಹೆಜ್ಜೆ ಗುರುತುಗಳು ತ್ರಿಶೂಲ, ತ್ರಿರತ್ನ, ಅಗ್ನಿಸ್ತಂಭಗಳು ನಾಣ್ಯಗಳ ಮೇಲೆ ಮುದ್ರಿತವಾಗಿವೆ.[೪] ಈ ಅಂಶಗಳನ್ನೆಲ್ಲಾ ಪರಾಮರ್ಶಿಸುವುದರಿಂದ ಅಶೋಕನ ಕಾಲದಿಂದ ಕದಂಬ ಮಯೂರಶರ್ಮನು ರಾಜ್ಯ ಸ್ಥಾಪನೆ ಮಾಡುವವರೆಗೆ ಚಂದ್ರವಳ್ಳಿಯಲ್ಲಿ ಬೌದ್ಧರಾಜರ ಮಹಾರತಿಗಳ ಮತ್ತು ರಾಜ ಪ್ರತಿನಿಧಿಗಳ ಆಡಳಿತವು ಪ್ರಾಬಲ್ಯದಲ್ಲಿತ್ತೆಂದೂ, ಈ ದೇಶದಲ್ಲಿ ಆಗ್ಗೆ ಬೌದ್ಧರು ನೆಲೆಸಿದ್ದರೆಂದೂ ಧಾರಾಳವಾಗಿ ನಿರ್ಧರಿಸಲು ಈ ನಾಣ್ಯಗಳು ಆಧಾರವಾಗಿವೆ[೫] ಎಂಬುದು ಹುಲ್ಲೂರು ಶ್ರೀನಿವಾಸ ಜೋಯಿಸರ ಅಭಿಮತ. ಇದು ಸರಿ ಎಂದೆನಿಸುತ್ತದೆ.

ಚಂದ್ರವಳ್ಳಿಯಲ್ಲಿ ದೊರೆತ ನಾಣ್ಯಗಳು ಮಾತ್ರವಲ್ಲದೆ, ಇತರೆ ಅನೇಕ ಅಂಶಗಳನ್ನು ಬೌದ್ಧಧರ್ಮಕ್ಕೆ ಸಂಬಂಧವನ್ನು ಜೋಯಿಸರು ಕಲ್ಪಿಸಿರುವರು. ಅವರ ಪ್ರಕಾರ "ಅಂಕಲಿಮಠ ಕೂಡಾ ಹಿಂದೊಮ್ಮೆ ಬೌದ್ಧರ ನೆಲೆಯಾಗಿತ್ತು. ಇದು ಒಂದು ಪ್ರಾಚೀನ ನೆಲಗವಿ ನಾಸಿಕಾದಲ್ಲಿರುವ ಸೀತಾ ಗುಂಫಾದಂತೆಯೇ ಇದೆ. ಬುದ್ಧನು ಧರ್ಮೋಪದೇಶ ಮಾಡಿದ ೪೫ ವರ್ಷಗಳಲ್ಲಿ ಪ್ರತಿವರ್ಷವೂ ಮಳೆಗಾಲದಲ್ಲಿ ನಾಲ್ಕು ತಿಂಗಳ ಕಾಲ ಸಂಚರಿಸದೆ ತನ್ನ ಶಿಷ್ಯರ ಗೃಹದಲ್ಲಿ ಊರಿನ ಸಮೀಪ ಗುಹೆ, ವನವಿಹಾರ ಮುಂತಾದವುಗಳಲ್ಲಿ ವಾಸವಾಗಿದ್ದನು. ಭಿಕ್ಷುಗಳೂ ಸಹ ಅದನ್ನೇ ಅನುಸರಿಸುತಿದ್ದರು. ಈ ಗುಹೆಯು ಮಳೆಗಾಲದಲ್ಲಿ ವಾಸಯೋಗ್ಯ ಸ್ಥಳವಾಗಿತ್ತು. ಪಕ್ಕದಲ್ಲಿ ತಿಳಿನೀರಿನ ಹಳ್ಳವೂ ಆರೋಗ್ಯಕರವಾದ ಹವೆಯೂ ಭಿಕ್ಷಾಟನೆಗೆ ಚಂದ್ರವಳ್ಳಿ ನಗರವೂ ಇದ್ದುದರಿಂದ ಈ ಗುಹೆಯನ್ನು ತಮ್ಮ ವಸತಿಯನ್ನಾಗಿ ಮಾಡಿಕೊಂಡು ಮಳೆಗಾಲದಲ್ಲಿ ಶಿಷ್ಯರಿಗೆ ಧರ್ಮೋಪದೇಶ ಮಾಡುತ್ತಿದ್ದಂತೆ ತೋರುವುದು. ಇದು ದಾನಿಗಳು ಭಿಕ್ಷುಗಳಿಗೆ ನಿರ್ಮಿಸಿದ ನೆಲಗವಿ ಎಂದು ತೋರುವುದು"[೬] ಎಂದಿರುವರು. ಹಿಂದೆ ಚಂದ್ರವಳ್ಳಿ ಪಟ್ಟಣ ಅಸ್ತಿತ್ವದಲ್ಲಿದ್ದ ಅವಧಿಯಲ್ಲಿ ನಿಸರ್ಗದತ್ತ ಗವಿಯಾದ ಅಂಕಲಿಮಠದಲ್ಲಿ ಬೌದ್ಧರಿದ್ದ ಸಾಧ್ಯತೆಯನ್ನು ಒಪ್ಪಬಹುದು. ಆದರೆ ಮಧ್ಯಕಾಲದ ಅವಧಿಯಲ್ಲಿ ಇದು ಪ್ರಮುಖ ಶೈವ ಮಠವಾಗಿತ್ತು. ಇದರ ಒಳಭಾಗದ ಗಾರೆರಚನೆಗಳನ್ನು ಗಮನಿಸಿದರೆ ಪಾಳೆಯಗಾರ ಅರಸರ ಅವಧಿಯಲ್ಲಿ ಪುನರ್ ನವೀಕರಣವಾದಂತೆ ತೋರುತ್ತದೆ.

ಜೋಯಿಸರು ಬೌದ್ಧಧರ್ಮ ಸಂಬಂಧದಲ್ಲಿ "ಚಂದ್ರವಳ್ಳಿಯಲ್ಲಿ ಬೌದ್ಧರ ಪ್ರಾಬಲ್ಯದ ಕಾಲದಲ್ಲಿ ರಾಜಧಾನಿಯಾಗಿದ್ದಾಗ ಈ ಬೆಟ್ಟದ ಮೇಲೆ ಬೋಧಿಸತ್ವನ ಅವಶೇಷಗಳನ್ನು ಭರಣಿಗಳಲ್ಲಿಟ್ಟು ಭೂಗತಮಾಡಿ ಅವುಗಳ ಮೇಲೆ ಚೈತ್ಯ ಮತ್ತು ವಿಹಾರಗಳ ನಿರ್ಮಿತವಾಗಿರಬೇಕು. ಇಲ್ಲಿ ಬೌದ್ಧರ ಧರ್ಮವು ನಶಿಸಿಹೋದ ಮೇಲೆ ಶೈವರ ಪ್ರಾಬಲ್ಯವು ಹೆಚ್ಚಾಗಿ, ಅವೆಲ್ಲಾ ಶೈವದೇವಾಲಯಗಳಾಗಿ ಮಾರ್ಪಾಟಾದಂತೆ ತೋರುತ್ತದೆ ಎಂದೂ, ದಕ್ಷಿಣಾಪಥದಲ್ಲಿ ಬೌದ್ಧಧರ್ಮ ನಶಿಸಿಹೋದಮೇಲೆ ವೈದಿಕರು ಬೌದ್ಧ ದೇವತೆಗಳನ್ನು ತಮ್ಮ ಅನುಕೂಲಕ್ಕಾಗಿ ತಮ್ಮ ಧರ್ಮದ ದೇವತೆಗಳನ್ನಾಗಿ ಮಾಡಿಕೊಂಡು, ದೇವಾಲಯಗಳನ್ನೆಲ್ಲಾ ತಮ್ಮದೆಂದೇ ಕರೆದರು"[೭] ಎಂದಿರುವರು. ಆದರೆ ಪ್ರಸ್ತುತ ಚಿತ್ರದುರ್ಗ ಪರಿಸರದಲ್ಲಿನ ಶೈವ ದೇವಾಲಯಗಳು ಮೂಲತಃ ಬೌದ್ಧಧರ್ಮಕ್ಕೆ ಸಂಬಂಧಿಸಿದವುಗಳೆಂದು ಸಮರ್ಥಿಸಲು ಯಾವುದೇ ಬಗೆಯ ಆಕರಗಳಿಲ್ಲದಿರುವುದರಿಂದ ಇದು ಕೇವಲ ಊಹೆಯಾಗಿದ್ದು, ಚರ್ಚಾಸ್ಪದ ಸಂಗತಿಯಾಗಿದೆ.

ಜೋಯಿಸರು ಅಗಸನಕಲ್ಲು ಸಹ ಅಶೋಕ ಎಂಬುದರ ಕುರುಹಾಗಿದ್ದು, ಅದು ಬೌದ್ಧಧರ್ಮದ ನೆಲೆಯಾಗಿತ್ತು[೮] ಎಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಇದನ್ನು ಸಮರ್ಥವಾಗಿ ದೃಢಪಡಿಸುವ ಯಾವುದೇ ಆಧಾರಗಳು ದೊರೆತಿಲ್ಲ. ಚಂಪಕ ಸಿದ್ದೇಶ್ವರ ದೇವಾಲಯವೂ ಮೂಲತಃ ಬೌದ್ಧರ ನೆಲೆಯಾಗಿತ್ತೆಂದು, ಹಿಡಿಂಬನ ಹಲ್ಲು ಎಂದು ಆನೆಯ ದವಡೆ ಹಲ್ಲನ್ನು ತೋರಿಸುವರೆಂದೂ, ಹಲ್ಲು ಬುದ್ಧ ಮತ್ತು ಬೋಧಿಸತ್ವದ ಸಂಕೇತವೆಂದೂ, ಸಿದ್ಧನಾಥ ಎಂಬ ಹೆಸರು ಹಳ್ಳಿನ ಸಂಕೇತವೆಂದೂ, ಇವು ಬೌದ್ಧಧರ್ಮದ ಮುಖ್ಯವಾದ ಸಾಕ್ಷಿಗಳಾಗಿವೆ ಎಂದೂ ಜೋಯಿಸರು

ಹೇಳುತ್ತಾರೆ.[೯] ಆದರೆ ಸಂಪಿಗೆ ಸಿದ್ದೇಶ್ವರ ದೇವಾಲಯ ಮೂಲತಃ ಹದಿಮೂರನೇ ಶತಮಾನದ ರಚನೆಯೆಂಬುದು ಶಾಸನಗಳಿಂದ ಸ್ಪಷ್ಟವಾಗಿದೆ. ಹಿಡಿಂಬನ ಹಲ್ಲು ಎಂಬುದು ಈಗ ಈ ದೇವಾಲಯದಲ್ಲೂ ಇರದೇ, ಹಿಡಿಂಬೇಶ್ವರ ದೇವಾಲಯದಲ್ಲಿ ಇರದೇ, ಏಕನಾಥೇಶ್ವರಿ ದೇವಾಲಯವನ್ನು ಸೇರಿರುವುದರಿಂದ ಆ ಹಲ್ಲು ಆನೆಯ ದವಡೆ ಹಲ್ಲೇ ಎಂದರೂ, ಬೌದ್ಧೇತರವಾದ ಪರಂಪರೆಯು ಮಹಾಭಾರತದ ಹಿಡಂಬನಿಗೆ ಅನ್ವಯಿಸಿ ಅದನ್ನು ಹೇಳುವುದರಿಂದ ಅದು ಬೌದ್ಧ ಸಂಬಂಧಿಯಾದದ್ದು, ಬೋಧಿಸತ್ವದ ದಂತದ ಅವಶೇಷದ ಸಂಕೇತ ಎಂಬುದನ್ನು ಒಪ್ಪುವುದು ಸಂದಿಗ್ಧವಾಗುತ್ತದೆ. ಒಟ್ಟಾರೆಯಾಗಿ ಈ ಬಗೆಯ ದ್ವಂದ್ವ ಅಭಿಪ್ರಾಯಗಳೇನೇ ಇದ್ದರೂ ಸಹ ಚಂದ್ರವಳ್ಳಿ ಪರಿಸರದಲ್ಲಿ ಬೌದ್ಧಧರ್ಮ ಅಸ್ತಿತ್ವದಲ್ಲಿದ್ದುದನ್ನು ಅಲ್ಲಿನ ನಾಣ್ಯಗಳು ಬುದ್ಧ ಮತ್ತು ಯಕ್ಷಗಂಧರ್ವರ ಶಿಲ್ಪಗಳು ದೃಢಪಡಿಸುತ್ತವೆ.

೫.೨ ಶೈವಧರ್ಮ

ಶೈವಧರ್ಮವು ಭರತಖಂಡದಲ್ಲಿ ಅತ್ಯಂತ ಪ್ರಾಚೀನ ಧರ್ಮಗಳಲ್ಲೊಂದು. ಶಿವನ ಆರಾಧನೆಯು ವೇದಗಳಿಗಿಂತಲೂ ಹಿಂದೆ ಹೋಗುತ್ತದೆ. ಹರಪ್ಪ-ಮೊಹೆಂಜೋದಾರೋಗಳ ಸೈಂಧವ ಸಂಸ್ಕೃತಿಯಲ್ಲಿ ಕೊಂಬುಗಳಿರುವ ದೇವತೆಯ ಚಿತ್ರವಿರುವ ಮುದ್ರಿಕೆ, ಲಿಂಗಗಳೂ ದೊರೆತಿವೆ. ಕೊಂಬುಗಳಿರುವ ದೇವತೆಗೆ ಮೂರುಮುಖಗಳಿವೆ. ಅವನು ಯೋಗ ಸಮಾಧಿಯ ಭಂಗಿಯಲ್ಲಿ ಕುಳಿತಿರುವನು. ತನ್ನ ಸುತ್ತಲೂ ಆನೆ, ಹುಲಿ, ಖಡ್ಗಾಮೃಗ, ಎಮ್ಮೆ, ಜಿಂಕೆಗಳು ನಿಂತಿವೆ. ಇದನ್ನು ಪರಿಶೀಲಿಸಿ ಅದು ಹಿಂದೂಧರ್ಮದ ಮಹಾಯೋಗಿಯೂ ಪಶುಪತಿಯೂ ಆದ ಶಿವನ ಪ್ರಾಚೀನ ರೂಪವನ್ನು ಸೂಚಿಸುತ್ತದೆಯೆಂದು ಸರ್ ಜಾನ್ ಮಾರ್ಷಲ್ ಅಭಿಪ್ರಾಯಪಡುತ್ತಾರೆ.[೧೦] ತರುವಾಯದ ದಿನಗಳಲ್ಲಿ ಹಲವಾರು ಶಾಖೆಗಳೊಡನೆ ಶೈವಧರ್ಮ ಭಾರತದ ಬಹುತೇಕ ಕಡೆ ಹರಡಿತು. ಚಿತ್ರದುರ್ಗ ಮೂಲತಃ ಕಡಿದಾಗ ಕಣಿವೆಗಳಿಂದ ಕೂಡಿದ ದುರ್ಗಮ ಪ್ರದೇಶವಾಗಿದ್ದು, ಪ್ರಾಕೃತಿಕವಾಗಿ ಕೋಟೆಯಂತೆ ಮೈದಳೆದಿರುವುದು ನೈಜನೀಯ. ಚಿತ್ರದುರ್ಗ ಪರಿಸರವು ಶಾತವಾಹನ ಅವಧಿಯಲ್ಲೇ ಶೈವ ಕೇಂದ್ರವಾಗಿತ್ತೆಂಬುದನ್ನು ಪುರಾತತ್ವ ಆಧಾರಗಳು ಶೃತಪಡಿಸುತ್ತವೆ. ಮಯೂರಶರ್ಮನ ಚಂದ್ರವಳ್ಳಿ ಶಾಸನದ ಬಂಡೆಯ ಕೆಳಭಾಗಲ್ಲಿ ದೊರೆತ ಶಿವಲಿಂಗವು ಬೊಳೆಯಲ್ಲಿ ದೊರೆತ ಕ್ರಿ.ಶ.೧ ಮತ್ತು ೨ನೇ ಶತಮಾನದ ಶಾತವಾಹನರ ಅವಧಿಯಲ್ಲಿ ಲಿಂಗವನ್ನು ಹೋಲುತ್ತದೆಂಬುದು ವಿದ್ವಾಂಸರ ಅಭಿಮತ.[೧೧] ಕ್ರಿ.ಶ.೧೦ ಮತ್ತು ೧೧ನೇ ಶತಮಾನದ ವೇಳೆಗೆ ಚಿತ್ರದುರ್ಗವನ್ನು ಒಳಗೊಂಡಂತೆ ಕರ್ನಾಟಕದಾದ್ಯಂತ ಶೈವಧರ್ಮ ಪ್ರಬಲವಾಗಿತ್ತು. ಈ ಅವಧಿಯ ಶೈವ ಚಟುವಟಿಕೆಗಳಿಗೆ ಅತ್ಯುತ್ತಮ ನಿದರ್ಶನವೆಂದರೆ ಬಳ್ಳಿಗಾವೆಯ ಕೋಡಿಮಠ. ಇದು ದಕ್ಷಿಣ ಕೇದಾರವೆಂದು ಪ್ರಸಿದ್ಧವಾಗಿತ್ತು. ಇದೇ ಅವಧಿಯಲ್ಲಿ ಚಿತ್ರದುರ್ಗವು ಪ್ರಮುಖ ಶೈವ ಕೇಂದ್ರವಾಗಿರುವುದು ಗಮನಾರ್ಹ. ಕಡಿದಾದ ಪ್ರದೇಶವಾದ ಧವಳಪ್ಪನಗುಡ್ಡವು ಸಂಪೂರ್ಣ ಶೈವಮಯವಾಗಿತ್ತು. ಮೂಲತಃ ಶಿವಲಿಂಗದಂತೆ ಗೋಚರವಾಗುವ ಇದು 'ಶಿವಸಿರಿ ಕವುಳಾಸ ಶಿವಭಕ್ತರಲ್ಲದವರು ಹುಗಬಾರದು' ಎಂಬ ಕ್ರಿ.ಶ.೧೩ನೇ ಶತಮಾನದ ಶಾಸನವನ್ನು ಗುಡ್ಡ ಪ್ರವೇಶಿಸುವ ಮಾರ್ಗದ ಪ್ರಾರಂಭದ ಎಡೆಯಲ್ಲಿ ಹಾಕಿರುವರು. ಈ ಗುಡ್ಡವನ್ನು ಶಿವಶ್ರೀ ಕೈಲಾಸ ಎಂದು ಕರೆದಿರುವುದು ಶೈವಾರಾಧನೆಯ ಪಾರಮ್ಯದ ಸಂಕೇತ. ಮೂಲತಃ ಇದರ ರಚನೆಯೇ ಇದಕ್ಕೆ ಮೂಲವೆನ್ನಬಹುದು. ಶಿವಭಕ್ತರಲ್ಲದವರ ಪ್ರವೇಶವನ್ನು ನಿರ್ಬಂದಿಸುವುದರ ಹಿಂದಿನ ಉದ್ದೇಶ ಶೈವೇತರರ ಆಗಮನದಿಂದ ಕ್ಷೇತ್ರದ ಪಾವಿತ್ರ್ಯತೆಗೆ ಧಕ್ಕೆ ತಗಲುವುದೆಂಬ ಭಾವನೆ ಇದ್ದಿರಬಹುದು. ಧವಳಪ್ಪನಗುಡ್ಡದ ಮೇಲ್ಬದಿಯಲ್ಲಿ ಹುಟ್ಟು ಬಂಡೆಯಲ್ಲಿ ೨೧ ಲಿಂಗಗಳನ್ನು ಕಡೆಯಲಾಗಿದ್ದು, ಅವುಗಳೆಲ್ಲವೂ ಕಲ್ಯಾಣಿ ಚಾಲುಕ್ಯ ಶೈಲಿಯಲ್ಲಿವೆ. ಇವುಗಳಲ್ಲದೆ ಫಲ್ಗುಣೇಶ್ವರ, ಹಿಡಿಂಬೇಶ್ವರ ಮತ್ತು ಪಂಚಲಿಂಗೇಶ್ವರ ದೇವಾಲಯದಲ್ಲಿನ ಲಿಂಗಗಳೂ ಇದೇ ಅವಧಿಯವುಗಳಾಗಿವೆ. ಇದರೊಡನೆ ಚಿತ್ರದುರ್ಗ ಪರಿಸರದಲ್ಲಿನ ದೇವಾಲಯಗಳ ಸಂಖ್ಯೆಯಲ್ಲಿ ಶೈವ ದೇವಾಲಯಗಳದ್ದೇ ಸಿಂಹಪಾಲು. ಇವುಗಳ ಸಂಖ್ಯೆ ೪೦ಕ್ಕೂ ಅಧಿಕವಿದೆ. ಚಿತ್ರದುರ್ಗ ಪರಿಸರದಲ್ಲಿನ ದೇವಾಲಯಗಳಲ್ಲಿ

ಆಳರಸದಿಂದ ಹೆಚ್ಚಿನ ಪೋಷಣೆಗೆ ಒಳಪಟ್ಟದ್ದು ಶೈವದೇವಾಲಯಗಳೇ ಎಂಬುದು ಗಮನಾರ್ಹ. ಚಿತ್ರದುರ್ಗ ಪರಿಸರದಲ್ಲಿನ ವಿಜಯನಗರ ಅರಸರು ಮತ್ತು ಪಾಳೆಯಗಾರರಿಂದ ಶೈವಧರ್ಮ ಪೋಷಿಸಲ್ಪಟ್ಟಿತ್ತಲ್ಲದೆ ಅನೇಕ ಶೈವ ದೇಗುಲಗಳು ನಿರ್ಮಾಣವಾಗಿವೆ. ಶೈವಧರ್ಮದ ಅನೇಕ ಪಂಥಗಳು ಈ ಪರಿಸರದಲ್ಲಿದ್ದ ಬಗ್ಗೆ ಕುರುಹುಗಳು ದೊರೆಯುತ್ತವೆ.

ಕಾಳಾಮುಖ

ಶೈವಧರ್ಮದ ಪ್ರಬಲ ಪಂಥಗಳಲ್ಲಿ ಕಾಳಾಮುಖ ಪಂಥವು ಪ್ರಮುಖವಾದದ್ದು. ಮುಖದ ಮೇಲೆ ಕರಿಯಗೆರೆಗಳನ್ನು ಹಚ್ಚಿಕೊಳ್ಳುತ್ತಿದ್ದರಿಂದ ಇವರನ್ನು ಕಾಳಾಮುಖರೆಂದು ಕರೆಯುತ್ತಿದ್ದರೆಂಬ ಅಭಿಪ್ರಾಯವಿದೆ. ಕಾಳಾಮುಖರು ಕಾಪಾಲಿಕರ ಗುಂಪಿಗೆ ಸೇರಿದವರೆಂಬ ರಾಮಾನುಜರು ನೀಡಿರುವ ಅಭಿಪ್ರಾಯವನ್ನಾಧರಿಸಿ ಆರ್.ಜಿ.ಭಂಡಾರ್ಕರ್‌ರವರು ಕಾಳಾಮುಖರು ಕಾಪಾಲಿಕರು ಒಂದೇ ಎಂದು ಹೇಳುತ್ತಾರೆ.[೧೨] ವಾಸ್ತವಿಕವಾಗಿ ಇವೆರಡಕ್ಕೆ ಪರಸ್ಪರ ಭಿನ್ನತೆಗಳಿವೆ. ಕಾಪಾಲಿಕರದು ಸಂಪೂರ್ಣ ವಾಮಾಚಾರ ಮತ್ತು ಗುಹ್ಯ ಸಾಧನೆಯ ಪಂಥವಾದರೆ, ಕಾಳಾಮುಖರದ್ದು ಶುದ್ಧ ಸಾತ್ವಿಕಾಚರಣೆಗಳ ಪಂಥ. ಕರ್ನಾಟಕದ ಶಾಸನಗಳ ಅಧ್ಯಯನದಿಂದ ಗಮನಿಸುವ ಅಂಶವೆಂದರೆ ಕಾಳಾಮುಖರನ್ನು ಕಾಪಾಲಿಕರು ಎಂದು ಎಲ್ಲಿಯೂ ಕರೆದಿರುವುದು ಕಂಡುಬಂದಿಲ್ಲ. ಆದರೆ ಕಾಳಾಮುಖರು ಲಾಕುಳ ಶೈವರೆಂಬುದು ಸ್ಪಷ್ಟವಾಗುತ್ತದೆ.

ಕರ್ನಾಟಕದಲ್ಲಿ ಕಾಳಾಮುಖರ ಮೊದಲ ಉಲ್ಲೇಖ ಕ್ರಿ.ಶ.೮೧೦ರ ಅವಧಿಯ ಗಂಗರ ತಾಮ್ರಶಾಸನದಲ್ಲಿ ದೊರೆಯುತ್ತದೆ. ತರುವಾಯದ ಕಲ್ಯಾಣ ಚಾಲುಕ್ಯ, ಹೊಯ್ಸಳರ ಅವಧಿಯಲ್ಲಿ ಈ ಪಂಥವು ಪ್ರಬಲವಾಗಿ ಊರ್ಜಿತಾವಸ್ಥೆಯಲ್ಲಿತ್ತು. ಚಿತ್ರದುರ್ಗದ ಚಂದ್ರವಳ್ಳಿಯ ಧವಳಪ್ಪನಗುಡ್ಡ ಹಿಮವತ್‌ಕೇದಾರ ಪರಿಸರಗಳು ಪ್ರಮುಖವಾದ ಕಾಳಾಮುಖ ಕೇಂದ್ರಗಳಾಗಿದ್ದವು. ಕ್ರಿ.ಶ.೭-೮ನೇ ಶತಮಾನದಿಂದೀಚೆಗೆ ಕರ್ನಾಟಕದಲ್ಲಿ ಲಾಕುಳ ಶೈವ ಪ್ರಚಾರವಾದ ಬಳಿಕ ದೇವಸ್ಥಾನದ ಅಂಗಸಂಸ್ಥೆಗಳಾಗಿ ಮಠಗಳೂ ಬೆಳೆದುಬಂದವು. ಕ್ರಮೇಣ ಹುಲಿಗೊಂದಿಯ ಪಂಚಲಿಂಗದೇವರ ಗುಡಿಯ ಅಂಗ ಸಂಸ್ಥೆಯಾಗಿ ಅಂಕಲಿಮಠವು ಅಸ್ತಿತ್ವಕ್ಕೆ ಬಂದಿರಬಹುದು. ಬಳ್ಳಿಗಾವೆಯ ಪಂಚಲಿಂಗೇಶ್ವರ ದೇವಾಲಯದ ೧೧ನೇ ಶತಮಾನದ ಶಾಸನದಲ್ಲೂ ಚಂದ್ರವಳ್ಳಿಯ ಅಂಕಲಿಮಠದ ಪೆರುಮಾಳೆದೇವನ ಶಾಸನದಲ್ಲಿರುವಂತೆ ಪಾಂಡವರ ಪ್ರಸ್ತಾಪವಿದ್ದು, ಪಂಚಲಿಂಗಗಳನ್ನು ಸ್ಥಾಪಿಸಿದ ವಿವರವಿದೆ.[೧೩] ನಂದೀಶ್ವರನ ನೆಲೆಯು ಪಂಚಲಿಂಗೇಶ್ವರ ದೇವಾಲಯವಾಗಿದೆ. ಅಂಕಲಿಮಠದ ಹೊರಮಂಟಪದಲ್ಲಿ ಇರುವ ಬರಿದಾದ ಕೋಣೆಯಲ್ಲಿ ನಂದಿ ವಿಗ್ರಹವನ್ನು ಇರಿಸಲಾಗಿದ್ದಿತೆಂಬ ಸಂಗತಿಯು ಇದನ್ನು ಸಮರ್ಥಿಸುವಂತೆ ತೋರುತ್ತದೆ. ಅಲ್ಲದೆ ಬಳ್ಳಿಗಾವೆಯ ಪಂಚಲಿಂಗೇಶ್ವರ ದೇವಾಲಯದ ಪಕ್ಕದಲ್ಲೇ ಇದ್ದ ಕಲ್ಲು ಮಠದಲ್ಲಿ ವೀರಶೈವ ಅಕ್ಷರಭ್ಯಾಸದ 'ಅಂಕಲಿಮಠ' ವಿದ್ದು, ಅಲ್ಲಿನ ಮಠದ ವ್ಯವಸ್ಥೆಗೆ ಇದು ಸಂಪೂರ್ಣ ಹೊಂದುತ್ತದೆನ್ನಬಹುದು. ಅಂಕಲಿಮಠದ ಒಟ್ಟು ರಚನೆಯೇ ಇದನ್ನು ಪುಷ್ಟೀಕರಿಸುತ್ತದೆ. ಇಲ್ಲಿನ ಲಿಂಗ ಮತ್ತು ದೇವಾಲಯದ ಮುಂದೆ ಭಗ್ನವಾಗಿ ಬಿದ್ದಿರುವ ನಂದಿಶಿಲ್ಪಗಳು ಕಲ್ಯಾಣಿ ಚಾಲುಕ್ಯರ ಶೈಲಿಯಲ್ಲಿದ್ದು, ಅವರ ಕಾಲದಲ್ಲಿ ಪ್ರಮುಖ ಶೈವ ಕೇಂದ್ರವಾಗಿತ್ತು. ಇದೇ ಕಾಲಘಟ್ಟದ ಮತ್ತೊಂದು ಪ್ರಮುಖ ಧಾರ್ಮಿಕ ಎಡೆಯೆಂದರೆ ಧವಳಪ್ಪನಗುಡ್ಡ. ಧವಳಪ್ಪನಗುಡ್ಡದ ಮೇಲ್ಬದಿಯ ಹುಟ್ಟು ಬಂಡೆಯಲ್ಲಿ ಕಲ್ಯಾಣದ ಚಾಲುಕ್ಯರ ಶೈಲಿಯ ೨೧ ಶಿವಲಿಂಗಗಳನ್ನು ಕಡೆಯಲಾಗಿದೆ. ಗುಡ್ಡದ ನೆತ್ತಿಯ ಮೇಲಿನ ಬಂಡೆಯ ಶಿಖರಾಗ್ರದದಲ್ಲಿ ಕೂಡಾ ಒಂದು ಶಿವಲಿಂಗವಿದ್ದು, ಅದರ ಪೀಠದಿಂದ ಒಂದು ನಂದಿಯತಲೆ ಮತ್ತು ಎಡಗಾಲು ಮುಂಚಾಚಿದಂತಿದ್ದು, ಆ ಕಾಲು ಅಗಲಮುಖ, ಕೋರೆಹಲ್ಲು, ಭಾರಿಮೀಸೆ ಸಹಿತ ಭೀಕರ ರಾಕ್ಷಸನೊಬ್ಬನ ತಲೆಯ ಮೇಲೆ ಊರಿದಂತೆ ಒಂದು ಸಂಕೀರ್ಣ ಶಿಲ್ಪ ಕಡೆಯಲಾಗಿದೆ. ಈ ಬಂಡೆಯ ಕೆಳಗಿನ ಗುಹಾಲಯದಲ್ಲೂ ಒಂದೆಡೆ ಲಿಂಗ, ಪೀಠದಿಂದ ಮುಂದಕ್ಕೆ ಚಾಚಿಕೊಂಡಿರುವ ನಂದಿಯ ತಲೆ ಇದೆ. ಈ ಲಿಂಗದ ಎದುರುಗಡೆಯಲ್ಲಿ ನಂದಿಯ ಉಬ್ಬು ಶಿಲ್ಪವಿರುವುದು ಗಮನಾರ್ಹ. ಈ ಲಿಂಗದ

ಹಿಂದಿನ ಕೋಣೆಯಲ್ಲಿ ಒಂದು ರೀತಿಯ ಪಾದದ್ವಯರ ನಿಮ್ನ ಚಿಹ್ನೆ ಇದೆ. ಇವೆಲ್ಲ ಇದು ಕಾಳಾಮುಖರ ಪ್ರಮುಖ ಕೇಂದ್ರವಾಗಿದ್ದುದನ್ನು ದೃಢಪಡಿಸುತ್ತವೆ. ಜೊತೆಗೆ ಗುಡ್ಡದ ಹಳೆಯ ಮಾರ್ಗದ ಪ್ರದೇಶ ದ್ವಾರದಲ್ಲಿಯೇ ಶೈವ ದ್ವಾರಪಾಲಕರ ರೇಖಾಚಿತ್ರಗಳಿವೆ. ಇದೇ ಮಾರ್ಗದಲ್ಲಿರುವ ಶಾಸನವೊಂದು ಇದನ್ನು 'ಶಿವಸಿರಿ ಕೈಲಾಸ' ಎಂದು ಕರೆದು 'ಶಿವಭಕ್ತರಲ್ಲದವರು ಹೋಗಬಾರದು' ಎಂದು ಅರಹುತ್ತದೆ. ಈ ಅಂಶಗಳಿಂದ ಈ ಪರಿಸರದಲ್ಲಿದ್ದ ಕಾಳಾಮುಖರ ಪ್ರಭಾವ ಮನದಟ್ಟಾಗುತ್ತದೆ.

ಕಾಳಾಮುಖ ಗುರುಗಳ ಹೆಸರುಗಳು ಅಂತ್ಯಗೊಳ್ಳುವುದು ಶಕ್ತಿ, ಪಂಡಿತ, ದೇವ, ಭಟ್ಟಾರಕ, ಜೀಯ, ಶಿವ, ವ್ರತಿ, ಮುನಿ, ರಾಣಿ ಎಂಬತ್ಯಾದಿ ಹೆಸರುಗಳಿಂದ. ಇವರು ಶೈವಧರ್ಮದ ಅಂಗವಾದ ಕಾಳಾಮುಖ ಪಂಥಕ್ಕೆ ಸೇರಿದ್ದರೆಂಬುದು ತಿಳಿದುಬರುತ್ತದೆ. ಕ್ರಿ.ಶ.೧೦೭೩ರ ಶಾಸನವೊಂದರಲ್ಲಿ ಜ್ಞಾನಶಿವದೇವ ಮೌನಿ ಮುನಿಯ ಹಿಡಿಂಬೇಶ್ವರ ದೇವಾಲಯದ ದಾನ ಸ್ವೀಕರಿಸಿದ್ದನು.[೧೪] ಕ್ರಿ.ಶ.೧೦೭೪ರಲ್ಲಿ ಚೋಳಗುರುಗಳು ಚೋಳೇಶ್ವರ ದೇವಾಲಯದ ದಾನ ಸ್ವೀಕರಿಸಿದ್ದನು.[೧೫] ಕ್ರಿ.ಶ.೧೧೮೬ರ ಅವಧಿಯ ಮಹೇಶ್ವರ ದೇವಾಲಯದಲ್ಲಿನ ಶಾಸನವು ಸೋವರಾಶಿ ಪಂಡಿತನು ಮಹೇಶ್ವರ ದೇವಾಲಯದ ದಾನ ಸ್ವೀಕರಿಸುವುದನ್ನು ಪ್ರಸ್ತಾಪಿಸುತ್ತದೆ.[೧೬] ಪಂಚಲಿಂಗೇಶ್ವರ ದೇವಾಲಯದಲ್ಲಿನ ಶಾಸನದಲ್ಲಿ ಆ ದೇವರ ಸ್ಥಾನಿಕ ರಾಜಗುರುಗಳಾಗಿದ್ದ ಚೋಳಗುರುಗಳ ಮಕ್ಕಳಾದ ಮಾಳಗುರು ಮತ್ತು ರಾಜಗುರುಗಳ ಹೆಸರುಗಳಿವೆ.[೧೭] ಈ ಹೆಸರುಗಳು ಹಿಡಿಂಬೇಶ್ವರ ದೇವಾಲಯದಲ್ಲಿನ ಶಾಸನವೊಂದರಲ್ಲೂ ಕಾಣಬರುತ್ತವೆ.[೧೮] ಕ್ರಿ.ಶ.೧೨೪೬ರ ಹಿಡಿಂಬೇಶ್ವರ ದೇವಾಲಯದ ಶಾಸನವೊಂದರಲ್ಲಿ ಆ ದೇವಾಲಯದ ಸ್ಥಾನಿಕರಾಗಿದ್ದ ಸೋಮಜೀಯ, ಕಾಯಜಿಯ, ಇಡುಬಜೀಯ, ಸಿರಿಗಿರಿಜೀಯ ಎಂಬ ಉಲ್ಲೇಖಗಳಿವೆ.[೧೯] ಇವರೆಲ್ಲರೂ ಚಿತ್ರದುರ್ಗ ಪರಿಸರದ ಕಾಳಾಮುಖ ತಪೋಧನರಾಗಿದ್ದರೆನ್ನಬಹುದು.

ಚಿತ್ರದುರ್ಗ ಉತ್ತರಕ್ಕಿರುವ ಅಸಗೋಡು ಮತ್ತು ಚದುರಗೋಳದಲ್ಲಿ ಕಾಳಾಮುಖರ ಉಲ್ಲೇಖವಿರುವ ಶಾಸನಗಳಿವೆ. ಕ್ರಿ.ಶ.೧೦೫೪ರ ಚಾಲುಕ್ಯ ಒಂದನೇ ಸೋಮೇಶ್ವರನ ಮಾಂಡಲಿಕರಾದ ನೊಳಂಬ ಪಲ್ಲವರ ಅಧಿಕಾರಿಯೊಬ್ಬನು ಅಸಗೋಡಿನ ಸ್ವಯಂಭು ಕಲಿದೇವರ ದೇವಾಲಯಕ್ಕೆ ಒಂದು ಗ್ರಾಮವನ್ನು ದತ್ತಿ ಕೊಟ್ಟನು.[೨೦] ಈ ಶಾಸನದಲ್ಲಿ ಈ ದೇವಾಲಯವನ್ನು "ಕಾಳಾಮುಖ ಸ್ಥಾನ, ನೈಷ್ಠಿಕ ವೇದಿಕರ್ತರ ಮಠ" ಎಂದು ಬಣ್ಣಿಸಲಾಗಿದೆ. ನೈಷ್ಠಿಕ ಪದವು ಮಠದ ಯತಿಗಳ ಕಾಮಸಂಯಮದ ನಡತೆಗೆ ಸಂಬಂಧಿಸಿದುದಾರೂ ಎರನೆಯ ಪದದ ಅರ್ಥ ಸ್ಪಷ್ಟವಾಗುತ್ತಿಲ್ಲ. ಕರ್ತಾರನು ಈ ದೇವಾಲಯವನ್ನು ಕಟ್ಟಿಸಿದನೆಂದು ಹೇಳಲಾಗುತ್ತಿದೆ. ಇವನು ದಾನವನ್ನು ಪಡೆದ ತ್ರೈಲೋಕ್ಯ ಕರ್ತಾರ ಭಟ್ಟಾರಕನ ಹಿರಿಯ ತಲೆಮಾರಿನವನಾಗಿರಬೇಕು. ಚಾಲುಕ್ಯರ ಆರನೇಯ ವಿಕ್ರಮಾದಿತ್ಯನ ಮಾಂಡಲಿಕನ ಅಧಿಕಾರಿಯೊಬ್ಬನು ಕ್ರಿ.ಶ.೧೧೦೮ರಲ್ಲಿ ಕರ್ತಾರ ಪಂಡಿತದೇವನ ಶಿಷ್ಯನಾದ ಭುವನಕರ್ತಾರ ಪಂಡಿತದೇವನ ಪಾದಗಳನ್ನು ತೊಳೆದು ದೇವಾಲಯಕ್ಕೆ ಇನ್ನೊಂದು ದತ್ತಿಯನ್ನು ನೀಡಿದನು.[೨೧] ಮೂರು ವರ್ಷದ ನಂತರ ಸ್ವಯಂಭು ಕಲಿದೇವ ಸ್ವಾಮಿಗೆ ಇನ್ನೊಂದು ದತ್ತಿಯನ್ನು ನೀಡಿ ಅದನ್ನು ಧರ್ಮಕರ್ತಾರ ಪಂಡಿತ ದೇವನ ಶಿಷ್ಯನಾದ ವಾದಿಪ್ರಳಯ ಕಾಲಭೈರವ ದೇವನಿಗೆ ಒಪ್ಪಿಸಲಾಯಿತು.[೨೨]

ಚದುರುಗೋಳದಲ್ಲಿ ದೊರೆತ ತೃಟಿತ ಶಾಸನವೊಂದು ಕ್ರಿ.ಶ.೧೧೬೬ರಲ್ಲಿ 'ದೇವರಾದ...... ದೇಶ್ವರ'ನಿಗೆಂದು ನೀಡಲಾದ ದತ್ತಿಯೊಂದನ್ನು ಉಲ್ಲೇಖಿಸುತ್ತದೆ. ದಾನ ಪಡೆದವನು ಕಾಳಾಮುಖವ್ರತಿನ್ನನಾದ ತೇಜೋನಿಧಿಪಂಡಿತದೇವನ ಮಗ ಸರ್ವೇಶ್ವರ ಪಂಡಿತದೇವನು ಎಂದು ಅದು ತಿಳಿಸುತ್ತದೆ.[೨೩]

ಈ ಮೇಲ್ಕಾಣಿಸಿದ ಅಂಶಗಳ ಅವಲೋಕನದಿಂದ ಕಾಳಾಮುಖರು ಚಿತ್ರದುರ್ಗ ಪರಿಸರದ ಧಾರ್ಮಿಕ ಇತಿಹಾಸದಲ್ಲಿ ಪ್ರಬಲರಾಗಿದ್ದುದು ಗೋಚರವಾಗುತ್ತದೆ. ಇಂತಹ ಪ್ರಬಲವಾದ ಕಾಳಾಮುಖರ ಪ್ರಭಾವ ೧೨ನೇ ಶತಮಾನದ ವೇಳೆಗೆ ಇಳಿಮುಖವಾಯಿತು. ಬಸವಾದಿ ಶರಣರ ವೀರಶೈವ ಚಳವಳಿಗಳ ಉದಯದೊಡನೆ ಕಾಳಾಮುಖ ಶೈವರ ಅವನತಿಯೂ ಆರಂಭವಾಗಿರಬೇಕು.

ಕಾಳಾಮುಖರು ಲಿಂಗಪ್ರತಿಷ್ಠೆಯನ್ನು ವೀರವ್ರತವೆಂಬಂತೆ ಅಂಗೀಕರಿಸಿದ್ದರೆ, ಇಷ್ಟಲಿಂಗ ಧಾರಕರಾದ ವೀರಶೈವರು ಕಾಳಾಮುಖರ ತತ್ವಗಳನ್ನು ಅಲಕ್ಷಿಸಿ, ಸ್ಥಾವರಲಿಂಗ ಪ್ರತಿಷ್ಠೆ ವಿರೋಧಿಸಿ, ದೇವಸ್ಥಾನಗಳ ನಿರ್ಮಾಣವನ್ನೂ ಪ್ರತಿಭಟಿಸಹೊರಟರು. ತಾತ್ವಿಕವಾಗಿ ಈ ಎರಡು ಪಂಥಗಳಲ್ಲಿ ಭಿನ್ನಾಭಿಪ್ರಾಯಗಳಿದ್ದವು. ಬಸವ, ಅಲ್ಲಮರಿಂದ ಉತ್ಕರ್ಷವನ್ನು ಪಡೆದ ವೀರಶೈವ ಧರ್ಮದ ಮುಂದೆ ಕಾಳಾಮುಖ ಪಂಥವು ಹೋರಾಡಿ ಎದುರಿಸಲು ಅಸಮರ್ಥವಾಗಿ ಕೊನೆಗೆ ಅದರಲ್ಲೇ ವಿಲೀನಗೊಂಡಂತೆ ತೋರುತ್ತದೆ.[೨೪]

ಚನ್ನಬಸವಣ್ಣ ತನ್ನ ಒಂದು ವಚನದಲ್ಲಿ,

"ಕಾಳಾಮುಖಿ ಕಂಗೆಟ್ಟ, ಶೈವ ಸೈವೆರಗಾದ
ಪಶುಪತಿ ಪಥವರಿಯ ಮಹಾವ್ರತಿ ಮದದಲಳಿದ
ಕಪಾಲಿ ಮರುಳಾಗಿ ತಿರುಗಿದ
ಈ ಐದುವನಲ್ಲೆಂದು ಕಳೆದು, ಕೂಡಲ ಚನ್ನಸಂಗನ ಶರಣನು
ಆರ ಮೀರಿ ಬೇರೆ ನಿಂದನು"[೨೫]

ಎಂದು ಹೇಳುವನು. ಸರಳ ಮತ್ತು ಜನಪರವಾದ ವೀರಶೈವ ಭಕ್ತಿಮಾರ್ಗದ ಎದುರು ಕಾಳಾಮುಖರ ತತ್ವಗಳು ಹೆಚ್ಚು ಶಾಸ್ತ್ರಬದ್ಧವಾಗಿ ಕಂಡಿದ್ದರಿಂದ ಜನರ ಬೆಂಬಲ ಕಾಲ ಕ್ರಮೇಣ ಇಳಿಮುಖವಾಯಿತು. ಕಾಳಾಮುಖ ಮಠಗಳು ಅಂತಿಮವಾಗಿ ವೀರಶೈವ ಮಠಗಳಾಗಿ ಪರಿವರ್ತನೆಗೊಂಡವು. ಇದಕ್ಕೆ ಬಳ್ಳಿಗಾವೆ ಮತ್ತು ಪೂವಲ್ಲಿಯ ಮಠಗಳು ಉತ್ತಮ ಉದಾಹರಣೆಗಳಾಗಿ ಉಲ್ಲೇಖನೀಯ. ಇಂಥದೇ ಹಿನ್ನೆಲೆಯಲ್ಲಿ ಬೆಳೆದಿರಬಹುದಾದ ಅಂಕಲಿಮಠದ ಪರಿಸರದಲ್ಲಿ ಸಹ ಕ್ರಿ.ಶ.೧೪ನೇ ಶತಮಾನದ ವೇಳೆಗಾಗಲೇ ವೀರೇಶ್ವರದೇವರ ಮಠವಿತ್ತೆಂಬ ಸಂಗತಿ ಈಚೆಗೆ ಅದೇ ಪರಿಸರದಲ್ಲಿ ದೊರೆತ ತೇದಿರಹಿತ ಶಾಸನವೊಂದರಿಂದ ತಿಳಿದುಬಂದಿದೆ.[೨೬] ಚಿತ್ರದುರ್ಗ ನಾಯಕ ಅರಸರ ಅವಧಿಯಲ್ಲಿ ಚಿತ್ರದುರ್ಗದಲ್ಲಿ ಮುರುಘಾ ಮಠದ ಸ್ಥಾಪನೆಯಾಯಿತು. ಪ್ರಸ್ತುತ ಅಂಕಲಿಮಠ ಮುರುಘಾ ಮಠದ ಅಧೀನಕ್ಕೆ ಒಳಪಟ್ಟಿದೆ. "ಅಂಕಲಿಮಠದ ಊಟ, ಮುರಗೀಮಠದ ನೋಟ" ಎಂಬ ಜನಪ್ರಿಯ ಹೇಳಿಕೆ ಅಂಕಲಿಮಠವು ಅನ್ನ ದಾಸೋಹ ನಡೆಸುತ್ತಿದ್ದ ಕೇಂದ್ರವಾಗಿದ್ದಿತೆಂಬುದನ್ನು ಸ್ಪಷ್ಟಪಡಿಸುತ್ತದೆ. ಚಿನ್ಮೂಲಾದ್ರಿಯ ಹುಲಿಗೊಂದಿ ಮಠದ ಅಡವಿಯೋಗೀಂದ್ರ ಮಹಾಸ್ವಾಮಿಗಳು ಅಂಕಲಿಮಠದಲ್ಲಿ ನೆಲೆಸಿದ್ದರೆಂಬ ಅಭಿಪ್ರಾಯಗಳಿವೆ. ಅದೇನೇ ಇದ್ದರೂ ಮೂಲತಃ ಕಾಳಾಮುಖ ಮುನಿಗಳು ನೆಲೆಸಿದ್ದಿರಬಹುದಾದ ಇದು ತರುವಾಯ ವೀರಶೈವ ಮಠವಾಗಿ ಕುರುಹುಗಳು ದೊರೆಯುತ್ತವೆ.

೫.೨ ಕಾಪಾಲಿಕ ನಾಥಪಂಥ

ಭಾರತದ ಪ್ರಾಚೀನ ಶೈವಪಂಥಗಳಲ್ಲಿ ಕಾಪಾಲಿಕವೂ ಒಂದು. ಇವರು ಶಿವನ ಉಗ್ರರೂಪವಾದ ಭೈರವನನ್ನು ಆರಾಧಿಸುತ್ತಾ ಅವನ ಲಾಂಛನಗಳಾದ ತ್ರಿಶೂಲ, ಕಪಾಲಗಳನ್ನು ಹಿಡಿದಿರುತ್ತಿದ್ದರು. ತಲೆಯೋಡಿನಲ್ಲಿ ಭೋಜನ, ಜಲಪಾನ ಮಾಡುತ್ತಿದ್ದರು. ಮಾಂಸಭೋಜನ, ಮದ್ಯಪಾನ, ನರರುಂಡಧಾರಣ, ಭಸ್ಮಲೇಪನ ಮಾಡುತಿದ್ದರು. ಪ್ರಾಣಿಬಲಿ, ನರಬಲಿಗಳೊಂದಿಗೆ ಅಸಹ್ಯವೆನಿಸುವ ಅತಿರೇಕದ ಆಚಾರಗಳನ್ನು ಹೊಂದಿದ್ದರು. ಸ್ಮಶಾನದಂತಹ ಕಡೆಗಳಲ್ಲಿದ್ದು, ಯೋಗಸಾಧನೆ, ಗೌಪ್ಯವಾದ ತಾಂತ್ರಿಕ ಆಚರಣೆ, ಭೈರವಿಸಾಧನೆ ಮಾಡುತ್ತಿದ್ದರು. ಇವರ ಆರಾಧ್ಯದೈವ ಭೈರವನಾಗಿದ್ದು, ಅವನನ್ನು ಯೋಗಿನಾಥ, ಯೋಗೇಶ್ವರ, ಸಿದ್ದೇಶ್ವರ ಎಂದೂ, ಅವನ ಉಪಾಸಕರನ್ನು ಜೋಗಿಗಳು, ಕಾಪಾಲಿಗಳು, ಕಪಾಲಿಗಳು ಎಂದೂ ಸ್ತ್ರೀಯರನ್ನು ಯೋಗಿನಿ, ಜೋಗಿಣಿ ಎಂದೂ ಕರೆಯುತ್ತಿದ್ದರು.

ನಾಥಪಂಥವು ಬೌದ್ಧಧರ್ಮದ ಮಹಾಯಾನ ಶಾಖೆಯ ವಜ್ರಯಾನ ಪಂಥದಿಂದ ಉದಯವಾದದ್ದು. ಮೂಲತಃ ವಾಮಾಚಾರದತ್ತ ವಾಲಿದ್ದ ಈ ಪಂಥವು ಯೋಗಪ್ರಧಾನ ಪಂಥವಾದರೂ, ಕಾಪಾಲಿಕರ ಅನೇಕ ಲಕ್ಷಣಗಳನ್ನು ಇದು ತನ್ನಲ್ಲಿ ಉಳಿಸಿಕೊಂಡಿದೆ. ಈ ಮತವನ್ನು

ಪ್ರವರ್ತಿಸಿದ ಸಿದ್ಧನಾಥರನ್ನು ಚೌರಾಸಿ ಸಿದ್ಧರೆಂದೂ, ನವನಾಥರೆಂದೂ ಕರೆಯುವುದು ವಾಡಿಕೆ. ಇವರಲ್ಲಿ ಮತ್ಸ್ಯೇಂದ್ರನಾಥ, ಗೋರಕ್ಷನಾಥ, ಚೌರಂಗೀನಾಥ, ಜಾಲಂದರನಾಥ, ಚರ್ಪಟೀನಾಥರು ಪ್ರಮುಖರು. ನಾಥರಲ್ಲಿ ಭೈರವನನ್ನು ಆರಾಧಿಸುವುದು, ತ್ರಿಶೂಲ ಪೂಜೆ, ಭೈರವನಿಗೆ ನಮಸ್ಕರಿಸುವಾಗ ಊದುವ 'ಸಿಂಗನಾದ', ಕೊಂಬನ್ನು ಕೊರಳಲ್ಲಿ ಧರಿಸುವುದು, ಕಿವಿಗೆ ಚುಚ್ಚಿಸಿಕೊಂಡು 'ಕಾಮಾಕ್ಷಿ ಧರಿಸುವುದು', ಭಸ್ಮಲೇಪನ ಇವರ ಪ್ರಮುಖ ಕಾರ್ಯಗಳು. ಕರ್ನಾಟಕವು ಈ ಪಂಥದ ಮುಖ್ಯ ನೆಲೆವೀಡಾಗಿದ್ದು, ಇವರ ಅನೇಕ ಮಠಗಳು ಇಂದಿಗೂ ಕರ್ನಾಟಕದಲ್ಲಿವೆ. ಅವುಗಳಲ್ಲಿ ಚಿತ್ರದುರ್ಗದ ನುಂಕೆಮಲೆ, ದಕ್ಷಿಣಕನ್ನಡ ಜಿಲ್ಲೆಯ ಕದ್ರಿ ಮತ್ತು ವಿಟ್ಲ, ಮಂಡ್ಯದ ಆದಿಚುಂಚನಗಿರಿ ಪ್ರಮುಖವಾದವು. ಈ ಪಂಥದ ಸಿದ್ಧರು ಕಠೋರವಾದ ಆಚರಣೆ ಮಂತ್ರಸಿದ್ಧಿ ಧಾರಿಗಳಾಗಿರುವ ಸಿದ್ಧರಾಗಿದ್ದು ರಸವಿದ್ಯೆಯಲ್ಲೂ, 'ಕಿಮಿಯಾ ಕಳೆ' ಅಥವಾ 'ಚಿನ್ನ ಮಾಡುವ ಕಲೆ'ಯಲ್ಲಿಯೂ ನಿಷ್ಣಾತರಾಗಿದ್ದರು. ಕರ್ನಾಟಕದಲ್ಲಿ ಕಾಪಾಲಿಕರಲ್ಲಿ ನಾಥವು, ನಾಥರಲ್ಲಿ ಕಾಪಾಲಿಕವು ವಿಲೀನವಾಗಿರುವದರಿಂದ ಇವುಗಳ ಪ್ರತ್ಯೇಕತೆ ತುಂಬಾ ಕಷ್ಟವೆಂಬ ವಿದ್ವಾಂಸರ ಅಭಿಪ್ರಾಯ ಸಾಧುವಾದುದು. ಚಿತ್ರದುರ್ಗ ಪರಿಸರಕ್ಕೂ ಈ ಮಾತು ಚೆನ್ನಾಗಿ ಅನ್ವಯವಾಗುತ್ತದೆ. ಕ್ರಿ.ಶ.೭ನೇ ಶತಮಾನದಿಂದ ಕ್ರಿ.ಶ.೧೬ನೇ ಶತಮಾನದವರೆಗೆ ಚಿತ್ರದುರ್ಗ ಪರಿಸರದಲ್ಲಿ ಈ ಪಂಥ ದಟ್ಟವಾಗಿ ಹರಡಿತ್ತು.

ಚಿತ್ರದುರ್ಗ ಬೆಟ್ಟಸಾಲಿಗೆ ಸೇರಿದ ಪಂಡರಹಳ್ಳಿ ಬೆಟ್ಟದಲ್ಲಿ ಭೀಮೇಶ್ವರ ಲಿಂಗವಿರುವ ಗುಹಾಲಯದ ಬದಿಯ ಬಂಡೆಯೊಂದರಲ್ಲಿ ಕೊರೆಯಲಾದ ಅತ್ಯಂತ ಪ್ರಾಚೀನ ಕನ್ನಡ ಶಾಸನವೊಂದರಲ್ಲಿ ಚಂಡಿಯಮ್ಮ ಎಂಬ ಅರಸನು 'ಕಾವಾಳಿಗಭಟಾರ' ಎಂಬುವರಿಗೆ ಭೂಮಿಯೊಂದನ್ನು ದತ್ತಿ ಕೊಟ್ಟ ಸಂಗತಿ ಹೇಳಿದೆ.[೨೭] ಇದನ್ನು ಸಂಸ್ಕೃತಕ್ಕೆ ತಿರುಗಿಸಿದರೆ ಕಾಪಾಲಿಕಭಟಾರ ಎಂದಾಗುತ್ತದೆ. ಬಹುಶ ಇದು ಒಬ್ಬ ಕಾಪಾಲಿಕ ಗುರುವಾಗಿರಬಹುದು.[೨೮] "ಕಾಪಾಲಿಕ ಮತಕ್ಕೆ ಸಂಬಂಧಿಸಿದ ಅಂತ್ಯ ಪ್ರಾಚೀನ ಉಲ್ಲೇಖವೆಂದರೆ ಬಹುಶ ಇದೇ ಎಂಬುದು ಎಂ. ಚಿದಾನಂದಮೂರ್ತಿಯವರ ಅಭಿಮತ. ಒಂದೆಡೆ ಬಿ.ಎಲ್. ರೈಸ್ ಇದರ ಕಾಲವನ್ನು ಕ್ರಿ.ಶ. ಸುಮಾರು ೫೦೦ ಇರಬಹುದು ಎಂದು ಅನುಮಾನಿಸಿದ್ದರು."[೨೯] ಆದರೆ ಬಿ.ರಾಜಶೇಖರಪ್ಪನವರು ಇದನ್ನು ಪುನರ್ ಪರಿಶೀಲಿಸಿ, ಲಿಪಿಯ ಸ್ವರೂಪದ ಮೇಲೆ ಇದು ಬಹುಶಃ ಸುಮಾರು ಕ್ರಿ.ಶ. ೭೦೦ ರ ಅವಧಿಯದ್ದೆಂದು ಅಭಿಪ್ರಾಯಪಟ್ಟಿರುವರು.[೩೦] ಪ್ರಾಚೀನ ಅವಧಿಯಲ್ಲೇ ಈ ಪ್ರದೇಶದಲ್ಲಿ ಕಾಪಾಲಿಕ ಗುರುಗಳು ರಾಜಮನ್ನಣೆ ಪಡೆದಿದ್ದರೆಂಬ ಸಂಗತಿ ಗಮನಾರ್ಹ.

ಕಾಪಾಲಿಕನಾಥರು ಶಿವನ ಉಗ್ರರೂಪವಾದ ಭೈರವನ ಆರಾಧಕರಾಗಿದ್ದರು. ಭೈರವಾರಾಧನೆ, ಇದ್ದ ಸ್ಥಳಗಳ ಬಹುಭಾಗ ಈ ಪಂಥದಿಂದ ಆವೃತ್ತವಾಗಿತ್ತು. ಚಿತ್ರದುರ್ಗ ಪರಿಸರದಲ್ಲಿ ಸಹ ಅನೇಕ ಭೈರವನ ಆರಾಧನಾ ಕೇಂದ್ರಗಳಿದ್ದವು. ಕ್ರಿ.ಶ. ಹನ್ನೆರಡನೇ ಶತಮಾನದ ಪೂರ್ವಾರ್ಧ ಭಾಗದಲ್ಲಿ ನಿರ್ಮಿಸಿದ ಚಿತ್ರದುರ್ಗದ ಗಾರೆಹಟ್ಟಿಯ ಚೋಳೇಶ್ವರ ದೇಗುಲದ ನಂದಿಮಂಟಪದಲ್ಲಿ ಹೊಯ್ಸಳರ ಶಿಲ್ಪಶೈಲಿಯ ಸುಂದರ ಭೈರವ ಶಿಲ್ಪವಿದೆ. ಚಿತ್ರದುರ್ಗದ ಹಿಡಿಂಬೇಶ್ವರ, ಸಂಪಿಗೆ ಸಿದ್ಧೇಶ್ವರ, ಏಕನಾಥೇಶ್ವರಿ ದೇವಾಲಯಗಳಲ್ಲಿ ಹೊಯ್ಸಳ ಅಥವಾ ವಿಜಯನಗರದ ಆದಿಭಾಗದ ಭೈರವ ಶಿಲ್ಪಗಳಿವೆ. ಜೋಗಿಮಟ್ಟಿ ಬೆಟ್ಟ ಪರಿಸರದ ಹಿಮವತ್ ಕೇದಾರದ ಪುಟ್ಟ ಗವಿಯಲ್ಲಿ ಹೊಯ್ಸಳ ಅವಧಿಯ ಭೈರವನ ಶಿಲ್ಪವಿದೆ. ಇಲ್ಲಿನ ಲಿಂಗವು ಕ್ರಿ.ಶ.೧೬೩೩ರ ಅವಧಿಯದ್ದೆಂದು ಇತ್ತೀಚೆಗೆ ದೊರೆತ ಶಾಸನದಿಂದ ತಿಳಿದುಬರುತ್ತದೆ.[೩೧] ಸದಾಕಾಲ ಏಕಾಂತದ ವಾತಾವರಣದ ಈ ಗವಿಯು ಹಿಂದೊಮ್ಮೆ ಗುಹ್ಯಸಾಧನೆ ಮತ್ತು ಹಠಯೋಗದ ಸ್ಥಳವಾಗಿದ್ದಿರಬೇಕು.

ಚಿತ್ರದುರ್ಗದ ಹುಲಿಗೊಂದಿ ಪರಿಸರದಲ್ಲಿನ ಭೈರವ ದೇವಾಲಯ ಮತ್ತು ಧವಳಪ್ಪನಗುಡ್ಡ ಹಿಂದೊಮ್ಮೆ ಪ್ರಮುಖವಾದ ನಾಥ ಕೇಂದ್ರವಾಗಿದ್ದವು. ಭೈರವನ ಆರಾಧನಾ ಕೇಂದ್ರವಾಗಿರುವ ದೇಗುಲದ ಮುಂಬದಿಯಲ್ಲಿ ನೆಲದಲ್ಲಿ ಹೂತಿರುವ ಕಲ್ಲಿನ ಭಗ್ನ ತ್ರಿಶೂಲ ಮತ್ತು ಒಂದು ಬಲಿಕಲ್ಲು ಇದೆ. ಇವರಲ್ಲಿ ಭೈರವನ ಪಾದಗಳು, ಅವನ ಲಾಂಛನವಾದ ಚೇಳೂ, ಭೈರವನಿಗೆ ನರಬಲಿ ಒಪ್ಪಿಸಿದ

ಜಟಾಧಾರಿ ಪುರುಷರ ರುಂಡಗಳಸಹಿತ ಒಂದು ಕೋಣ ಮತ್ತು ಒಂದು ಟಗರಿನರುಂಡ ಚಿತ್ರಿಸಲಾಗಿದೆ. ಬನಶಂಕರಿ ದೇವಾಲಯದ ಬಳಿಯಲ್ಲೂ ಈ ಬಗೆಯ ಐವರು ಪುರುಷರ ಬಲಿ ಸೂಚಿಸುವ ಬಲಿಕಲ್ಲನ್ನು ಕಾಣಬಹುದು. ಹುಲಿಗೊಂದಿ ಸಿದ್ದೇಶ್ವರ ದೇವಾಲಯದ ಬಳಿಯಲ್ಲಿ ಕಾಪಾಲಿಕನಾಥರ ಮಠವಿದ್ದುದು ಬೆಳಕಿಗೆ ಬಂದಿದೆ. ಇದು ಲುಂಕೆಮಠದ ಶಾಖಾಮಠಗಳಲ್ಲೊಂದಾಗಿದ್ದು, ಅವುಗಳಲ್ಲಿ ಅತ್ಯಂತ ಪ್ರಭಾವಶಾಲಿಯಾಗಿತ್ತು.[೩೨] ಆದರೆ ಪ್ರಸ್ತುತ ಅದು ನಾಶವಾಗಿದೆ. ಹುಲಿಗೊಂದಿ ಬೆಟ್ಟಪರಿಸರವು ಕಾಪಾಲಿಕನಾಥರ ಗುಹ್ಯಸಾಧನೆಗೆ ಸೂಕ್ತ ಸ್ಥಳವಾಗಿತ್ತು. ಇಲ್ಲಿನ ಗುಹೆಗಳಲ್ಲಿ ಬೂದಿಗುಡ್ಡೆಗಳೂ, ನಾಥರು ಭಂಗಿಸೇದುವ ಚಿಲುಮೆಗಳ ಅವಶೇಷಗಳೂ ಪತ್ತೆಯಾಗಿವೆ.[೩೩] ಇದೇ ಪರಿಸರದಲ್ಲಿರುವ ಧವಳಪ್ಪನಗುಡ್ಡದ ಬಂಡೆಯ ಕೆಳಗಿನ ಗುಹಾಲಯವೊಂದರಲ್ಲಿ ಗಣಪತಿ, ಹುಲಿಮುಖದ ಮೇಲೆ ನಿಲ್ಲಿಸಲಾದ ಮಾನವರುಂಡದ ರೇಖಾಚಿತ್ರಗಳ ಸಹಿತ ಭೈರವನ ಶಿಲ್ಪವೂ ದೊರೆತಿದೆ. ಇವು ನರಬಲಿ ಆಚರಣೆಯ ಸಂಕೇತಗಳಾಗಿವೆ. ಆದರೆ ಇವುಗಳ ಕಾಲ ಸ್ಪಷ್ಟವಾಗಿಲ್ಲ. ಇದೇ ಗುಡ್ಡದ ತಪ್ಪಲಲ್ಲಿರುವ "ಶಿವಸಿರಿ ಕವುಳಾಸ ಶಿವಭಕ್ತರಲ್ಲದವರು ಹುಗಬಾರದು" ಎಂಬ ಎಚ್ಚರಿಕೆ ನೀಡುವ ಶಾಸನ ಹಾಕಿಸಿರುವರು.[೩೪] ಇದು ವಾಮಾಚಾರ, ಹಠಯೋಗ ಮತ್ತು ಗುಹ್ಯ ಸಾಧನೆಗಳ ಶೈವ ತಾಂತ್ರಿಕ ಪಂಥಗಳ ಆರಾಧನಾ ಕೇಂದ್ರವಾಗಿತ್ತೆಂಬ ವಿದ್ವಾಂಸರ ಅಭಿಮತ ಅರ್ಥಪೂರ್ಣವೆನಿಸುತ್ತದೆ. ಚಿತ್ರದುರ್ಗದ ಪಾಳೆಯಗಾರರು ಮತ್ತು ಅವರ ಪೂರ್ವದ ಕೆಲ ದಾಖಲೆಗಳಲ್ಲಿ ರಸಸಿದ್ಧರ ಉಲ್ಲೇಖಗಳು ಗೋಚರಿಸುತ್ತವೆ. ಕ್ರಿ.ಶ.೧೨ನೇ ಶತಮಾನದ ಪ್ರಸಿದ್ಧ ವೀರಶೈವ ಸಿದ್ಧರಾದ ರೇವಣಸಿದ್ಧರು ಸ್ವಲ್ಪಕಾಲ ಚಿನ್ಮೂಲಗಿರಿಯಲ್ಲಿದ್ದಾಗ ಅವರನ್ನು ಹುಡುಕಿಕೊಂಡು ಇಲ್ಲಿಗೆ ಮರುಳುಸಿದ್ಧರು ಬಂದು ಉಪದೇಶವನ್ನು ಪಡೆದರೆಂದು ಸಿದ್ಧಲಿಂಗ ಚಾರಿತ್ರ್ಯ ಎಂಬ ಕೃತಿಯಲ್ಲಿ ಹೇಳಿದೆ.[೩೫] ಶ್ರೀ ರೇವಣಸಿದ್ಧರು ಬಹುಶಃ ಕೆಲವುಕಾಲ ಈ ಆಶ್ರಮದಲ್ಲಿ ರಸಸಿದ್ಧರೊಂದಿಗೆ ನೆಲೆಸಿದ್ದಿರಬಹುದೆಂದು ಹುಲ್ಲೂರು ಶ್ರೀನಿವಾಸ ಜೋಯಿಸರು ಉಲ್ಲೇಖಿಸಿರುವರು.[೩೬] ರೇವಣ್ಣಸಿದ್ಧರು ರಸತಂತ್ರದಲ್ಲಿ ಸಿದ್ಧಿಯನ್ನು ಪಡೆದ ರಸವಾದಿಯಾಗಿದ್ದು, ಚಿಕಿತ್ಸಾಗ್ರಂಥಗಳನ್ನು ರಚಿಸಿದವರ ಹೆಸರಿನ ಗುಂಪಿನಲ್ಲಿ ಸಿದ್ಧನಾಥ ಎಂಬುದಾಗಿ ಅವರ ಹೆಸರು ಇದೆಯೆಂದು ದಿವಂಗತ ಹುಲ್ಲೂರು ಶ್ರೀನಿವಾಸ ಜೋಯಿಸರು ಬರೆದಿರುವರು.[೩೭] ಚಿತ್ರದುರ್ಗ ಬೆಟ್ಟದ ಕಿನ್ನರಿ ಕಲ್ಲಿನಲ್ಲಿ ಏಳುಜನ ರಸಸಿದ್ಧರು ವಾಸವಾಗಿದ್ದರೆಂದು ದಾಖಲೆಗಳು ತಿಳಿಸುತ್ತವಲ್ಲದೆ ಈ ಬಗ್ಗೆ ಜನಪ್ರತೀತಿಯೂ ಇದೆ. ಈ ಬಗೆಯ ಸಾಹಿತ್ಯಗ್ರಂಥಗಳಲ್ಲಿ ಪ್ರಸ್ತಾಪಿಸಲಾಗಿರುವ ಐತಿಹಾಸಿಕ ಅಂಶಗಳ ಆಧಾರ ಹಿಡಿದು ರೇವಣಸಿದ್ಧರು ಚಿತ್ರದುರ್ಗದ ಸಂಪಿಗೆ ಸಿದ್ದೇಶ್ವರ ದೇವಾಲಯದಲ್ಲಿ ಇದ್ದರೆಂದು ಅಥವಾ ಇಲ್ಲಿದ್ದ ಏಳುಜನ ರಸಸಿದ್ಧರಲ್ಲಿ ಅವರು ಒಬ್ಬರಾಗಿದ್ದರೆಂಬ ಅಭಿಪ್ರಾಯವನ್ನು ಬಹುಮಂದಿ ವಿದ್ವಾಂಸರು ಅನುಮೋದಿಸಿರುವರು. ಈ ಮೇಲ್ಕಾಣಿಸಿದ ಅಂಶಗಳನ್ನು ಅವಲೋಕಿಸಿದರೆ ಚಿನ್ನದ ಕೆಲಸದಲ್ಲಿ ನಿಷ್ಣಾತರಾದ ರಸಸಿದ್ಧರು ಈ ಪರಿಸರದಲ್ಲಿ ನೆಲೆಸಿದ್ದರು ಎನ್ನಬಹುದು.

"ಚಿತ್ರದುರ್ಗ ಪಾಳೆಯಗಾರರ ಮೊದಲಿಗನಾದ ತಿಮ್ಮಣ್ಣನು ಜಡೆಕಲ್ಲು ದುರ್ಗದಿಂದ ಬಂದು ತನ್ನ ಗುಂಪಿನೊಡನೆ ಚಿತ್ರಕಲ್ಲಿನ ಬೆಟ್ಟದಲ್ಲಿ ನೆಲೆಸಿದಾಗ ಬಾಳೇಕಾಯಿ ಸಿದ್ದೇಶ್ವರ ಗವಿಯಲ್ಲಿ ಅವನಿಗೆ ಏಳುಮಂದಿ ರಸಸಿದ್ಧರ ದರ್ಶನವಾಯಿತು. ಅವನು ಅವರಿಗೆ ಭಕ್ತಿಪೂರ್ವಕವಾಗಿ ನಿತ್ಯ ಸೇವೆಗೈದನು. ತರುವಾಯ ಅವನ ಮೇಲೆ ದಯತೋರಿ ದಟ್ಟಿ ದಶೆಕಟ್ಟಿನ ಧೂಳತ, ಸಿದ್ಧಮೂಲಿಕೆ ಕೈಯಂಬು, ಒಂದುಕತ್ತಿ, ವಿಭೂತಿ ಕೊಟ್ಟ ಈ ದೇವರನ್ನು ನಮ್ಮ ಹಾಗೆ ಕಂಡುಕೊಂಡಿರು ಎಂದು ಹೇಳಿದರಂತೆ. ಇವನ ಮರಣದ ತರುವಾಯ ಚಿತ್ರದುರ್ಗ ನಾಯಕ ಪಟ್ಟದ ಅಧಿಕಾರವನ್ನು ಪರಿಗ್ರಹಿಸಿದ ಇವನ ಮಗ ಓಬಣ್ಣನಾಯಕನಿಗೆ ರಸಸಿದ್ಧರು ದರ್ಶನ ನೀಡಿ ಮೆದಕೇರಿನಾಯಕ ಎಂದು ಕರೆದು ಅವನನ್ನು ಆಶೀರ್ವದಿಸಿದರು ಎಂದು"[೩೮] ನಾಯಕ ಅರಸರ ದಾಖಲೆಗಳು ತಿಳಿಸುತ್ತವೆ.

ಜನಪದ ಸಾಹಿತ್ಯದಲ್ಲಿಯೂ ಚಿತ್ರದುರ್ಗದಲ್ಲಿ ಏಳುಮಂದಿ ಸಿದ್ಧರು ಇದ್ದರೆಂದೂ, ಇಡಿಯ ದುರ್ಗಕ್ಕೆ ಈ ಸಿದ್ಧರೇ ಕಾವಲು ಎಂದೂ, ದುರ್ಗ ಪತನವಾದ ತರುವಾಯ ಸಿದ್ಧರ ದಯವಿಲ್ಲದೆ

ಹೀಗಾಯಿತೆಂಬ ಉಲ್ಲೇಖಗಳಿವೆ.[೩೯] ಅಂದರೆ ಸಿದ್ಧರು ಚಿತ್ರದುರ್ಗವನ್ನು ಕಾಯುತಿದ್ದರೆಂಬ ಭಾವನೆ ಜನತೆಯಲ್ಲಿ ದೃಢವಾಗಿತ್ತೆಂದು ಇದರಿಂದ ತಿಳಿಯಬಹುದು. ಈ ಅಂಶಗಳನ್ನೆಲ್ಲಾ ಗಮನಿಸಿದಾಗ ಈ ಸಿದ್ಧಿಪುರುಷರು ಕಾಲಭೈರವನ ಉಪಾಸಕರಾಗಿದ್ದು, ಗುಹ್ಯಸಾಧಕ ಮತ್ತು ಕಪಾಲಧಾರಿಗಳಾದ ಕಾಪಾಲಿಕಪಂಥ ಅಥವಾ ನಾಥಪಂಥದ ಸಿದ್ಧರಿರಬೇಕು ಎನಿಸುತ್ತದೆ.

ಜೋಗಿ ಮಟ್ಟಿಯ ಪಶ್ಚಿಮಕ್ಕೆ ಹಣತೆಕಲ್ಲು ಎಂಬ ಹೆಸರಿನ ಗುಡ್ಡದ ದಕ್ಷಿಣ ಪಾರ್ಶ್ವದಲ್ಲಿ 'ಪಾಂಡವರ ಮಠ' ಎಂದು ಸ್ಥಳೀಯರು ಕರೆಯುವ ಗುಹಾವಾಸದ ನೆಲೆಯಿದೆ. ಇಲ್ಲಿ ಒಂದು ತೊಲೆಯ ಮೇಲೆ ೧೭ನೇ ಶತಮಾನದ 'ಜೋಗಜನ ಮಠ' ಎಂಬ ಹೆಸರಿನ ಕನ್ನಡ ಬರಹ ಈಚೆಗೆ ಬೆಳಕಿಗೆ ಬಂದಿದೆ.[೪೦] ಇದು ಜೋಗಿ ಅಜ್ಜನ ಮಠ ಅಥವಾ ಜೋಗಜ್ಜನ ಮಠವಾಗಿತ್ತೆಂಬುದನ್ನು ಇದು ಸೂಚಿಸುತ್ತದೆ. ಇಲ್ಲಿಗೆ ಸಮೀಪದ ಜೋಗಿಮಟ್ಟಿಯಲ್ಲಿ ಜೋಗಿಗುಡಿ ಎನ್ನುವ ಗುಡಿಯಿದ್ದು,. ಇದರಲ್ಲಿ ಒಂದು ಕಬ್ಬಿಣದ ತ್ರಿಶೂಲವಿದೆ. ಈ ಗುಡಿಗೆ ಈ ಹೆಸರು ಬರಲು ಜೋಗಜ್ಜನ ಮಠ ಕಾರಣವಾಗಿರಬಹುದು. ಈ ಬೆಟ್ಟದ ಬುಡದಲ್ಲಿ ಉಪ್ಪನಾಯಕನಹಳ್ಳಿ ಎಂಬ ಗ್ರಾಮವಿದೆ. ಇಲ್ಲಿ ಬ್ರಹ್ಮಕಪಾಲಿ ಅಥವಾ ಜೋಗಿಜನಾಂಗ ಎಂದು ಕರೆಯುವ ಜನಾಂಗದವರು ವಾಸವಾಗಿರುವರು. ಇವರು ತಮ್ಮ ಮೂಲಗುರುಗಳು ಮಚ್ಚೇಂದ್ರನಾಥ ಮತ್ತು ಗೋರಖನಾಥರೆಂದು ಹೇಳುತ್ತಾರೆ. ಇವರು ಮೂಲತಃ ಭೈರವನ ಆರಾಧಕರು, ತ್ರಿಶೂಲ ಪೂಜಿಸುವರು. ಕಿವಿಯಲ್ಲಿ ಕಾಮಾಕ್ಷಿ ಧರಿಸುವುದು, ಪೂಜೆಮುಗಿದು ನಮಸ್ಕರಿಸುವ ಮುನ್ನ ಜನಿವಾರದಲ್ಲಿ ಧರಿಸಿರುವ ಸಿಂಗನಾದ ಊದುವುದು, ಸಿದ್ಧಬುಕ್ತಿ ಆಚರಣೆ, ವಿವಾಹದ ಮುನ್ನ ತ್ರಿಶೂಲದಿಂದ ಕಿವಿ ಚುಚ್ಚಿಸಿಕೊಂಡು ದೀಕ್ಷಾಮೋಕ್ಷ ಮಾಡಿಸಿಕೊಳ್ಳುವುದು, ಧುನಿ ಆಚರಣೆ ಮುಂತಾದ ಕುತೂಹಲ ಆಚರಣೆಗಳು ಇವರಲ್ಲಿ ಪ್ರಚಲಿತದಲ್ಲಿವೆ. ಇವೆಲ್ಲವೂ ಕಪಾಲಿಕ ಮತ್ತು ನಾಥಪಂಥದ ಆಚರಣೆಗಳಾಗಿರುವುದು ಗಮನಾರ್ಹ. ಇದರೊಡನೆ ಇವರು ನುಂಕೆಮಲೆ ಭೈರವ ಮಠಕ್ಕೆ ನಡೆದುಕೊಳ್ಳುವುದು ಇವರು ನಾಥರೆಂಬುದನ್ನು ಪುಷ್ಟೀಕರಿಸುತ್ತದೆ. ಕ್ರಿ.ಶ.೧೩೩೮ರ ಚಿತ್ರದುರ್ಗದ ಶಾಸನವೊಂದರಲ್ಲಿ ನಾಥಪಂಥದ ಮುನಿಗಳಾದ ಶ್ರೀ ಚೋಳನಾಥ, ಯಿಮಂಬನಾಥ, ...ನಾಥ, ಶ್ರೀ ಸಿದ್ದನಾಥ, ಎಂಬ ಹೆಸರುಗಳು ಇರುವುವು.[೪೧] ಕ್ರಿ.ಶ.೧೨೭೯ರ ಕಲ್ಲೇದೇವರಪುರದ ಶಾಸನವು 'ಶಿವಯೋಗಿ ಚಕ್ರವರ್ತಿ ಎನಿಸಿದ ಪ್ರಸಾದದೇವ ಎಂಬ ಒಬ್ಬ ಯತಿಯು ರಸ, ರಸಾಯನ, ಅಂಜನ, ಮೂಲಿಕೆ, ಇಂದ್ರಜಾಲ ಇತ್ಯಾದಿಗಳಲ್ಲಿ ಸಿದ್ಧಿಪಡೆದಿದ್ದನ್ನು ತಿಳಿಸುತ್ತದೆ. ಅದೇ ಶಾಸನವು ಚೆನ್ನಯ್ಯ, ಕಕ್ಕಯ್ಯ, ಬಸವಾದಿ ಶರಣರೊಡಗೂಡಿ ಆದಿಗದೆಯದುನಾಥ, ಚತುರರಗಿನಾಥ, ಗೋರಕನಾಥ, ವಿಸ್ತಾರದೇವಿನಾಥ, ಕಾಹಳಿನಾವಿನಾಥ, ಸುರ್ಪ್ವಾಣನಾಥ, ಲೋಕನಾಥ, ನರನಾಥ ಎಂಬ ನಾಥಮುನಿಗಳ ಹೆಸರುಗಳನ್ನು ಪ್ರಸ್ತಾಪಿಸುತ್ತದೆ'.[೪೨] ಇದು ಈ ಭಾಗದ ಶೈವ ವೀರಶೈವರ ಜೊತೆಗೆ ನಾಥರ ಪ್ರಭಾವವಿದ್ದುದನ್ನು ಸ್ಪಷ್ಟವಾಗಿ ತೋರಿಸುತ್ತವೆ.

ಇದರೊಡನೆ ಚಿತ್ರದುರ್ಗ ಜಿಲ್ಲೆಯ ಕೆಲ ಗ್ರಾಮಗಳ ಸ್ಥಳನಾಮಗಳು ಈ ನಿಟ್ಟಿನಲ್ಲಿ ಗಮನಾರ್ಹವಾದವು. ಜೋಗೀಮಟ್ಟಿ, ಭೈರನಕಲ್(ಚಿತ್ರದುರ್ಗ), ರಾಮಜೋಗಿಹಳ್ಳಿ, ವಾರಿಜೋಗಿಹಳ್ಳಿ, ಸಿದ್ದೇಶ್ವರದುರ್ಗ(ಚಳ್ಳಕೆರೆ), ಭೈರಾಪುರ, ಮಠದಜೋಗಿಹಳ್ಳಿ, ಸಿದ್ದಾಪುರ, ಯರಪೋತಜೋಗಿಹಳ್ಳಿ(ಮೊಳಕಾಲ್ಮೂರು), ಸಿದ್ದಯ್ಯನಪೇಟೆ, ಜೋಗೀಹಳ್ಳಿ(ಜಗಳೂರು) ಗ್ರಾಮಗಳು ಜೋಗಿ ಅಥವಾ ಭೈರವನ ಹೆಸರಿನಲ್ಲಿವೆ. ಅಂತೆಯೇ ಮಚ್ಚಸಮುದ್ರ (ಚಳ್ಳಕೆರೆ) ಎಂಬ ಗ್ರಾಮವಿದೆ. ಈ ಗ್ರಾಮ ಮಚ್ಚೇಂದ್ರನಾಥನ ಕುರುಹು ಇರಬಹುದು. ಈ ಹೆಸರುಗಳ ಅವಲೋಕನದಿಂದ ಚಿತ್ರದುರ್ಗ ಪರಿಸರವನ್ನು ಒಳಗೊಂಡಂತೆ ಜಿಲ್ಲೆಯಾದ್ಯಂತ ಕಾಪಾಲಿಕನಾಥರ ದಟ್ಟ ಪ್ರಭಾವ ಇದ್ದುದಂತೂ ಸ್ಪಷ್ಟ.

೫.೩ ವೈಷ್ಣವ ಧರ್ಮ

ಚಿತ್ರದುರ್ಗದಲ್ಲಿ ವೈಷ್ಣವ ಧರ್ಮ ಮಧ್ಯಕಾಲೀನ ಅವಧಿಯ ವೇಳೆಗೆ ತನ್ನ ಪ್ರಾಬಲ್ಯ ಸಾಧಿಸಿದ್ದು ಇಲ್ಲಿನ ಶಾಸನ ಮತ್ತು ಸ್ಮಾರಕಗಳಿಂದ ತಿಳಿದು ಬರುತ್ತದೆ. ವೈಷ್ಣವ ಪರಂಪರೆಯ ಸ್ಮಾರ್ಥ, ಶ್ರೀವೈಷ್ಣವ ಮತ್ತು ಮಾಧ್ವ ಪಂಥಗಳ ಕುರುಹುಗಳು ಚಿತ್ರದುರ್ಗ ಪರಿಸರದಲ್ಲಿ ಗೋಚರವಾಗುತ್ತವೆ.

ಸ್ಮಾರ್ಥ

ಆದಿ ಶಂಕರಚಾರ್ಯರಿಂದ ಕ್ರಿ.ಶ.೮ನೇ ಶತಮಾನದಲ್ಲಿ ಈ ಪಂಥವು ಬೆಳದುಬಂದಿದೆ. ಕರ್ನಾಟಕದಲ್ಲಿರುವ ಶೃಂಗೇರಿ ಪೀಠ ಈ ಪಂಥದ ಪ್ರಧಾನ ಕೇಂದ್ರವಾಗಿದೆ. ಶಿವಮೊಗ್ಗದ ವಾಯುವ್ಯಕ್ಕೆ ೯ಕಿ.ಮೀ. ಮೈಲಿದೂರದಲ್ಲಿ ನೆಲೆಗೊಂಡಿರುವ ಕೂಡಲಿ ಶೃಂಗೇರಿ ಮಠವು ತುಂಗಭದ್ರಾ ನದಿಗಳ ಸಂಗಮ ಸ್ಥಳದಲ್ಲಿ ಸ್ಥಾಪಿತವಾಗಿದೆ. ಇದು ಶೃಂಗೇರಿ ಮಠದ ಶಾಖಾಮಠವಾಗಿತ್ತು. ಚಿತ್ರದುರ್ಗ ಪರಿಸರದಲ್ಲಿ ಪ್ರಾಚೀನ ಕಾಲದಲ್ಲಿ ಸ್ಮಾರ್ಥ ಪಂಥವಿತ್ತೆಂಬ ಯಾವುದೇ ಕುರುಹುಗಳು ಈವರೆಗೆ ದೊರೆತಿಲ್ಲ.

ಚಿತ್ರದುರ್ಗದ ಕರುವಿನಕಟ್ಟೆಯ ಬಳಿ ಕೂಡಲಿಶೃಂಗೇರಿ ಪೀಠದ ಶಾಖಮಠವಿದ್ದು, ಈ ಪರಿಸರದ ಹಳೆಯ ಸ್ಮಾರ್ಥ ಮಠವಾಗಿದೆ. ಆದರೆ ಈ ಮಠದ ಗುರುಪರಂಪರೆ ಸಾಗಿಬಂದ ಬಗ್ಗೆ ಆಧಾರಗಳು ಲಭ್ಯವಿಲ್ಲ. ದುರ್ಗದ ನಾಯಕ ಅರಸರಾದ ಚಿಕ್ಕಣ್ಣನಾಯಕ, ಬಿಚ್ಚುಗತ್ತಿ ಭರಮಣ್ಣನಾಯಕ, ಹಿರೇಮದಕರಿನಾಯಕ, ಕಡೇ ಮದಕರಿನಾಯಕರು ಅನೇಕ ದಾನಗಳನ್ನು ಕೂಡಲಿ ಶೃಂಗೇರಿಮಠಕ್ಕೆ ಸಲ್ಲಿಸಿದ್ದಾರೆ.[೪೩] ಈ ಅವಧಿಯಲ್ಲಿ ಈ ಮಠ ನಿರ್ಮಾಣವಾಗಿರಬಹುದು. ಕೂಡಲಿ ಶೃಂಗೇರಿ ಪೀಠಾಧೀಶರಾದ ತೃತೀಯ ಶಂಕರಭಾರತೀ ಸ್ವಾಮಿಗಳು ಲೋಕಸಂಚಾರ ಮಾಡುತ್ತ ಚಿತ್ರದುರ್ಗಕ್ಕೆ ಆಗಮಿಸಿದ್ದರು. ಕ್ರಿ.ಶ.೧೭೬೬ ಮೇ ೧೮ ರಂದು ಅವರು ಚಿತ್ರದುರ್ಗದಲ್ಲಿ ಬ್ರಹ್ಮೀಭೂತರಾದರು. ಆಗ ದುರ್ಗದ ದೊರೆಯಾಗಿದ್ದ ಮದಕರಿನಾಯಕನು, ತನ್ನ ಅವಧಿಯಲ್ಲಿ ಸ್ವಾಮಿಗಳಿಗೆ ದಾನನೀಡಿದ್ದ ತೋಟದಲ್ಲಿಯೇ ಅವರ ಸಮಾಧಿ ಮಾಡಲಾಯಿತು. ಇದರ ಸುತ್ತಲೂ ಪ್ರಸ್ತುತ ಮಠವಿದೆ.

ಶ್ರೀವೈಷ್ಣವ

ಕ್ರಿ.ಶ.೧೨ನೇ ಶತಮಾನದಲ್ಲಿ ರಾಮನುಜಾಚಾರ್ಯರು ಕರ್ನಾಟಕಕ್ಕೆ ಬಂದು, ಹೊಯ್ಸಳ ಅರಸ ವಿಷ್ಣುವರ್ಧನನ ಆಶ್ರಯ ಪಡೆದು ದಕ್ಷಿಣ ಕರ್ನಾಟಕದಲ್ಲಿ ಶ್ರೀವೈಷ್ಣವ ಧರ್ಮವನ್ನು ಪ್ರಚಾರಮಾಡಿದರು. ಚಿತ್ರದುರ್ಗದಲ್ಲಿಯೂ ಸಹ ಶ್ರೀವೈಷ್ಣವ ಧರ್ಮ ಪ್ರಚಲಿತದಲ್ಲಿತ್ತು. ಕ್ರಿ.ಶ.೧೨೮೬ರಲ್ಲಿ ಚಿತ್ರದುರ್ಗದಲ್ಲಿರುವ ಪೆರುಮಾಳೆದೇವ ದಣ್ಣಾಯಕನ ಶಾಸನವೊಂದರಲ್ಲಿ ಗೋಪಿನಾಥ ಎಂಬ ಉಲ್ಲೇಖವಿದೆ.[೪೪] ಆದರೆ ಇದು ಇಂದಿನ ಗೋಪಾಲಕೃಷ್ಣ ದೇವಾಲಯವಾಗಿತ್ತೆನ್ನಲು ಇತರ ಯಾವುದೇ ಆಧಾರಗಳಿಲ್ಲ. ಕ್ರಿ.ಶ.೧೩೩೮ರ ಶಾಸನವೊಂದು ಗೋಪಾಲಕೃಷ್ಣ ದೇವರಿಗೆ ದಾನಕೊಟ್ಟಿದ್ದನ್ನು ಉಲ್ಲೇಖಿಸುತ್ತದೆ.[೪೫] ಆಗ ಆ ದೇವಾಲಯದಲ್ಲಿ ನಂಬಿಯಾರು ಗಡಬದೆಯ ಎಂಬ ಸ್ಥಾನಿಕನಿದ್ದನು. ಇತ್ತೀಚೆಗೆ ಪತ್ತೆಯಾದ ಕ್ರಿ.ಶ.೧೫ನೇ ಶತಮಾನದ ಪೂರ್ವಾರ್ಧ ಅವಧಿಯ ಎರಡು ಚಿಕ್ಕ ಕನ್ನಡ ಶಾಸನಗಳಿಂದ ತಿರುಮಲಯ್ಯ, ದುಗ್ಗಯ್ಯ, ಅಣ್ಣಯ್ಯ ಎಂಬುವರು ಈ ದೇವರ ಸ್ಥಾನಿಕರಾಗಿದ್ದಂತೆ ಕಾಣುತ್ತದೆ.[೪೬] ಇವರಲ್ಲಿ ತಿರುಮಲಯ್ಯ ವೈಷ್ಣವನಾಗಿದ್ದನು. ಈ ದೇವಾಲಯದ ಪರಿಸರವು ಶ್ರೀವೈಷ್ಣವ, ವೈಷ್ಣವ ಕ್ಷೇತ್ರವಾಗಿದ್ದಿತು. ಚಿತ್ರದುರ್ಗದ ನಾಯಕ ಅರಸರು ಶ್ರೀವೈಷ್ಣವ ಮತಾವಲಂಬಿಗಳಾಗಿದ್ದರು. ಅಹೋಬಲ ನರಸಿಂಹ ಇವರ ಆರಾಧ್ಯ ದೈವವಾಗಿತ್ತು. ಇವರು ಶ್ರೀವೈಷ್ಣವ ಧರ್ಮವನ್ನು ಪೋಷಿಸಿ ಬೆಳೆಸಿದ್ದರು. ಒಂದನೇ ಮದಕರಿನಾಯಕ ಶ್ರೀವೈಷ್ಣವ ಕೇಂದ್ರವಾಗಿದ್ದ ತಿರುಪತಿಗೆ ಕೆಲವು ಕಾಣಿಕೆಗಳನ್ನು ಕಳುಹಿಸಿಕೊಟ್ಟ, ಅದಕ್ಕೆ ಪ್ರತಿಯಾಗಿ ಅಲ್ಲಿಂದ ಆಶೀರ್ವಾದರೂಪದ ಕೆಲವು ವಸ್ತುಗಳು ಬಂದಂತೆ ತಿಳಿದು ಬರುತ್ತದೆ.[೪೭] ಭರಮಣ್ಣನಾಯಕನು ಚಿತ್ರದುರ್ಗ ಪರಿಸರದಲ್ಲಿನ ಗೋಪಾಲಕೃಷ್ಣ ದೇವಾಲಯದ ಮುಖಮಂಟಪ ನಿರ್ಮಿಸಿ ತನ್ನ ಭಕ್ತಿಭಾವಗಳನ್ನು ಸಮರ್ಪಿಸಿದನು. ಗೋಪಾಲಕೃಷ್ಣ ದೇವಾಲಯದ ನವರಂಗದ ಪೂರ್ವದ್ವಾರದ ಮೇಲಿನ ಒಳಮಗ್ಗುಲಲ್ಲಿ ಅವನೊಡನೆ ನಿಂತ ನಾಲ್ವರು ರಾಣಿಯರ

ಶಿಲ್ಪಗಳಿವೆ. ಭರಮಣ್ಣನಾಯಕನ ಕಾಲದಲ್ಲಿ ತಿರುಮಲೆಯ ಶ್ರೀವೈಷ್ಣವ ಸಂಪ್ರದಾಯದ ತಾತಾಚಾರ್ಯರ ಪರಂಪರೆಯ ಅಪ್ಪಣ್ಣಾಚಾರ್ಯರಿಗೆ ರಾಮೇನಹಳ್ಳಿ (ಈಗೀನ ಹೊಳಲ್ಕೆರ ತಾಲ್ಲೂಕಿನಲ್ಲಿರುವ) ಗ್ರಾಮವನ್ನು ದತ್ತಿ ನೀಡಿದ್ದು, ತಮ್ಮ ಗುರುಗಳ ಹೆಸರಲ್ಲಿ ಅಗ್ರಹಾರ ಮಾಡಿದಂತೆ ಶಾಸನಗಳಿಂದ ತಿಳಿದುಬರುತ್ತದೆ.[೪೮]

ಧಾರ್ಮಿಕ ದೃಷ್ಟಿಯಿಂದ ಚಿಕ್ಕಣ್ಣನಾಯಕನ ಕಾಲ ಬಹು ಮುಖ್ಯವಾದುದು. ಇವನು ಕಾಳಯುಕ್ತಿ ಸಂವತ್ಸರದ ಕಾರ್ತೀಕ ಮಾಸದಲ್ಲಿ ತನ್ನ ನಾಗತಿಯರು ಮತ್ತು ಅರಮನೆಯ ರಾಜ ಪರಿವಾರದವರೊಡಗೂಡಿ ಜಂಗಮರ ಕೈಯಿಂದ ದೀಕ್ಷೆ ಪಡೆದನು ಮತ್ತು ಲಿಂಗವನ್ನೂ ಧರಿಸಿದನು. ಇವರಿಗೆ ಪಾದ ಪಾಲಿಸುವುದಕ್ಕೆ ಉಗ್ರ ಚನ್ನವೀರ ದೇವರನ್ನು ಗೊತ್ತು ಮಾಡಿ, ಅವರಿಗೆ ಲಾಲ್‌ಕೋಟೆ ಬಾಗಿಲಬಳಿ ಕಲ್ಲುಮಠವೊಂದನ್ನು ಕಟ್ಟಿಸಿಕೊಟ್ಟರು. ಆದರೆ ಇದೇ ಸಂವತ್ಸರದಲ್ಲಿ ಮಲ್ಲವ್ವ ನಾಗತಿಯ ವಿನಾಃ ಉಳಿದವರೆಲ್ಲರೂ ಲಿಂಗ ತೆಗೆದು ಪುನ ವೈಷ್ಣವ ಧರ್ಮಕ್ಕೆ ಸೇರಿದರು. ಮಲ್ಲವ್ವ ನಾಗತಿ ಬೇರೆ ಇದ್ದು, ವೀರಶೈವ ಧರ್ಮವನ್ನೇ ಪಾಲಿಸಿದರು. ಚಿತ್ರದುರ್ಗದ ನಾಯಕ ಅರಸರು ವೀರಶೈವ ಧರ್ಮವನ್ನು ತೊರೆದು ತಮ್ಮ ಹಳೆಯ ಮತಕ್ಕೆ ಹಿಂದಿರುಗಲು ಕಾರಣವೇನು ಎಂಬ ಕುತೂಹಲ ಮೂಡುವುದು ಸಹಜ. ಇದಕ್ಕೆ ಕಾರಣವೇನೆಂಬ ಬಗ್ಗೆ ನಾಯಕ ಅರಸರ ದಾಖಲೆಗಳಲ್ಲಿ ಯಾವುದೇ ಮಾಹಿತಿಯಿಲ್ಲ. ಆಂಧ್ರಪ್ರದೇಶದ ಅಹೋಬಲ ನರಸಿಂಹ ಪಾಳೆಯಗಾರರ ಮನದೇವರಾಗಿತ್ತು. ಈ ಮತದ ಅನುಸಾರ ಇವರು ಪೂಜಾ ವಿಧಿವಿಧಾನಗಳನ್ನು, ಆಚರಣೆಗಳನ್ನು ಅಳವಡಿಸಿಕೊಂಡಿದ್ದರು. ಅದೇ ಮತದ ಅನುಸಾರ ವೈವಾಹಿಕ ಸಂಬಂಧಗಳನ್ನು ಬೆಳೆಸಿದ್ದರು. ಅನೇಕ ದೇವಾಲಯಗಳ ನಿರ್ಮಾಣ, ರಾಜ್ಯಾಡಳತಕ್ಕೂ ಧಾರ್ಮಿಕ ವಿಧಿವಿಧಾನಗಳನ್ನು ಲೇಪಿಸಿಕೊಂಡಿದ್ದರು. ಬೇಡ ಜನಾಂಗದಲ್ಲೂ ವೈಷ್ಣವ ಧರ್ಮದ ಪ್ರಭಾವ ಗಾಢವಾಗಿತ್ತು. ಇದರೊಡನೆ ಕೂಡಲೀಶೃಂಗೇರಿ ಮಠದ ಸ್ವಾಮಿಗಳನ್ನು ರಾಜಗುರುಗಳನ್ನಾಗಿ ಮಾಡಿಕೊಂಡಿದ್ದರು. ಈ ಹಂತದಲ್ಲಿ ವೀರಶೈವರಾದಾಗ ತಮ್ಮ ಆಚಾರ ವಿಚಾರಗಳನ್ನೆಲ್ಲಾ ಬದಲಿಸಿಕೊಳ್ಳಬೇಕಾಗಿತ್ತು. ಆದರೆ ಈ ವೇಳೆಗಾಗಲೇ ವೈಷ್ಣವ ಆಚರಣೆಗಳೊಡನೆ ನಿಕಟಸಂಬಂಧ ಹೊಂದಿದ್ದ ನಾಯಕ ಅರಸರಿಗೆ ಇದು ಕಷ್ಟದಾಯಕ ಕಾರ್ಯವಾಗಿತ್ತು. ಹಾಗಾಗಿಯೇ ಅವರು ವೀರಶೈವ ಮತ ತೊರೆದು ವೈಷ್ಣವ ಮತಕ್ಕೆ ಪುನಃ ಸೇರಿರಬಹುದು.

ಮಾಧ್ವ

ಮಂಚಾಲೆ ರಾಘವೇಂದ್ರ ಸ್ವಾಮಿಗಳ ಅವಧಿಯಲ್ಲಿ ಚಿತ್ರದುರ್ಗದಲ್ಲಿ ಮಾಧ್ವ ಪಂಥವೂ ಅಸ್ಥಿತ್ವದಲ್ಲಿತ್ತು. ಅವರು ಈ ಪ್ರದೇಶಕ್ಕೆ ೨-೩ ಬಾರಿ ಬಂದಿದ್ದರು. ಇವರ ಪರಮಾಪ್ತ ಶಿಷ್ಯರಲ್ಲಿ ಒಬ್ಬನಾದ ವೆಂಕಣ್ಣ ಎಂಬುವನು ಮೂಲತ ಚಿತ್ರದುರ್ಗದವನಾಗಿದ್ದು ಬಹುದಿನ ಗುರುಸೇವೆ ಮಾಡಿ, ಅವರ ಒಪ್ಪಿತದ ನಂತರ ತನ್ನ ಜೀವಿತಾಂತ್ಯದ ದಿನಕಳೆಯಲು ಚಿತ್ರದುರ್ಗಕ್ಕೆ ಬಂದು ನೆಲೆಸಿದ್ದನು. ಸ್ವಾಮಿಗಳು ಈ ಸ್ಥಳಕ್ಕೆ ಒಮ್ಮೆ ಭೇಟಿ ನೀಡಿದಾಗ ಆ ಶಿಷ್ಯ ಅವರ ಉಪನ್ಯಾಸ ಕೇಳಿ ದೇಹತ್ಯಾಗ ಮಾಡಿದನು. ಪ್ರಸ್ತುತ ವೆಂಕಣ್ಣನದೆಂದು ಹೇಳುವ ಗ್ರಾನೈಟ್‌ಕಲ್ಲಿನ ಸುಂದರವಾದ ವೃಂದಾವನ ಈಗಲೂ ರಾಯರಮಠದ ಬದಿಯಲ್ಲಿ ಪೂಜೆಗೊಳ್ಳುತ್ತಿದೆ. ರಾಘವೇಂದ್ರಸ್ವಾಮಿಗಳ ತರುವಾಯ ಮೂರನೇ ಪೀಠಾಧೀಶರಾಗಿ ಬಂದ ಸುಮತೀಂದ್ರ ಸ್ವಾಮಿಗಳಿಗೆ ಭರಮಣ್ಣನಾಯಕನು ಕ್ರಿ.ಶ.೧೭೧೧ರಲ್ಲಿ ದೇಮವ್ವನಹಳ್ಳಿಯನ್ನು ಅವರ ರಘುಪತಿ ದೇವರ ಪೂಜೆಯ ಸಲುವಾಗಿ ದಾನ ನೀಡಿದ್ದನು.[೪೯] ಇವುಗಳೊಡನೆ ಸತ್ಯಬೋಧಾಚಾರ್ಯಮಠ, ವ್ಯಾಸರಾಯರ ಮಠ, ಬೋಧರಾಯಚಾರ್ಯ ಮಠಗಳು ಚಿತ್ರದುರ್ಗದ ಪಾಳೆಯಗಾರರ ಅವಧಿಯಲ್ಲಿ ಅಸ್ತಿತ್ವದಲ್ಲಿದ್ದವು.

೫.೪ ಶಾಕ್ತ ಪಂಥ

ಚಿತ್ರದುರ್ಗ ಪರಿಸರದವು ಪ್ರಾಚೀನ ಕಾಲದಲ್ಲಿಯೇ ಶಕ್ತಿದೇವತೆಯ ಆರಾಧನೆಗೆ ಒಳಪಟ್ಟಿತ್ತು. ಚಂದ್ರವಳ್ಳಿಯ ಉತ್ಖನನದಲ್ಲಿ ದುರ್ಗಿಯ ಶಿಲಾಮೂರ್ತಿ ದೊರೆತಿವೆ.[೫೦] ಅಂದರೆ ಕ್ರಿ.ಶ.೧ ಮತ್ತು ೨ನೇ

ಶತಮಾನಕ್ಕಾಗಲೇ ಇಲ್ಲಿ ದುರ್ಗಿಯು ಜನತೆ ಆರಾಧಿಸಲ್ಪಡುತಿದ್ದ ದೇವತೆಗಳಲ್ಲಿ ಒಬ್ಬಳಾಗಿದ್ದಳು. ಚಿತ್ರದುರ್ಗವು ನವದುರ್ಗಿಯರು ನೆಲೆಗೊಂಡ ಸ್ಥಳವೆಂಬುದು ವಾಡಿಕೆ. ಕಲ್ಯಾಣದ ಚಾಲ್ಯುಕರ ಅವಧಿಯಲ್ಲಿ ಬನಶಂಕರಿಯ ಆರಾಧನೆ ಚಿತ್ರದುರ್ಗ ಪರಿಸರದಲ್ಲಿ ನೆಲೆಯೂರಿತ್ತು. ಈ ದೇವಿಯ ಶಿಲ್ಪವು ಗುಹಾಲಯವೊಂದರಲ್ಲಿದ್ದು, ಪಾಳೆಯಗಾರರ ವಂಶಾವಳಿಯಲ್ಲಿ ಈ ದೇವಿಯನ್ನು ಬಂದಮ್ಮ ಎಂದೂ, ಶಾಸನಗಳಲ್ಲಿ ಬನದೇವಿ ಎಂದೂ ಕರೆಯಲಾಗಿದೆ.

ಮಧ್ಯಕಾಲದ ಅವಧಿಯ ವೇಳೆಗೆ ಚಿತ್ರದುರ್ಗ ಪರಿಸರದಲ್ಲಿ ಏಕನಾಥಿಯ ಆರಾಧನೆ ಪ್ರಬಲವಾಗಿದ್ದಂತೆ ತೋರುತ್ತದೆ. ಶಿಲ್ಪಶೈಲಿಯ ಲಕ್ಷಣಗಳಿಂದ ೧೧ನೇ ಶತಮಾನದ ಅವಧಿಯದ್ದಾಗಿರುವ ಏಕನಾಥೇಶ್ವರಿ ದೇವಿಯನ್ನು ದುರ್ಗದ ನವದುರ್ಗಿಯರಲ್ಲಿ ಹಿರಿಯವಳೆಂದೂ, ಅಜ್ಜಿಯೆಂದೂ ಆದರಣೀಯವಾಗಿದ್ದಾಳೆ. ಏಕನಾಥೇಶ್ವರಿಯ ಆರಾಧನಾ ಕೇಂದ್ರಗಳಲ್ಲಿ ಚಿತ್ರದುರ್ಗ ಅತ್ಯಂತ ಪ್ರಸಿದ್ಧವಾದದ್ದು. ಚಳ್ಳಕೆರೆ, ಹೊಸಪೇಟೆಗಳಲ್ಲಿ ಈ ದೇವಿಯ ಆರಾಧನಾಕೇಂದ್ರಗಳಿದ್ದರೂ, ಇವುಗಳು ಚಿತ್ರದುರ್ಗದ ಏಕನಾಥೇಶ್ವರಿ ಆರಾಧನಾ ಕೆಂದ್ರಗಳಷ್ಟು ಪ್ರಾಚೀನವಾದವುಗಳಲ್ಲ ಎಂಬುದು ಗಮನಾರ್ಹ. ಕ್ರಿ.ಶ.೧೪೨೭ರ ಒಂದು ಶಾಸನದಲ್ಲಿ ವಿರುಪಣ್ಣ ಎಂಬುವನು ಏಕನಾಥೇಶ್ವರಿಗೆ 'ದಂನ್ನಾದೇವಿ ತೋಟ ಸ್ಥಳದ ಭೂಮಿ' ಯೊಂದನ್ನು ದತ್ತಿ ನೀಡಿದ ಸಂಗತಿ ಉಕ್ತವಾಗಿದೆ.[೫೧] ಇದರಿಂದ ದನ್ನಾದೇವಿ ಎಂಬ ದೇವಿ ಸಹ ಈ ಪರಿಸರದಲ್ಲಿದ್ದುದು ತಿಳಿಯುತ್ತದೆ. ಆದರೆ ಈ ಹೆಸರಿಗೆ ಸಮೀಪವಾಗಿರುವ ಯಾವುದೇ ದೇವಿಯ ದೇವಾಲಯಗಳು ಈ ಪರಿಸರದಲ್ಲಿಲ್ಲ.

ಕ್ರಿ.ಶ.೧೨೮೬ರ ಪೆರುಮಾಳೆದೇವ ದಣ್ಣಾಯಕನ ಶಾಸನವೊಂದು ಚೌಡೇಶ್ವರಿ ದೇವಿಯನ್ನು ಹೆಸರಿಸುತ್ತದೆ. ಸಂಪಿಗೆ ಸಿದ್ದೇಶ್ವರ ದೇವಾಲಯದ ನವರಂಗದಲ್ಲಿ ಪಾರ್ವತಿಯ ವಿಗ್ರಹವಿದೆ. ಇವರೊಡನೆ ಏಕನಾಥೇಶ್ವರಿ ದೇವಾಲಯದ ಅನ್ನಪೂರ್ಣೇಶ್ವರಿ, ಹಿಡಿಂಬೇಶ್ವರ ದೇವಾಲಯದ ಮಹಿಷಾಸುರಮರ್ಧಿನಿ, ಗೋಪಾಲಕೃಷ್ಣ ದೇವಾಲಯದಲ್ಲಿನ ಲಕ್ಷ್ಮಿ ವಿಗ್ರಹಗಳು ಈ ಪರಿಸರದಲ್ಲಿ ಶಕ್ತಿ ದೇವತಾ ಆರಾಧನೆಯನ್ನು ದೃಢಪಡಿಸುತ್ತವೆ. ಇವುಗಳೊಡನೆ ಪಾಳೆಯಗಾರರ ಪ್ರಮುಖ ಆರಾಧನಾ ದೇವಿಯಾಗಿದ್ದ ಉತ್ಸವಾಂಬೆ ಉಚ್ಚಂಗಿ ಎಲ್ಲಮ್ಮದೇವಿಯು ಸ್ಥಳೀಯ ದೇವತೆಯಾಗಿ ಪ್ರಮುಖ ಸ್ಥಾನ ಪಡೆದಿರುವಳು. ಇದರ ಹೆಸರೇ ಸೂಚಿಸುವಂತೆ ಉಚ್ಚಂಗಿ ಮೂಲದ ದೇವತೆ. ದುರ್ಗದ ದೊರೆ ಇಮ್ಮಡಿ ಮದಕರಿನಾಯಕನ ಅವಧಿಯಲ್ಲಿ ಉಚ್ಚಂಗಿದುರ್ಗದಿಂದ ದೇವಿಮೂರ್ತಿಯನ್ನು ಚಿತ್ರದುರ್ಗಕ್ಕೆ ತಂದು ಸ್ಥಾಪಿಸಲಾಯಿತು. ಇವುಗಳೊಡನೆ ಹಿರೇ ಮದಕರಿನಾಯಕನ ಅವಧಿಯಲ್ಲಿ ನಿರ್ಮಾಣಗೊಂಡ ಕಾಳಿಕಾದೇವಿಯೊಡನೆ, ತಿಪ್ಪನಘಟ್ಟಮ್ಮ ಮತ್ತು ಬರಗೇರಮ್ಮ ದೇವಿಯರ ಆರಾಧನೆ ಚಿತ್ರದುರ್ಗ ಪರಿಸರದಲ್ಲಿ ಪ್ರಸ್ತುತವೂ ಚಾಲ್ತಿಯಲ್ಲಿದೆ.

೫.೫ ಜೈನಧರ್ಮ

"ದಕ್ಷಿಣ ಭಾರತದ ಜೈನಧರ್ಮದ ಇತಿಹಾಸವೆಂದರೆ ಕರ್ನಾಟಕದ ಜೈನಧರ್ಮದ ಇತಿಹಾಸವೇ ಆಗಿದೆ"[೫೨] ಎಂಬ ವಿದ್ವಾಂಸರ ಮಾತನ್ನು ಬಹುಶಃ ಅನೇಕ ವಿದ್ವಾಂಸರು ಅನುಮೋದಿಸಿದ್ದಾರೆ. ಕಾರಣ ದಕ್ಷಿಣ ಭಾರತದ ಜೈನ ಧರ್ಮವು ಕರ್ನಾಟಕದ ಇತಿಹಾಸದೊಂದಿಗೆ ಬೆಳೆಯುತ್ತಾ ತನ್ನದೇ ಅದ ಇತಿಹಾಸವನ್ನು ನಿರ್ಮಿಸಿರುವುದು ನಿರ್ವಿವಾದ. ಕರ್ನಾಟಕದ ಸಾಹಿತ್ಯಗ್ರಂಥಗಳು ಮತ್ತು ಪುರಾತತ್ವ ಆಕರಗಳು ಜೈನಧರ್ಮವು ಕರ್ನಾಟಕದ ಸಾಂಸ್ಕೃತಿಕ ಕ್ಷೇತ್ರಕ್ಕೆ ಕೊಟ್ಟ ಕೊಡುಗೆಗಳನ್ನು ದಾಖಲಿಸಿವೆ. ಜೈನಧರ್ಮವು ಬೌದ್ಧ ಧರ್ಮದ ಒಂದು ಪ್ರಭೇದವೆಂದು ಅದಕ್ಕೆ ಸ್ವತಂತ್ರ ಅಭ್ಯಾಸದ ಅಗತ್ಯವಿಲ್ಲವೆಂದು ಕಳೆದ ಶತಮಾನದ ಆರಂಭದಲ್ಲಿ ಕೆಲ ವಿದ್ವಾಂಸರು ಭಾವಿಸಿದ್ದರು. ಜಾಕೋಬಿ ಎಂಬ ಜರ್ಮನ್ ವಿದ್ವಾಂಸರು 'ಜೈನಧರ್ಮವು ಬೌದ್ಧಧರ್ಮದ ಒಂದು ಶಾಖೆ ಎಂದಾಗಲೀ, ಮಹಾವೀರನು ಜೈನಧರ್ಮದ ಸಂಸ್ಥಾಪಕನೆಂದಾಗಲೀ ಬೌದ್ಧಗ್ರಂಥಗಳು ಎಲ್ಲಿಯೂ ಹೇಳಿಲ್ಲವೆಂಬ ಅಂಶವನ್ನು ಸೋದಾಹರಣವಾಗಿ ಪ್ರತಿಪಾದಿಸಿ ಜೈನಧರ್ಮದ

ಪ್ರಾಚೀನತೆಯನ್ನು ಮತ್ತು ಸ್ವಾಯತ್ತತೆಯನ್ನು ದೃಢಪಡಿಸಿದ್ದಾರೆ.[೫೩] ಇದರಿಂದ ಬೌದ್ಧ ಧರ್ಮಕ್ಕಿಂತ ಜೈನಧರ್ಮ ಸ್ವಲ್ಪ ಪ್ರಾಚೀನವೆಂಬುದು ಸ್ಪಷ್ಟ.

ಒಂದು ಕಾಲದಲ್ಲಿ ಈ ನಾಡಿನ ಜೀವನಾಡಿಯಾಗಿದ್ದ ಜೈನಧರ್ಮವು ಯಾವ ಕಾಲದಲ್ಲಿ ಕರ್ನಾಟಕದಲ್ಲಿ ನೆಲೆಯೂರಿತೆಂದು ಹೇಳುವುದು ಕಷ್ಟಸಾಧ್ಯ. ಆದರೂ ದೊರೆತ ಆಧಾರಗಳ ಮೇಲಿನಿಂದ ಕರ್ನಾಟಕದಲ್ಲಿ ಜೈನಧರ್ಮವು ಉತ್ತರಭಾರತದಿಂದ ಬಂದ ಶೃತಕೇವಲಿ ಭದ್ರಬಾಹುವಿನೊಂದಿಗೆ ಆರಂಭವಾಗುತ್ತದೆ. ಮೌರ್ಯ ಸಾಮ್ರಾಟನಾದ ಚಂದ್ರಗುಪ್ತ ಮೌರ್ಯನ ಮೇಲೆ ಭದ್ರಬಾಹುಗಳ ಪ್ರಭಾವ ಅಗಾಧವಾಗಿದ್ದ ಅವಧಿಯಲ್ಲಿ ಉತ್ತರ ಭಾರತದಾದ್ಯಂತ ಭೀಕರ ಕ್ಷಾಮ ತಲೆದೋರಿದಾಗ ಚಂದ್ರಗುಪ್ತಮೌರ್ಯನು ಜೈನಾಚಾರ್ಯನಾದ ಭದ್ರಬಾಹು ಮತ್ತು ೧೨೦೦೦ ಮುನಿಸಂಘದೊಡನೆ ದಕ್ಷಿಣಕ್ಕೆ ಪ್ರಯಾಣ ಬೆಳೆಸಿ ಕರ್ನಾಟಕದ ಶ್ರವಣಬೆಳಗೊಳಕ್ಕೆ ಬಂದು ನೆಲೆಸಿದನು. ತರುವಾಯ ಕರ್ನಾಟಕದ ಹಲವು ಅರಸು ಮನೆತನಗಳು ಈ ಧರ್ಮವನ್ನು ಬೆಂಬಲಿಸಿ ನಿಂತಾಗ ತನ್ನ ಮೇರೆಗಳನ್ನು ವಿಸ್ತರಿಸುವ ಮೂಲಕ ಪ್ರಸರಣಗೊಂಡಿತು.

ಚಿತ್ರದುರ್ಗ ಪರಿಸರದಲ್ಲಿ ಜೈನಧರ್ಮವು ಕ್ರಿ.ಶ. ೧೧೦೦ರಿಂದ ೧೫೦೦ರ ಅವಧಿಯಲ್ಲಿ ಸರಿಸುಮಾರು ೪೦೦ ವರ್ಷಗಳ ಕಾಲ ಊರ್ಜಿತಾವಸ್ಥೆಯಲ್ಲಿತ್ತು ಎಂಬುದನ್ನು ಶಾಸನಗಳು ದೃಢಪಡಿಸುತ್ತವೆ.[೫೪]

ನಗರದ ಜೋಗಿಮಟ್ಟಿ ರಸ್ತೆಯ ಬಲಬದಿಯಲ್ಲಿ ಹಿಂದೆ ಸಿದ್ದಾಂತಿ ಓಬಳಪ್ಪನ ತೋಟ ಎಂದು ಕರೆಯುತ್ತಿದ್ದ ಸ್ಥಳವನ್ನು ಇಂದು ಮೆಣಸಿನಕಾಯಿ ತಿಮ್ಮಜ್ಜನ ತೋಟ ಎಂದು ಸಂಬೋಧಿಸಲಾಗುತ್ತದೆ. ಒಂದನೇ ಸುತ್ತಿನ ಕೋಟೆಯ ಒಳಭಾಗದಲ್ಲಿ ಈ ಪ್ರದೇಶ ಕಂಡುಬರುತ್ತದೆ. ಇದು ಹಿಂದೊಮ್ಮೆ ಜೈನ ಕೇಂದ್ರವಾಗಿತ್ತು. ಇಲ್ಲಿನ ಒಂದು ನಿಷಧಿ ಶಾಸನದಲ್ಲಿನ ಜಯಕೀರ್ತಿದೇವ ಎಂಬ ಹೆಸರು ಗಮನ ಸೆಳೆಯುತ್ತದೆ. ಈ ಹೆಸರು ಖ್ಯಾತ ಛಂದಃಶಾಸ್ತ್ರಕಾರನಾದ ಜೈನಮುನಿ ಜಯಕೀರ್ತಿಯನ್ನು ನೆನಪಿಸುತ್ತದೆ ಎನ್ನುವುದು ವಿದ್ವಾಂಸರ ಅಂಬೋಣ.[೫೫] ಈ ಜಯಕೀರ್ತಿಯು ಚಿತ್ರದುರ್ಗ ಪ್ರದೇಶದೊಂದಿಗೆ ಸಂಬಂಧ ಹೊಂದಿದ್ದನೆಂಬುದು ಗಮನಾರ್ಹ ಸಂಗತಿ. ಸಂಸ್ಕೃತ ಛಂದಸ್ಸಿನೊಡನೆ ಕನ್ನಡ ಛಂದಸ್ಸನ್ನು ಸೇರಿಸಿ ವಿವರಿಸಿ ಕನ್ನಡಿಗರ ಕೀರ್ತಿಗೆ ಪಾತ್ರವಾಗಿರುವ ಛಂದೋನುಶಾಸನದ ಕರ್ತೃವಾದ ಜಯಕೀರ್ತಿಯ ಕಾಲ ಕ್ರಿ.ಶ.೧೦ನೇಯ ಶತಮಾನದಿಂದ ಕ್ರಿ.ಶ.೧೨ನೇಯ ಶತಮಾನ. "ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಹೆಗ್ಗೆರೆ ಗ್ರಾಮದಲ್ಲಿ ಕ್ರಿ.ಶ.೧೧೬೧ರಲ್ಲಿ ಹಾಕಿಸಲಾದ ಒಂದು ಶಾಸನದಲ್ಲಿ ಚಂಪಕಮಾಲಾ ವೃತ್ತವನ್ನು ಚಿತ್ರಲತೆಯೆಂದು ಹೆಸರಿಸಿರುವುದರ ಸುಳುಹಿನ ಮೇಲೆ (ಇದನ್ನು ಜಯಕೀರ್ತಿ ಚಿತ್ರಲತಿಕಾ ವೃತ್ತ ಎಂದು ಕರೆದಿದ್ದಾನೆ) ಮತ್ತು ಅದರಲ್ಲಿ ಬಂದಿರುವ ಚಂದ್ರಾಯಣ ದೇವ ಎಂಬ ಜೈನಮುನಿಯ ವಿಶೇಷಣ ನಾಮದ ಸುಳಿವಿನ ಮೇಲೆ, ಆ ಚಂದ್ರಾಯಣದೇವ ಬೇರೆಯಾರೂ ಆಗಿರದೆ ಜಯಕೀರ್ತಿ ಮುನಿ ಎಂಬುದನ್ನು ಇನ್ನೂ ಮೂರು ಶಾಸನಗಳ ಆಧಾರದಿಂದ ಸೀತಾರಾಮ್ ಜಾಗೀರ್‌ದಾರ್ ಅವರು ಗುರುತಿಸಲು ಪ್ರಯತ್ನಿಸಿದ್ದಾರಲ್ಲದೆ ಅವನ ಕಾಲವನ್ನು ಕ್ರಿ.ಶ. ೧೨ನೇಯ ಶತಮಾನದ ಪೂರ್ವಾರ್ಧ" ಎಂದಿರುವರು.[೫೬] ಪ್ರಸ್ತುತ ಶಾಸನದ ಜಯಕೀರ್ತಿದೇವ ಅವನೇ ಇರಬಹುದೆಂದು ಬಿ.ರಾಜಶೇಖರಪ್ಪನವರು ಅಭಿಪ್ರಾಯ ಪಟ್ಟಿರುವರು.[೫೭] ಹೆಗ್ಗೆರೆಯಲ್ಲಿ ತಂಗಿದ್ದ ಇವನು ಚಿತ್ರದುರ್ಗದೊಡನೆ ಸಂಪರ್ಕ ಹೊಂದಿದ್ದು, ಧಾರ್ಮಿಕ ಕಾರ್ಯಚಟುವಟಿಕೆಗಳೊಡನೆ ಕೃತಿರಚನೆ ಮಾಡುತ್ತಿರಬಹುದಾದ ಸಾಧ್ಯತೆ ಇದೆ. "ಇದು ನಿಜವಾದರೆ ಆ ಶಾಸನ ಕ್ರಿ.ಶ.೧೨ನೇಯ ಶತಮಾನಕ್ಕೆ ಸೇರಿದ್ದಾಗುವುದಲ್ಲದೆ ಆ ಕಾಲಕ್ಕೆ ಇಲ್ಲಿ ಅಂಥಾ ಪ್ರಖ್ಯಾತ ಮುನಿಯೊಬ್ಬ ಇರುವಷ್ಟು ಮತ್ತು ಸಲ್ಲೇಖನ ಸಮಾಧಿ ಮರಣದಂತ ಧಾರ್ಮಿಕ ಕ್ರಿಯಾ ಚಟುವಟಿಕೆಗಳು ಸಾಂಗವಾಗಿ ನಡೆಯುವಷ್ಟು ಈ ಸ್ಥಳದಲ್ಲಿ ಜೈನಧರ್ಮ ನೆಲೆಗೊಂಡಿತ್ತು ಎಂಬ ಸಂಗತಿ ವ್ಯಕ್ತವಾಗುತ್ತದೆ."[೫೮]

ಚಿತ್ರದುರ್ಗದ ಪಶ್ಚಿಮಕ್ಕಿರುವ ಚಂದ್ರವಳ್ಳಿಯ ಆಂಜನೇಯ ದೇವಾಲಯದ ಪಶ್ಚಿಮದಲ್ಲಿ ಒಂದು ಗುಂಡಿನಮೇಲೆ ನಿಷಧಿ ಶಾಸನವಿದೆ. ಬಿ.ಎಲ್. ರೈಸ್ ಈ ಶಾಸನವನ್ನು ಪತ್ತೆಹಚ್ಚಿ ಸೆಟಕಟ್ಟೆ ಬಾಗವ್ವೆ ಎಂದು ಓದಿದ್ದರು.[೫೯] ಇದು ಸೆಟಕಟ್ಟೆ ಮನೆತನದ ಅಥವಾ ಸ್ಥಳದ ಬಾಗವ್ವೆ ಎಂಬ ಅರ್ಥ ನೀಡುತ್ತದೆ. ಆದರೆ ಇತ್ತೀಚೆಗೆ ಬಿ. ರಾಜಶೇಖರಪ್ಪನವರು ಇದನ್ನು ಪುನರ್ ಪರಿಶೀಲಿಸಿ ರೈಸ್‌ರವರ ಓದಿನಲ್ಲಾದ ಸ್ಖಾಲಿತ್ಯವನ್ನು ಸರಿಪಡಿಸಿದ್ದಾರೆ.[೬೦] ಆ ಪ್ರಕಾರ ಸೆಟಕವೆ ಮತ್ತು ಬಾಗವ್ವೆ ಎಂಬ ಇಬ್ಬರು ಸ್ತ್ರೀಯರ ಹೆಸರುಗಳಿವು ಎಂಬುದು ತಿಳಿದುಬಂದಿದೆ. ಇದರೊಡನೆ ಈ ಶಾಸನದ ಬಳಿ ಸೂರ್ಯಚಂದ್ರರ ಮಧ್ಯೆ ಮುಕ್ಕೊಡೆ, ಅದರ ಕೆಳಗೆ ನಿಂತಿರುವ ತೀರ್ಥಂಕರ, ಅವನ ಎಡಬಲಕ್ಕೆ ಎರಡು ಚವರಿಗಳು, ಅವನ ಸನ್ನಿಧಿಯಲ್ಲೇ ಎಡಬಲದಲ್ಲಿ ಕುಳಿತ ಇಬ್ಬರು ವ್ರತಧಾರಿ ಸ್ತ್ರೀಯರು, ಅವರ ಕೆಳಗೆ ಒಂದು ಅಟ್ಟವಣೆಯ ಮೇಲೆ ಇರಿಸಿರುವ ಗ್ರಂಥಗಳ ರೇಖಾಕೆತ್ತನೆಗಳಿವೆ. ಈ ರೇಖಾ ಕೆತ್ತನೆಗಳೇ ಇದೊಂದು ಜೈನ ನಿಷಧಿ ಶಾಸನ ಎಂಬುದನ್ನು ಗುರುತಿಸಲು ಸಹಾಯಕವಾಗಿವೆ. ಲಿಪಿಯ ಶೈಲಿಯ ಹಿನ್ನೆಲೆಯಲ್ಲಿ ೧೩ನೇ ಶತಮಾನಕ್ಕೆ ಸೇರುವ ಈ ಶಾಸನದಿಂದ ಇಲ್ಲಿ ಇಬ್ಬರು ಸ್ತ್ರೀಯರು ಸಮಾಧಿ ಮರಣ ಪಡೆದಿದ್ದರೆಂಬ ಸಂಗತಿ ಉಕ್ತವಾಗುತ್ತದೆ. ಜೊತೆಗೆ ಈ ಪ್ರದೇಶದಲ್ಲಿ ಜೈನ ಸ್ತ್ರೀಯರು ಸಮಾಧಿ ಮರಣ ಪಡೆದರೆಂದು ತಿಳಿಸುವ ಏಕೈಕ ಶಾಸನ ಇದೇ ಎಂಬುದು ಗಮನಾರ್ಹ.

ಕ್ರಿ.ಶ.೧೩೩೬ರ ಅವಧಿಯಲ್ಲಿ ಹೊಯ್ಸಳ ಚಕ್ರವರ್ತಿ ೩ನೇ ವೀರ ಬಲ್ಲಾಳನ ಪ್ರಾಂತ್ಯಾಧಿಕಾರಿಯಾಗಿ ಚಿತ್ರದುರ್ಗವನ್ನು ಆಳುತ್ತಿದ್ದ ಹಿರಿಯ ಬಲ್ಲಪ್ಪ ದಂಣ್ಣಾಯಕನ ನಿಷಧಿ ಶಾಸನವು ಚಿತ್ರದುರ್ಗ ಪರಿಸರದ ತಿಮ್ಮಣ್ಣನಾಯಕನ ಕೆರೆಯಬಳಿ ದೊರೆತಿದೆ.[೬೧] ಕ್ರಿ.ಶ.೧೪ನೇ ಶತಮಾನದ ಅವಧಿಗೆ ಇದು ಸೇರುತ್ತದೆ. ಕ್ರಿ.ಶ.೧೩೩೬ರಲ್ಲಿ ಗೋಪಾಲಕೃಷ್ಣ ದೇವಾಲಯಕ್ಕೆ ನಗರೇರು ಗ್ರಾಮವನ್ನು ದತ್ತಿನೀಡಿ ಅದಕ್ಕೆ ಗೋಪಾಲಪುರ ಎಂದು ನಾಮಕರಣ ಮಾಡಿದನು.[೬೨] ಮೂಲತಃ ವೈಷ್ಣವನಾಗಿದ್ದಿರಬಹುದಾದ ಇವನು ತರುವಾಯ ಜೈನನಾಗಿ ಮಾರ್ಪಾಡು ಹೊಂದಿ ಸಲ್ಲೇಖನ ವ್ರತ ಕೈಗೊಂಡಂತೆ ತೋರುತ್ತದೆ.

ಚಿತ್ರದುರ್ಗದ ಮೆಣಸಿನಕಾಯಿ ತಿಮ್ಮಜ್ಜನ ತೋಟದಲ್ಲಿ ಕ್ರಿ.ಶ.೧೪೨೩ರಲ್ಲಿ ಮಂಗೀಸೆಟ್ಟಿಯ ಮಗ ಗುಮ್ಮಿಸೆಟ್ಟಿಯು ನಿಷಧಿ ಪಡೆದುದ್ದನ್ನು ಶಾಸನವೊಂದು ಪ್ರಸ್ತಾಪಿಸುತ್ತದೆ.[೬೩] ನಾಲ್ಕು ಅಡಿ ಎತ್ತರ ಮತ್ತು ನಾಲ್ಕು ಅಡಿ ಅಗಲ ಇರುವ ಬಂಡೆಯ ಹರಹಿನಲ್ಲಿ ಈ ಶಾಸನಕ್ಕೆ ಸಂಬಂಧಿಸಿದ ರೇಖಾಚಿತ್ರಗಳನ್ನು ಕೊರೆದು ಮೂಡಿಸಿರುವರು. ಈ ರೇಖಾಚಿತ್ರಗಳ ಪೈಕಿ ಅಷ್ಟೇನು ನಾಜೂಕಿಲ್ಲದ ಮೂವರು ವ್ಯಕ್ತಿಗಳು ಧ್ಯಾನದಲ್ಲಿ ಕುಳಿತಿದ್ದಾರೆ. ಇವರ ಬಲಬದಿಗೆ ಧರ್ಮಗ್ರಂಥವುಳ್ಳ ಅಟ್ಟವಣಿಗೆ ಇದೆ. ಮಧ್ಯದಲ್ಲಿ ಧ್ಯಾನಾಸಕ್ತನಾಗಿ ಆಸೀನವಾಗಿರುವವನ ಮೇಲ್ಬದಿಯಲ್ಲಿ ಮುಕ್ಕೊಡೆ, ಅದರ ಎಡಬಲಕ್ಕೆ ಸೂರ್ಯ, ಚಂದ್ರರ ಕೆತ್ತನೆಗಳಿವೆ. ಈ ಮಧ್ಯದ ವ್ಯಕ್ತಿಯೇ ಬಹುಶಃ ಶಾಸನೋಕ್ತವಾಗಿರುವ ಗುಮ್ಮಿಸೆಟ್ಟಿಯಾಗಿದ್ದು, ಉಳಿದ ಇಬ್ಬರು ವ್ರತಧಾರಿಗಳು ಅವನ ಬಂಧುಗಳಾಗಿರಬಹುದು. ಈ ಶಾಸನೋಕ್ತ ಗುಮ್ಮಿಸೆಟ್ಟಿ ಒಬ್ಬ ವರ್ತಕನಾಗಿದ್ದು, ವರ್ತಕವರ್ಗಕ್ಕೆ ಸೇರಿದ ಜೈನರು ಚಿತ್ರದುರ್ಗ ಪರಿಸರದಲ್ಲಿ ವಾಸವಾಗಿದ್ದರೆಂದು ಇದರಿಂದ ತಿಳಿಯುತ್ತದೆ. ಈ ಮೇಲೆ ವಿವರಿಸಿರುವ ಇದೇ ತೋಟದಲ್ಲಿ ಗುಮ್ಮಟದೇವ ಎಂಬ ವ್ಯಕ್ತಿಯೋರ್ವನ ನಿಷಧಿಶಾಸನ ಲಭ್ಯವಾಗಿದೆ.[೬೪] ಈ ಶಾಸನವು ಕ್ರಿ.ಶ.೧೫ನೇ ಶತಮಾನದ ಕನ್ನಡ ಲಿಪಿಯಲ್ಲಿದೆ. ಈ ಶಾಸನದಲ್ಲಿರುವ ಗುಮ್ಮಟದೇವ ಒಬ್ಬ ಜೈನ ಯತಿಯಾಗಿರಬಹುದೆಂಬುದು ವಿದ್ವಾಂಸರ ಅಭಿಮತ.[೬೫] ಚಿತ್ರದುರ್ಗದ ಸಂದರ್ಭದಲ್ಲಿ ಸಧ್ಯಕ್ಕೆ ತಿಳಿದು ಬರುವ ಇನ್ನೊಬ್ಬ ಜೈನಯತಿ ಎಂದರೆ ಇವನೇ ಎನ್ನಬಹುದು.

ಈ ಮೇಲ್ಕಾಣಿಸಿದ ಸಂಗತಿಗಳ ಅವಲೋಕನದಿಂದ ಕ್ರಿ.ಶ.೧೨೦೦ರಿಂದ ಕ್ರಿ.ಶ.೧೫೦೦ರ ಅವಧಿಯಲ್ಲಿ ಚಿತ್ರದುರ್ಗ ಪರಿಸರದಲ್ಲಿ ಜೈನಧರ್ಮ ಊರ್ಜಿತಾವಸ್ಥೆಯಲ್ಲಿದ್ದುದು ವೇದ್ಯವಾಗುತ್ತದೆ.

ಚಿತ್ರದುರ್ಗ ಪರಿಸರವು ಹಲವು ಮತಪಂಥಗಳ ನೆಲೆವೀಡು. ಪ್ರಾಚೀನ ಕಾಲದಲ್ಲಿ ಬನವಾಸಿ, ಸನ್ನತಿಯಲ್ಲಿ ಬೌದ್ಧಧರ್ಮ ಅಸ್ತಿತ್ವದಲ್ಲಿದ್ದಂತೆ ಚಂದ್ರವಳ್ಳಿಯಲ್ಲೂ ಬೌದ್ಧಧರ್ಮ ಅಸ್ತಿತ್ವದಲ್ಲಿತ್ತು. ಆದರೆ

ಕದಂಬರ ನಂತರ ಇದರ ಕುರುಹುಗಳಾವುವೂ ಚಿತ್ರದುರ್ಗದಲ್ಲಿ ದೊರೆಯುವುದಿಲ್ಲ. ಕ್ರಿ.ಶ.೧ ಮತ್ತು ೨ನೇ ಶತಮಾನದ ವೇಳೆಗೆ ಚಿತ್ರದುರ್ಗದಲ್ಲಿ ಶೈವಧರ್ಮ ನೆಲೆಯೂರಿದ್ದುದು ಸ್ಪಷ್ಟ. ತರುವಾಯ ವಿವಿಧ ಅರಸು ಮನೆತನಗಳ ಪೋಷಣಗೆ ಒಳಪಟ್ಟು ಪ್ರಭಲವಾಗಿ ಬೆಳೆಯಿತು. ಆಳರಸರಿಂದ ಹೆಚ್ಚಿನದಾಗಿ ಇಲ್ಲಿ ಶೈವ ಸಂಸ್ಕೃತಿಯೇ ಪೋಷಿಸಲ್ಪಟ್ಟದ್ದು ಗುಮನಾರ್ಹ ಸಂಗತಿ. ಲಿಂಗ ಪ್ರತಿಷ್ಠಾಪನೆಯನ್ನು ವೀರವ್ರತದಂತೆ ಆಚರಿಸುವ ಕಾಳಾಮುಖ ಯತಿಗಳು ದುರ್ಗದ ಸಂಪಿಗೆ ಸಿದ್ದೇಶ್ವರ, ಹಿಡಿಂಬೇಶ್ವರ ದೇವಾಲಯಗಳಲ್ಲದೆ ಅಂಕಲಿಮಠ ಮತ್ತು ಧವಳಪ್ಪನಗುಡ್ಡ ಪರಿಸರದಲ್ಲಿ ನೆಲೆಸಿದ್ದರು. ನೈಸರ್ಗಿಕವಾಗಿ ಶಿವಲಿಂಗದಂತೆಯೇ ಗೋಚರವಾಗುವ ಧವಳಪ್ಪನಗುಡ್ಡವನ್ನು ಶಾಸನವೊಂದು ಶಿವಶ್ರೀ ಕೈಲಾಸ ಎಂದು ಕರೆದಿರುವುದು ಶೈವಾರಾಧನೆಯ ಪಾರಮ್ಯದ ಸಂಕೇತ. ಶಿವಭಕ್ತರಲ್ಲದವರ ಪ್ರವೇಶವನ್ನು ನಿರ್ಭಂಧಿಸಲಾದ ಈ ಕೇಂದ್ರ ಕರ್ನಾಟಕದ ಪ್ರಮುಖ ಶೈವ ಕೇಂದ್ರವಾಗಿತ್ತು. ಇದರೊಡನೆ ಚಿತ್ರದುರ್ಗವು ಕಾಪಾಲಿಕ ನಾಥರ ನೆಲೆವೀಡಾಗಿದ್ದುದು ಸ್ಪಷ್ಟ. ಚಿನ್ನದ ಕೆಲಸದಲ್ಲಿ ನಿಷ್ಣಾತರಾದ ರಸಸಿದ್ಧರು ಕಪಾಲಿಕನಾಥರೇ ಇರಬಹುದು. ಕ್ರಿ.ಶ.೨೦೦ರ ಅವಧಿಯಲ್ಲಿಯೇ ಇವರು ಆಳರಸರ ಆಶ್ರಯ ಪಡೆಯವಲ್ಲಿ ಸಫಲರಾಗಿದ್ದರು. ಕ್ರಿ.ಶ.೧೨ನೇ ಶತಮಾನದ ಸರಳ ಸಜ್ಜನಿಕೆಯ ವೀರಶೈವ ಚಳವಳಿಯ ಪ್ರಭಲ ಪ್ರತಿರೋಧವನ್ನು ಎದುರಿಸಲಾಗದೆ ಅದರಲ್ಲಿಯೇ ಈ ಪಂಥಗಳು ಲೀನವಾದವು. ಕ್ರಿ.ಶ.೧೨ನೇ ಶತಮಾನದ ವೇಳೆಗೆ ಈ ಪರಿಸರದಲ್ಲಿ ಪ್ರವರ್ಧಮಾನ ಕಂಡ ವೈಷ್ಣವ ಧರ್ಮ ವಿಜಯನಗರ ಮತ್ತು ಚಿತ್ರದುರ್ಗ ನಾಯಕ ಅರಸರಿಂದ ಪೋಷಿಸಲ್ಪಟ್ಟಿತು. ಚಿತ್ರದುರ್ಗ ನಾಯಕ ಅರಸರು ಮೂಲತಃ ಶ್ರೀವೈಷ್ಣವರಾಗಿದ್ದರೂ ಶೈವಧರ್ಮಕ್ಕೆ ಆದ್ಯತೆ ನೀಡಿದ್ದುದು ಗಮನಾರ್ಹ. ಕ್ರಿ.ಶ.೧೩ನೇ ಶತಮಾನದಿಂದ ಕ್ರಿ.ಶ.೧೬ನೇ ಶತಮಾನದವರೆಗೆ ದುರ್ಗದಲ್ಲಿ ಜೈನಧರ್ಮ ಊರ್ಜಿತಾವಸ್ತೆಯಲ್ಲಿದ್ದುದು ಸುಸ್ಪಷ್ಟ. ಈ ಪಂಥಗಳ ಮಧ್ಯೆ ಸಂಘರ್ಷದ ವಾತಾವರಣವಿದ್ದ ಕುರುಹುಗಳು ಚಿತ್ರದುರ್ಗದಲ್ಲಿ ದೊರೆಯುತ್ತವೆ.

ಟಿಪ್ಪಣಿಗಳು

೧. ರಾಜಶೇಖರಪ್ಪ ಬಿ., ೨೦೦೩, ಪ್ರಾಚೀನ ಚಿತ್ರದುರ್ಗ, (ಅಪ್ರಕಟಿತ ಪಿಎಚ್.ಡಿ ಪ್ರಬಂಧ), ಪು. ೧೫೦
೨. ಅದೇ,
೩. ತಾಳ್ತಜೆ ವಸಂತಕುಮಾರ, ೧೯೮೮, ಕರ್ನಾಟಕದಲ್ಲಿ ಬೌದ್ಧಧರ್ಮ, ಪು. ೭೬
೪. ಶ್ರೀನಿವಾಸ ಎಂ.ವಿ., ಲಕ್ಷ್ಮಣ್ ತೆಲಗಾವಿ, (ಸಂ), ೧೯೭೬, ಹು.ಶ್ರೀ.ಜೋ.ಐ.ಲೇ., ಪು. ೧೮
೫. ಅದೇ, ಪು. ೧೭
೬. ಅದೇ, ಪು. ೨೪
೭. ಅದೇ, ಪು. ೨೫
೮. ಅದೇ, ಪು. ೨೬
೯. ರಾಜಶೇಖರಪ್ಪ ಬಿ., ೨೦೦೩, ಪೂರ್ವೋಕ್ತ, ಪು. ೧೪೯
೧೦. ಚಿದಾನಂದಮೂರ್ತಿ ಎಂ., ೨೦೦೨, ಕ.ಶಾ.ಸಾ.ಅ., ಪು. ೧೩೮
೧೧. ಸುಂದರ ಅ., ೧೯೭೮, 'ಚಿತ್ರದುರ್ಗ ಪರಿಸರ: ಇತ್ತೀಚಿನ ಪುರಾತತ್ವ ಶೋಧನೆಗಳು', ಮಾ.ಭಾ., ಸಂ-೨:೧, ಪು. ೪೦
೧೨. ಅದೇ, ಪು. ೧೪೩
೧೩. ಲಕ್ಷ್ಮಣ್ ತೆಲಗಾವಿ, ೧೯೯೦, 'ಚಿತ್ರದುರ್ಗ ಬೆಟ್ಟದ ಪೆರುಮಾಳೆಪುರ: ಮರುಶೋಧನೆ', ಇ.ದ., ಸಂ-೫, ಪು. ೧೨೦
೧೪. ಎ.ಕ., ಸಂ-೧೧, ಚಿತ್ರದುರ್ಗ ೮೨
೧೫. ಅದೇ, ೩೪
೧೬. ಅದೇ, ೩೩
೧೭. ಅದೇ, ೩೨
೧೮. ಅದೇ, ೧೨
೧೯. ಅದೇ, ೧೩
೨೦. ಅದೇ, ಜಗಲೂರು ೧೦
೨೧. ಅದೇ, ೧೨
೨೨. ಅದೇ, ೯
೨೩. ಅದೇ, ೮
೨೪. ಚಿದಾನಂದಮೂರ್ತಿ ಎಂ., ಪೂರ್ವೋಕ್ತ, ಪು. ೧೭೪
೨೫. ಪರಮಶಿವಮೂರ್ತಿ ಡಿ.ವಿ., ೨೦೦೫, 'ಕಾಳಾಮುಖ ಪಂಥ', ಕನ್ನಡ ಅಧ್ಯಯನ, ಸಂ-೧೧, ಪು. ೧೫೧
೨೬. ರಾಜಶೇಖರಪ್ಪ ಬಿ., ೨೦೦೧ (ಎ), ದುರ್ಗಶೋಧನ, ಪು. ೨೩೬-೨೩೮
೨೭. ಎ.ಕ., ಸಂ-೧೧, ಚಿತ್ರದುರ್ಗ ೨೪
೨೮. ಚಿದಾನಂದಮೂರ್ತಿ ಎಂ., ಪೂರ್ವೋಕ್ತ, ಪು. ೧೭೦
೨೯. ರಾಜಶೇಖರಪ್ಪ ಬಿ., ೨೦೦೧ (ಬಿ), ಇತಿಹಾಸ ಕಥನ, ಪು. ೫೮
೩೦. ಅದೇ,
೩೧. ಅದೇ, ಪು. ೫೯
೩೨. ರಹಮತ್ ತರೀಕೆರೆ, ೨೦೦೬, ಕರ್ನಾಟಕದ ನಾಥಪಂಥ, ಪು. ೧೪೬
೩೩. ರಾಜಶೇಖರಪ್ಪ ಬಿ., ೨೦೦೧(ಬಿ), ಪೂರ್ವೋಕ್ತ, ಪು. ೭೫

೩೪. ರಾಜಶೇಖರಪ್ಪ ಬಿ., ೧೯೮೭, 'ಶಾಸನಗಳ ಪುನರ್ ಪರಿಶೀಲನೆ:ಒಂದು ತೀರ್ವಅಗತ್ಯ', ಹರತಿಸಿರಿ, ಪು. ೬೪೯–೬೫೦

೩೫. ಲಕ್ಷ್ಮಣ್ ತೆಲಗಾವಿ, ೧೯೭೫, 'ರೇವಣಸಿದ್ದರೂ, ಮರುಳಸಿದ್ಧರೂ ಹಾಗೂ ಚಿತ್ರದುರ್ಗ ಜೆಟ್ಟ', ತರಳುಬಾಳು, ಸಂ–೧:೧, ಪು. ೫೫

೩೬. ಶ್ರೀನಿವಾಸ ಎಂ.ವಿ., ಲಕ್ಷ್ಮಣ್ ತೆಲಗಾವಿ, (ಸಂ), ೧೯೭೬, ಪೂರ್ವೋಕ್ತ, ಪು. ೪೧

೩೭. ಶ್ರೀನಿವಾಸ ಎಂ.ವಿ., ಲಕ್ಷ್ಮಣ್ ತೆಲಗಾವಿ, (ಸಂ), ೧೯೯೫, ಹು.ಶ್ರೀ.ಜೋ.ಸಂ.ಲೇ., ಪು. ೨೧೪

೩೮. ಪುಟ್ಟಣ್ಣ ಎಂ.ಎಸ್., ೧೯೯೭, ಚಿತ್ರದುರ್ಗದ ಪಾಳೆಯಗಾರರು, ಪು. ೧೫–೧೬

೩೯. ರಾಜಶೇಖರಪ್ಪ., ೨೦೦೧(ಬಿ), ಪೂರ್ವೋಕ್ತ, ಪು. ೫೪

೪೦. ಅದೇ, ಪು. ೬೧

೪೧. ಎ.ಕ., ಪೂರ್ವೋಕ್ತ, ಚಿತ್ರದುರ್ಗ ೬

೪೨. ಅದೇ, ಜಗಲೂರು ೩೦

೪೩. ಲಕ್ಷ್ಮಣ್ ತೆಲಗಾವಿ, ೧೯೭೫, 'ಚಿತ್ರದುರ್ಗ ಮತ್ತು ಶ್ರೀ ಕೂಡಲಿ ಶೃಂಗೇರಿ ಸಂಸ್ಥಾನದ ಸಂಬಂಧ,' ಮಾ.ಕ., ಸಂ–೫:೨, ಪು. ೨೧–೩೪

೪೪. ಎ.ಕ., ಚಿತ್ರದುರ್ಗ ೩೨

೪೫. ಅದೇ, ೬

೪೬. ರಾಜಶೇಖರಪ್ಪ ಬಿ., ೨೦೦೩, ಪೂರ್ವೋಕ್ತ, ಪು. ೧೭೮

೪೭. ಅದೇ, ಪು. ೧೭೮

೪೮. ಅದೇ, ಪು. ೧೭೯

೪೯. ೩೯–೧೦–೧೯೮೭ ರ ಬ್ರಹ್ಮಗಿರಿ ದಿನಪತ್ರಿಕೆ

೫೦. ಕೃಷ್ಣ ಎಂ.ಎಚ್., ೧೯೫೩, ಕರ್ನಾಟಕದ ಪೂರ್ವಚರಿತ್ರೆ, ಪು. ೨೮

೫೧. ರಾಜಶೇಖರಪ್ಪ ಬಿ., ೨೦೦೩, ಪೂರ್ವೋಕ್ತ, ಪು. ೧೭೫

೫೨. ಚಿದಾನಂದಮೂರ್ತಿ ಎಂ., ಪೂರ್ವೋಕ್ತ, ಪು. ೭೩

೫೩. ಶಾರದಾ ಕೆ., ೨೦೦೬, ಕರ್ನಾಟಕದಲ್ಲಿ ಜೈನಧರ್ಮ, ಪು. ೧

೫೪. ಜೈನಧರ್ಮಕ್ಕೆ ಸಂಬಂಧಿಸಿದಂತೆ ಬಿ.ಎಲ್.ರೈಸ್‌ರವರು ೨ ಶಾಸನಗಳನ್ನು, ಎಂ.ಎಚ್.ಕೃಷ್ಣರವರು ೩ ಶಾಸನಗಳನ್ನು, ಬಿ. ರಾಜಶೇಖರಪ್ಪನವರು ೩ ಶಾಸನಗಳನ್ನು, ಲಕ್ಷ್ಮಣ್ ತೆಲಗಾವಿಯವರು ೧ ಅಪೂರ್ಣವಾದ ಶಾಸನವನ್ನು ಪತ್ತೆ ಹಚ್ಚಿರುವರು.

೫೫. ರಾಜಶೇಖರಪ್ಪ ಬಿ., ೨೦೦೩, ಪೂರ್ವೋಕ್ತ, ಪು. ೧೬೧

೫೬. ಅದೇ,

೫೭. ಅದೇ,

೫೮. ಅದೇ,

೫೯. ಎ.ಕ., ಪೂರ್ವೋಕ್ತ, ಚಿತ್ರದುರ್ಗ ೮೩

೬೦. ರಾಜಶೇಖರಪ್ಪ ಬಿ., ೨೦೦೧ (ಎ), ದುರ್ಗಶೋಧನ, ಪು. ೨೫

೬೧. ರಾಜಶೇಖರಪ್ಪ ಬಿ., ೨೦೦೩, ಪೂರ್ವೋಕ್ತ, ಪು. ೧೬೨

೬೨. ಎ.ಕ., ಪೂರ್ವೋಕ್ತ, ಚಿತ್ರದುರ್ಗ ೬

೬೩. ರಾಜಶೇಖರಪ್ಪ ಬಿ., ೨೦೦೩, ಪೂರ್ವೋಕ್ತ, ಪು. ೧೬೨

೬೪. ಅದೇ, ಪು. ೧೬೫

೬೫. ಅದೇ, ಪು. ೧೬೬

ಅಧ್ಯಾಯ - ೬

ಸಮಾರೋಪ

ಸಮಾರೋಪ

ಪ್ರಸ್ತುತ **'ಚಿತ್ರದುರ್ಗ ಪರಿಸರದ ದೇವಾಲಯಗಳು'** ಎಂಬ ಪ್ರೌಢಪ್ರಬಂಧವು ಚಿತ್ರದುರ್ಗ ಪರಿಸರದ ದೇವಾಲಯಗಳ ವಾಸ್ತುಶಿಲ್ಪ, ಮೂರ್ತಿಶಿಲ್ಪ ಮತ್ತು ಧಾರ್ಮಿಕ ಮತ ಪಂಥಗಳನ್ನು ಕುರಿತು ಅಧ್ಯಯನ. ಮಾನವ ತನ್ನ ಜೀವನದ ವಿವಿಧ ಆಯಾಮದಲ್ಲಿ ನಿಸರ್ಗದಲ್ಲಿನ ಅಗೋಚರ ಶಕ್ತಿಗೆ ದೈವೀಸ್ವರೂಪ ನೀಡಿ ಅದರ ರಕ್ಷಣೆಗೆ ನಿರ್ಮಿಸಿದ ಕಟ್ಟಡವೇ ದೇವಾಲಯ ವಾಸ್ತುಶಿಲ್ಪದ ಉಗಮಕ್ಕೆ ನಾಂದಿಯಾಯಿತು. ಪ್ರಾರಂಭದಲ್ಲಿ ಚಿಕ್ಕದಾದ ಗರ್ಭಗೃಹಗಳಿಗೆ ಮಾತ್ರ ಸೀಮಿತವಾಗಿದ್ದ ದೇವಾಲಯಗಳು ಆಳರಸರ, ಸಾಮಂತರು, ದಂಡನಾಯಕರು, ವ್ಯಾಪಾರಿಗಳ ದಾನದತ್ತಿ ಕಾರ್ಯದಿಂದ ಬೃಹದಾಕಾರವಾಗಿ ಬೆಳೆದವು. ಇದರ ಫಲವಾಗಿ 'ದೇವಾಲಯ ಸಂಸ್ಕೃತಿ'ಯು ಬಲವರ್ಧನೆಗೊಂಡಿತು. ದೇವಾಲಯಗಳು ಸಾಂಸ್ಕೃತಿಕ ಕೇಂದ್ರಗಳಾಗಿ ಸಮಾಜವನ್ನು ಒಗ್ಗೂಡಿಸುವ ಕ್ರಿಯಾತ್ಮಕ ಚಟುವಟಿಕೆಗಳನ್ನು ನಿರ್ದೇಶಿಸುವ ಸ್ಥಳವಾಗಿ ಸಮಾಜವನ್ನು ಮುನ್ನಡೆಸುವ ದಿಕ್ಕಿನಲ್ಲಿ ಬಹುಮುಖ್ಯವಾದ ಪಾತ್ರ ವಹಿಸಿದವು. ಇವು ಮತಪಂಥಗಳ ಕೇಂದ್ರಗಳಾಗುವುದರೊಡನೆ ಪ್ರಭುತ್ವ ನಿರ್ಧಾರಕ ಶಕ್ತಿಗಳಾಗಿದ್ದುದೂ ಉಂಟು. ಹಾಗಾಗಿಯೇ ದೇವಾಲಯಗಳು ಸಮಾಜದ ಬಹುಮುಖ್ಯ ಅಂಗಗಳಾಗಿ 'ದೇವಾಲಯಗಳಿಲ್ಲದೆ ಬದುಕೇ ಇಲ್ಲ' ಎನ್ನುವಷ್ಟರ ಮಟ್ಟಿಗೆ ಬೆಳೆದವು.

ಕರ್ನಾಟಕದ ಮಧ್ಯರಂಗದಲ್ಲಿರುವ ಚಿತ್ರದುರ್ಗವು ಅತ್ಯಂತ ಆಯಕಟ್ಟಿನ ಪ್ರದೇಶ. ಪ್ರಾಚೀನ ಕಾಲದಿಂದ ಮೌರ್ಯರು, ಶಾತವಾಹನರು, ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಹೊಯ್ಸಳರು, ನೊಳಂಬಪಲ್ಲವರು, ವಿಜಯನಗರದ ಅರಸರು ಮತ್ತು ಪಾಳೆಯಗಾರರ ಆಳ್ವಿಕೆಗೆ ಒಳಪಟ್ಟ ಮುಖ್ಯ ನಗರ. ಇವರ ಆಳ್ವಿಕೆಯ ಕುರುಹುಗಳಾಗಿ ಅನೇಕ ದೇವಾಲಯಗಳು ಚಿತ್ರದುರ್ಗ ಪರಿಸರದಲ್ಲಿ ನಿರ್ಮಾಣವಾಗಿವೆ.

ಚಿತ್ರದುರ್ಗ ಪರಿಸರದ ದೇವಾಲಯಗಳ ಕುರಿತ ಈ ಪ್ರೌಢಪ್ರಬಂಧದಲ್ಲಿ ಒಟ್ಟು ೫೪ ದೇವಾಲಯಗಳನ್ನು ಅಧ್ಯಯನ ನಡೆಸಲಾಗಿದೆ. ಇದರಲ್ಲಿ ೩೫ ಶೈವ ದೇವಾಲಯಗಳು, ೧೪ ವೈಷ್ಣವ ದೇವಾಲಯಗಳು, ೫ ಶಾಕ್ತ ದೇವಾಲಯಗಳು ಇವೆ. ಇದರಲ್ಲಿ ಶೈವ ದೇವಾಲಯಗಳು ಅಧಿಕವಾಗಿದ್ದು, ಸಾಂಸ್ಕೃತಿಕ ಮತ್ತು ಭಾವನಾತ್ಮಕವಾಗಿ ಈ ಪರಿಸರದಲ್ಲಿ ಶೈವರಾಧನೆ ಬೆಸೆದುಕೊಂಡಿರುವುದು ಇದರಿಂದ ಸ್ಪಷ್ಟವಾಗುತ್ತದೆ. ಇಲ್ಲಿನ ಪ್ರಾಚೀನ ದೇವಾಲಯಗಳೆಲ್ಲವೂ ಶೈವ ದೇವಾಲಯಗಳಾಗಿದ್ದು, ಅವು ಗುಹಾ ದೇವಾಲಯಗಳಾಗಿರುವುದು ಗಮನಾರ್ಹ. ಈ ಗುಹಾ ದೇವಾಲಯಗಳ ಪ್ರಾಚೀನತೆ ಗುರುತಿಸುವುದು ಕಷ್ಟಸಾಧ್ಯ. ಇಲ್ಲಿನ ಗುಹಾಲಯಗಳಲ್ಲಿ ಪ್ರತಿಷ್ಠಾಪನೆಯಾಗಿರುವ ಹೆಚ್ಚಿನ ಲಿಂಗಗಳು ರಾಷ್ಟ್ರಕೂಟ ಮತ್ತು ಕಲ್ಯಾಣದ ಚಾಲುಕ್ಯರ ಅವಧಿಯವು. ಆದರೆ ತರುವಾಯದ ಅವಧಿಯಲ್ಲಿ ಶಿಷ್ಟ ಸಂಸ್ಕೃತಿಯ ಪ್ರತೀಕವಾಗಿ ಈ ಗುಹಾಲಯಗಳಿಗೆ ವಿವಿಧ ಕಾಲ ಘಟ್ಟಗಳಲ್ಲಿ ಹಲವು ಭಾಗಗಳು ಸೇರ್ಪಡೆಗೊಳ್ಳುವ ಮೂಲಕ ವಿಸ್ತರಣೆಗೊಂಡವು. ಹಿಡಿಂಬೇಶ್ವರ, ಸಂಪಿಗೆ ಸಿದ್ದೇಶ್ವರ, ಮತ್ತು ಫಲ್ಗುಣೇಶ್ವರ ದೇವಾಲಯಗಳು ಇದಕ್ಕೆ ಅತ್ಯುತ್ತಮ ಉದಾಹರಣೆಗಳು.

ಚಿತ್ರದುರ್ಗ ಪರಿಸರದಲ್ಲಿ ಕಲ್ಯಾಣದ ಚಾಲುಕ್ಯ, ಹೊಯ್ಸಳ, ನೊಳಂಬಪಲ್ಲವ, ವಿಜಯನಗರ ಮತ್ತು ವಿಜಯನಗರೋತ್ತರ ಶೈಲಿಯ ದೇವಾಲಯಗಳು ನಿರ್ಮಾಣವಾಗಿದೆ. ವಿಜಯನಗರ ಸಾಮ್ರಾಜ್ಯದ ತರುವಾಯ ಚಿತ್ರದುರ್ಗದ ಅಧಿಕಾರ ಪರಿಗ್ರಹಿಸಿದ ನಾಯಕ ಅರಸರು ವಾಸ್ತುಶೈಲಿಯಲ್ಲಿ ವಿಜಯನಗರದ ಶೈಲಿಯನ್ನೇ ಅನುಸರಿಸಿದರೂ ಅಲ್ಪ ಬದಲಾವಣೆಗಳನ್ನು ಮಾಡಿಕೊಂಡದ್ದು ಸ್ಪಷ್ಟ. ಚಿತ್ರದುರ್ಗ ಪರಿಸರದಲ್ಲಿ ಇದೇ ಶೈಲಿಯಲ್ಲಿ ಅನೇಕ ದೇವಾಲಯಗಳನ್ನು ನಿರ್ಮಿಸಿದ್ದುದು ನಿರ್ವಿವಾದ. ಸ್ಥಳೀಯವಾಗಿ ಲಭ್ಯವಿರುವ ಕಣಶಿಲೆಯನ್ನೇ ದೇಗುಲ ನಿರ್ಮಾಣ ಕಾರ್ಯ ಮತ್ತು ಜೀರ್ಣೋದ್ಧಾರಕ್ಕೆ ಬಳಸಿದರು. ಪಾಳೆಯಗಾರರ ಅವಧಿಯ ವಿಶಿಷ್ಟ ಸ್ತಂಭವೊಂದು ಉಚ್ಚಂಗಿ ಎಲ್ಲಮ್ಮನ ದೇವಾಲಯದಲ್ಲಿ ಕಾಣಬಹುದು. ಊರ್ಧ್ವಮುಖ ಪದ್ಮ ಪೀಠದ ಮೇಲೆ ಹದಿನಾರು ಮುಖದ ಕೆತ್ತನೆಗಳಿರುವ ಈ ಕಂಬದ

ಮಧ್ಯೆ ಅಧೋಮುಖ ಮತ್ತು ಊರ್ಧ್ವಮುಖದ ಕೆತ್ತನೆಗಳಿದ್ದು, ಇವುಗಳ ಮಧ್ಯೆ ಸುತ್ತುವರಿದಂತೆ ಕವಣೆ ಕಲ್ಲಿನೋಪಾದಿಯ ದುಂಡನೆಯ ಕೆತ್ತನೆಗಳಿವೆ. ಕಂಬದ ಮೇಲ್ಬದಿಯಲ್ಲಿ ಅಧೋಮುಖ ಪದ್ಮ, ಚೌಕಾಕಾರ ಮತ್ತು ಅದರ ಮೇಲೆ ಪುಷ್ಪಬೋದಿಗೆಯಿದೆ. ಇದು ಚಿತ್ರದುರ್ಗ ನಾಯಕ ಅರಸರ ಅವಧಿಯ ವಾಸ್ತುಶೈಲಿಯ ವಿಶಿಷ್ಟ ಲಕ್ಷಣ. ಇದರೊಡನೆ ಪ್ರಾಣಿಪಕ್ಷಿಗಳು ಚಿತ್ರದುರ್ಗ ನಾಯಕ ಅರಸರ ವಾಸ್ತುಶೈಲಿಯಲ್ಲಿ ಕಂಡುಬಂದರೂ ಗಿಳಿಗಳಿಗೆ ವಿಶೇಷ ಆದ್ಯತೆ ನೀಡಿರುವುದು ಗಮನಾರ್ಹ. ಇದನ್ನು ಚಿತ್ರದುರ್ಗದ ಕಾಮನ ಬಾಗಿಲ ಸುತ್ತಿನ ಕೋಟೆ ಗೋಡೆಯ ಕಾಮನಶಿಲ್ಪದಲ್ಲಿ ಭುಜದ ಮೇಲೂ ಗಿಳಿಗಳನ್ನು ಕಡೆದಿರುವರು. ಇದರೊಡನೆ ಗಿಳಿಯನ್ನು ಪುಷ್ಪ ಬೋದಿಗೆಯ ಎರಡೂ ಬದಿಗಳಲ್ಲಿ ಅಳವಡಿಸಿರುವುದು ಪಾಳೆಯಗಾರರ ವಾಸ್ತುಶೈಲಿಯ ವಿಶೇಷತೆ. ಇದನ್ನು ಹಜಾರಿ ಮುಖ್ಯಪ್ರಾಣ ದೇವರ ದೇವಾಲಯದಲ್ಲಿ ಮಾತ್ರ ಕಾಣಬಹುದು. ಏಕನಾಥೇಶ್ವರಿ ದೇವಾಲಯದ ದೀಪಸ್ತಭದ ಮೇಲಿನ ಕನಕಮ್ಮ ನಾಗತಿಯ ಶಿಲ್ಪದ ಭುಜದ ಮೇಲೂ ಗಿಳಿಗಳನ್ನು ಕೆತ್ತಿರುವರು. ಇದು ಗಿಳಿ ಇವರ ವಾಸ್ತುಶೈಲಿಯಲ್ಲಿ ಮಹತ್ವದ ಸ್ಥಾನ ಪಡೆದಿದ್ದನ್ನು ಸಾರುತ್ತದೆ.

ಮುರ್ತಿಶಿಲ್ಪಗಳೂ ದೇವಾಲಯದ ಅವಿಭಾಜ್ಯ ಅಂಗಗಳಾಗಿದ್ದು, ಜನರ ನಂಬಿಕೆಯ ಪ್ರತೀಕಗಳಾಗಿದ್ದವು. ಈ ಶಿಲ್ಪಗಳಲ್ಲಿ ಚಿತ್ರದುರ್ಗ ಪರಿಸರದಲ್ಲಿ ಅನೇಕ ಬಗೆಯ ಮೂರ್ತಿಶಿಲ್ಪಗಳು ದೊರೆತಿದ್ದು, ಅದರಲ್ಲಿ ಉಬ್ಬುಶಿಲ್ಪಗಳೇ ಅಧಿಕವಾಗಿವೆ. ಶೌರ್ಯ ಮತ್ತು ಪರಾಕ್ರಮಕ್ಕೆ ಪ್ರಸಿದ್ಧವಾದ ವೀರಭದ್ರನ ಆರಾಧನೆ ಈ ಭಾಗದಲ್ಲಿ ಪ್ರಬಲವಾಗಿತ್ತೆನ್ನಬಹುದು. ಬೇಡರ ರಾಜಧಾನಿಯಾದ ಚಿತ್ರದುರ್ಗದ ಮತ್ತು ಅದರ ಆಸುಪಾಸಿನ ಗ್ರಾಮಗಳಲ್ಲಿ ಶೌರ್ಯಕ್ಕೆ ಹೆಸರಾದ ಗುಂಡಯ್ಯ-ಬ್ರಹ್ಮಯ್ಯರ ವಿಗ್ರಹಗಳು ಹೆಚ್ಚಾಗಿ ದೊರೆತಿರುವುದು ಗಮನಾರ್ಹ ಸಂಗತಿ. ಇವುಗಳಲ್ಲಿ ಅನೇಕ ಶೂಲಬ್ರಹ್ಮ ಶಿಲ್ಪಗಳು ವೀರಭದ್ರ ದೇವರ ಗುಡಿಯಲ್ಲಿ ಲಭ್ಯವಾಗಿವೆ. ಇಲ್ಲಿನ ಇತರ ಅನೇಕ ಬಗೆಯ ಮೂರ್ತಿ ಶಿಲ್ಪಗಳು ಮತ ಪಂಥಗಳ ಆಚರಣೆಯತ್ತ ಬೆಳಕು ಚೆಲ್ಲುತ್ತವೆ.

ಚಿತ್ರದುರ್ಗ ದೇವಾಲಯ ಸಂಸ್ಕೃತಿ ಬೆಳೆದಂತೆ ಅನೇಕ ಮತಪಂಥಗಳೂ ಇದರೊಡನೆ ಹಾಸುಹೊಕ್ಕಾಗಿ ಬೆಳೆದವು. ಈ ಮತಪಂಥಗಳು ಪ್ರಭುತ್ವದ ಅಧಿಕಾರ ನಿರ್ಧರಿಸುವ ಕೇಂದ್ರಬಿಂದುಗಳಾಗಿದ್ದವು. ಚಿತ್ರದುರ್ಗದಲ್ಲಿ ಪ್ರಾಚೀನ ಅವಧಿಯಲ್ಲಿ ಬೌದ್ಧಧರ್ಮ ಅಸ್ತಿತ್ವದಲ್ಲಿತ್ತು. ಆದರೆ ಬಹುಕಾಲ ಚಿತ್ರದುರ್ಗ ಪರಿಸರದಲ್ಲಿ ನೆಲೆಯೂರಲಿಲ್ಲ. ಇದರ ಪತನದ ತರುವಾಯ ಚಿತ್ರದುರ್ಗ ಪರಿಸರದಲ್ಲಿ ಶೈವಧರ್ಮ ನೆಲೆಯೂರಿತು. ಇದು ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು ಮತ್ತು ಚಿತ್ರದುರ್ಗದ ಪಾಳೆಯಗಾರರಿಂದ ಪೋಷಿಸಲ್ಪಟ್ಟಿತು. ಮಧ್ಯಕಾಲದ ಅವಧಿಯವೇಳೆಗೆ ಚಿತ್ರದುರ್ಗವು ಶೈವಧರ್ಮದ ಪ್ರಮುಖ ಕೇಂದ್ರವಾಗಿತ್ತು. ಶೈವ ಧರ್ಮದ ಪಂಥಗಳಾದ ಕಾಳಾಮುಖ, ಕಾಪಾಲಿಕನಾಥ ಮತ್ತು ವೀರಶೈವ ಪಂಥಗಳು ಅತಿಹೆಚ್ಚು ಪ್ರಬಲವಾಗಿದ್ದು, ಇವರ ಪ್ರಭಾವ ಗಣನೀಯವಾಗಿತ್ತು. ಶಿವಶ್ರೀ ಕೈಲಾಸ ಎಂದು ಪ್ರಸಿದ್ಧವಾಗಿದ್ದ ಧವಳಪ್ಪನಗುಡ್ಡವು ಕರ್ನಾಟಕದ ಕಟ್ಟಾ ಶೈವಾಚರಣೆಯ ಕೇಂದ್ರಗಳಲ್ಲಿ ಒಂದೆಂಬುದು ಗಮನಾರ್ಹ ಸಂಗತಿ. ಶಿವಭಕ್ತರಲ್ಲದವರ ಪ್ರವೇಶವನ್ನು ನಿರ್ಬಧಿಸಲಾಗಿದ್ದ ಶಾಸನವನ್ನು ಧವಳಪ್ಪನಗುಡ್ಡವನ್ನು ಪ್ರವೇಶಿಸುವ ಮಾರ್ಗದ ಪ್ರಾರಂಭದೆಡೆಯಲ್ಲಿ ಹಾಕಿರುವುದು ಈ ಪರಿಸರದ ಧಾರ್ಮಿಕತೆಗೆ ಹಿಡಿದ ಕೈಗನ್ನಡಿ. ಮೂಲತಃ ಶಿವಲಿಂಗದಂತೆ ಗೋಚರಿಸುವ ಈ ಬೆಟ್ಟವನ್ನು ಏರುವುದೂ ಸಾಹಸವೇ ಸರಿ. ಇದರ ಮೇಲ್ಬದಿಯಲ್ಲಿಯೂ ಸುಮಾರ ೨೫ ಲಿಂಗಗಳನ್ನು ಹುಟ್ಟು ಬಂಡೆಯಲ್ಲಿಯೇ ಕೆತ್ತಿದ್ದು, ಇವೆಲ್ಲವೂ ಕಲ್ಯಾಣಿ ಚಾಲುಕ್ಯ ಶೈಲಿಯಲ್ಲಿವೆ. ಇದೇ ಅವಧಿಯಲ್ಲಿ ಚಿತ್ರದುರ್ಗ ಪರಿಸರದಲ್ಲಿ ಲಿಂಗ ಪ್ರತಿಷ್ಠಾಪನೆಯ ಮಹಾತ್ಮೆಯನ್ನು ಕೇಳಿ ಪ್ರಾಭಾವಿತರಾದ ಪ್ರಾಂತ್ಯಾಧಿಕಾರಿಗಳು ಲಿಂಗ ಪ್ರತಿಷ್ಠಾಪನೆ ಮಾಡಿದ್ದನ್ನು ಶಾಸನಗಳು ಪ್ರಸ್ತಾಪಿಸುತ್ತವೆ. ಇದಕ್ಕೆ ಚೋಳೇಶ್ವರ ಮತ್ತು ಮಹೇಶ್ವರ ಲಿಂಗಗಳು ಉತ್ತಮ ಉದಾಹರಣೆಗಳಾಗಿ ಉಲ್ಲೇಖನೀಯ. ಈ ಪರಿಸರದ ಕ್ರಿ.ಶ.೧೦ ರಿಂದ ಕ್ರಿ.ಶ.೧೫ನೇ ಶತಮಾನದವರಿಗಿನ ಶಾಸನಗಳಲ್ಲಿ ಕಾಳಾಮುಖ ಯತಿಗಳ ಹೆಸರುಗಳು ಪದೇ ಪದೇ ಗೋಚರವಾಗುತ್ತವೆ. ಇದು ಈ ಪರಿಸರದಲ್ಲಿ ಕಾಳಾಮುಖರು ಪ್ರಬಲರಾಗಿದ್ದುದನ್ನು ಖಚಿತಪಡಿಸುತ್ತದೆ.

ಇದರೊಡನೆ ವಾಮಾಚಾರ ಮತ್ತು ಭೈರವೀ ಸಾಧನೆಗೆ ಹೆಸರಾದ ಕಾಪಾಲಿಕನಾಥರ ಪ್ರಭಾವವು ಇಲ್ಲಿ ದಟ್ಟವಾಗಿತ್ತು. ೧೨ನೇ ಶತಮಾನದ ನಂತರ ಇವುಗಳು ಸರಳ ಸಜ್ಜನಿಕೆಯ ವೀರಶೈವ ಪಂಥದಲ್ಲಿ ಸೇರ್ಪಡೆಗೊಂಡವು. ಒಟ್ಟಾರೆ ಚಿತ್ರದುರ್ಗವು ಕರ್ನಾಟಕದ ಪ್ರಮುಖ ಶೈವಾರಾಧನೆಯ ಕೇಂದ್ರವಾಗಿತ್ತೆಂಬುದನ್ನು ಇದು ಸೂಚಿಸುವುದು. ಮಧ್ಯಕಾಲದ ಅವಧಿಯ ವೇಳೆಗೆ ಚಿತ್ರದುರ್ಗದಲ್ಲಿ ಅಭ್ಯುದಯ ಕಂಡ ವೈಷ್ಣವಪಂಥಕ್ಕೆ ಚಿತ್ರದುರ್ಗ ನಾಯಕ ಅರಸರು ಸೇರಿದ್ದು, ಅಹೋಬಲ ನರಸಿಂಹ ಇವರ ಆರಾಧ್ಯ ದೈವವಾಗಿತ್ತು. ಚಿತ್ರದುರ್ಗದಲ್ಲಿನ ಅನೇಕ ಮಹಾದ್ವಾರಗಳನ್ನು, ರಂಗಯ್ಯನ ಬಾಗಿಲು, ನರಸಿಂಹಬಾಗಿಲು ಮತ್ತು ಸಿದ್ದಯ್ಯನಬಾಗಿಲು ಎಂದು ದೇವರ ಹೆಸರಿನಲ್ಲಿ ಕರೆದರು. ಇದರೊಡನೆ ಚಿಕ್ಕಣ್ಣನಾಯಕನ ಅವಧಿಯಲ್ಲಿ ನಾಯಕನ ಪರಿವಾರವೆಲ್ಲವೂ ವೈಷ್ಣವ ಧರ್ಮ ತೊರೆದು ವೀರಶೈವ ಧರ್ಮ ಸ್ವೀಕರಿಸಿದರು. ಆದರೆ ಇದು ಸರಿಬರದೆ ಕೆಲವೇ ದಿನಗಳಲ್ಲಿ ಪುನಃ ವೈಷ್ಣವ ಧರ್ಮಕ್ಕೆ ಸೇರ್ಪಡೆಗೊಂಡರು. ಚಿತ್ರದುರ್ಗ ಪರಿಸರದಲ್ಲಿ ಮಧ್ಯಕಾಲದ ಅವಧಿಯ ವೇಳೆಗೆ ಜೈನಧರ್ಮವೂ ತನ್ನ ಪ್ರಾಬಲ್ಯತೆ ಮೆರೆಯಿತು. ಚಿತ್ರದುರ್ಗ ಪರಿಸರದಲ್ಲಿ ಈವರೆಗೆ ಭಗ್ನಗೊಂಡಿರುವ ಬಹುತೇಕ ದೇವಾಲಯಗಳಲ್ಲಿ ಶೈವ ದೇವಾಲಯಗಳು, ಶಿಲ್ಪಗಳಲ್ಲಿ ಭೈರವನ ಶಿಲ್ಪಗಳದ್ದೇ ಸಿಂಹಪಾಲು. ಆದರೆ ವೈಷ್ಣವ ಶಿಲ್ಪಗಳಿಗೆ ಈಬಗೆಯ ಯಾವುದೇ ಹಾನಿಗಳಾದ ಕುರುಹುಗಳಿಲ್ಲ. ಇದನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಈ ಕಾಳಾಮುಖ, ಕಾಪಾಲಿಕನಾಥ ಪಂಥಗಳು ಇತರೆ ಪಂಥಗಳೊಡನೆ ಸಂಘರ್ಷಕ್ಕೀಡಾಗಿ ಸ್ಥಾನ ಪಲ್ಲಟಗೊಂಡಿರುವುದು ಸ್ಪಷ್ಟವಾಗುತ್ತದೆ.

ಈ ಮೇಲ್ಕಾಣಿಸಿದ ಸಂಗತಿಗಳೊಡನೆ ಇಲ್ಲಿ ಹೇಳಬೇಕಾದ ಮತ್ತೊಂದು ಮಾತೂ ಇದೆ. ಸಾಂಸ್ಕೃತಿಕವಾಗಿ ಮಹತ್ವದ ಸ್ಥಾನಗಳಿಸಿರುವ ಚಿತ್ರದುರ್ಗ ಮತ್ತು ಅದರ ಆಸುಪಾಸಿನ ಪರಿಸರವನ್ನು ಭಾರತ ಸರ್ಕಾರ 'ರಾಷ್ಟ್ರೀಯ ಪರಂಪರೆಯ ಸ್ಮಾರಕ' (world Heritage Monuments) ಎಂದು ಘೋಷಿಸಿದೆ. ಪ್ರಸ್ತುತ ಚಿತ್ರದುರ್ಗ ಕೋಟೆಯ ಕೆಲವು ಭಾಗಗಳನ್ನು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ, ಉಳಿದ ಭಾಗಗಳನ್ನು ರಾಜ್ಯ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯಕ್ಕೆ ಸೇರ್ಪಡೆಯಾಗಿವೆ. ಹೀಗಿದ್ದರೂ ಸ್ಥಳೀಯ ನಿಧಿಗಳ್ಳರು ದೇವರ ವಿಗ್ರಹ ಮತ್ತು ದೇವಾಲಯಗಳನ್ನು ನಾಶಪಡಿಸಿರುವುದು ದುರ್ದೈವದ ಸಂಗತಿ. ಇವುಗಳ ಸಂರಕ್ಷಣೆಯ ಕುರಿತಂತೆ ವಿದ್ಯಾರ್ಥಿಗಳು ಮತ್ತು ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯ ತ್ವರಿತವಾಗಿ ನಡೆಯಬೇಕು. ಬಯಲು ಸಂಗ್ರಹಾಲಯದಂತೆ ಗೋಚರವಾಗುವ ಚಿತ್ರದುರ್ಗದ ಸ್ಮಾರಕಗಳ ಸಂರಕ್ಷಣೆ ಮತ್ತು ಜೀರ್ಣೋದ್ಧಾರಗೊಳಿಸಬೇಕು. ಜೀರ್ಣೋದ್ಧಾರ ಮಾಡುವಾಗ ದೇವಾಲಯಗಳ ಮೂಲಸ್ವರೂಪಕ್ಕೆ ಧಕ್ಕೆಯಾಗದಂತೆ ಎಚ್ಚರ ವಹಿಸುವುದು ಅಗತ್ಯ. ಇದರೊಡನೆ ದೇವಾಲಯಗಳ ಒತ್ತುವರಿಯನ್ನು ತಡೆದು, ಅದರ ಸುತ್ತಲೂ ಸ್ವಚ್ಛಗೊಳಿಸಿ ಸೂಕ್ತ ರಕ್ಷಣೆ ಒದಗಿಸಬೇಕು. ಕೋಟೆ, ದೇಗುಲ, ಮಠ ಮೊದಲಾದ ಸ್ಮಾರಕಗಳಿಂದ ಕೂಡಿದ ಚಿತ್ರದುರ್ಗ ಪರಿಸರವು ಒಂದು ಬಗೆಯಲ್ಲಿ ವಿಶ್ವಸ್ಮಾರಕಗಳ ಪಟ್ಟಿಗೆ ಸೇರಿದ ಹಂಪಿಯಂತೆಯೇ ಅತ್ಯಂತ ಸುರಕ್ಷಿತ ಪರಂಪರೆಯನ್ನು ಒಳಗೊಂಡಿದ್ದು, ಬಯಲು ಸಂಗ್ರಹಾಲಯದಂತೆಯೇ ಗೋಚರಿಸುತ್ತದೆ. ಆದುದರಿಂದ ಈ ಭಾಗದ ಜನರ ಬಹುದಿನದ ಬೇಡಿಕೆಯೂ ಆಗಿರುವಂತೆ ಈ ಚಿತ್ರದುರ್ಗ ಬೆಟ್ಟ ಪರಿಸರವನ್ನು ವಿಶ್ವ ಸ್ಮಾರಕಗಳ ಪರಂಪರೆಗೆ ಸೇರಿಸುವ ಅಗತ್ಯತೆ, ಸ್ಮಾರಕಗಳು ಹಾಗೂ ಪರಂಪರೆಯ ದೃಷ್ಟಿಯಿಂದ ಅನಿವಾರ್ಯವಾಗಿದೆ. ಇದು ತಕ್ಷಣ ಜಾರಿಯಾಗಬೇಕಾಗಿದೆ.

ಅನುಬಂಧಗಳು

- ಪಾರಿಭಾಷಿಕ ಪದಕೋಶ
- ಗ್ರಂಥಸೂಚಿ
- ತಲನಕ್ಷೆಗಳು
- ಛಾಯಾಚಿತ್ರಗಳು

ಪಾರಿಭಾಷಿಕ ಪದಕೋಶ

ಅಂತರಾಳ	– ಗರ್ಭಗೃಹದ ಮುಂದಿನ ಅರ್ಧಮಂಟಪ. ಇದನ್ನು 'ಸುಕನಾಸಿ' ಯೆಂದೂ ಸಹ ಕರೆಯಲಾಗಿದೆ
ಅಧಿಷ್ಠಾನ	– ತಳಹದಿ, ನೆಲಗಟ್ಟು, ದೇವಾಲಯದ ಕೆಳಹಂತ
ಅಮ್ಮನವರ ಗುಡಿ	– ಪುರುಷ ದೇಗುಲದ ಎಡಬದಿಯ ಸಣ್ಣ ಸ್ತ್ರೀ ದೇಗುಲ
ಆಮಲಕ	– ನಾಗರ ಶೈಲಿಯ ಶಿಖರದ ಮೇಲ್ಭಾಗದ ನೆಲ್ಲಿಕಾಯಿ ಆಕಾರದ ರಚನೆ
ಉತ್ತರೀಯ	– ಮೇಲು ಹೊದಿಕೆ, ಪಂಚೆ
ಉದ್ಭವಲಿಂಗ	– ಒಡಮೂಡಿದ ಲಿಂಗ
ಉಪಾನ	– ದೇಗುಲದ ತಳಭಾಗ
ಏಕಕೂಟ	– ಒಂದು ಗರ್ಭಗೃಹವಿರುವ ದೇಗುಲ
ಕಟಾಂಜನ	– ಕಟಕಟೆ, ಕುಳಿತುಕೊಳ್ಳಲು ಅನುವಾಗುವ ಕಟ್ಟೆ
ಕಪೋತ	– ದೇಗುಲದ ಮೇಲ್ಭಾವಣಿಯ ನೀರು ಗೋಡೆಗೆ ತಾಗದಿರಲು ಮಾಡಿದ ಮುಂಚಾಚಿದ ರಚನೆ
ಕರಂಡ ಮುಕುಟ	– ಭರಣಿಯಾಕಾರದ ಕಿರೀಟ
ಕಲ್ಯಾಣ ಮಂಟಪ	– ಶುಭಕಾರ್ಯಗಳಿಗಾಗಿ ಕಟ್ಟಲಾದ ಮಂಟಪ
ಕಳಸ	– ದೇವಾಲಯ ಹಾಗೂ ಗೋಪುರಕ್ಕೆ ಹಾಕುವ ಅಥವಾ ಹಿತ್ತಾಳೆಯ ಅಲಂಕಾರದ ಶಿಖರ
ಕೀರ್ತಿಮುಖ	– ಶಿಖರದಲ್ಲಿ ಮೂಡಿಸಲಾದ ಸಿಂಹದಮುಖದ ಅಲಂಕರಣೆ
ಕುಂಡಲ	– ಕಿವಿಯ ಆಭರಣ, ಕಿವಿಯೋಲೆ
ಕುಂಭ	– ಗಡಿಗೆ, ಕುಂಭದ ಆಕಾರದ ಕಲಶ
ಕೇಯೂರ	– ತೋಳಬಂದಿ
ಕೈಪಿಡಿಗೋಡೆ	– ಮೊಗಸಾಲೆ ಅಥವಾ ಮಾಳಿಗೆಯ ಸುತ್ತಲೂ ಕಟ್ಟಿರುವ ಅಲಂಕೃತ ತುಂಡುಗೋಡೆ
ಕೋಷ್ಟಕ	– ಶಿಲ್ಪಗಳನ್ನಿಡಲು ಗೋಡೆಯಲ್ಲಿ ರಚಿಸಿದ ಭಾಗ
ಗರ್ಭಗೃಹ	– ಮೂಲವಿಗ್ರಹವನ್ನು ಪ್ರತಿಷ್ಠೆ ಮಾಡಿರುವ ಭಾಗ
ಗ್ರೀವ	– ಶಿರೋಭಾಗ, ಶಿಖರದ ಕತ್ತಿನ ಭಾಗ
ಗೂಡು	– ಶಿಲ್ಪಗಳನ್ನಿಡಲು ಗೋಡೆಯಲ್ಲಿ ರಚಿಸಿದ ಭಾಗ
ಗೋಪುರ	– ಪ್ರವೇಶ ದ್ವಾರದ ಮೇಲೆ ಕಟ್ಟಲಾದ ಅಂತಸ್ತುಗಳುಳ್ಳ ರಚನೆ, ಶಿಖರ
ಚತುಷ್ಕೂಟ	– ನಾಲ್ಕು ಗರ್ಭಗೃಹಗಳನ್ನು ಹೊಂದಿದ ದೇವಾಲಯ
ಚಾಚುಪೀಠ	– ಕಂಬದ ಮೇಲ್ಭಾಗದ ಮುಂಚಾಚಿದ ರಚನೆ
ಜಗತಿ	– ವೇದಿಕೆ, ಕಟ್ಟೆ, ತಳಪಾಯ
ಜಗಲಿ	– ವೇದಿಕೆ, ಕಟ್ಟೆ,

ಜಟಾಮುಕುಟ	– ಜಟೆಗಳ ಕಟ್ಟಿನಂತೆ ಕಾಣುವ ಕಿರೀಟ, ಜಡೆಮುಡಿ
ತ್ರಿಕೂಟ	– ಮೂರು ಗರ್ಭಗೃಹ ಅಥವಾ ಶಿಖರಗಳುಳ್ಳ ದೇಗುಲ
ದ್ರಾವಿಡಶೈಲಿ	– ದಕ್ಷಿಣ ಭಾರತೀಯ ದೇವಾಲಯಗಳ ವಾಸ್ತುಶಿಲ್ಪ ಮಾದರಿ
ದ್ವಾರಪಾಲಕ	– ದೇವಾಲಯದ ಮುಖ್ಯದ್ವಾರದ ಪಾರ್ಶ್ವಗಳಲ್ಲಿ ಇರುವ ವಿಗ್ರಹ
ದ್ವಾರಬಂಧ	– ಬಾಗಿಲ ಚೌಕಟ್ಟು, ಬಾಗಿಲಿನ ನಿಲವು
ದ್ವಿಕೂಟ	– ಎರಡು ಗರ್ಭಗೃಹಗಳಿರುವ ದೇವಾಲಯ
ದೀಪಸ್ತಂಭ	– ವಿಶೇಷ ಸಂದರ್ಭಗಳಲ್ಲಿ ದೀಪ ಹಚ್ಚಲು ನಿಲ್ಲಿಸಿದ ಕಲ್ಲಿನ ಕಂಬ
ನವರಂಗ	– ದೇವಾಲಯದ ಗರ್ಭಗುಡಿಯ ಎದುರಿನ ಸುಕನಾಸಿಯ ಮುಂಭಾಗದಲ್ಲಿ ನೃತ್ಯಗೀತಾದಿ ರಂಗಭೋಗಕ್ಕಾಗಿ ಕಟ್ಟಿದ ಒಂಬತ್ತು ಅಂಕಣದ ಮಂಟಪ
ನಾಗರಶೈಲಿ	– ಉತ್ತರ ಭಾರತದ ದೇವಾಲಯಗಳ ವಾಸ್ತುಶಿಲ್ಪ ಮಾದರಿ
ಪಂಚಕೂಟ	– ಐದು ಗರ್ಭಗೃಹಗಳಿರುವ ದೇವಾಲಯ
ಪ್ರದಕ್ಷಿಣಾ ಪಥ	– ಭಕ್ತರು ಪ್ರದಕ್ಷಿಣೆ ಹಾಕಲೆಂದು ಗರ್ಭಗೃಹದ ಸುತ್ತ ಬಿಟ್ಟಿರುವ ಸ್ಥಳ
ಪ್ರಭಾವಳಿ	– ವಿಗ್ರಹಗಳ ಹಿಂಬದಿಯಲ್ಲಿ ಅಲಂಕರಣೆ ಹೊಂದಿದ ಕಮಾನಿನಾಕರದ ರಚನೆ
ಉತ್ಸವ ಮಂಟಪ	– ರಥೋತ್ಸವ, ಉತ್ಸವಗಳು ದೇವಾಲಯದಿಂದ ಹೊರಟು ತಲುಪಬೇಕಾದ ನಿರ್ದಿಷ್ಟ ಸ್ಥಳ
ಪ್ರಾಕಾರ ಗೋಡೆ	– ದೇವಾಲಯದ ಸುತ್ತ ಕಟ್ಟಲಾದ ರಕ್ಷಣಾತ್ಮಕ ಗೋಡೆ
ಬಲಿಪೀಠ	– ಬಲಿಕೊಡುವ ಸ್ಥಳ
ಬೋದಿಗೆ	– ಕಂಬದ ಮೇಲೆ ತೊಲೆಯನ್ನು ಕೂಡಿಸಲು ಸಿದ್ಧಪಡಿಸಿದ ಭಾಗ
ಭಜನಾ ಮಂಟಪ	– ಭಜನೆ ಇತ್ಯಾದಿ ಕಾರ್ಯಕ್ರಮಗಳಿಗೆಂದು ಕಟ್ಟಿದ ಮಂಟಪ
ಭುವನೇಶ್ವರಿ	– ಸೂಕ್ಷ್ಮ ಕೆತ್ತನೆಯ ಕೆಲಸದಿಂದ ಕೂಡದ ದೇಗುಲದ ಮೇಲ್ಛಾವಣಿಯ ಒಳಮೈ ಭಾಗ
ಮಕರ ತೋರಣ	– ಬಾಗಿಲುವಾಡದಲ್ಲಿ ಮೂಡಿಸಲಾದ ಮೀನು, ಮೊಸಳೆ ಮುಂತಾದ ಆಕೃತಿಗಳುಳ್ಳ ಒಂದು ಬಗೆಯ ಅಲಂಕರಣೆ
ಮಹಾದ್ವಾರ	– ಹೆಬ್ಬಾಗಿಲು, ಮುಖ್ಯ ಪ್ರವೇಶದ್ವಾರ
ಮಹಾಮಂಟಪ	– ನವರಂಗ ಅಥವಾ ಸಭಾಮಂಟಪದ ಮುಂಬದಿಯ ವಿಶಾಲ ಮಂಟಪ
ಮುಖಮಂಟಪ	– ದೇಗುಲದ ಪ್ರವೇಶ ಮಂಟಪ
ಯಾಳಿ	– ಸಿಂಹಮುಖ, ಆನೆಯ ಕೋರೆ ಹಾಗೂ ಸೊಂಡಿಲುಗಳಿರುವ ಕಾಲ್ಪನಿಕ ಪ್ರಾಣಿ
ರಂಗಮಂಟಪ	– ಸಂಗೀತ, ನೃತ್ಯ, ನಾಟಕ ಮುಂತಾದವುಗಳ ಪ್ರದರ್ಶನ ಸ್ಥಳ
ಲಲಾಟಬಿಂಬ	– ಬಾಗಿಲ ಚೌಕಟ್ಟಿನ ಮಧ್ಯಭಾಗ, ದ್ವಾರಬಂಧ
ವಿಮಾನ	– ಗರ್ಭಗೃಹದ ಮೇಲಿನ ಶಿಖರ

ವೇಸರ ಶೈಲಿ	– ನಾಗರ, ದ್ರಾವಿಡ ಸಮ್ಮಿಳಿತ ವಾಸ್ತುಶಿಲ್ಪ ಮಾದರಿ
ಶಿಖರ	– ದೇವಾಲಯದ ಗರ್ಭಗೃಹದ ಮೇಲಿನ ರಚನೆ
ಸಪ್ತಮಾತೃಕೆಯರು	– ಸಪ್ತ ದೇವತೆಗಳಾದ ಬ್ರಾಹ್ಮಿ, ಮಾಹೇಶ್ವರಿ, ಕೌಮಾರಿ, ವೈಷ್ಣವಿ, ಮಾಹಿ, ಇಂದ್ರಾಣಿ ಮತ್ತು ಚಾಮುಂಡ
ಸಭಾಮಂಟಪ	– ಅಂತರಾಳದ ಮುಂಬದಿಯ ಒಂಬತ್ತು ಅಥವಾ ಅದಕ್ಕಿಂತ ಹೆಚ್ಚು ಅಂಕಣಗಳಿಂದ ಕೂಡಿದ ಭಾಗ
ಸಮಭಂಗಿ	– ಸಮಕೋನದಲ್ಲಿ ನಿಂತ ರೀತಿ
ಸುಖನಾಸಿ	– ಗಿಣಿಯ ಕೊಕ್ಕಿನಂತೆ ಶಿಖರದ ಮುಂಭಾಗದಲ್ಲಿ ಮುಂಚಾಚಿದ ರಚನೆ
ಸೋಪಾನ	– ಮೆಟ್ಟಿಲು, ಪಾವಟಿಗೆ

ಗ್ರಂಥಸೂಚಿ

ಅನಂತರಂಗಾಚಾರ್ ಎನ್., ೧೯೮೪, *ಭಾರತೀಯ ದೇವಾಲಯಗಳು ಮತ್ತು ಸಂಸ್ಕೃತಿ*, ಮೈಸೂರು, ಸ್ವಚ್ಛಂದಂ ಪ್ರಕಾಶನ

ಅಪರ್ಣ ಕೂ. ಸ., ೧೯೯೯, *ದೇವಾಲಯ ವಾಸ್ತುಶಿಲ್ಪ ಪರಿಚಯ*, ಪ್ರಸಾರಾಂಗ, ಹಂಪಿ, ಕನ್ನಡ ವಿಶ್ವವಿದ್ಯಾಲಯ.

ಕರ್ನಾಟಕ ಚರಿತ್ರೆ ಸಂಪುಟಗಳು, ೧೯೯೭, ಪ್ರಸಾರಾಂಗ, ಹಂಪಿ, ಕನ್ನಡ ವಿಶ್ವವಿದ್ಯಾಲಯ.

ಕಪಟರಾಳ ಕೃಷ್ಣರಾವ್., ೧೯೫೫, *ಕರ್ನಾಟಕ ಲಾಕುಳ ಶೈವರ ಇತಿಹಾಸ*, ಧಾರವಾಡ, ಕನ್ನಡ ಸಂಶೋಧನ ಸಂಸ್ಥೆ.

ಕಲಬುರ್ಗಿ ಎಂ. ಎಂ., ೧೯೮೦, *ಸಮಾದಿ ಬಲಿದಾನ ವೀರಮರಣ ಸ್ಮಾರಕಗಳು*, ಬೆಂಗಳೂರು, ಐ.ಬಿ.ಹೆಚ್. ಪ್ರಕಾಶನ.

– –॥– – , ೧೯೯೪, *ಕರ್ನಾಟಕದ ಕೈಫಿಯತ್ತುಗಳು*, ಪ್ರಸಾರಾಂಗ, ಹಂಪಿ, ಕನ್ನಡ ವಿಶ್ವವಿದ್ಯಾಲಯ.

– –॥– – , ೨೦೦೪, *ಮಾರ್ಗ–೪*, ಬೆಂಗಳೂರು, ಸಪ್ನ ಬುಕ್ ಹೌಸ್.

– –॥– – (ಸಂ), ೧೯೯೯, *ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು*, ಭಾಗ–೧, ಪ್ರಸಾರಾಂಗ, ಹಂಪಿ, ಕನ್ನಡ ವಿಶ್ವವಿದ್ಯಾಲಯ.

ಕೃಷ್ಣಮೂರ್ತಿ ಕ. ರಾ., ೧೯೭೫, *ಪಾಳೆಯಗಾರರ ಪದಗಳು*, ಮೈಸೂರು, ಜನಪದ ಸಾಹಿತ್ಯ ಅಕಾಡೆಮಿ.

ಕೃಷ್ಣಮೂರ್ತಿ ಎಂ. ವಿ., ಕೇಶವಭಟ್ಟ ಎಮ್., ೧೯೭೦, *ಕರ್ನಾಟಕ ಇತಿಹಾಸ ದರ್ಶನ*, ಬೆಂಗಳೂರು, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ.

ಕೆಳದಿ ವೆಂಕಟೇಶ ಜೋಯಿಸ್, ೨೦೦೬, *ಮರೆಯಲಾಗದ ಕೆಳದಿ ಸಾಮ್ರಾಜ್ಯ*, ಕೆಳದಿ, ಶ್ರೀ ಸರಸ್ವತಿ ಸೇವಾ ಸಮಿತಿ.

ಗಿರಿಜ ಟಿ., ೧೯೯೧, *ಚಿತ್ರದುರ್ಗ ಜಿಲ್ಲಾದರ್ಶಿನಿ*, ದಾವಣಗೆರೆ, ರೇಖಾ ಪ್ರಕಾಶನ.

– ॥ – , ೨೦೦೭, *ಭಾರತದ ನದಿಗಳು*, ದಾವಣಗೆರೆ, ರೇಖಾ ಪ್ರಕಾಶನ.

ಗೋಪಾಲ್ ಬಾ. ರಾ., ೧೯೮೩, *ವಿಜಯನಗರ ವಾಸ್ತುಶಿಲ್ಪ*, ಬೆಂಗಳೂರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.

– –॥– – ೧೯೯೩, *ಕರ್ನಾಟಕದ ಕಲೆಗಳು*, ಸಂಪುಟ – ೪ (ವಾಸ್ತು), ಬೆಂಗಳೂರು, ಕನ್ನಡ ಸಾಹಿತ್ಯ ಪರಿಷತ್ತು.

ಗೋಪಾಲ್ ಆರ್., ೨೦೦೫, *ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ*, ಮೈಸೂರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ.

ಚನ್ನಬಸಪ್ಪ ಎಸ್. ಪಾಟೀಲ, ೧೯೯೪, *ಕರ್ನಾಟಕದ ಶಿಲ್ಪಗಳಲ್ಲಿ ಪಂಚತಂತ್ರ*, ಹೊಸಪೇಟೆ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ.

ಚಿದಾನಂದಮೂರ್ತಿ ಎಂ., ೧೯೮೪, *ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು*, ಬೆಂಗಳೂರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.

– –॥– – , ೧೯೯೩, *ಹೊಸತು ಹೊಸತು*, ಪ್ರಸಾರಾಂಗ, ಹಂಪಿ, ಕನ್ನಡ ವಿಶ್ವವಿದ್ಯಾಲಯ.

– –॥– – , ೨೦೦೨, *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಬೆಂಗಳೂರು, ಸಪ್ನ ಬುಕ್‌ಹೌಸ್.

ಜ್ಞಾನಾನಂದ ಜಿ., ೨೦೦೦, *ಶಿಲ್ಪಾದರ್ಶ*, ಸಂಪುಟ – ೧ ಮತ್ತು ೨, ಪ್ರಸಾರಾಂಗ, ಹಂಪಿ, ಕನ್ನಡ ವಿಶ್ವವಿದ್ಯಾಲಯ.

– ॥ – , ೨೦೦೬, *ಶ್ರೀ ಕಾಶ್ಯಪ ಶಿಲ್ಪಾಶಾಸ್ತ್ರ*, ಸಂಪುಟ–೨, ಬೆಂಗಳೂರು, ಕರ್ನಾಟಕ ಶಿಲ್ಪಕಲಾ ಅಕಾಡೆಮಿ.

ಡೇವಿಡ್ ಎನ್. ಲಾರೆಂಜೆನ್, ೨೦೦೫, *ಕಾಪಾಲಿಕರು ಮತ್ತು ಕಾಳಾಮುಖರು*, ಅನು. ವಿರೂಪಾಕ್ಷಿ ಕುಲಕರ್ಣಿ, ಬೆಂಗಳೂರು, ಕನ್ನಡ ಪುಸ್ತಕ ಪ್ರಾಧಿಕಾರ.

ತಾಳ್ತಜೆ ವಸಂತಕುಮಾರ, ೧೯೮೮, *ಕರ್ನಾಟಕದಲ್ಲಿ ಬೌದ್ಧ ಸಂಸ್ಕೃತಿ*, ಬೆಂಗಳೂರು, ವಿನಯ ಪ್ರಕಾಶನ.

ತಿಪ್ಪೇರುದ್ರಸ್ವಾಮಿ ಹೆಚ್., ೧೯೯೭, *ಕರ್ನಾಟಕ ಸಂಸ್ಕೃತಿ ಸಮೀಕ್ಷೆ*, ಮೈಸೂರು, ಡಿ.ವಿ.ಕೆ. ಮೂರ್ತಿ.

ತಿಪ್ಪೇಸ್ವಾಮಿ ಪಿ.ಆರ್., ೧೯೯೪, *ಶಿಲ್ಪಕಲಾ ಪ್ರಪಂಚ*, ಬೆಂಗಳೂರು, ಕರ್ನಾಟಕ ಲಲಿತಕಲಾ ಅಕಾಡೆಮಿ.

ದಿವಾಕರ ಆರ್., (ಸಂ), ೨೦೦೬, *ಕರ್ನಾಟಕ ಪರಂಪರೆ*, ಸಂಪುಟ – ೧ ಮತ್ತು ೨, ಬೆಂಗಳೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ.

ನಂದೀಮಠ ಎಸ್. ಸಿ., ೧೯೮೩, *ಕರ್ನಾಟಕದ ಧರ್ಮಗಳು*, ಬೆಂಗಳೂರು, ಕನ್ನಡ ಸಂಸ್ಕೃತಿ ಇಲಾಖೆ.

ನಾಯಕ ಹೆಚ್. ಎಂ., ೧೯೭೯, *ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ*, ಸಂಪುಟ–೭, ಮೈಸೂರು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.

ಪರಮಶಿವಮೂರ್ತಿ ಡಿ.ವಿ., ೧೯೯೯, *ಕನ್ನಡ ಶಾಸನ ಶಿಲ್ಪ*, ಪ್ರಸಾರಾಂಗ, ಹಂಪಿ, ಕನ್ನಡ ವಿಶ್ವವಿದ್ಯಾಲಯ.

ಪುಟ್ಟಣ್ಣ ಎಂ.ಎಸ್., ೧೯೯೭, *ಚಿತ್ರದುರ್ಗದ ಪಾಳೆಯಗಾರರು*, ಚಿತ್ರದುರ್ಗ, ಮದಕರಿ ಪ್ರಕಾಶನ.

ಪ್ರಭಾಕರ್ ಎಂ.ಎನ್., ೨೦೦೦, *ದೇವಾಲಯ ವಾಸ್ತು ಚಂದ್ರಿಕೆ*, ಪ್ರಸಾರಾಂಗ, ಹಂಪಿ, ಕನ್ನಡ ವಿಶ್ವವಿದ್ಯಾಲಯ.

ಬಸವರಾಜು ಎಲ್., ೧೭೯೧, *ಮಹಾಲಿಂಗೇಂದ್ರ ವಿಜಯ*, ಚಿತ್ರದುರ್ಗ, ಶ್ರೀ ಬೃಹನ್ಮಠ ಸಂಸ್ಥಾನ.

ಬಸವರಾಜು ಎಲ್., ೧೯೮೨, *ವೀರಶೈವ ತತ್ವ ಮತ್ತು ಆಚರಣೆ*, ಚಿತ್ರದುರ್ಗ, ಶ್ರೀ ಬೃಹನ್ಮಠ ಸಂಸ್ಥಾನ.

ಮರಿಶಾಮಚಾರ್ ಎನ್., ೨೦೦೦, *ಭಾರತೀಯ ಶಿಲ್ಪಕಲೆ*, ಬೆಂಗಳೂರು, ಕರ್ನಾಟಕ ಶಿಲ್ಪಕಾಲ ಅಕಾಡೆಮಿ.

ಮಜುಂದಾರ್, ರಾಯ್‌ಚೌಧರಿ, ಕಾಲಿಕಿಂಕರ ದತ್ತ, ೨೦೦೩, *ಭಾರತದ ಪ್ರೌಢ ಇತಿಹಾಸ*, ಮೈಸೂರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ.

ಮಹದೇವ ಸಿ., ೧೯೯೯, *ವಿಜಯನಗರ ಕಾಲದ ಗಾರೆಶಿಲ್ಪ*, ಪ್ರಸಾರಾಂಗ, ಹಂಪಿ, ಕನ್ನಡ ವಿಶ್ವವಿದ್ಯಾಲಯ.

– – ॥ – –, ೨೦೦೦, *ಬಳ್ಳಾರಿ ಜಿಲ್ಲೆಯ ಮಠದ ವಾಸ್ತು*, ಪ್ರಸಾರಾಂಗ,ಹಂಪಿ, ಕನ್ನಡ ವಿಶ್ವವಿದ್ಯಾಲಯ.

ಮಹಂತೇಶ. ಎನ್. ಎಸ್., ೨೦೦೮, *ಚಿತ್ರದುರ್ಗ ಕೋಟೆ ಪರಿಸರದ ದೇವಾಲಯಗಳು ಒಂದು ಸಾಂಸ್ಕೃತಿಕ ಅಧ್ಯಯನ*, ಚಿತ್ರದುರ್ಗ, ರೇಣುಕಾ ಪ್ರಕಾಶನ.

ಮೂರ್ತಿ ಕೆ.ಎಲ್.ಎನ್., ೧೯೯೮, *ಕರ್ನಾಟಕದ ಕಲೆ ಮತ್ತು ವಾಸ್ತುಶಿಲ್ಪ*, ತುಮಕೂರು, ರಂಜಿತಾ ಪ್ರಕಾಶನ.

ಮೋಹನಕೃಷ್ಣ ರೈ ಕೆ., ೨೦೦೪, *ಪ್ರಭುತ್ವ ಮತ್ತು ಜನತೆ*, ಪ್ರಸಾರಾಂಗ, ಹಂಪಿ, ಕನ್ನಡ ವಿಶ್ವವಿದ್ಯಾಲಯ.

ರಮೇಶ್ ಬಿ. ಗೋ., ೧೯೮೪, *ಕರ್ನಾಟಕದ ವಾಸ್ತುಶಿಲ್ಪ*, ಬೆಂಗಳೂರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.

ರಹಮತ್ ತರೀಕೆರೆ, ೨೦೦೬, *ಕರ್ನಾಟಕದ ನಾಥಪಂಥ*, ಪ್ರಸಾರಾಂಗ, ಹಂಪಿ, ಕನ್ನಡ ವಿಶ್ವವಿದ್ಯಾಲಯ.

ರಾಜಶೇಖರಪ್ಪ. ಬಿ., ೨೦೦೧, *ದುರ್ಗಶೋಧನ*, ಬೆಂಗಳೂರು, ಕನ್ನಡ ಸಾಹಿತ್ಯ ಪರಿಷತ್ತು.

– –॥– – , ೨೦೦೧, *ಇತಿಹಾಸ ಕಥನ*, ಬೆಂಗಳೂರು, ಸಿ.ವಿ.ಜಿ. ಪಬ್ಲಿಕೇಷನ್ಸ್.

– –॥– – , ೨೦೦೧, *ನಿರಂತರ*, ಪಾಂಡವಪುರ, ಲೋಕಪಾವನಿ ಪ್ರಕಾಶನ.

– –॥– – , ೨೦೦೮, *ಇತಿಹಾಸ ಸಂಶೋಧಕ ಹುಲ್ಲೂರು ಶ್ರೀನಿವಾಸ ಜೋಯಿಸರು*, ಬೆಂಗಳೂರು, ಕನ್ನಡ ಪುಸ್ತಕ ಪ್ರಾಧಿಕಾರ.

– –॥– – , (ಸಂ), ೧೯೯೯, *ದುರ್ಗಸಿರಿ*, ೧೯೯೮ರ ದುರ್ಗೋತ್ಸವ ಸ್ಮರಣ ಸಂಚಿಕೆ, ಚಿತ್ರದುರ್ಗ, ಚಿತ್ರದುರ್ಗ ಜಿಲ್ಲಾ ಉತ್ಸವ ಸಮಿತಿ.

– –॥– – , ೨೦೦೬, *ದುರ್ಗಸಿರಿ*, ೨೦೦೬ರ ದುರ್ಗೋತ್ಸವ ಸ್ಮರಣ ಸಂಚಿಕೆ, ಚಿತ್ರದುರ್ಗ, ಚಿತ್ರದುರ್ಗ ಜಿಲ್ಲಾ ಉತ್ಸವ ಸಮಿತಿ.

ರಾಜಾರಾಮ ಹೆಗಡೆ, ೨೦೦೧, *ಲೌಕಿಕ– ಅಲೌಕಿಕ*, ಮಲ್ಲಾಡಿಹಳ್ಳಿ, ಆನಂದಕಂದ ಗ್ರಂಥಮಾಲೆ.

– –॥– – , ೨೦೦೧ *ರಾಜಪ್ರಭುತ್ವ ಮತ್ತು ಮತಧರ್ಮ*, ಪ್ರಸಾರಾಂಗ, ಶಂಕರಘಟ್ಟ, ಕುವೆಂಪು ವಿಶ್ವವಿದ್ಯಾನಿಲಯ.

– –॥– – , ೨೦೦೩, *ಭಾರತದಲ್ಲಿ ಪ್ರಾಕ್ತನಶಾಸ್ತ್ರ*, ಶಂಕರಘಟ್ಟ, ದೂರಶಿಕ್ಷಣ ಕೇಂದ್ರ, ಕುವೆಂಪು ವಿಶ್ವವಿದ್ಯಾನಿಲಯ.

ರಾಮಚಂದ್ರರಾವ್ ಎಸ್. ಕೆ., ೧೯೭೫, *ಮೂರ್ತಿ ಶಿಲ್ಪ– ನೆಲೆಹಿನ್ನೆಲೆ*, ಬೆಂಗಳೂರು, ಬೆಂಗಳೂರು ವಿಶ್ವವಿದ್ಯಾಲಯ.

– –॥– – , ೧೯೮೦, *ಭಾರತದ ದೇವಾಲಯಗಳು ನೆಲೆ–ಹಿನ್ನೆಲೆ*, ಬೆಂಗಳೂರು, ಐ.ಬಿ. ಹೆಚ್. ಪ್ರಕಾಶನ.

ವಸು ಎಂ.ವಿ., (ಸಂ), ೨೦೦೧, *ದಕ್ಷಿಣ ಕರ್ನಾಟಕದ ಅರಸು ಮನೆತನಗಳು*, ಪ್ರಸಾರಾಂಗ, ಹಂಪಿ, ಕನ್ನಡ ವಿಶ್ವವಿದ್ಯಾಲಯ.

ವಸುಂಧರಾ ಫಿಲಿಯೋಜಾ, ೨೦೦೩, *ಕರ್ನಾಟಕದಲ್ಲಿ ಲಾಕುಳಶೈವ ಜಕ್ಕಣಾಚಾರ್ಯರು*, ಧಾರವಾಡ, ಕನ್ನಡ ಸಂಶೋಧನ ಸಂಸ್ಥೆ.

ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೨, *ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು*, ಪ್ರಸಾರಾಂಗ, ಹಂಪಿ, ಕನ್ನಡ ವಿಶ್ವವಿದ್ಯಾಲಯ.

– –॥– – , ೨೦೦೬, *ಕಾಮಗೇತಿ ವಂಶಜರ ಚರಿತ್ರೆ*, ಪ್ರಸಾರಾಂಗ, ಹಂಪಿ, ಕನ್ನಡ ವಿಶ್ವವಿದ್ಯಾಲಯ.

ವೆಂಕಣ್ಣಾಚಾರ್ ಕೆ., ಹು. ಶ್ರೀ. ಪಾಂಡುರಂಗ ಜೋಯಿಸ್, (ಸಂ), ೧೯೮೬, *ಚಿತ್ರದುರ್ಗ ಮಾರ್ಗದರ್ಶಿ*, ಚಿತ್ರದುರ್ಗ, ಪ್ರಸನ್ನ ಪ್ರಕಾಶನ.

ಲಕ್ಷ್ಮಣ್ ತೆಲಗಾವಿ, ೧೯೯೭, *ಇದು ಚಿತ್ರದುರ್ಗ*, ಬೆಂಗಳೂರು, ಸ್ವಾತಿ ಪ್ರಕಾಶನ.

– –॥– – , ೨೦೦೪, *ಮೌರ್ಯ ಮತ್ತು ಶಾತವಾಹನ ಯುಗ*, ಪ್ರಸಾರಾಂಗ, ಹಂಪಿ, ಕನ್ನಡ ವಿಶ್ವವಿದ್ಯಾಲಯ.

– –॥– – , ೨೦೦೫ *ಚಿತ್ರದುರ್ಗ ಜಿಲ್ಲಾ ಇತಿಹಾಸ ಅಧ್ಯಯನದ ವ್ಯಾಪಕತೆ ಮತ್ತು ಸಾಧ್ಯತೆ ಒಂದು ಶತಮಾನ*, ಹರ್ತಿಕೋಟೆ, ವಾಲ್ಮೀಕಿ ಸಾಹಿತ್ಯ ಸಂಪದ.

– –॥– – , (ಸಂ), ೧೯೮೭, *ಹರತಿಸಿರಿ*, ಹರ್ತಿಕೋಟೆ, ವಾಲ್ಮೀಕಿ ಸಾಹಿತ್ಯ ಸಂಪದ.

– –॥– – , ೧೯೯೧, *ಸಂಶೋಧನೆ*, ಬೆಂಗಳೂರು, ಡಾ. ಎಂ. ಚಿದಾನಂದಮೂರ್ತಿ ಅಭಿನಂದನಾ ಗ್ರಂಥ ಸಮಿತಿ.

– –॥– – , ೨೦೦೩, *ಸ್ಥಳಿಯ ಚರಿತ್ರೆ ಅಧ್ಯಯನದ ತಾತ್ವಿಕತೆ ಮತ್ತು ಸ್ವರೂಪ*, ಪ್ರಸಾರಾಂಗ, ಹಂಪಿ, ಕನ್ನಡ ವಿಶ್ವವಿದ್ಯಾಲಯ.

– –॥– – , ವೆಂಕಣ್ಣಾಚಾರ್ ಕೆ., (ಸಂ) ೧೯೬೯, *ಐತಿಹಾಸಿಕ ಚಿತ್ರದುರ್ಗ*, ಚಿತ್ರದುರ್ಗ, ಜಿಲ್ಲಾ ಇತಿಹಾಸ ಸಂಶೋಧನಾ ಮಂಡಳಿ.

– –॥– – , ವೆಂಕಣ್ಣಾಚಾರ್ ಕೆ., ಹು. ಶ್ರೀ. ಪಾಂಡುರಂಗ ಜೋಯಿಸ್, (ಸಂ), ೧೯೮೦, *ಚಿತ್ರದುರ್ಗ ದರ್ಶಿನಿ*, ಚಿತ್ರದುರ್ಗ, ಜಿಲ್ಲಾ ಇತಿಹಾಸ ಸಂಶೋಧನಾ ಮಂಡಳಿ.

ಶಾರದಾ ಕೆ., *ಕರ್ನಾಟಕದಲ್ಲಿ ಜೈನಧರ್ಮ*, ಪ್ರಸಾರಾಂಗ, ಹಂಪಿ, ಕನ್ನಡ ವಿಶ್ವವಿದ್ಯಾಲಯ.

ಶಿವತಾರಕ್ ಕೆ. ಬಿ., ೨೦೦೧, *ಕರ್ನಾಟಕದ ಪುರಾತತ್ವ ನೆಲೆಗಳು*, ಪ್ರಸಾರಾಂಗ, ಹಂಪಿ, ಕನ್ನಡ ವಿಶ್ವವಿದ್ಯಾಲಯ.

ಶಿವರಾಮ ಕಾರಂತ, ೧೯೬೯, *ಚಾಲುಕ್ಯ ವಾಸ್ತು ಮತ್ತು ಶಿಲ್ಪ*, ಬೆಂಗಳೂರು, ಕರ್ನಾಟಕ ಲಲಿತಕಲಾ ಅಕಾಡೆಮಿ.

– –॥– – , ೧೯೭೫, *ಭಾರತೀಯ ಶಿಲ್ಪ*, ಬೆಂಗಳೂರು, ಬೆಂಗಳೂರು ವಿಶ್ವವಿದ್ಯಾಲಯ.

– –॥– – , ೧೯೭೫, *ಚಿತ್ರಶಿಲ್ಪ – ವಾಸ್ತು ಕಲೆಗಳು*, ಧಾರವಾಡ, ಕರ್ನಾಟಕ ವಿಶ್ವವಿದ್ಯಾಲಯ.

– –॥– – , ೧೯೮೩, *ಕರ್ನಾಟಕದಲ್ಲಿ ಶಿಲ್ಪ*, ಬೆಂಗಳೂರು, ಐ.ಬಿ.ಹೆಚ್. ಪ್ರಕಾಶನ

ಶ್ರೀನಿವಾಸ್ ಎಂ.ವಿ., ಲಕ್ಷ್ಮಣ್ ತೆಲಗಾವಿ, (ಸಂ), ೧೯೭೬, *ಚಂದ್ರವಳ್ಳಿ*, ಚಿತ್ರದುರ್ಗ, ಜಿಲ್ಲಾ ಇತಿಹಾಸ ಸಂಶೋಧನಾ ಮಂಡಳಿ.

– –॥– – ,೧೯೭೬, *ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು*, ಚಿತ್ರದುರ್ಗ, ಹುಲ್ಲೂರು ಶ್ರೀನಿವಾಸ ಜೋಯಿಸ ಗ್ರಂಥ ಪ್ರಕಟಣ ಸಮಿತಿ.

– –॥– – , ೧೯೯೫, *ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನಾ ಲೇಖನಗಳು*, ಚಿತ್ರದುರ್ಗ, ಹುಲ್ಲೂರು ಶ್ರೀನಿವಾಸ ಜೋಯಿಸ ಗ್ರಂಥ ಪ್ರಕಟಣ ಸಮಿತಿ.

ಶ್ರೀಶೈಲ ಆರಾಧ್ಯ ಹೆಚ್., ೧೯೮೩, *ಸಂಶೋಧನೆಯ ಹಾದಿಯಲ್ಲಿ*, ಚಿತ್ರದುರ್ಗ, ಆರೋಹಣ ಪ್ರಕಾಶನ.

ಶೇಷಶಾಸ್ತ್ರಿ ಆರ್., ೧೯೮೨, *ಕರ್ನಾಟಕದ ವೀರಗಲ್ಲುಗಳು*, ಬೆಂಗಳೂರು, ಕನ್ನಡ ಸಾಹಿತ್ಯ ಪರಿಷತ್ತು.

ಸದಾನಂದ ಕನವಳ್ಳಿ, ವೀರಣ್ಣ ರಾಜೂರ, (ಸಂ), ೧೯೯೮, *ಮಹಾಮಾರ್ಗ*, ಬೆಳಗಾವಿ, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯಮಠ, ಗದಗ ವೀರಶೈವ ಅಧ್ಯಯನ ಅಕಾಡೆಮಿ.

ಸಿಂಧಗಿ ರಾಜಶೇಖರ್, ೧೯೮೮, *ಕರ್ನಾಟಕದ ಕಲೆ ಮತ್ತು ವಾಸ್ತುಶಿಲ್ಪ*, ಧಾರವಾಡ, ಸುಜಾತಾ ಪ್ರಕಾಶನ.

ಸಿದ್ಧಲಿಂಗಯ್ಯ ಜಿ.ಎಸ್.,(ಪ್ರಸಂ),೧೯೭೫ *ಜಂಗಮ ಜ್ಯೋತಿ*, ಚಿತ್ರದುರ್ಗ, ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಶತಮಾನ ಮಹೋತ್ಸವ ಸಮಿತಿ.

ಸುರೇಶ ಕೆ. ಎಂ., ಮತ್ತು ಇತರರು, ೨೦೦೧, *ಕರ್ನಾಟಕ ದೇವಾಲಯ ಕೋಶ-ಕೊಪ್ಪಳ ಜಿಲ್ಲೆ*, ಹಂಪಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

ಸುಂದರ ಅ., ೧೯೭೩, *ಬ್ರಹ್ಮಗಿರಿ ಮತ್ತು ಚಂದ್ರವಳ್ಳಿ*, ಬೆಂಗಳೂರು, ಐ. ಬಿ. ಹೆಚ್. ಪ್ರಕಾಶನ.

ಸುಂದರ ಅ., ೧೯೭೪, *ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ*, ಬೆಂಗಳೂರು, ಕರ್ನಾಟಕ ಲಲಿತಕಲಾ ಅಕಾಡೆಮಿ.

ಸೋಮಶೇಖರ ಎಸ್.ವೈ., ೨೦೦೪, *ಜಟಂಗಿ ರಾಮೇಶ್ವರ: ಸಾಂಸ್ಕೃತಿಕ ದರ್ಶನ*, ದೇವಸಮುದ್ರ, ಸುಮೇಧ ಪ್ರಕಾಶನ.

ಹರಿದಾಸ ಭಟ್ಟಾಚಾರ್ಯ(ಸಂ), ೧೯೮೮, *ಯುಗಯಾತ್ರಿ ಭಾರತೀಯ ಸಂಸ್ಕೃತಿ*, ಸಂಪುಟ-೪, ಮೈಸೂರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ.

ಹರೀಶ ಜಿ.ಟಿ., ೨೦೦೬, *ತಂತ್ರಶಾಸ್ತ್ರ*, ಪ್ರಸಾರಾಂಗ, ಹಂಪಿ, ಕನ್ನಡ ವಿಶ್ವವಿದ್ಯಾಲಯ.

ಪಾಡುರಂಗ ಜೋಯಿಸ್ ಹು. ಶ್ರೀ., ೧೯೭೦, *ಚಿತ್ರದುರ್ಗ ಕಥಾ-ಮಂಜರಿ*, ಚಿತ್ರದುರ್ಗ, ಹುಲ್ಲೂರು ಶ್ರೀನಿವಾಸ ಜೋಯಿಸ ಸ್ಮಾರಕ ಗ್ರಂಥಮಾಲೆ.

- - ॥ - - -, ೧೯೮೨, *ಚಿತ್ರವಿಚಿತ್ರ - ಚಿತ್ರದುರ್ಗ*, ಚಿತ್ರದುರ್ಗ, ಹುಲ್ಲೂರು ಶ್ರೀನಿವಾಸ ಜೋಯಿಸ ಸ್ಮಾರಕ ಗ್ರಂಥಮಾಲೆ.

ಹಿರೇಮಠ ಬಿ.ಆರ್., ೧೯೭೬, *ವೀರಗಲ್ಲುಗಳು*, ಧಾರವಾಡ, ಕರ್ನಾಟಕ ವಿಶ್ವವಿದ್ಯಾಲಯ.

ಹಿರೇಮಠ ಎಸ್.ಎಸ್., ೨೦೦೬, *ಲಾಕುಳದರ್ಶನ*, ಬೆಂಗಳೂರು, ಕನ್ನಡ ಸಾಹಿತ್ಯ ಪರಿಷತ್ತು.

ಹುಲ್ಲೂರು ಶ್ರೀನಿವಾಸ ಜೋಯಿಸರು, ೧೯೬೮, *ಚಿತ್ರದುರ್ಗದ ಬಖೈರು*, ಮೈಸೂರು, ತ.ವೆಂ. ಸ್ಮಾರಕ ಗ್ರಂಥಮಾಲೆ.

- - ॥ - - -, ೧೯೭೭, *ಸಿರುಮನೃಪಾಲ*, ಚಿತ್ರದುರ್ಗ, ಜಿಲ್ಲಾ ಇತಿಹಾಸ ಸಂಶೋಧನಾ ಮಂಡಳಿ.

ಇಂಗ್ಲೀಷ್ ಗ್ರಂಥಗಳು

Agarwal P.K., 1994, *Studies in Indian Iconography,* Jaipur, publication schem.

Ancient India [Bulletion of the Archaeological survey of India], No-4, 1947-48, New Delhi, Archaeological survey of India.

Barrey Lewis, 2006, *Chitradurga in the Early 1800s, Archaeological Interpretations of colonial Drawings,* Bangalore, Indian council of Historical Research.

Gopinath Rao T.A., 1985, *Elements of Hindu Iconography,* vol-I and II, Delhi, Motilal Banarasidas publishers.

Gupta S.P., Shashi prabha Asthana, 2002, *Elements of Indian Art,* New Delhi, Indraprastha Museum of Art and Archaeology.

Gururaj Rao B.K., 1972, *The Megalithic culture in south India,* Mysore, University of Mysore.

Ismail K., 1984, *Karnataka Temples,* Delhi, Sundeep Prakashana.

Krishna M.H., 1931, *Excavatoin at chandravalli-Mysore state,* Mysore, Archaeological Research in Mysore.

Krishnamurthy M.S., 1980, *The Nolambas,* Mysore, University of Mysore.

Mishra O.P., 1980, *Iconography of the saptamatrikas,* New Delhi, Agamkala publication.

Mahalingam T.V., 1970, *Studies in the south Indian Temple complex,* Dharawar, Kannada Research Institute.

Muguli, 1990, *The Heritage of Karnataka,* Mysore, Geetha Book House.

Nagarajarao M.S., 1978, *Chalukyas of Badami,* Bangalore, The Mythic society.

Narasimha Murthy A.V., 1997, *Coins and currency system in Karnataka,* Mysore, Directorate of Archaeology and Museums.

Percy brown, 1971, *Indian Architecture,* Bombay, Popular Prakashana.

Rajarama Hegde, 2006, *Temples Patranage in Medieval Karnataka* with *special refrence to the Banvasi-12000,* Bangalore, Indian council of Historial Research.

Rice B.L. (Ed), 1903, *Epigraphia Carnatica, vol-XI,* (old), Bangalore, Mysore Government central press.

Sharma R.S., (Ed), 1984, *Indian society: Historical probing,* New Delhi, Peoples Publishing House.

Shankar M.N., Venkannachar K., Panduranga Jois H.S., 1984, *Chitradurga A hand Book,* Chitradurga, Hand Book Publication Committee.

Soundara Rajan K.V., 1969, *Early temple Architecture in Karnataka and its Ramification,* Dharawar, Kannada Research Institute.

Sri Sathyan. B.N., 1967, *Chitradurga District Gazetteer,* Bangalore, Government press.

Sundara A., (Ed), 1990, *Archaeology of Karnataka,* Mysore, Directorate of Archaeology and Museums.

Sundara A., (Ed), 1985, *M.H. Krishna,* Mysore, Directorate of Archaeology and Museums.

Suresh K.M., 2001, *Temples of Karnataka,* Vol-I, Delhi, Bharatiya kala Prakashana.

Suresh K.M., 2003, *Sculptural Art at Hampi*, Mysore, Directorate of Archaology and Museums.

Suryanath U. Kamath, (C.Ed), 1982, *Karnataka state gazetteer*, part-I, II & III, Bangalore, Government of Karnataka.

ಅಪ್ರಕಟಿತ ಸಂಶೋಧನಾ ಪ್ರಬಂಧಗಳು

ತಿಪ್ಪೇಸ್ವಾಮಿ ಎಸ್., ೨೦೦೪, *ರಕ್ಷಣಾ ವಾಸ್ತುಶಿಲ್ಪ: ಚಿತ್ರದುರ್ಗ ಜಿಲ್ಲೆ* (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ), ಹಂಪಿ, ಕನ್ನಡ ವಿಶ್ವವಿದ್ಯಾಲಯ.

ತಿಪ್ಪೇಸ್ವಾಮಿ ಹೆಚ್., ೨೦೦೧, *ದಾವಣಗೆರೆ ಜಿಲ್ಲೆಯ ದೇವಾಲಯಗಳು* (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ), ಹಂಪಿ, ಕನ್ನಡ ವಿಶ್ವವಿದ್ಯಾಲಯ.

ದತ್ತಾತ್ರೇಯ ಜಿ. ಕುಲಕರ್ಣಿ, ೨೦೦೬, *ಹಾವೇರಿ ಜಿಲ್ಲೆಯ ತ್ರಿಕೂಟ ದೇವಾಲಯಗಳು*, (ಅಪ್ರಕಟಿತ ಪಿಎಚ್.ಡಿ. ಪ್ರಬಂಧ), ಹಂಪಿ, ಕನ್ನಡ ವಿಶ್ವವಿದ್ಯಾಲಯ.

ನಾಗರಾಜಪ್ಪ ಎಸ್., ೨೦೦೭, *ಚಂದ್ರವಳ್ಳಿ ಒಂದು ಅಧ್ಯಯನ* (ಅಪ್ರಕಟಿತ ಸಂಪ್ರಬಂಧ), ಶಂಕರಘಟ್ಟ, ಕುವೆಂಪು ವಿಶ್ವವಿದ್ಯಾನಿಲಯ.

ಮಂಜುನಾಥ ಬಿ., ೨೦೦೬, *ಚಿತ್ರದುರ್ಗ ಹಾಗೂ ಸುತ್ತಮುತ್ತಲಿನ ಪಾಳೆಯಗಾರರ ಸಾಂಸ್ಕೃತಿಕ ಇತಿಹಾಸ* (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ), ಶಂಕರಘಟ್ಟ, ಕುವೆಂಪು ವಿಶ್ವವಿದ್ಯಾನಿಲಯ.


ಮಂಜುನಾಥ ಡಿ., ೧೯೯೯, *ಮಧ್ಯಕಾಲದಲ್ಲಿ ದೇವಾಲಯದ ಆಶ್ರಯ ಪಾಲನೆ ಮತ್ತು ನಿರ್ವಹಣೆ: ಹರಿಹರದ ದೇವಾಲಯದ ಒಂದು ಅಧ್ಯಯನ*, (ಅಪ್ರಕಟಿತ ಎಂ.ಫಿಲ್., ಪ್ರೌಢಪ್ರಬಂಧ), ಶಂಕರಘಟ್ಟ, ಕುವೆಂಪು ವಿಶ್ವವಿದ್ಯಾನಿಲಯ.

ರಾಜಶೇಖರಪ್ಪ ಬಿ., ೨೦೦೩, *ಪ್ರಾಚೀನ ಚಿತ್ರದುರ್ಗ* (ಅಪ್ರಕಟಿತ ಪಿಎಚ್.ಡಿ. ಪ್ರಬಂಧ), ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯ,


ಶಿವಪ್ಪ ಅರ್., ೨೦೦೬, *ಚಿತ್ರದುರ್ಗ ಪಾಳೆಯಗಾರರ ಕಾಲದ ಸೈನ್ಯವ್ಯವಸ್ಥೆ ಮತ್ತು ಯುದ್ಧನೀತಿ* (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ), ಶಂಕರಘಟ್ಟ, ಕುವೆಂಪು ವಿಶ್ವವಿದ್ಯಾನಿಲಯ.

ನಿಯತ ಕಾಲಿಕೆಗಳು


1. *Indian Archaeology- A Reviews*, New Delhi, Archaeological survey of India.
2. *Mysore Archaeological Reports*, Mysore, University of Mysore.
3. *Procedings of Karnataka History and Culture*, Mysore, Karnataka Histroy Congres.
4. *Quarterly Journals of Mythic Society*, Bangalore, Mythic Society.
5. *ಅರಿವು ಬರಹ*, ಮಂಗಳೂರು, ಅರಿವು ಬರಹ ಟ್ರಸ್ಟ್.
6. *ಇತಿಹಾಸ ದರ್ಶನ ಸಂಪುಟಗಳು*, ಬೆಂಗಳೂರು, ಕರ್ನಾಟಕ ಇತಿಹಾಸ ಅಕಾಡೆಮಿ.
7. *ಕನ್ನಡ ಅಧ್ಯಯನ*, ಪ್ರಸಾರಾಂಗ, ಹಂಪಿ, ಕನ್ನಡ ವಿಶ್ವವಿದ್ಯಾಲಯ.
8. *ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ*, ಬೆಂಗಳೂರು, ಕನ್ನಡ ಸಾಹಿತ್ಯ ಪರಿಷತ್ತು.
9. *ಕರ್ನಾಟಕ ಭಾರತಿ*, ಧಾರವಾಡ, ಕರ್ನಾಟಕ ವಿಶ್ವವಿದ್ಯಾಲಯ.
10. *ಚರಿತ್ರೆ ಅಧ್ಯಯನ*, ಪ್ರಸಾರಾಂಗ, ಹಂಪಿ, ಕನ್ನಡ ವಿಶ್ವವಿದ್ಯಾಲಯ.
11. *ತರಳಬಾಳು*, ಸಿರಿಗೆರೆ, ಶ್ರೀ ತರಳುಬಾಳು ಬೃಹನ್ಮಠ.
12. *ಮಾನವಿಕ ಭಾರತಿ*, ಮೈಸೂರು, ಮೈಸೂರು ವಿಶ್ವವಿದ್ಯಾನಿಲಯ.
13. *ವಿಜಯನಗರ ಅಧ್ಯಯನ*, ಮೈಸೂರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ.
14. *ವಿಶಾಲ ಚಿತ್ರದುರ್ಗ*, ಚಿತ್ರದುರ್ಗ, ವಿಶಾಲ ಚಿತ್ರದುರ್ಗ ಸಂಶೋಧನಾ ಮಂಡಳಿ.
15. *ಸತ್ಯಶುದ್ಧ ಕಾಯಕ*, ಚಿತ್ರದುರ್ಗ, ಮುರುಘರಾಜೇಂದ್ರ ಮಠ.
16. *ಸಾಧನೆ*, ಬೆಂಗಳೂರು, ಬೆಂಗಳೂರು ವಿಶ್ವವಿದ್ಯಾನಿಲಯ.



೬೦. ಡಿಂಬೇಶ್ವರ ದೇವಾಲಯ




ಕಲ್ಲೇಶ್ವರ ದೇವಾಲಯ





ಚೋಳೇಶ್ವರ ದೇವಾಲಯ

ಪೂ





ಗಂಗಾಧರೇಶ್ವರ ದೇವಾಲಯ







ಗೋಪಾಲಕೃಷ್ಣ ದೇವಾಲಯ






ಪ್ರಸನ್ನ ವೆಂಕಟರಮಣ ದೇವಾಲಯ






ಚನ್ನಕೇಶವ ದೇವಾಲಯ







ಕಾಳಿಕಾ ಮಹೇಶ್ವರಿ ದೇವಾಲಯ



ಛಾಯಾಚಿತ್ರಗಳು



೧. ಹಿಡಿಂಬೇಶ್ವರ ದೇವಾಲಯ



೨. ಮದಕರಿಪುರದ ಕಲ್ಲೇಶ್ವರ ದೇವಾಲಯ



೩. ಕಾಶೀವಿಶ್ವನಾಥ ದೇವಾಲಯ



೪. ಪ್ರಸನ್ನ ವೆಂಕಟರಮಣ ದೇವಾಲಯ



೫. ಉಚ್ಚಂಗಿ ಎಲ್ಲಮ್ಮನ ದೇವಾಲಯ



೬. ಪಾಳೆಯಗಾರರ ವಾಸ್ತುಶೈಲಿಯ ಪುಷ್ಪ ಬೋದಿಗೆ



೭. ಗಾಳಿ ಮಂಟಪ



೮. ಗಾರೇಹಟ್ಟಿಯಲ್ಲಿರುವ ಚೋಳೇಶ್ವರ ದೇವಾಲಯದ
ಬಾಗಿಲುವಾಡ



೯. ಈಶ್ವರ ದೇವಾಲಯದ ಗರ್ಭಗೃಹದ
ಮೇಲಿನ ಶಿಖರ



೧೦. ಗಾರೇ ಬಾಗಿಲ ಈಶ್ವರ ದೇವಾಲಯದಲ್ಲಿರುವ
ವೀರಗಲ್ಲು

೧೧. ಏಕನಾಥೇಶ್ವರಿ ದೇವಾಲಯದ ದೀಪಸ್ತಂಭದಲ್ಲಿರುವ
ಇಮ್ಮಡಿ ಮದಕರಿನಾಯಕನ ಶಿಲ್ಪ





೧೨. ಉಚ್ಚಂಗಿ ಎಲ್ಲಮ್ಮನ ದೇವಾಲಯದ ಸ್ತಂಭದ ಮೇಲಿನ
ಭರಮಣ್ಣನಾಯಕನ ಶಿಲ್ಪ



೧೩. ಚೋಳೇಶ್ವರ ದೇವಾಲಯದಲ್ಲಿರುವ ನಗ್ನಭೈರವನ ಶಿಲ್ಪ



೧೪. ಗಾರೇಹಟ್ಟಿಯ ವಿನಾಯಕ ಗುಡಿಯಲ್ಲಿರುವ
ದ್ವಿಬಾಹು ಗಣೇಶನ ಶಿಲ್ಪ




೧೫. ಫಲ್ಗುಣೇಶ್ವರ ಲಿಂಗ



೧೬. ಏಕನಾಥೇಶ್ವರಿ ದೇವಾಲಯದ ಬಲಬದಿಯ ಹುಟ್ಟು ಬಂಡೆಯ ಮೇಲಿನ ಶಿಲ್ಪ



೧೭. ಉಚ್ಚಂಗಿ ಎಲ್ಲಮ್ಮ ದೇಗುಲದ ಗರ್ಭಗೃಹದ
ಮೇಲಿನ ಶಿಖರ



೧೮. ಜೋಗಿಮಟ್ಟಿ ರಸ್ತೆಯ ಬಲಬದಿಯಲ್ಲಿರುವ
ಮಾಸ್ತಿಗಲ್ಲು



೧೯. ಉಚ್ಚಂಗಿ ಎಲ್ಲಮ್ಮನ ದೇವಾಲಯದ ಕಂಬ



೨೦. ಹುಲಿಗೊಂದಿ ಸಿದ್ಧೇಶ್ವರ ದೇವಾಲಯದಲ್ಲಿನ
ನೊಳಂಬ ವಾಸ್ತುಶೈಲಿಯ ಸ್ತಂಭ



೨೧. ಜೋಗಿಮಟ್ಟಿ ರಸ್ತೆಯ ಬಲಬದಿಯಲ್ಲಿರುವ ವೀರ ಮಾಸ್ತಿಗಲ್ಲು



೨೨. ಕಾಮನ ಬಾಗಿಲ ಸುತ್ತಿನ ಕೋಟೆಗೋಡೆ ಮೇಲಿರುವ ಮನ್ಮಥ, ಗಣೇಶ ಮತ್ತು ಭೈರವನ ಶಿಲ್ಪಗಳು



೨೩. ಬೆಟ್ಟದ ಮೇಲಿನ ಮಧ್ಯರಂಗದ ಸಾಮಾನ್ಯ ನೋಟ
(ಕೃಪೆ: ಡಾ. ಎಸ್. ತಿಪ್ಪೇಸ್ವಾಮಿ, ರಕ್ಷಣಾ ವಾಸ್ತು ಶಿಲ್ಪ: ಚಿತ್ರದುರ್ಗಜಿಲ್ಲೆ, ಕವಿವಿ. ಹಂಪಿ.)



೨೪. ಒಂಟಿಕಲ್ಲು ಬಸವನ ದೇವಾಲಯ



೨೫. ಧವಳಪ್ಪನಗುಡ್ಡ



೨೬. ಚಂದ್ರವಳ್ಳಿಯಲ್ಲಿರುವ ಅಂಕಲಿ ಮಠ ಮತ್ತು ಪಂಚಲಿಂಗೇಶ್ವರ ಗುಹಾಲಯ